# ಅಧ್ಯಾತ್ಮಸಾಧನಗಳು

(ಸಾಧನೆಯಿಂದ ಸಿದ್ಧಾಂತವನ್ನು ಪಡೆಯುವ ಬಗೆ)

ಬರೆದವರು

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳುಬರೆದವರು

**ಕ್ರಮಾಂಕ : 269**

**ಅಧ್ಯಾತ್ಮಪ್ರಕಾಶಕಾರ್ಯಾಲಯ,**

**ಹೊಳೆನರಸೀಪುರ-573211**

**ದೂರವಾಣಿ : 08175-273820**

www.adhyatmaprakasha.org

email: secretary@adhyatmaprakasha.org

**ಬೆಂಗಳೂರು ಶಾಖೆ :**

**ನಂ. 68, (ಹೊಸ ನಂ.6), ಎ.ಪಿ.ಕೆ. ರಸ್ತೆ, 2ನೇ ಬ್ಲಾಕ್,**

**ತ್ಯಾಗರಾಜನಗರ, ಬೆಂಗಳೂರು - 28. ದೂರವಾಣಿ : 26765548**

email: shankara.bhaskara@gmail.com

**2016**

**ADHYATMA SADHANAGALU** - Written by Sri Sri Satchidanandendra Saraswathi Swamiji, Published by Adhyatma Prakasha Karyalaya, Holenarasipura - 573211, India.

ಮೊದಲನೆಯ ಮುದ್ರಣ : 1000 ಪ್ರತಿಗಳು

ಮುದ್ರಣ ಕಾಗದ : 70 ಜಿ.ಎಸ್.ಎಮ್. ಮ್ಯಾಪ್‌ಲಿಥೋ

ಪುಟಗಳು : 10 + 200 = 210

ಬೆಲೆ : 60/- ರೂ

© ಅಧ್ಯಾತ್ಮಪ್ರಕಾಶಕಾರ್ಯಾಲಯದವು

ಪ್ರತಿಗಳು ದೊರೆಯುವ ಸ್ಥಳ :
ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ-573211, ದೂರವಾಣಿ : 08175-273820
www.adhyatma prakasha.org
email: secretary@adhyatmaprakasha.org

ಬೆಂಗಳೂರು ಶಾಖೆ :
ನಂ. 68, (ಹೊಸ ನಂ.6),
ಎ.ಪಿ.ಕೆ. ರಸ್ತೆ, 2ನೇ ಬ್ಲಾಕ್,
ತ್ಯಾಗರಾಜನಗರ, ಬೆಂಗಳೂರು - 560 028.
ದೂರವಾಣಿ : 080-26765548
email: shankara.bhaskara@gmail.com

ಅಕ್ಷರ ಜೋಡಣೆ :
ಜ್ಯೋತಿ ಸುನೀಲ್,
ಮೊ : 9845321029, ಬೆಂಗಳೂರು-78

ಮುದ್ರಣಸ್ಥಾನ :
ಶ್ರೀರಾಮ ಪ್ರಿಂಟರ್ಸ್, ನಂ. 25, 15ನೇ ಕ್ರಾಸ್,
ಶ್ರೀನಿಧಿ ಲೇಔಟ್, ಬೆಂಗಳೂರು -62,
ಮೊ : 98453 46197

# ಪ್ರಕಾಶಕರ ಬಿನ್ನಹ

ಸಾಧನೆಯಿಂದ ಪರಿಪಕ್ವವಾದವನಿಗೇ ಸಾಧ್ಯವಾದ ಜ್ಞಾನಕ್ಕೆ ಪ್ರವೇಶ ಎಂಬುದು ಶಾಸ್ತ್ರಗಳ ಅಂಬೋಣ. ಆದ್ದರಿಂದಲೇ ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರು ತಮ್ಮ ಉಪದೇಶ ಬರವಣಿಗೆಯಲ್ಲಿ ಸಾಧನೆಗೆ ಹೆಚ್ಚಿನ ಒತ್ತನ್ನು ಕೊಟ್ಟಿರುವದು. ಶ್ರದ್ಧೆ, ಧ್ಯಾನ, ಭಕ್ತಿ ಇವುಗಳು ಅಳವಟ್ಟರೆ ಅದು ಅಧ್ಯಾತ್ಮದ ಕಡೆಗೆ ಒಂದು ಮುಂದುವರಿಕೆ ಎಂದು ಹೇಳಬಹುದು. ಅತ್ಯಂತ ಬರ್ಹಿರ್ವಿಷಯಾಸಕ್ತ ಬುದ್ಧಿಯಿಂದ ಕೂಡಿರುವವನನ್ನೇ- ತುಂಟ ಕರುವನ್ನು ಹಸಿರು ಹುಲ್ಲು ಮುಂತಾದವುಗಳನ್ನು ತೋರಿಸಿ ಕರೆತರುವಂತೆ- ನಿಧಾನವಾಗಿ ಒಳಕ್ಕೆ ತಿರುಗುವಂತೆ ಮಾಡುವುದೇ ಸಾಧನೆಗಳ ಉದ್ದೇಶ. ಅಂತಹ ಉಪದೇಶಗಳಿಂದ ಕೂಡಿರುವ ಗ್ರಂಥವೇ **"ಅಧ್ಯಾತ್ಮ ಸಾಧನೆಗಳು"**

ಶ್ರೀಶ್ರೀಗಳವರು **'ಅಧ್ಯಾತ್ಮಪ್ರಕಾಶ'** ಮಾಸಪತ್ರಿಕೆಯಲ್ಲಿ 1923 ಮಾರ್ಚ್‌ನಿಂದ 1961 ಅಕ್ಟೋಬರ್ (ಸಂಪುಟ 1-31) ವರೆಗೆ ಅನೇಕ ಸಂಚಿಕೆಗಳಲ್ಲಿ **"ಅಧ್ಯಾತ್ಮ ಸಾಧನೆಗಳು"** ಎಂಬ ಶೀರ್ಷಿಕೆಯಲ್ಲಿ 1-2 ಪುಟಗಳಂತೆ 75 ಲೇಖನಗಳನ್ನು ಬರೆದು ಪ್ರಕಟಿಸಿದ್ದರು. ಅಧ್ಯಾತ್ಮಸಾಧಕರಿಗೆ, ಆರಂಭದ ವೇದಾಂತ ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾದವುಗಳು ಎಂದು ಭಾವಿಸಿ ಲೇಖನಗಳನ್ನುಸಂಗ್ರಹಿಸಿ, ವಿಷಯಾನುಕ್ರಮವಾಗಿ ವರ್ಗೀಕರಿಸಿ ಗ್ರಂಥ ರೂಪದಲ್ಲಿ **ಮೊದಲನೆಯ ಬಾರಿಗೆ** ಮುದ್ರಿಸಿ ಹೊರತರಲಾಗಿದೆ.

ಗ್ರಂಥಕ್ಕೆ ಅಮೂಲ್ಯವಾದ ಹಿನ್ನುಡಿಯನ್ನು ಬರೆದುಕೊಟ್ಟ ಶ್ರೀ ಶ್ರೀ ಅದ್ವೆಯಾನಂದೇಂದ್ರಸರಸ್ವತೀ ಸ್ವಾಮಿಗಳಿಗೆ ಪ್ರಣಾಮ ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ. ಈ ಗ್ರಂಥಕ್ಕೆ ಲೇಖನಗಳನ್ನು ಸಂಕಲಿಸುವುದು, ಅಕ್ಷರಜೋಡಣೆ ಕರಡನ್ನು ತಿದ್ದುವುದು - ಮುಂತಾದ ರೀತಿಯಿಂದ ಕಾರ್ಯಾಲಯದ ಬಂಧುಗಳು ಸಹಕರಿಸಿರುತ್ತಾರೆ. ಹಾಗೆಯೇ ಗ್ರಂಥ ಮುದ್ರಣಕ್ಕೆ ಶ್ರೀಯುತರುಗಳಾದ 1) ಡಾ. ನರಸಿಂಗಪ್ಪ, ಬೆಂ. 2)ಎನ್.ಎ. ಜನಾರ್ದನ, 3) ಎಸ್. ವಿಜಯಮೂರ್ತಿ, ಬೆಂ. 4) ಮಂಗಳಗೌರಮ್ಮ ಬೆಂಗಳೂರು. 5)ಎನ್. ಆರ್. ಶಾರದಮ್ಮ ಬೆಂಗಳೂರು. 6) ಸತ್ಯನಾರಾಯಣರಾವ್ ಮೈಸೂರು 7) ಚಂದ್ರಮೋಹನ ಮೈಸೂರು, 8) ಲೀಲಾವತಿ ಬೆಂ, 9) ಎಂ. ವಿ. ಶ್ರೀಧರ್, ಮೈಸೂರು. 10) ಪ್ರದೀಪಾಚಾರ್ಯ, ಮೆಮೋರಿಯಲ್ ಟ್ರಸ್ಟ್ ಬೆಂ.

11) ನಾಗರತ್ನಮ್ಮ, ತಿಪಟೂರು, 12) ಕೆ. ರಾಮಚಂದ್ರ, ಬೆಂ. 13) ಕೆ.ಎಸ್. ಮಹೇಶ್ ಬಾಬು, 14) ಆರ್. ವಿಜಯಕುಮಾರ್, ಬೆಂ. 15) ಎನ್. ಆರ್. ವಿಜಯ್ ಬೆಂ. 16) ಎಸ್. ನಾಗರಾಜ್, ಬೆಂ 17) ಜಿತೇಂದ್ರ ಕುಂಬೋಡಿ, ಮೈಸೂರು, 18) ವಿರಜ್ ಆರ್. ಬೆಂಗಳೂರು - ಇವರುಗಳು ಧನಸಹಾಯವನ್ನು ನೀಡಿರುತ್ತಾರೆ. ಇವರುಗಳೆಲ್ಲರಿಗೂ ಕಾರ್ಯಾಲಯದ ಪರವಾಗಿ ಕೃತಜ್ಞತಾಪೂರ್ವಕ ಧನ್ಯವಾದಗಳು.

ಈ ಗ್ರಂಥವನ್ನು ಪ್ರೇಮಾದಾದರಗಳಿಂದ ಸ್ವೀಕರಿಸಿ, ಕಾರ್ಯಾಲಯದಲ್ಲಿ ನಿರಂತರವಾಗಿ ನಡೆಯುತ್ತಿರುವ ಅಧ್ಯಾತ್ಮಿಕ ಚಟುವಟಿಕೆಗಳಿಗೆ ಅದರಲ್ಲಿಯೂ ಗ್ರಂಥ ಪ್ರಕಟಣೆಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕಾಗಿ ವಿನಂತಿ.

**ದುರ್ಮುಖಿ ನಾಮ ಸಂವತ್ಸರದ**
**ಆಷಾಢ ಬಹುಳ ತ್ರಯೋದಶಿ** **ಪ್ರಕಾಶಕರು**

**31-7-2016**

# ಹಿನ್ನುಡಿ

ಪ್ರಿಯ ಅಧ್ಯಾತ್ಮ ಬಂಧುಗಳೇ, ಪರಮ ಪೂಜ್ಯ ಶ್ರೀ ಶ್ರೀಸಚ್ಚಿದಾನಂದೇಂದ್ರ ಸರಸ್ವತೀ ಮಹಾಸ್ವಾಮಿಗಳವರು ಅಧ್ಯಾತ್ಮಪ್ರಪಂಚದಲ್ಲೇ ದಿವ್ಯ ಅಮರ ಜ್ಯೋತಿಯನ್ನು ಬೆಳಗಿಸಿಟ್ಟ ಮಹಾಪುರುಷರೆಂಬುದು ಸರ್ವರಿಗೂ ವಿದಿತ ವಿಷಯವಷ್ಟೇ. ಅವರ 200ಕ್ಕೂ ಮೀರಿದ ಗ್ರಂಥಗಳಲ್ಲಿ ಪ್ರತಿಯೊಂದು ಗ್ರಂಥವೂ ಸೂಕ್ತ ಅಧ್ಯಾತ್ಮಸಾಧಕರನ್ನು ಬಡಿದೆಬ್ಬಿಸಿ ಅಧ್ಯಾತ್ಮದ ಹೆದ್ದಾರಿಯಲ್ಲಿ ಮುನ್ನಡೆಯುವಂತೆ ಪ್ರಚೋದಿಸುತ್ತಿವೆ. ಸಹೃದಯರೂ ಸರಳರೂ ಆಗಿರುವ ಸಾಧಕರಿಗಂತೂ ಆ ಗ್ರಂಥಗಳು ದಿವ್ಯವರಪ್ರದವಾಗಿವೆ. ಅವರ ಮಹಾಗ್ರಂಥಕ್ಕೆ ಮುನ್ನುಡಿಯನ್ನು ಬರೆಯುವದು ನನ್ನ ಭಾಗ್ಯ. ನನಗೆ ಮಹದಾನಂದ ಪ್ರದವಾಗಿದೆ. ಅವರ ದಿವ್ಯಚರಣಕ್ಕೆ ನಾನು ಅನಂತಕೋಟಿ ನಮಸ್ಕಾರಗಳನ್ನು ನಿರಂತರ ಮಾಡುತ್ತಿರುವೆನು.

ಪ್ರಕೃತ "**ಅಧ್ಯಾತ್ಮಸಾಧನೆಗಳು**" ಎಂಬ ಈ ಗ್ರಂಥದಲ್ಲಿ 75 ಶೀರ್ಷಿಕೆಗಳ ಲೇಖನಗಳಿರುತ್ತವೆ. ಇವು "**ಅಧ್ಯಾತ್ಮಪ್ರಕಾಶ**" ಮಾಸಪತ್ರಿಕೆಯಲ್ಲಿ 1923ರಿಂದ 1961 ರವರೆಗಿನ ಅವಧಿಯಲ್ಲಿ ಮುದ್ರಿತವಾದ ಲೇಖನಗಳು. ಈ ಲೇಖನಗಳು ತತ್ವಜಿಜ್ಞಾಸು ಗಳಿಗೆ ತುಂಬ ಉಪಯುಕ್ತವಾದ ಮತ್ತು ಮನನೀಯವಾದ ಲೇಖನಗಳಾಗಿವೆ. ಆರಂಭ ದಲ್ಲಿ ಅಧ್ಯಾತ್ಮ ಸಾಕ್ಷಾತ್ಕಾರಕ್ಕೆ ಸಾಧನ, 9 ನಿಯಮಗಳು, ಬೆಳಗಿನ ಮುಂಜಾವದಲ್ಲಿ ಎಚ್ಚರವಿರುವ ವಿಷಯಗಳ ಬಗ್ಗೆ- ಸಾಧಕರ ಪ್ರಥಮ ಕರ್ತವ್ಯವನ್ನು ತಿಳಿಸಿರುತ್ತಾರೆ. ತರುವಾಯ ಸ್ನಾನ ಸಂಧ್ಯಾವಂದನೆ ಎಂದರೇನು? ಅದರ ಸ್ವರೂಪ ಮತ್ತು ಮಹತ್ವವನ್ನು ಬಲು ಹೃದಯಂಗಮವಾಗಿ ವಿದ್ವಾಂಸರೂ ಸಹ ತಲೆತೂಗುವಂತಹ ವಿಷಯವನ್ನು ತಿಳಿಸಿಕೊಟ್ಟಿರುತ್ತಾರೆ. ಗಾಯತ್ರೀಮಂತ್ರಾರ್ಥವನ್ನು ಭಾವನಾಪ್ರಧಾನವಾಗಿಯೂ ತತ್ವಪ್ರಧಾನವಾಗಿಯೂ ವಿವರಿಸಿರುತ್ತಾರೆ. ಹಾಗೆಯೇ ಧ್ಯಾನ, ಜಪ, ಭಜನೆ, ಸ್ತೋತ್ರ, ಪಾರಾಯಣ ಮುಂತಾದ ಸಾರ್ವತ್ರಿಕವಾದ ಸಾಧನೆಗಳನ್ನು ಹೇಗೆ ಮಾಡಬೇಕು? ಅದರ ಅಂತರಾರ್ಥ ಏನು? ಅದರಿಂದ ಆಧ್ಯಾತ್ಮಸಾಧನೆಯು ಹೇಗೆ ತತ್ತ್ವವಿಚಾರಕ್ಕೆ ಉಪಕಾರವನ್ನು ಮಾಡುತ್ತದೆಂಬುದನ್ನು ಬಹಳ ಸುಂದರವಾಗಿ ಪ್ರತಿಪಾದಿಸಿದ್ದಾರೆ. ಸಾತ್ತ್ವಿಕಾಹಾರವು ಮನಸ್ಸಿನ ಮೇಲೆ ಹೇಗೆ ಸತ್ಪರಿಣಾಮವನ್ನುಂಟು ಮಾಡುತ್ತದೆ? ವ್ಯಾಯಾಮಾದಿಗಳು ಸಹ ಮನಸ್ಸಿಗೆ ಹೇಗೆ ಲವಲವಿಕೆಯನ್ನುಂಟುಮಾಡುತ್ತವೆ

ಎಂಬುದನ್ನು ಬಹಳ ವಿವರವಾಗಿ ತಿಳಿಸಿಕೊಟ್ಟಿರುತ್ತಾರೆ. ಬ್ರಹ್ಮಚರ್ಯ, ಬ್ರಹ್ಮಚರ್ಯದ ಸ್ವರೂಪ, ಇಂದ್ರಿಯನಿಗ್ರಹದ ಹೆಚ್ಚುಗಾರಿಕೆ, ವಾಕ್ಸಂಯಮ (ಮೌನ) ಇದರ ವಿಶೇಷತೆ ಏನೆಂಬುದನ್ನು ಸುಸ್ಪಷ್ಟವಾಗಿ ತಿಳಿಸಿ ಕೊಟ್ಟಿರುತ್ತಾರೆ. ಉಪಾಸನಾಮಾರ್ಗ, ಉಪಾಸನೆಯ ವಿಕಾಸಕ್ರಮ, ಉಪಾಸನೆಯ ಪ್ರಕಾರಗಳನ್ನು ಎಷ್ಟು ಅತ್ಯುತ್ತಮರೀತಿಯಿಂದ ವಿವರಿಸಿರುತ್ತಾರೆಂದು ಕೇಳಿದರೆ ಬಹುಷಃ ಇದುವರೆಗೂ ಇಂಥಹ ವಿಚಾರಗಳನ್ನು ಇಷ್ಟೊಂದು ಸ್ಪಷ್ಟ ರೀತಿಯಲ್ಲಿ ವಿವರಿಸಿರುವ ಗ್ರಂಥವು ಬಂದೇ ಇಲ್ಲವೆಂದರೂ ಸಲ್ಲುವಷ್ಟು ಉತ್ತಮ ರೀತಿಯಲ್ಲಿ ವಿವರಿಸಿರುತ್ತಾರೆ. ಈ ವಿಚಾರಗಳನ್ನು ಇದರಲ್ಲಿಯೇ ಓದಿ ಓದುಗರು ತಿಳಿದು ಕೊಳ್ಳಬೇಕಾಗಿದೆ. ಶಾಂಕರ ಭಾಷ್ಯ ಗ್ರಂಥಗಳಲ್ಲೂ ಈ ವಿಚಾರಗಳು ಒಂದೇ ಕಡೆಯಲ್ಲಿ ಸಿಗುವುದಿಲ್ಲ.

ಪೂಜ್ಯ ಗುರುಗಳು ಸಾಧನೆಗಳ ವಿಚಾರವಾಗಿ ಬರೆಯುವಾಗ ಸ್ವಯಂ ಆ ಸಾಧನೆಗಳನ್ನು ಮಾಡಿ ಅವುಗಳ ಕಷ್ಟಗಳನ್ನು ಅನುಭವಿಸಿ ಅವುಗಳ ಮರ್ಮವನ್ನು ತಿಳಿದು ಬರೆದಿರುವುದರಿಂದ ಇವು ಸಾಧಕರಿಗೆ ತುಂಬಾ ಪ್ರಭಾವಕಾರಿಯಾಗಿವೆ. ಸಾಧನೆಗಳ ವಿಚಾರವನ್ನು ಕೇವಲ ಗ್ರಂಥಗಳನ್ನು ಓದುವುದರಿಂದಾಗಲೀ, ಸುಮ್ಮನೆ ಪ್ರವಚನಗಳನ್ನು ಶ್ರವಣ ಮಾಡುವುದರಿಂದಾಗಲೀ ಅವುಗಳ ಅಂತರಾಳವು ಅರ್ಥವಾಗುವುದಿಲ್ಲ. ಅವುಗಳನ್ನು ಸದ್ಗುರುಗಳ ಸಹವಾಸದಲ್ಲಿದ್ದುಕೊಂಡು ತಾನು ಪ್ರತಿನಿತ್ಯ ನಡೆಸಿ ಅನುಷ್ಠಾನ ರೂಪದಲ್ಲಿಟ್ಟುಕೊಂಡಾಗಲೇ ಅದರ ಮರ್ಮವು ತಿಳಿದೀತು ! ಸಾಧನೆಗಳನ್ನು ನಡೆಸುವಾಗಲೇ ಒಂದು ರೀತಿಯ ಸಾತ್ವಿಕ ಆನಂದ, ಶಾಂತಿ, ಸಮಾಧಾನಗಳಾಗುವವು. ಅವನ್ನು ಸಾಧಕನು ತಾನು ಅನುಭವಿಸಿಯೇ ತಿಳಿಯಬೇಕೇ ಹೊರತು ಊಹೆ ಕಲ್ಪನೆಗಳಿಂದ ತಿಳಿಯುವುದಕ್ಕಾಗುವುದಿಲ್ಲ. ಪೂಜ್ಯ ಶ್ರೀಗಳವರು ಸಾಧನೆಗಳನ್ನು ಕರತಲಾಮಲಕವನ್ನಾಗಿ ಮಾಡಿಕೊಂಡಿದ್ದರಿಂದಲೇ ಅವರು ಅಧ್ಯಾತ್ಮ ಶಿಖರವನ್ನು ತಲುಪಲು ಸಮರ್ಥರಾದರು. ಒಂದು ರೀತಿಯಿಂದ ಹೇಳಬೇಕಾದರೆ ಪೂಜ್ಯ ಗುರುಗಳಿಗೆ ಸಿದ್ಧಾಂತ ವಿಚಾರವನ್ನು ಬರೆಯುವುದಕ್ಕಿಂತಲೂ ಸಾಧನ ವಿಚಾರಗಳನ್ನು ಬರೆಯುವುದರಲ್ಲಿಯೇ ಹೆಚ್ಚು ಆದರವಿದ್ದಿತೆಂದು ಹೇಳಬಹುದಾಗಿದೆ. ಏಕೆಂದರೆ ಚೆನ್ನಾಗಿ ಸಾಧನೆಗಳು ಮೈಗೂಡಿದ್ದಾದರೆ ಸಿದ್ಧಾಂತವು ತಾನಾಗಿಯೇ ಹೊರ ಬೀಳುತ್ತದೆ. ತೈತ್ತಿರೀಯ ಭಾಷ್ಯದಲ್ಲಿ ಭಾಷ್ಯಕಾರರು **"ಉಪಾಯೇ ಏವ ಯತ್ನಃ ಕಾರ್ಯಃ ನ ಉಪೇಯೇ (ಭಾ.ಭಾ.84)"** ಎಂದು ಬರೆದಿರುತ್ತಾರೆ. ಇದರ ಅಭಿಪ್ರಾಯವೇನೆಂದರೆ

ಉಪಾಯವನ್ನು ಎಂದರೆ ಸಾಧನೆಗಳನ್ನು ಚೆನ್ನಾಗಿ ಮಾಡಿದ್ದಾದರೆ ಉಪೇಯವು ಎಂದರೆ ಫಲವು ತಾನೇ ಕೈಗೂಡುತ್ತದೆ. ಮತ್ತೆ ಅದಕ್ಕೆ ಪೃಥಕ್ ಯತ್ನವನ್ನುಮಾಡುವ ಅವಶ್ಯಕತೆ ಇಲ್ಲ. **"ವೇದಾನ್ತಾಭ್ಯಾಸಿನಾಂ ತು ಸ್ವಯ ಮೇವ ಅಜಾದ್ವಯಾತ್ಮವಿಷಯಃ ವಿವೇಕೋ ಜಾಯತೇ "** ಎಂಬ **(ಮಾ. 4-42. ಭಾ.ಭಾ. 287)** ಮಾಂಡೂಕ್ಯಭಾಷ್ಯ ವಾಕ್ಯಕ್ಕೂ ಇದೇ ಅಭಿಪ್ರಾಯವನ್ನು ತೆಗೆಯ ಬೇಕು. ಒಟ್ಟಿನ ಮೇಲೆ ಈ ಗ್ರಂಥವು ಸರ್ವರಿಗೂ ಎಂದರೆ ಪಾಮರರಿಂದ ಹಿಡಿದು ಪಂಡಿತಪರ್ಯಂತದವರೆಲ್ಲರಿಗೂ ಮಹಾದುಪಕಾರವಾಗಿದೆ. ಈ ಗ್ರಂಥದ ಇನ್ನೊಂದು ಸ್ವಾರಸ್ಯವೇನೆಂದರೆ ನಿಜವಾದ ಅಧ್ಯಾತ್ಮ ಪಿಪಾಸುಗಳಾಗಿ ಸಾಧಕರಾಗಿದ್ದರೆ ಅವರು ಈ ಗ್ರಂಥವನ್ನು ಓದುತ್ತಿದ್ದರೆ ಮಧ್ಯದಲ್ಲೆಲ್ಲೂ ನಿಲ್ಲಿಸುವುದಕ್ಕೆ ಮನಸ್ಸು ಬರುವುದೇ ಇಲ್ಲ. ಗ್ರಂಥವು ತನ್ನಷ್ಟಕ್ಕೆ ತಾನೇ ಪೂರಾ ಓದಿಸುತ್ತದೆ. ಇದನ್ನು ಎಷ್ಟು ಸಲ ಓದಿದರೂ ತೃಪ್ತಿಯಾಗದೇ ಪುನಃ ಪುನಃ ಓದೋಣವೆನಿಸುತ್ತದೆ. ಈ ಲೇಖನಗಳಲ್ಲಿ ಹೆಚ್ಚಿನ ಶಾಸ್ತ್ರಗಳ ಗಡಿಬಿಡಿ ಇಲ್ಲದೇ ಮತಾಂತರದ ಬೇರೆ ವಾದಿಗಳ ಖಂಡನೆ ಮಂಡನೆ ಇಲ್ಲದೇ ತುಂಬಾ ಸರಳವಾಗಿ ಸುಂದರವಾದ ವಿಚಾರ ಮಾಲೆಗಳಾಗಿರುತ್ತವೆ. ಈ ಗ್ರಂಥವು ಅದ್ವೈತಿಗಳಿಗೆಮಾತ್ರವಲ್ಲದೇ ದ್ವೈತ, ವಿಶಿಷ್ಟಾದ್ವೈತಗಳಿಗೂ ತುಂಬಾ ಉಪಕಾರಿಯಾಗಿದೆ. ಯಾರಾದರೂ ಭಾಷಾಂತರ ನಿಪುಣರಾದವರಿದ್ದರೆ ಅವರಿಂದ ದೇಶದ ಇನ್ನೂ ಹಲವಾರು ಭಾಷೆಗಳಿಗೆ ಭಾಷಾಂತರಿಸಿ ದೇಶದ ಎಲ್ಲಾ ಜನರಿಗೂ ಇದರ ಪ್ರಯೋಜನವನ್ನು ಮುಟ್ಟುವಂತೆ ಮಾಡಿದರೆ ತುಂಬಾ ಉಪಕಾರವಾದೀತು!

ಅವಶ್ಯವಾಗಿ ಈ ಗ್ರಂಥವನ್ನು ಪ್ರತಿಯೊಬ್ಬರೂ ಓದಿ ತಮ್ಮ ಮಿತ್ರ ಬಂಧು ಆಪ್ತರಿಗೂ ತಿಳಿಸಿ ಅವರನ್ನು ಓದುವಂತೆ ಮಾಡಿಸಿದರೆ ಹಾಗೆಯೇ ಉದಾರ ಮಹಾಶಯರು ಈ ಗ್ರಂಥವನ್ನು ಒಟ್ಟಾಗಿ ಖರೀದಿಸಿ ಮದುವೆ, ಮುಂಜಿ, ಶಾಂತಿ, ಪುಷ್ಪಾದ್ಯಾದಿಕರ್ಮ ಸಂದರ್ಭದಲ್ಲಿ ಸೇರಿದ ಆಸಕ್ತ ಭಕ್ತರಿಗೆ ಹಂಚಿದರೆ ಇದೊಂದು ದೊಡ್ಡ ಈಶ್ವರಾ ರಾಧನೆಯಾದೀತು! ನಮ್ಮ ದೇಶದ ಎಲ್ಲರೂ ಈ ಗ್ರಂಥವನ್ನು ಓದಿ ಇದರ ಪೂರ್ಣ ಪ್ರಯೋಜನವನ್ನು ಪಡೆಯುವಂತಾಗಲೆಂದು ಹರಸುತ್ತಾ ಲೇಖನಿಯನ್ನಿಳಿಸುವೆನು.

**15-6-2016** ಅದ್ವಯಾನಂದೇಂದ್ರಸರಸ್ವತೀಸ್ವಾಮಿಗಳು

# ವಿಷಯಾನುಕ್ರಮಣಿಕೆ


| ಸಂಖ್ಯೆ | ವಿಷಯು | ಸಂಪುಟ/ಸಂಚಿಕೆ/ತಿಂಗಳು/ಇಸವಿ | ಪುಟ |
|---|---|---|---|
| 1. | ಅಧ್ಯಾತ್ಮಸಾಕ್ಷಾತ್ಕಾರಕ್ಕೆ ಸಾಧನ | 7–10– ಜೂನ್ 1936 | 1 |
| 2. | ಅಧ್ಯಾತ್ಮಸಾಧನೆಗೆ 9 ನಿಯಮಗಳು | 8–1– ಸೆಪ್ಟೆಂಬರ್ 1937 | 2 |
| 3. | ಬೆಳಗಿನ ಮುಂಜಾವದಲ್ಲಿ ಎಚ್ಚರುವದು | 8–4– ಡಿಸೆಂಬರ್ 1936 | 3 |
| 4. | ಸ್ನಾನ | 8–6– ಫೆಬ್ರವರಿ 1937 | 5 |
| 5. | ಸಂಧ್ಯಾವಂದನೆ | 1–2– ಮಾರ್ಚ್ 1923 | 7 |
| 6. | ಸಂಧ್ಯಾವಂದನೆಯಲ್ಲಿ ಉಪಯೋಗಿಸುವ ಮಾರ್ಜನೆಯ ಮಂತ್ರ | 3–4– ಡಿಸೆಂಬರ್1931 | 12 |
| 7. | ಮಂತ್ರಾಚಮನ -1 | 4–6– ಫೆಬ್ರವರಿ 1933 | 15 |
| 8. | ಮಂತ್ರಾಚಮನ -2 | 4–12– ಆಗಸ್ಟ 1933 | 18 |
| 9. | ಗಾಯತ್ರೀ ಮಂತ್ರ | 5–12– ಆಗಸ್ಟ 1934 | 20 |
| 10. | ಧ್ಯಾನ | 8–11– ಜುಲೈ 1937 | 23 |
| 11. | ಮಾನಸಪೂಜೆ -1 | 9–1– ಸೆಪ್ಟೆಂಬರ್ 1937 | 25 |
| 12. | ಮಾನಸಪೂಜೆ -2 | 9–3– ನವಂಬರ್ 1937 | 27 |
| 13. | ಸಗುಣ ಧ್ಯಾನ -1 | 9–4– ಡಿಸೆಂಬರ್ 1937 | 30 |
| 14. | ಸಗುಣ ಧ್ಯಾನ -2 | 9–5– ಜನವರಿ 1938 | 32 |
| 15. | ಸಗುಣ ಧ್ಯಾನ -3 | 9–6– ಫೆಬ್ರವರಿ 1938 | 34 |
| 16. | ನಿರ್ಗುಣ ಧ್ಯಾನ | 9–9– ಮೇ 1938 | 36 |
| 17. | ಪಾರಾಯಣ | 10–1– ಸೆಪ್ಟೆಂಬರ್ 1938 | 39 |
| 18. | ಪಾರಾಯಣ ಕ್ರಮ | 10–3– ನವಂಬರ್ 1938 | 41 |
| 19. | ಸದ್ವ್ಯವಹಾರ -1 | 10–7– ಮಾರ್ಚ್ 1939 | 43 |
| 20. | ಸದ್ವ್ಯವಹಾರ -2 | 10–9– ಮೇ 1939 | 46 |
| 21. | ತ್ರಿಕರಣ ಸಂಯಮ | 10–12– ಆಗಸ್ಟ 1939 | 48 |
| 22. | ಸಾತ್ವಿಕಾಹಾರ - 1 | 11–3– ನವಂಬರ್ 1939 | 49 |
| 23. | ಸಾತ್ವಿಕಾಹಾರ - 2 | 11–5– ಜನವರಿ 1940 | 52 |
| 24. | ವ್ಯಾಯಾಮ - 1 | 11–6– ಫೆಬ್ರವರಿ 1940 | 54 |
| 25. | ವ್ಯಾಯಾಮ - 2 | 11–9– ಮೇ 1940 | 56 |

| | | |
|---|---|---|
| 26. ಇಂದ್ರಿಯ ನಿಗ್ರಹ -1 | 11-10- ಜೂನ್ 1940 | 57 |
| 27. ಇಂದ್ರಿಯ ನಿಗ್ರಹ -2 | 11-11- ಜುಲೈ 1940 | 58 |
| 28. ಬ್ರಹ್ಮಚರ್ಯ | 11-12- ಆಗಸ್ಟ್ 1940 | 59 |
| 29. ವಾಕ್ಸಂಯಮ | 12-1- ಸೆಪ್ಟೆಂಬರ್ 1940 | 61 |
| 30. ಮಾತಿನಲ್ಲಿ ದೋಷಗಳು | 12-2- ಅಕ್ಟೋಬರ್ 1940 | 62 |
| 31. ಸತ್ಯಪ್ರಿಯವಚನ | 12-4- ಡಿಸೆಂಬರ್ 1940 | 63 |
| 32. ಭಗವನ್ನಾಮೋಚ್ಚಾರಣ | 12-6- ಫೆಬ್ರವರಿ 1941 | 64 |
| 33. ಮೌನ | 12-7- ಮಾರ್ಚ್ 1941 | 66 |
| 34. ಭಗವನ್ನಾಮಸ್ಮರಣೆ | 12-9- ಮೇ 1941 | 68 |
| 35. ಮನಃಸಂಯಮನ ವಿಚಾರದ ಆವಶ್ಯಕತೆ | 12-11- ಜುಲೈ 1941 | 72 |
| 36. ಆತ್ಮ ಶೋಧನೆ | 13-1- ಸೆಪ್ಟೆಂಬರ್ 1941 | 73 |
| 37. ಸರ್ವಾತ್ಮಭಾವನೆ | 13-4- ಡಿಸೆಂಬರ್ 1941 | 75 |
| 38. ಸಾಧನದ ಆವಶ್ಯಕತೆ | 13-7- ಮಾರ್ಚ್ 1942 | 76 |
| 39. ತತ್ತ್ವವಿಚಾರ | 13-8- ಏಪ್ರಿಲ್ 1942 | 79 |
| 40. ಭಜನ | 13-12- ಆಗಸ್ಟ್ 1942 | 81 |
| 41. ಆತ್ಮನಿವೇದನೆ | 14-1- ಸೆಪ್ಟೆಂಬರ್ 1942 | 82 |
| 42. ಮನಸ್ಸಿನ ಸಂಸ್ಕಾರ | 15-2- ಅಕ್ಟೋಬರ್ 1943 | 84 |
| 43. ಮನಸ್ಸಿನಿಂದ ಹೆಚ್ಚಿನ ಲಾಭವನ್ನು ಪಡೆಯುವ ಉಪಾಯ | 15-5- ಜನವರಿ 1944 | 85 |
| 44. ಇಂದ್ರಿಯಗಳ ಸ್ವಭಾವ | 15-6- ಫೆಬ್ರವರಿ 1944 | 87 |
| 45. ದೇವಸ್ಥಾನಗಳಲ್ಲಿ ಹೇಗೆ ನಡೆದುಕೊಳ್ಳಬೇಕು | 15-6- ಫೆಬ್ರವರಿ 1944 | 90 |
| 46. ಸಾಧಕರಿಗೆ ಸೂಚನೆಗಳು | 18-2- ಅಕ್ಟೋಬರ್ 1948 | 92 |
| 47. ಸಾಧನ ವಿಚಾರ | 21-10- ಜೂನ್ 1952 | 94 |
| 48. ಉಪಾಸನಾ ಮಾರ್ಗ | 24-5- ಜನವರಿ 1955 | 96 |
| 49. ಭಗವದರ್ಶನ | 24-6- ಫೆಬ್ರವರಿ 1955 | 101 |
| 50. ಉಪಾಸನೆಯ ವಿಕಾಸಕ್ರಮ | 24-7- ಮಾರ್ಚಿ 1955 | 105 |

| | | |
|---|---|---|
| 51. ಜಪ | 24-8- ಏಪ್ರಿಲ್ 1955 | **112** |
| 52. ಭಜನೆ | 24-9- ಮೇ 1955 | **118** |
| 53. ಸಾಮೂಹಿಕ ಭಜನೆ | 24-10- ಜೂನ್ 1955 | **124** |
| 54. ಗುರುಪೂರ್ಣಿಮೆ | 24-11- ಜುಲೈ 1955 | **131** |
| 55. ಧ್ಯಾನ | 24-12- ಆಗಸ್ಟ 1955 | **133** |
| 56. ಸಮಾಧಿ | 25-1- ಸೆಪ್ಟೆಂಬರ್ 1955 | **139** |
| 57. ಉಪಾಸನೆಗೆ ವೇದಾಂತದ ಆಧಾರವಿರುವದರ ಆವಶ್ಯಕತೆ | 25-3- ನವೆಂಬರ್ 1955 | **140** |
| 58. ಉಪಾಸನಾ ಪ್ರಕಾರಗಳು | 25-4- ಡಿಸೆಂಬರ್ 1955 | **144** |
| 59. ಗ್ರಂಥಗಳ ಪಾರಾಯಣ | 25-5- ಜನವರಿ 1956 | **149** |
| 60. ಮನೆಯಲ್ಲಿ ದೇವತಾರ್ಚನೆ | 25-6- ಫೆಬ್ರವರಿ 1956 | **153** |
| 61. ಸ್ತೋತ್ರಗಳು | 25-7- ಮಾರ್ಚ್ 1956 | **160** |
| 62. ಮಂತ್ರಜಪ | 25-8- ಏಪ್ರಿಲ್ 1956 | **168** |
| 63. ನಾಮಕೀರ್ತನ | 25-9- ಮೇ 1956 | **173** |
| 64. ಗುರುಭಕ್ತಿ | 25-12- ಆಗಸ್ಟ 1956 | **179** |
| 65. ಮುಪ್ಪು ತಪ್ಪದು | 27-2- ಅಕ್ಟೋಬರ್ 1957 | **182** |
| 66. ದ್ವೇಷಬುದ್ಧಿ | 27-3- ನವೆಂಬರ್ 1957 | **183** |
| 67. ಸರಳಜೀವನ | 27-4- ಡಿಸೆಂಬರ್ 1957 | **185** |
| 68. ಸ್ಥಿರತೆ | 27-5- ಜನವರಿ 1958 | **186** |
| 69. ಅಧ್ಯಾತ್ಮ ಜ್ಞಾನ ನಿತ್ಯತ್ವ | 27-6- ಫೆಬ್ರವರಿ 1958 | **187** |
| 70. ವಿಭೂತ್ಯುಪಾಸನೆ | 27-7- ಮಾರ್ಚ್ 1958 | **189** |
| 71. ತೀರ್ಥಗಳಿಂದ ಲಾಭವನ್ನು ಪಡೆಯುವ ಬಗ್ಗೆ | 27-8- ಏಪ್ರಿಲ್ 1958 | **190** |
| 72. ಪರಮಾತ್ಮನ ವಿಭೂತಿ | 27-9- ಮೇ 1958 | **196** |
| 73. ಮುಪ್ಪು ಬರುವದರೊಳಗೆ ಮಾಡಿಕೊಳ್ಳಬೇಕಾದದ್ದು | 27-12- ಆಗಸ್ಟ 1958 | **197** |
| 74. ನಿತ್ಯಚಿಂತನ | 29-1- ಸೆಪ್ಟೆಂಬರ್ 1959 | **198** |
| 75. ಅಧ್ಯಾತ್ಮ ವಿದ್ಯಾರ್ಥಿಗಳಿಗೆ ಸೂಚನೆಗಳು | 31-2- ಅಕ್ಟೋಬರ್ 1961 | **199** |

# ಆಧ್ಯಾತ್ಮ ಸಾಧನಗಳು

# ಅಧ್ಯಾತ್ಮ ಸಾಧನಗಳು

## 1. ಅಧ್ಯಾತ್ಮ ಸಾಕ್ಷಾತ್ಕಾರಕ್ಕೆ ಸಾಧನ

"ಅಧ್ಯಾತ್ಮತತ್ತ್ವವು ನಮ್ಮೆಲ್ಲರಿಗೂ ಏತಕ್ಕೆ ಗೋಚರವಾಗುವುದಿಲ್ಲ? ಅದು ಇದ್ದರೆ ಎಲ್ಲರಿಗೂ ಕಾಣಬೇಕಲ್ಲವೇ?"- ಎಂದು ಕೆಲವರು ಕೇಳುತ್ತಾರೆ. ಅಂಥವರಿಗೆ ನಾವು ಎರಡು ಪ್ರಶ್ನೆಗಳನ್ನು ಹಾಕಬೇಕು: "ಕಣ್ಣಿದ್ದವರಿಗೂ ಗೋಡೆಯಿಂದಾಚೆಗೆ ಇರುವ ವಸ್ತುಗಳು ಏತಕ್ಕೆ ಕಾಣಿಸುವುದಿಲ್ಲ? ಕಣ್ಣಿಗೆ ಪರೆಮುಚ್ಚಿದ್ದವರಿಗೆ ತಮ್ಮೆದುರಿಗೇ ಇರುವ ವಸ್ತುಗಳು ಕೂಡ ಕಾಣುವುದಿಲ್ಲವೇಕೆ?"

ನಮಗೆ ಅಧ್ಯಾತ್ಮವು ಕಾಣದೆ ಇರುವದಕ್ಕೆ ಮುಖ್ಯವಾಗಿ ಎರಡು ಕಾರಣಗಳಿವೆ; ನಾವು ಹೊರಗಿನ ವಿಷಯಗಳನ್ನೇ ಚಿಂತಿಸುತ್ತಾ ಅವುಗಳ ಕಡೆಗೇ ಮನಸ್ಸು ತಿರುಗಿಸಿರುವದು ಒಂದು ಕಾರಣ; ಒಳಗಡೆಗೆ ತಿರುಗಿದರೂ ಅಧ್ಯಾತ್ಮಸಾಕ್ಷಾತ್ಕಾರಕ್ಕೆ ಅಡ್ಡಿಯಾದ ಪರೆಯನ್ನು ತೆಗೆಸಿಕೊಂಡು ಸರಿಯಾಗಿ ನೋಡದೆ ಇರುವದು ಮತ್ತೊಂದುಕಾರಣ.

ನಮಗೆ ನಮ್ಮೊಳಗೇ ಇರುವ ಆತ್ಮತತ್ತ್ವವನ್ನು ಕಾಣಬೇಕೆಂಬ ಉತ್ಕಟವಾದ ಇಚ್ಛೆಯು ಬಂದಿದೆಯೆಂದು ಇಟ್ಟುಕೊಳ್ಳಿ. ಆಗ ನಾವು ಯಾವ ಯಾವ ಸಾಧನಗಳನ್ನು ಒದಗಿಸಿಕೊಳ್ಳಬೇಕು? ಆಗ ಶ್ರದ್ಧೆ, ಭಕ್ತಿ, ಧ್ಯಾನ- ಎಂಬ ಮೂರು ಸಾಮಗ್ರಿಗಳನ್ನು ಕೂಡಿಹಾಕಿಕೊಳ್ಳಬೇಕಾಗುವದು.

"ಆತ್ಮತತ್ತ್ವವು ನಿಜವಾಗಿಯೂ ಇದೆ, ಅದನ್ನು ಕಾಣುವದಕ್ಕೆ ಸರಿಯಾದ ದಾರಿಯಲ್ಲಿ ಪ್ರಯತ್ನಪಟ್ಟರೆ ಖಂಡಿತವಾಗಿ ಅದರ ಸಾಕ್ಷಾತ್ಕಾರವಾಗುವದು"- ಎಂಬ ದೃಢವಾದ ನಂಬಿಕೆಯೇ **ಶ್ರದ್ಧೆಯು.** ಹಿಮಾಲಯದ ಒಂದು ಗುಹೆಯಲ್ಲಿ ಸಿದ್ಧರಸ ವಿದೆಯೆಂಬ ನಂಬಿಕೆಯಿಂದ ಒಬ್ಬನು ಸಾವಿರಾರು ಯೋಜನಗಳನ್ನು ಕಾಲುನಡಗೆಯಿಂದಾದರೂ ನಡೆದುಬರುವಂತೆ ಬಲವಾದ ಶ್ರದ್ಧೆಯಿಂದ ಕೂಡಿದ ಸಾಧಕನ ಪ್ರಯತ್ನವು ಮಾತ್ರ ಕೈಗೂಡುವದು; ಕುತೂಹಲಕ್ಕೆ ಒಂದೆರಡು ದಿನ ಸ್ವಲ್ಪ ಅಧ್ಯಾತ್ಮ ವಿಚಾರವನ್ನು ಮಾಡಿ ಕೈಬಿಡುವವರಿಗೆ ಪರಮಾರ್ಥವು ಎಂದಿಗೂ ದಕ್ಕಲಾರದು.

ಕಳ್ಳನು ತನಗೆ ಬೇಕಾದ ಪದಾರ್ಥವನ್ನು ಅಪಹರಿಸುವದಕ್ಕೆ ಪ್ರಯತ್ನಿಸುವಾಗಲೂ, ಕಾಮಿಯು ಮತ್ತೊಬ್ಬರಿಗೆ ತಿಳಿಯದಂತೆ ತನ್ನಪ್ರಿಯೆಯ ಸಮಾಗಮವಾಗಬೇಕೆಂದು ಹೊಂಚಿಹಾಕುವಾಗಲೂ ಅವರ ಮನಸ್ಸಿನಲ್ಲಿ ತಮ್ಮ ಇಷ್ಟಾರ್ಥದ ಚಿಂತೆಯೇ ಎಲ್ಲೆಲ್ಲಿಯೂ ಯಾವಾಗಲೂ ಹೇಗೆ ಹತ್ತಿಕೊಂಡಿರುವದೋ ಹಾಗೆ ಅಧ್ಯಾತ್ಮತತ್ತ್ವದ ಚಿಂತೆಯನ್ನು ಒಂದೇ ಸಮನೆ ಯಾವಾಗಲೂ ಹತ್ತಿಸಿಕೊಂಡಿರುವದು ಧ್ಯಾನವು. ಈ ಧ್ಯಾನವು ಬಲಿತುಕೊಂಡಹಾಗೆಲ್ಲ ಅಧ್ಯಾತ್ಮವು ನಮಗೆ ಹತ್ತಿರ ಹತ್ತಿರವಾಗುತ್ತದೆ.

ಶ್ರದ್ಧೆಯಿಂದಲೂ ಧ್ಯಾನದಿಂದಲೂ ಹುಡುಕುತ್ತಿರುವಾಗ ಅಧ್ಯಾತ್ಮಪ್ರಕಾಶದ ಒಂದು ಕಿರಣವು ಹೇಗೋ ನಮ್ಮ ಹೃದಯದಲ್ಲಿ ತೋರಿಕೊಳ್ಳುವದು. ಆಗ ಅದರಲ್ಲಿ ಉಂಟಾಗುವ ಪ್ರೇಮವೇ ಭಕ್ತಿಯು. ಭಕ್ತಿಯು ತಲೆದೋರಿದಮೇಲೆ ನಮ್ಮ ಶ್ರದ್ಧೆಯೂ ಧ್ಯಾನವೂ ಬೆಳೆಯುತ್ತವೆ; ಭಕ್ತಿಯುಬಲಿತುಕೊಂಡಾಗ ಆತ್ಮಪ್ರಕಾಶವು ಬರಿಯ ಅಧ್ಯಾತ್ಮವಾಗಿರುವುದಿಲ್ಲ, ಏಕೆಂದರೆ ಅದು ನಮ್ಮೊಳಗೇ ಇರುವದಿಲ್ಲ, ಎಲ್ಲೆಲ್ಲಿಯೂ ತಾನೊಂದೇ ಝುಗಝುಗಿಸುತ್ತಿರುತ್ತದೆ.

*****

## 2. ಅಧ್ಯಾತ್ಮ ಸಾಧನೆಗೆ ಒಂಬತ್ತು ನಿಯಮಗಳು

**1. ಬ್ರಾಹ್ಮ ಮುಹೂರ್ತದಲ್ಲಿ ಏಳುವದು :—** ಬೆಳಗಿನ ಝಾವ ನಾಲ್ಕು ಘಂಟೆಯಿಂದ ಸೂರ್ಯೋದಯವಾಗುವದರೊಳಗೆ ಧ್ಯಾನಕ್ಕೆ ಕುಳಿತರೆ ಮನಸ್ಸು ಬಹಳ ಪ್ರಸನ್ನವಾಗಿರುತ್ತದೆ.

**2. ಸ್ನಾನ :—** ತಣ್ಣೀರಿನಲ್ಲಿ, ಅದಾಗದಿದ್ದರೆ ಬಿಸಿನೀರಿನಲ್ಲಿ, ಸ್ನಾನಮಾಡಿ ಶುಚಿಯಾದ ಬಟ್ಟೆಯನ್ನು ಧರಿಸಬೇಕು. ಪ್ರಾತಃಸ್ನಾನಕ್ಕೆ ಅನುಕೂಲವಾಗದಿದ್ದರೆ ಮುಖವನ್ನೂ ಕೈಕಾಲುಗಳನ್ನೂ ತೊಳೆದುಕೊಂಡು ಈಶ್ವರನ ಸ್ಮರಣೆಯಿಂದ ಚಿತ್ತ ಶುದ್ಧಿಯನ್ನು ಮಾಡಿಕೊಳ್ಳಬೇಕು.

**3. ಧ್ಯಾನ :—** ಸರ್ವರಿಗೂ ಆತ್ಮನಾಗಿರುವ ಪರಮೇಶ್ವರನ ಧ್ಯಾನವನ್ನು ದಿನಕ್ಕೆ ಅರ್ಧಘಂಟೆಯಾದರೂ ಮಾಡಬೇಕು. ಪೂಜೆ, ಜಪ - ಮುಂತಾದವುಗಳಿಂದ ಧ್ಯಾನಕ್ಕೆ ಸಿದ್ಧತೆಯನ್ನು ಮಾಡಿಕೊಳ್ಳಬೇಕು.

**4. ಪಾರಾಯಣ :—** ಉಪನಿಷತ್ತುಗಳು, ಭಗವದ್ಗೀತೆ, ರಾಮಾಯಣ, ಭಾಗವತ- ಮುಂತಾದ ಸದ್ಗ್ರಂಥಗಳ ಭಾಗವನ್ನು ತಪ್ಪದೆ ಪ್ರತಿದಿನವೂ ಅರ್ಥವನ್ನು ಸ್ಮರಣೆಮಾಡುತ್ತಾ ಓದಬೇಕು.

**5. ಸದ್ವ್ಯವಹಾರ :—**ವಿಷಯಭೋಗಕ್ಕಾಗಿ ಜೀವಿಸಬಾರದು, ಪರಮಾರ್ಥದ ಆನಂದಕ್ಕಾಗಿ ಜೀವಿಸಬೇಕು. ಯಾವ ವ್ಯವಹಾರದಲ್ಲಿಯೇ ಆಗಲಿ, ದೃಷ್ಟಿಗೆ ಜೀವನದ ಹೆಗ್ಗುರಿಯು ದೂರವಾಗಿರಬಾರದು.

**6. ತ್ರಿಕರಣ ಸಂಯಮ :—** ಹಿತಮಿತವಾದ ಸಾತ್ತ್ವಿಕಾಹಾರ, ಯುಕ್ತವಾದ ವ್ಯಾಯಾಮ, ಇಂದ್ರಿಯನಿಗ್ರಹ- ಇವುಗಳಿಂದ ಶರೀರವನ್ನೂ; ಸತ್ಯಪ್ರಿಯವಚನ, ಭಗವನ್ನಾಮೋಚ್ಚಾರಣ, ಮೌನ-ಮುಂತಾದವುಗಳಿಂದ ವಾಕ್ಕನ್ನೂ; ತತ್ತ್ವವಿಚಾರ, ಸರ್ವಾತ್ಮ ಭಾವನೆ, ಆತ್ಮಶೋಧನೆ- ಮುಂತಾದವುಗಳಿಂದ ಮನಸ್ಸನ್ನೂ ಹಿಡಿತದಲ್ಲಿಟ್ಟುಕೊಳ್ಳಬೇಕು.

**7. ಭಜನ :—** ಪ್ರತಿದಿನವೂ ಸ್ತೋತ್ರಗಳಿಂದಲೂ ಕೀರ್ತನೆಗಳಿಂದಲೂ ಸಾಯಂಕಾಲ ಭಗವಂತನನ್ನು ಭಜಿಸಬೇಕು.

**8. ಆತ್ಮನಿವೇದನ :—** ಸಕಲಕಾರ್ಯಗಳನ್ನೂ ಭಗವಂತನ ಪ್ರೇರಣೆಯಿಂದಲೇ ತಾನು ನಿಮಿತ್ತಮಾತ್ರನಾಗಿ ಮಾಡುತ್ತಿರುವೆನೆಂದು ತಿಳಿದು ತನ್ನ ಸರ್ವಸ್ವವನ್ನೂ ತನ್ನನ್ನೂ ಆತನಿಗೆ ಒಪ್ಪಿಸಿಬಿಡಬೇಕು.

**9. ಸತ್ಸಂಗ :—** ಅಧ್ಯಾತ್ಮಸಾಧನೆಯನ್ನು ಹೇಗೆ ಮಾಡಬೇಕೆಂಬುದನ್ನು ಸತ್ಪುರುಷರೇ ತಿಳಿಸಬಲ್ಲವರು. ಆದ್ದರಿಂದ ಶ್ರದ್ಧೆಯಿಂದ ಸತ್ಸಂಗವನ್ನು ಸಂಪಾದಿಸಿಕೊಳ್ಳಬೇಕು.

*****

## 3. ಬೆಳಗಿನ ಮುಂಜಾವದಲ್ಲಿ ಎಚ್ಚರುವದು

"ಸಕಲ ಪ್ರಾಣಿಗಳೂ ನಿದ್ರಿಸುತ್ತಿರುವಾಗ ಪರಮಾರ್ಥವನ್ನರಿತವನು ಎಚ್ಚರ ವಾಗಿರುವನು" ಎಂದು ಭಗವಂತನು ನುಡಿದಿರುವನು. ಪರಮಾರ್ಥವನ್ನು ಸಾಧನೆ ಮಾಡ ಬೇಕೆನ್ನುವವರು ಇದನ್ನು ನೆನಪಿನಲ್ಲಿಡಬೇಕು.

ಪರಮಾರ್ಥವಿಚಾರವೆಂದರೆ ಲೋಕದ ಬಹುಮಂದಿಗೆ ಆಕಳಿಕೆ ಬರುವದು, ತೂಕಡಿಕೆಬರುವದು, ನಿದ್ರೆಹತ್ತುವದು, ಪರಮಾರ್ಥದ ವಿಷಯದಲ್ಲಿ ಅವರು ಯಾವಾಗಲೂ ಗೊರಕೆಯಿಡುತ್ತಲೇ ನಿದ್ರಿಸುತ್ತಿರುವರು. ಅವರಿಗೆ ಎಚ್ಚರಿಕೆಯಾಗುವದು ಅಪೂರ್ವ. ಆದರೆ ತತ್ತ್ವವನ್ನು ತಿಳಿದುಕೊಳ್ಳಬೇಕೆಂದು ತವಕಿಸುವವರು ಹೇಗಾದರೂ ಮಾಡಿ ಈ ನಿದ್ರೆಯಿಂದ ತಪ್ಪಿಸಿಕೊಂಡು ಏಳಬೇಕೆಂದು ಯತ್ನಿಸಬೇಕು.

ಸಾಧಕನು ಎಲ್ಲಕ್ಕೂ ಮೊದಲು ವ್ಯವಹಾರದ ನಿದ್ರೆಯಿಂದ ಪಾರಾಗಬೇಕು. ಬೆಳಕು ಹರಿದ ಮೇಲೂ ಹಾಸಿಗೆಯಲ್ಲಿ ಹೊರಳಾಡುತ್ತಾ ನಿದ್ರಿಸುವ ಕೆಟ್ಟ ಚಟವನ್ನು ತಪ್ಪಿಸಿಕೊಳ್ಳಬೇಕು. ಬೆಳಗಿನ ಜಾವದಲ್ಲಿ ಸರಿಯಾದ ನಿದ್ರೆ ಬರುವದಿಲ್ಲ; ಆಗ ಕನಸಾಗುವದೇ ಬಹಳ, ಆ ನಿದ್ರೆಯಿಂದ ದೇಹಕ್ಕೆ ಆರೋಗ್ಯವಿಲ್ಲ, ಮನಸ್ಸಿಗೆ ಲವಲವಿಕೆಯೂ ಇಲ್ಲವಾಗುವದು.

ಬೆಳಗಿನ ಮುಂಜಾವದಲ್ಲಿ, ಎಂದರೆ ರಾತ್ರಿಯ ಕೊನೆಯ ಜಾವದಲ್ಲಿ, ತಂಗಾಳಿ ಬೀಸುತ್ತದೆ, ದಿಕ್ಕುಗಳು ಪ್ರಶಾಂತವಾಗಿರುತ್ತವೆ. ಆಗ ಎಚ್ಚತ್ತವರಿಗೆ ಶಾಂತಿಯೆಂದರೇನೆಂಬುದರ ನಿಜವಾದ ಕಲ್ಪನೆಯು ಉಂಟಾಗುತ್ತದೆ. ಆಗ ತನ್ನೊಳಗೆ ತಾನು ಪ್ರವೇಶಿಸಬಹುದು, ತನ್ನಲ್ಲಿರುವ ಆನಂದಾಮೃತದ ಬುಗ್ಗೆಯನ್ನು ಕಂಡುಕೊಳ್ಳಲೂಬಹುದು.

ಬೆಳಗಿನ ಜಾವದಲ್ಲಿ ಯಾರು ಎದ್ದಿರುವರೋ, ಯಾರು ಆ ಕಾಲದಲ್ಲಿ ಪರಮಾತ್ಮನ ಧ್ಯಾನವನ್ನು ಮಾಡಿ ಆನಂದಿಸಿರುವರೋ, ಅವರ ಮನಸ್ಸು ಅತ್ಯಂತ ನಿರ್ಮಲವಾಗಿರುವದು; ಅವರ ಮುಖದ ಮೇಲೆ ಆನಂದದ ಕಳೆಯು ಉಕ್ಕುತ್ತಿರುವದು. ಅವರ ಆನಂದದ ಕಿರಣಗಳು ಅವರ ನಗೆಮುಖದಿಂದ ಸುತ್ತಲೂ ಚಿಮುಕುತ್ತಿರುವವು. ಬೆಳಗಿನ ಹೊತ್ತು ಒಬ್ಬರನ್ನೊಬ್ಬರು ಕಂಡರೆ 'ಎದ್ದಿರಾ?' ಎಂದು ಕೇಳುವದುಂಟಷ್ಟೆ; 'ಮುಂಜಾವದ ಶುಭಮುಹೂರ್ತದಲ್ಲಿ ಎದ್ದಿರಾ?'- ಎಂದು ಇದಕ್ಕೆ ಅರ್ಥ.

ರಾತ್ರೆ ಒಂಬತ್ತು ಅಥವಾ ಒಂಬತ್ತೂವರೆಯ ಹೊತ್ತಿಗೇ ಮಲಗಿ ನಿದ್ರೆಹೋಗಿರಿ. ಮಲಗುವಾಗಲೇ 'ನಾಳೆ ಮುಂಜಾವದಲ್ಲಿಯೇ ಏಳುವೆನು' ಎಂದು ಸಂಕಲ್ಪವನ್ನು ಮಾಡಿಕೊಳ್ಳಿರಿ. ಈ ಸಂಕಲ್ಪವು ನಿಮ್ಮ ಮನಸ್ಸಿನ ಅವ್ಯಕ್ತಭಾಗದಲ್ಲಿ ಇಳಿದುಕೊಳ್ಳುವದು; ಆಗ ಬೆಳಗ್ಗೆ ನಿಮಗೆ ಬೇಕಾದಷ್ಟು ಮುಂಚಿತವಾಗಿಯೇ ಏಳಬಹುದು. ಮುಂಚಿತವಾಗಿ ಮಲಗಿ ಮುಂಚಿತವಾಗಿ ಏಳುವದು ಆರೋಗ್ಯಕರ, ಸಂಪತ್ಕರ, ಶ್ರೇಯಸ್ಕರ.

ರಾತ್ರೆ ಮಲಗುವಾಗಲೊಮ್ಮೆ, ಬೆಳಗ್ಗೆ ಎದ್ದಕೂಡಲೆ ಒಮ್ಮೆ- ಹೀಗೆ ಸರ್ವೇಶ್ವರನೂ ಸರ್ವಾತ್ಮನೂ ಆದ ಭಗವಂತನ ಸ್ಮರಣೆಯು ಯಾರಿಗೆ ಬರುವದೋ ಅವರು ಧನ್ಯರು. ಬೆಳಗಿನ ಜಾವವನ್ನು ಭಗವಂತನ ಧ್ಯಾನಕ್ಕೇ ಯಾರು ಉಪಯೋಗಿಸುವರೋ ಅವರು ಧನ್ಯರು. ಅಂಥವರ ವ್ಯವಹಾರವು ಸಲೀಸಾಗಿ ಸಾಗುವದು, ಅವರಿಗೆ ಹತ್ತು ದಿಕ್ಕುಗಳೂ ಸುಖಮಯವಾಗಿ ಕಾಣುತ್ತಿರುವವು.

*****

# 4. ಸ್ನಾನ

ಸ್ನಾನವೆಂಬ ಮಾತಿಗೆ ಶುಚಿಯಾಗುವದು ಎಂದು ಅಕ್ಷರಾರ್ಥವಾಗುವದು. ಮೈಯಲ್ಲೂ ಮನಸ್ಸಿನಲ್ಲೂ ಬಗೆಬಗೆಯ ಕೊಳೆಗಳನ್ನು ಹತ್ತಿಸಿಕೊಂಡು ಮಿಕ್ಕವರಿಗೇ ಅಲ್ಲದೆ ತನಗೆ ತಾನೇ ಅಸಹ್ಯವಾಗುವಂತೆ ಮಾಡಿಕೊಂಡಿರುವ ನಮ್ಮಗಳಿಗೆಲ್ಲ ಸ್ನಾನವು ಅತ್ಯವಶ್ಯವಾಗಿರುವದು.

ಲೋಕದಲ್ಲಿ ಅತ್ಯಂತಶುಚಿಯಾಗಿರುವ ವಸ್ತುವೆಂದರೆ ಪರಮಾತ್ಮನು; ಅವನು ನಿತ್ಯವೂ ಯಾರ ಯಾರ ಹೃದಯದಲ್ಲಿರುವನೋ ಅವರೂ ಶುಚಿಯಾಗಿರುವರು. ಮಿಕ್ಕವರು ಆಗಾಗ್ಗೆ ಪರಮಾತ್ಮನ ಸ್ಮರಣೆಯನ್ನು ಮಾಡಿ ತಮ್ಮ ಮನಸ್ಸಿನ ಮಾಲಿನ್ಯ ವನ್ನು ಕಳೆದುಕೊಂಡು ಶುಚಿಯಾಗುತ್ತಿರಬೇಕು. ಈ ಸ್ಮರಣೆಗೆ ಅಂಗವಾಗಿ ಧ್ಯಾನಸ್ನಾನ, ವಿಚಾರಸ್ನಾನ, ಯೋಗಸ್ನಾನ, ತಪಃಸ್ನಾನ, ವಿರಕ್ತಿಸ್ನಾನ- ಎಂಬ **ಸ್ನಾನಪಂಚಕವನ್ನು** ಶಾಸ್ತ್ರದಲ್ಲಿ ಹೇಳಿರುತ್ತದೆ. ಇದಷ್ಟೂ ಒಳಗಿನ ಸ್ನಾನವು.

ಒಳಗಿನ ಸ್ನಾನಕ್ಕಿಂತಲೂ ಮೊದಲು ಸಾಧಕನು ಹೊರಗಿನ ಸ್ನಾನವನ್ನು ಆಚರಿಸಿ ಮೈಯ ಕೊಳೆಯನ್ನು ಕಳೆದುಕೊಂಡು ಭಗವಂತನ ಸ್ಮರಣೆಗೆ ಯೋಗ್ಯತೆಯನ್ನು ಪಡೆದುಕೊಳ್ಳಬೇಕು. ಯಾವನು ನಾನು ಅಂತರಸ್ನಾನವನ್ನು ಮಾಡುವೆನೆಂದೂ ಮಹಾ ಜ್ಞಾನಿಯೆಂದೂ ಯೋಗಿಯೆಂದೂ ಹೇಳಿಕೊಳ್ಳುತ್ತಾ ಹೊರಗೆ ಶರೀರವನ್ನೂ ಬಟ್ಟೆಗಳನ್ನೂ ಅತ್ಯಂತ ಮಲಿನವಾಗಿಟ್ಟುಕೊಂಡಿರುವನೋ ಅಂಥ ದಾಂಭಿಕನಿಗೆ ಇಹ ಸೌಖ್ಯವೇ ದಕ್ಕುವದಿಲ್ಲ, ಇನ್ನು ಪರಸೌಖ್ಯವೆಲ್ಲಿ ಸಿಕ್ಕಬೇಕು?

ಯಾರು ಬೆಳಗಿನಹೊತ್ತು ಎದ್ದು ಮಲಮೂತ್ರವಿಸರ್ಜನೆಯನ್ನು ಮಾಡಿದ ಬಳಿಕ, ಕೈಕಾಲುಗಳನ್ನು ಚೊಕ್ಕಟವಾಗಿ ತೊಳೆದುಕೊಂಡು, ಹಲ್ಲುಜ್ಜಿ, ಭಗವಂತನ ಸ್ಮರಣೆಯನ್ನು ಮಾಡುತ್ತಾ ಶುಚಿಯಾದ ನದ್ಯಾದಿಗಳಲ್ಲಿ ಮುಳುಗಿಮಿಂದಿರುವರೋ ಅವರಿಗೆ ಹೊರಗಿನ ಸ್ನಾನದ ಫಲವು ಮನದಟ್ಟಾಗಿರುತ್ತದೆ. ಶರೀರದ ಪ್ರತಿಯೊಂದು ಸಂದಿನಿಂದಲೂ ಎಡೆಬಿಡದೆ ಒಸರುತ್ತಿರುವ ಕಲ್ಮಷವನ್ನು ಸಂಪೂರ್ಣವಾಗಿ ದಿನ ಕ್ಕೊಂದು ಸಲವಾದರೂ ಸ್ವಚ್ಛವಾಗಿ ತೊಳೆದುಕೊಂಡು ಸುಶೀತಳವಾದ ನೀರಿನಲ್ಲಿ ಮುಳುಗಿ ಮೈಯೊರಸಿಕೊಂಡು ಮಡಿಯಬಟ್ಟೆಯನ್ನುಟ್ಟುಕೊಂಡವನ ಮೈಯಲ್ಲಿ ರಕ್ತವು ವೇಗವಾಗಿ ಹರಿಯುವದು, ಮನಸ್ಸಿಗೆ ಹರ್ಷವುಂಟಾಗುವದು, ಮುಖದಲ್ಲಿ ಕಾಂತಿಯು ಚಿಮ್ಮುತ್ತಿರುವದು.

ಆರೋಗ್ಯದಿಂದಿರುವವರು ನದಿಯ ನೀರು ಸಿಕ್ಕುವಲ್ಲಿ ಮತ್ತೆ ಯಾವ ನೀರಿನಲ್ಲಿಯೂ ಸ್ನಾನಮಾಡಬಾರದು. ಬೆಳಗ್ಗೆ ಎದ್ದು ಗಂಗಾದಿ ಮುಖ್ಯನದಿಗಳನ್ನೂ ಪುಣ್ಯಕ್ಷೇತ್ರಗಳನ್ನೂ ಸ್ಮರಿಸಿಕೊಂಡು ಬಳಿಕ ನದಿಯಲ್ಲಿ ಸ್ನಾನಮಾಡಬೇಕು. ನದಿಯೆಂದರೆ ಪರಮ ಪವಿತ್ರ ಸ್ಥಾನವೆಂಬ ಭಾವನೆಯಿರಬೇಕು. ಬೆಳಗ್ಗೆ ನದಿಯ ಬಳಿಗೆ ಹೋದ ಕೂಡಲೆ ಅಂಥ ಶುಚಿಸ್ಥಾನವನ್ನು ನಿರ್ಮಿಸಿದ ಭಗವಂತನಿಗೆ ಕೃತಜ್ಞತೆಯನ್ನು ತೋರು ವದಕ್ಕಾಗಿ ನಮಸ್ಕಾರಮಾಡಬೇಕು. ನದಿಯ ಬಳಿಯಲ್ಲಿ ಸ್ವಲ್ಪವೂ ಕಶ್ಮಲವನ್ನು ಹಾಕ ಬಾರದು. ನದಿಯ ಜಲವನ್ನು ಪವಿತ್ರಭಾವನೆಯಿಂದ ತಲೆಯ ಮೇಲೆ ಚಿಮುಕಿಸಿ ಕೊಂಡು ಯಥಾವಿಧಿಯಾಗಿ ಸ್ನಾನಮಾಡಬೇಕು. ಇದಕ್ಕೆ **ವಾರುಣಸ್ನಾನ** ವೆಂದು ಹೆಸರು. ಬಾಹ್ಯಸ್ನಾನಗಳಲ್ಲಿ ಇದೇ ಮುಖ್ಯವಾದದ್ದು.

ವಾರುಣಸ್ನಾನವನ್ನು ಮಾಡಿದ ಮೇಲೆ ಕೆಲವರು ಭಸ್ಮತ್ರಿಪುಂಡ್ರ, ತಿಲಕ - ಇವುಗಳನ್ನಿಟ್ಟುಕೊಳ್ಳುವದು, ದೊಡ್ಡವರ ಪಾದೋದಕವನ್ನು ತಲೆಯ ಮೇಲೆ ಪ್ರೋಕ್ಷಣೆ ಮಾಡಿಕೊಳ್ಳುವದು-ಮುಂತಾದ ಬಗೆಗಳಿಂದಲೂ ಶರೀರದ ಶುಚಿತ್ವದ ಭಾವನೆಯನ್ನು ಹೆಚ್ಚಿಸಿಕೊಳ್ಳುವದುಂಟು. ಈ ಸ್ನಾನವನ್ನು ಮಾಡುವದಕ್ಕೆ ಆನುಕೂಲ್ಯವಿಲ್ಲದಿದ್ದಾಗ- ಅಥವಾ ಅನಾರೋಗ್ಯಾದಿಗಳ ಕಾರಣದಿಂದ ಬಿಸಿನೀರಿನಲ್ಲಿ ಕೂಡ ಸ್ನಾನ ಮಾಡುವದಕ್ಕೆ ಆಗದಿದ್ದಾಗ- ಒದ್ದೆಯ ಬಟ್ಟೆಯಿಂದ ಶರೀರವನ್ನು ಚೆನ್ನಾಗಿ ಒರಸಿಕೊಳ್ಳುವದು, ಬಿಸಿಲಿನಲ್ಲಿ ನಿಂತಿದ್ದು ಮೈಯನ್ನು ಚೆನ್ನಾಗಿ ಒರಸಿಕೊಳ್ಳುವದು, ಗಂಗಾದಿನದಿಗಳ

ನೀರನ್ನು ಶುದ್ಧ ಭಾವನೆಯಿಂದ ಮೈಮೇಲೆ ಸಿಂಪಡಿಸಿಕೊಳ್ಳುವದು- ಮುಂತಾದ ರೀತಿಯಲ್ಲಿ ಶುಚಿತ್ವದ ಭಾವನೆಯನ್ನು ತಂದುಕೊಳ್ಳುವದುಂಟು. ಆದರೆ ಈ ಅನುಕಲ್ಪದ ಸ್ನಾನಗಳೇ ಮುಖ್ಯವೆಂದು ಭಾವಿಸಿ ನಿಜವಾದ ಸ್ನಾನವನ್ನು ಕೈಬಿಡುವ ಮೂಢನು ಕೈಯಲ್ಲಿರುವ ತುತ್ತನ್ನು ಕೆಳಕ್ಕೆ ಹಾಕಿ ಅಂಗೈಯನ್ನು ನೆಕ್ಕುವವನಾಗುತ್ತಾನೆ.

ನಮ್ಮಲ್ಲಿ ಹಳೆಯ ಸಂಪ್ರದಾಯದ ಕೆಲವರು ಮಡಿ, ಮೈಲಿಗೆ- ಎಂಬ ಶಬ್ದಗಳನ್ನು ಮಾತ್ರ ಇಟ್ಟುಕೊಂಡು ಹಾರಾಡುತ್ತಾ ಸ್ನಾನಭಾವನೆಯ ಒಳತಿರುಳನ್ನು ಅರಿಯದೆ ಮೋಸಹೋಗಿರುವರು; ಈಚಿನ ಕೆಲವರು ಅಗಸರ ಮಡಿಯೇ ಮಡಿಯೆಂಬ ಹೊಸ ಸಂಪ್ರದಾಯವನ್ನು ಆಚರಣೆಗೆ ತಂದುಕೊಂಡು ಸ್ನಾನವೆಂದರೆ ಬೆವರನ್ನು ಕಳೆದುಕೊಳ್ಳುವದಕ್ಕೆ ಯಾವಾಗಲಾದರೊಂದುಸಲ ಮಾಡಬಹುದಾದ ಕೃತ್ಯವೆಂದು ಎಣಿಸುವದಕ್ಕೆ ಮೊದಲುಮಾಡಿರುತ್ತಾರೆ. ನಿಜವಾದ ಸ್ನಾನದ ಒಳಗುಟ್ಟು ಇವರಿಬ್ಬರಿಗೂ ತಿಳಿಯದು. ಕಲ್ಮಷದ ಸೋಂಕೇ ಇಲ್ಲದ ಮನಸ್ಸನ್ನು ಸಂಪಾದಿಸಿಕೊಳ್ಳುವದು, ಆ ಸಂಪಾದನೆಗೆ ತಕ್ಕಂತೆ ಮೈಯನ್ನು ಯಾವಾಗಲೂ ನಿರ್ಮಲಗೊಳಿಸುತ್ತಿರುವದು- ಇವೆರಡೂ ನಿಜವಾದ ಸ್ನಾನದ ಪರಮೋದ್ದೇಶವೆಂಬುದನ್ನು ಸಾಧಕರಾದವರು ಮರೆಯದೆ ಇರಬೇಕು.

*****

# 5. ಸಂಧ್ಯಾವಂದನೆ

ವೇದೋಕ್ತ ಕರ್ಮಗಳಲ್ಲೆಲ್ಲ ಸಂಧ್ಯಾವಂದನೆಯು ಮೊದಲನೆಯದಾಗಿಯೂ ವೇದದಲ್ಲಿ ಹೇಳಿರುವ ಧರ್ಮದ ಸಾರವನ್ನೆಲ್ಲ ಒಳಕೊಂಡಿರುವದಾಗಿಯೂ ಇರುವದು. ಈಗಿನ ಬಹುಜನ ದ್ವಿಜರಲ್ಲಿ ಸಂಧ್ಯಾವಂದನೆಯೊಂದೇ ದ್ವಿಜತ್ವದ ಗುರುತಾಗಿ ನಿಂತಿರುವದು. ನಾವು ಸಾಯುವವರೆಗೂ ಪ್ರತಿದಿನವೂ ಆಚರಿಸುತ್ತಿರುವ ಈ ಕರ್ಮದ ಸ್ವರೂಪವನ್ನೂ ಇದರಲ್ಲಿರುವ ಮಂತ್ರಗಳ ಅರ್ಥವನ್ನೂ ತಿಳಿದುಕೊಳ್ಳಬೇಕೆಂಬ ಕುತೂಹಲವುಳ್ಳ ವಾಚಕರ ಸೌಕರ್ಯಕ್ಕಾಗಿ (ಅಧ್ಯಾತ್ಮಪ್ರಕಾಶದಲ್ಲಿ ಆಗಾಗ್ಗೆ ಲೇಖನಗಳನ್ನು ಕೊಡಬೇಕೆಂದು ಯೋಚಿಸಿ) ಈಗ ಉಪೋದ್ಘಾತರೀತಿಯಿಂದ ಕೆಲವು ವಿಷಯಗಳನ್ನು ಸೂಚಿಸುವೆನು.

"ಸಂಧ್ಯಾವಂದನೆ" ಎಂಬ ಶಬ್ದವು ಈಚಿನದೆಂದು ತೋರುತ್ತಿದೆ. ಶ್ರುತಿಯಲ್ಲಿಯೂ ಸ್ಮೃತಿಯಲ್ಲಿಯೂ ಈ ಕರ್ಮಕ್ಕೆ "ಸಂಧ್ಯಾ" ಎಂಬ ಹೆಸರೇ ಕಂಡು ಬರುತ್ತಿದೆ. "ದಿನ ದಿನವೂ ಸಂಧ್ಯೆಯನ್ನು ಉಪಾಸನೆ ಮಾಡಬೇಕು" ಎಂದು ಶ್ರುತಿವಾಕ್ಯವಿರುವದು. "ಯಾವನು ಸಂಧ್ಯೆಯನ್ನು ತಿಳಿಯನೋ ಯಾವನು ಸಂಧ್ಯೆಯನ್ನು ಉಪಾಸನೆ ಮಾಡಲಿಲ್ಲವೋ ಅವನು ಬದುಕಿರುವಾಗಲೇ ಶೂದ್ರನಾಗಿ ಸತ್ತಮೇಲೆ ನಾಯಿಯಾಗಿ ಹುಟ್ಟುವನು" ಎಂದು ಗೋಭಿಲಸ್ಮೃತಿಯಲ್ಲಿ ಹೇಳಿರುವುದು. ಇವೆರಡು ಕಡೆಗಳಲ್ಲಿಯೂ ಸಂಧ್ಯೆ ಎಂಬುದು ಒಂದು ಕ್ರಿಯೆಯ ಹೆಸರೆಂಬುದು ಸ್ಪಷ್ಟವಾಗಿದೆ. ಆದರೆ ಈಚೆಗೆ ಸಂಧ್ಯಾವಂದನೆಯೆಂಬ ಹೆಸರು ಬಂದು ರೂಢಿಯಲ್ಲಿದೆ. ಇಲ್ಲಿ "ಸಂಧ್ಯಾ" ಎಂದರೆ ಈ ಕರ್ಮದಲ್ಲಿ ನಾವು ಉಪಾಸನೆ ಮಾಡುವ ದೇವತೆಯ ಹೆಸರು; ಇದಕ್ಕೂ ಒಂದು ಸ್ಮೃತಿಯ ಆಧಾರವಿರುವದು. ವಸಿಷ್ಠಸ್ಮೃತಿಯಲ್ಲಿ ಹೇಳಿರುವದೇನೆಂದರೆ : "ಸಂಧ್ಯೆ ಯೆಂದರೆ ಜಗತ್ತಿಗೆಲ್ಲಕಾರಣವಾಗಿರುವ ಮಾಯೆಗೆ ಅತೀತವಾಗಿರುವ ನಿಷ್ಕಲವಾದ ಈಶ್ವರಶಕ್ತಿ; ಈ ದೇವತೆಯನ್ನು ಸೂರ್ಯಮಂಡಲದಲ್ಲಿರುವಂತೆ ಧ್ಯಾನಮಾಡುತ್ತಾ ಗಾಯತ್ರೀಮಂತ್ರವನ್ನು ಜಪಿಸಬೇಕು". ಅಂತೂ ಸಂಧ್ಯಾವಂದನೆಯೆಂದರೆ ಗೊತ್ತಾದ ಕಾಲದಲ್ಲಿ ದ್ವಿಜರೆಲ್ಲರೂ ನಡೆಸುವ ಈಶ್ವರಧ್ಯಾನವೆಂದು ಸಿದ್ಧವಾಯಿತು.

ಸಂಧ್ಯಾವಂದನೆಯು ಬ್ರಾಹ್ಮಣನಿಗೆ ಏಳು ತುಂಬಿ ಎಂಟನೆಯ ವರ್ಷದಲ್ಲಿ ಪ್ರಾರಂಭವಾಗುವದು; ಕ್ಷತ್ರಿಯ ವೈಶ್ಯರಿಗೆ ಸ್ವಲ್ಪ ಹೆಚ್ಚು ಕಾಲದ ಮೇಲೆ ಪ್ರಾರಂಭಿಸು ವುದು. ಅಂತೂ ಇದು ಚಿಕ್ಕ ವಯಸ್ಸಿನಲ್ಲಿ ಪ್ರಾರಂಭವಾಗುವ ಕರ್ಮವಷ್ಟೆ. ಆದ್ದರಿಂದಲೇ ಏನೋ, ಈಚೆಗೆ ಇದರ ಸಾರವನ್ನು ಅರಿಯದವರನೇಕರು ಇದನ್ನು ಹುಡುಗರಿಗೆ ಹೇಳಿದ ಸಾಮಾನ್ಯಕರ್ಮವೆಂದು ಭಾವಿಸಿ ಇದರಲ್ಲಿ ಉದಾಸೀನತೆಯನ್ನು ವಹಿಸಿರುವರು. ಆದರೆ ಇದು ಸರಿಯಲ್ಲ; ಏಕೆಂದರೆ "ಯಾವನು ಸಂಧ್ಯೆಯನ್ನು ಆಚರಿಸಲಿಲ್ಲವೋ ಆತನು ಅಶುಚಿಯು, ಆತನು ಎಂದೂ ಯಾವ ಕರ್ಮಕ್ಕೂ ಯೋಗ್ಯನಾಗನು, ಬೇರೆಯ ಕರ್ಮವನ್ನನುಸರಿಸಿದರೂ ಅದರ ಫಲವೂ ಆತನಿಗೆ ದಕ್ಕಲಾರದು" ಎಂದು ದಕ್ಷಸ್ಮೃತಿಯಲ್ಲಿ ಹೇಳಿರುವದು. ಯಾವ ವ್ರತಾದಿ ಕಾಮ್ಯಕರ್ಮ ಗಳನ್ನು ಹೇಳಿದರೂ ಯಾವ ಉಪಾಸನಾದಿ ಚಿತ್ತಶುದ್ಧಿಯ ಸಾಧನೆಗಳನ್ನು ಹೇಳಿದರೂ ಮೊದಲು ವಿಧ್ಯುಕ್ತವಾದ ಸಂಧ್ಯೆ ಮೊದಲಾದ ಕರ್ಮಗಳನ್ನು ಆಚರಿಸಿ ಶುದ್ಧನಾಗಿ ಮುಂದಿನ ಕರ್ಮಕ್ಕೆ ಕೈ ಹಾಕಬೇಕೆಂದು ಶಾಸ್ತ್ರಕಾರರು ನಿಯಮಿಸಿರುವರು. ಇಷ್ಟು

ಹೆಚ್ಚಿನ ಮಹಿಮೆಯು ಸಂಧ್ಯೆಯಲ್ಲಿ ಬರುವುದಕ್ಕೇನು ಕಾರಣ? ಇದನ್ನು ದ್ವಿಜರೆಲ್ಲರೂ ಯೋಚಿಸಬೇಕಾದದ್ದು. ಛಾಂದೋಗ್ಯೋಪನಿಷತ್ತಿನಲ್ಲಿ ಹೇಳಿರುವ ಒಂದು ಆಖ್ಯಾಯಿಕೆ ಯನ್ನು ಇಲ್ಲಿ ನೆನಪು ಕೊಡಬೇಕಾಗಿದೆ. "ಕಶ್ಯಪ ಪ್ರಜಾಪತಿಯು ಲೋಕಗಳ ಸಾರ ವೇನೆಂದು ಚೆನ್ನಾಗಿ ಧ್ಯಾನಮಾಡಿ ನೋಡಲಾಗಿ ಮೂರು ವೇದಗಳು ಕಾಣಿಸಿ ಕೊಂಡವು, ಇವುಗಳ ಸಾರವೇನೆಂದು ಗ್ರಹಿಸಲು ಯತ್ನಿಸಲಾಗಿ ಭೂರಾದಿಯಾಗಿ ಮೂರು ವ್ಯಾಹೃತಿಗಳು ಹೊರಹೊಮ್ಮಿದವು, ಇವುಗಳ ಸಾರವೇನೆಂದು ನೋಡಲಾಗಿ ಓಂಕಾರವು ಹೊರಬಿತ್ತು. ಹೀಗೆ ಓಂಕಾರವೇ ಎಲ್ಲಾ ವಾಕ್ಪ್ರಪಂಚದಲ್ಲಿಯೂ- ಎಲೆಯಲ್ಲಿ ಅದರ ನಾಳವು ಹೆಣೆದು ಕೊಂಡಿರುವಂತೆ- ಹೆಣೆದುಕೊಂಡಿರುವದು" ಎಂದು ಆ ಶ್ರುತಿಯ ವಚನವಿರುವದು. ಸಂಧ್ಯಾವಂದನೆಯ ಸಾರವಾದ ಗಾಯತ್ರಿಯಲ್ಲಿ ಈ ಲೋಕವೇದಗಳ ಸಾರವು ಅಡಗಿಕೊಂಡಿರುವದು. ಹೇಗೆ ಕೊಂಬೆರೆಂಬೆಗಳಾಗಿ ಒಡೆದುಕೊಂಡಿರುವ ವೃಕ್ಷಕ್ಕೆ ಬೇರೆಂಬುದು ಸಾರವೋ ಆ ಬೇರಿಗೂ ಬೀಜವೇ ಹೇಗೆ ಸಾರವೋ, ಹಾಗೇ ವೈದಿಕವಿದ್ಯೆಯಲ್ಲಿ ಹೇಳಿರುವ ಪ್ರಪಂಚವೃಕ್ಷಕ್ಕೆಲ್ಲ ಗಾಯತ್ರಿಯು ಸಾರವಾಗಿರುವದು. ಬೀಜವನ್ನು ಹಾಕದೆ ಎಷ್ಟು ಉಕ್ಕೆ ಮಾಡಿ, ಗೊಬ್ಬರವನ್ನು ಹಾಕಿ, ನೀರು ಹಾಯಿಸಿದರೂ ಪೈರು ಕಾಣುವದು ಹೇಗೆ ದುರ್ಲಭವೋ ಹಾಗೆ ಅಧ್ಯಾತ್ಮವಿದ್ಯೆಗೆಲ್ಲ ಸಾರವಾಗಿ ವೇದದಲ್ಲಿ ಪ್ರತಿಪಾದಿಸುವ ಗಾಯತ್ರಿಯ ಉಪಾಸನೆ ಯನ್ನು ಮಾಡದೆ ಮಿಕ್ಕ ಕರ್ಮಗಳನ್ನು ಮಾಡುವದು ವೃಥಾಶ್ರಮವಾಗುವದು. ಆದ್ದರಿಂದ ಬೀಜವು ಸಣ್ಣದೆಂದು ಅನಾದರಣೆ ಮಾಡುವ ರೈತನು ಎಂಥ ಅವಿವೇಕಿಯೋ ಸಂಧ್ಯಾವಂದನೆಯು ಸಣ್ಣ ಕರ್ಮವೆಂದು ಕಡೆಗಣಿಸುವಾತನು ಅಂಥ ಅವಿವೇಕಿಯೆ ಆಗುವನೆಂದು ಅರಿಯಬೇಕು.

ಸಂಧ್ಯಾವಂದನೆಯು ಇಷ್ಟು ಮಹತ್ತ್ವದ ಕರ್ಮವಾಗಿರಲು ಮತ್ತೊಂದು ಕಾರಣವೂ ಉಂಟು. ಅದೇನೆಂದರೆ ಯೂನಿವರ್ಸಿಟಿಯೆಂಬ ಸಕಲ ವಿದ್ಯಾನಿಲಯ ಪ್ರವೇಶಕ್ಕೆ ಮೊದಲು ನಡೆಯುವ ಯೋಗ್ಯತಾನಿರ್ಣಯದ ಪರೀಕ್ಷೆಗೆ, ಮುಂದೆ ವಿಸ್ತಾರವಾಗಿ ನಡೆಯಬೇಕಾದ ಪಾಠಗಳ ಸಾರವನ್ನು ತಿಳಿದಿರುವದವಶ್ಯವಾಗಿರುವ ದೆಂಬುದನ್ನು ನಮ್ಮಲ್ಲನೇಕರು ಬಲ್ಲೆವಲ್ಲವೆ? ಈ ಪರೀಕ್ಷೆಗೆ ಸ್ವಲ್ಪಗಣಿತ, ಸ್ವಲ್ಪ ಭೌತಿಕಶಾಸ್ತ್ರ ಸ್ವಲ್ಪಮಟ್ಟಿಗೆ ಪ್ರಪಂಚದ ವರ್ಣನೆ ಮತ್ತು ಇತಿಹಾಸ, ಸ್ವಲ್ಪಮಟ್ಟಿಗೆ ವ್ಯವಹಾರಮರ್ಮ - ಹೀಗೆ ಸಾರಗ್ರಹಣೆ ಮಾಡಿರಬೇಕೆಂಬ ನಿಯಮವನ್ನಿಟ್ಟಿರುವರು.

ಆಯಾ ವಿಷಯವನ್ನು ಓದಿ ಅವುಗಳ ಸವಿಕಂಡವರು ಮುಂದೆ ತಮಗೆ ಯಾವ ವಿದ್ಯೆಯನ್ನು ಬಲಪಡಿಸಿಕೊಳ್ಳಬೇಕೆಂಬ ಆಸೆ ಹುಟ್ಟುವುದೋ ಅದರಲ್ಲಿ ವಿಶೇಷ ವಿಸ್ತಾರವಾಗಿ ಓದಿಕೊಳ್ಳುವದಕ್ಕೆ ಯೂನಿವರ್ಸಿಟಿಯವರು ಅವಕಾಶ ಕಲ್ಪಿಸಿರುತ್ತಾರೆ. ಇದರಂತೆಯೇ **ಸಂಧ್ಯಾವಂದನೆಯೂ ಅಧ್ಯಾತ್ಮವಿದ್ಯಾನಿಲಯಕ್ಕೆ ಪ್ರವೇಶಪರೀಕ್ಷೆಯಾಗಿರುವದು.** ಇದರಲ್ಲಿ ಅಧ್ಯಾತ್ಮವಿದ್ಯೆಗೆ ಬೇಕಾದ ಸಾಧನೆಗಳು ಎಲ್ಲವೂ ಸ್ವಲ್ಪಸ್ವಲ್ಪವಾಗಿ ಅಡಕವಾಗಿರುವವು. ಅರ್ಥವನ್ನು ತಿಳಿದುಕೊಂಡು ಇದನ್ನು ಕೆಲಕಾಲ ಅನುಷ್ಠಾನ ಮಾಡಿದವರು ಮುಂದೆ ವಿಶೇಷವಾಗಿ ಆ ವಿದ್ಯೆಯ ಪ್ರಧಾನಭಾಗಗಳಲ್ಲಿ ವಿಶಾರದರಾಗಲು ಯತ್ನಿಸಬಹುದು. ಹೇಗೆಂದರೆ ಅಧ್ಯಾತ್ಮವಿದ್ಯೆಗೆ ಈ ಜಗತ್ತಿನಲ್ಲಿರುವ ಅಧಿಕಾರಿಗಳ ಮನಸ್ಸುಗಳನ್ನು ಸಾಮಾನ್ಯವಾಗಿ ನಾಲ್ಕು ಪಂಗಡಗಳಾಗಿ ವಿಂಗಡಿಸಬಹುದು. ಕೆಲವರಿಗೆ ಕೆಲಸದಲ್ಲಿ ಆದರ, ಕೆಲವರಿಗೆ ಜನರಲ್ಲಿ ಪ್ರೇಮವನ್ನು ಇಡುವ ಇಚ್ಛೆ, ಇನ್ನು ಕೆಲವರಿಗೆ ತಮ್ಮೊಳಗೆ ತಾವು ಧ್ಯಾನ ಮಾಡುತ್ತಿರಬೇಕೆಂಬ ಆಸೆ, ಮತ್ತೂ ಕೆಲವರಿಗೆ ತತ್ತ್ವವಿಚಾರದಲ್ಲಿ ಆಸಕ್ತಿ. ಈ ನಾಲ್ಕು ಬಗೆಯ ಅಧಿಕಾರಿಗಳಿಗೆ ತಕ್ಕಂತೆ ನಾಲ್ಕು ವಿಧವಾದ ಸಾಧನಗಳನ್ನು ನಮ್ಮ ಪೂರ್ವಜರಾದ ಋಷಿಗಳು ಕಲ್ಪಿಸಿರುತ್ತಾರೆ. ಕೆಲಸಕ್ಕಾಗಿ ಕೆಲಸ ಮಾಡುವವರಿಗೆ **ಕರ್ಮಯೋಗ,** ಪ್ರೇಮವೃತ್ತಿಯನ್ನು ಬೆಳೆಸುವವರಿಗೆ **ಭಕ್ತಿಯೋಗ,** ಭಾವನೆಯಲ್ಲಿ ಆಸಕ್ತಿಯಿರುವವರಿಗೆ **ಧ್ಯಾನಯೋಗ,** ವಿಚಾರದಲ್ಲಿಯೇ ನಿರತರಾಗಿರಬೇಕೆಂಬುವರಿಗೆ **ಜ್ಞಾನಯೋಗ.** ಈ ನಾಲ್ಕು ವಿಧವಾದ ಯೋಗಗಳೂ ಪ್ರಕೃತವಾದ ಸಂಧ್ಯೆಯಲ್ಲಿ ಬೀಜರೂಪವಾಗಿ ಇದ್ದುಕೊಂಡಿರುತ್ತವೆ. ಉದಾಹರಣೆಗೆ ನೋಡಿ: ಆಚಮನ ಮಾರ್ಜನ, ನಮಸ್ಕಾರ ಮುಂತಾದವು ಕರ್ಮಯೋಗದ ಬೀಜ; ಆಸನ ಪ್ರಾಣಾಯಾಮಗಳು ಧ್ಯಾನಯೋಗದ ಬೀಜ; ಕೇಶವಾದಿ ನಾಮಸ್ಮರಣೆ, ಕೊನೆಯಲ್ಲಿ ಹೇಳುವ ಪರಮಾತ್ಮ ಮಹಿಮಾವರ್ಣನ ರೂಪವಾದ ಪುರಾಣಶ್ಲೋಕಗಳು– ಇವು ಭಕ್ತಿಯೋಗದ ಬೀಜ; ಸಂಧ್ಯಾವಂದನೆಯ ಸಾರವಾಗಿರುವ ಗಾಯತ್ರಿಯು ಜ್ಞಾನಯೋಗದ ಬೀಜವು– ಹೀಗೆ ನಾಲ್ಕೂ ಯೋಗದ ಬೀಜವು ಈ ಸಂಧ್ಯಾವಂದನೆಯಲ್ಲಿರುವದೂ ಇದರ ಹೆಚ್ಚಿಗೆಗೆ ಒಂದು ಕಾರಣವಾಗಿರುವದು.

ಸಂಧ್ಯಾವಂದನೆಯಲ್ಲಿರುವ ಮತ್ತೊಂದು ಸ್ವಾರಸ್ಯವನ್ನು ಇಲ್ಲಿ ಸೂಚಿಸಿ ಈ ಲೇಖನವನ್ನು ಮುಗಿಸುವೆನು. ಈ ಭೌತಿಕಪ್ರಪಂಚದಲ್ಲಿ ಕಾಣುವ ವೈಚಿತ್ರ್ಯಕ್ಕೆಲ್ಲ

ಸೂರ್ಯನೇ ಮೂಲಸ್ಥಾನವೆಂಬುದು ಸಾಮಾನ್ಯರಿಗೂ ಕೂಡ ತಿಳಿದಿರುವ ಮಾತಷ್ಟೆ ಸೂರ್ಯನೇ ನಮಗೆ ಬೆಳಕಿಗೂ ಔಷ್ಣ್ಯಕ್ಕೂ ಮೂಲ ಸ್ಥಾನನಾಗಿರುವನು. ಸೂರ್ಯನ ಬೆಳಕಿನಿಂದ ನಮ್ಮ ವ್ಯವಹಾರಗಳೆಲ್ಲ ಸಾಗುವವು, ಸೂರ್ಯನ ಔಷ್ಣ್ಯದಿಂದ ಜಗತ್ತಿನ ಸಸ್ಯವರ್ಗವೂ ಪ್ರಾಣಿವರ್ಗವೂ ಪೋಷಣದ್ರವ್ಯವನ್ನು ಪಡೆಯುವದು. "ಜಗತ್ತಿಗೆಲ್ಲ ಕಣ್ಣು" ಎಂದು ಈ ಸೂರ್ಯನಿಗೆ ಶಾಸ್ತ್ರದಲ್ಲಿ ಬಂದಿರುವ ಹೆಸರು ಅನ್ವರ್ಥವಾಗಿರುವದು. ಇಂಥ ಪರಿಶುದ್ಧ ಪ್ರಚಂಡಪ್ರಕಾಶದ ಮಂಡಲವಾದ ಈ ಸೂರ್ಯನನ್ನು ಅಧ್ಯಾತ್ಮವಿದ್ಯೆಗೆಲ್ಲ ಧ್ಯೇಯವಾಗಿರುವ ಪರಬ್ರಹ್ಮಮೂರ್ತಿಯ ಚಿಹ್ನೆಯಾಗಿಯೂ ಸ್ಥಾನವಾಗಿಯೂ ಉಪದೇಶಮಾಡುವದು **ಸಂಧ್ಯಾವಂದನೆಯ ಮುಖ್ಯೋದ್ದೇಶ**ಗಳಲ್ಲಿ ಒಂದಾಗಿದೆ. ಲೋಕವಿಲಕ್ಷಣವಾಗಿ ಲೋಕಕ್ಕೆಲ್ಲ ಆಧಾರವಾಗಿ ಚೈತನ್ಯಪ್ರಕಾಶದಿಂದ ಕೂಡಿ ಸಮಸ್ತ ಜೀವರ ಬುದ್ಧಿಪ್ರೇರಣೆಯನ್ನೂ ಮಾಡುವ ಅನ್ತರ್ಯಾಮಿಯಾದ ಪರಮೇಶ್ವರನೇ ಸೂರ್ಯ ಮಂಡಲದಲ್ಲಿರುವ ನಾರಾಯಣಸ್ವಾಮಿಯೆಂದು ಈ ಕರ್ಮವು ನೆನಪು ಕೊಡುವದು. ಅನಾದಿಕಾಲದಿಂದಲೂ ಪ್ರಖ್ಯಾತವಾದ ಈ ವೈದಿಕಕರ್ಮದ ಮಹತ್ತ್ವವನ್ನು ವೇದವು ಹೀಗೆಂದು ಕೊಂಡಾಡಿರುವದು.

**ಶ್ರುತಿ ॥ ಉದ್ಯನ್ತಮಸ್ತಂಯನ್ತಮಾದಿತ್ಯಮಭಿಧ್ಯಾಯನ್ ಕುರ್ವನ್**
**ಬ್ರಾಹ್ಮಣೋ ವಿದ್ವಾನ್ತ್ಸಕಲಂ ಭದ್ರಮಶ್ನುತೇಽಸಾವಾದಿತ್ಯೋ ಬ್ರಹ್ಮೇತಿ**
**ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ ಯ ಏವಂ ವೇದ ॥ (ತೈ.ಆ :2.2)**

**(ಅರ್ಥ)**

ಉದಯಿಸುತ್ತಲೂ ಅಸ್ತಮಿಸುತ್ತಲೂ ಇರುವ ಆದಿತ್ಯನನ್ನು ಧ್ಯಾನಮಾಡುತ್ತಾ ಕರ್ಮಮಾಡುವ ಬ್ರಾಹ್ಮಣನು ತತ್ತ್ವವನ್ನು ತಿಳಿದು ಸಕಲವಾದ ಮಂಗಲವನ್ನೂ ಪಡೆಯುವನು. ಈ ಆದಿತ್ಯನೇ ಬ್ರಹ್ಮನು, ಹೀಗೆಂದು ಯಾವನು ತಿಳಿಯುವನೋ ಆತನು ಮೊದಲೇ ಬ್ರಹ್ಮವಾಗಿದ್ದು ಬ್ರಹ್ಮದಲ್ಲಿಯೇ ಸೇರಿಕೊಳ್ಳುವನು.

*****

# 6. ಸಂಧ್ಯಾವಂದನೆಯಲ್ಲಿ ಉಪಯೋಗಿಸುವ ಮಾರ್ಜನೆಯ ಮಂತ್ರ

ಸಂಧ್ಯಾವಂದನೆಯಲ್ಲಿ ಮಾರ್ಜನೆ, ಅರ್ಘ್ಯಪ್ರದಾನ, ಗಾಯತ್ರೀಜಪ, ಉಪಸ್ಥಾನ – ಇವೇ ಮುಖ್ಯವಾದ ಮಂತ್ರಗಳು. ಇವುಗಳ ಅಭಿಪ್ರಾಯವನ್ನು ಮನಗಂಡು ಈ ಕರ್ಮವನ್ನು ಮಾಡುವವರಿಗೆ ಇದರ ಪೂರ್ಣಫಲವು ದೊರೆಯುವದು. **ಸಂಧ್ಯಾ ವಂದನೆಯನ್ನು ಮಾಡದಿರುವ ವರ್ಣಕ್ಕೆ ಸೇರಿದವರಿಗೂ ಈ ಮಂತ್ರದ ಅಭಿಪ್ರಾಯವನ್ನು ತಿಳಿದುಕೊಳ್ಳುವದರಿಂದ ಎಷ್ಟೋ ಪ್ರಯೋಜನವುಂಟು.** ಆದ್ದರಿಂದ ಈ ಮಂತ್ರಗಳ ತಾತ್ಪರ್ಯವನ್ನು ಕುರಿತ ವಿಚಾರಗಳನ್ನು ವಾಚಕರ ಮುಂದೆ ಇಡುತ್ತಾ ಬರುವೆನು. ಈ ಲೇಖನದಲ್ಲಿ ಮಾರ್ಜನೆಯನ್ನು ಕುರಿತು ಕೆಲವು ವಿಷಯಗಳನ್ನು ಬರೆಯಲು ಉಪಕ್ರಮಿಸಿರುತ್ತೇನೆ.

ಮಾರ್ಜನೆಯೆಂದರೆ ತೊಳೆಯುವದೆಂದರ್ಥ. ಈ ಮಂತ್ರಗಳನ್ನು ಉಚ್ಚರಿಸುತ್ತಾ ಮಂತ್ರಾರ್ಥವನ್ನು ಮನಸ್ಸಿನಲ್ಲಿ ತಂದುಕೊಂಡು ಮಂತ್ರಪೂತವಾದ ಜಲವನ್ನು ಪ್ರೋಕ್ಷಣಮಾಡಿಕೊಳ್ಳುವದರಿಂದ ಪ್ರತಿದಿನವೂ ದೇಹಶುದ್ಧಿಯಾಗುವದರಿಂದ ಈ ಸಂಸ್ಕಾರವನ್ನುಂಟುಮಾಡುವ ಇವುಗಳಿಗೆ ಮಾರ್ಜನೆಯ ಮಂತ್ರಗಳೆಂಬ ಹೆಸರು ಬಳಕೆಯಲ್ಲಿದೆ.

ಇವುಗಳೊಳಗೆ 'ಆಪೋಹಿಷ್ಠಾ' ಎಂಬ ಮಂತ್ರವು ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ– ಈ ನಾಲ್ಕರಲ್ಲಿಯೂ ಇರುವದು. ಈ ಮಂತ್ರದ ತಾತ್ಪರ್ಯವೇನೆಂದರೆ : "ಎಲೈ ನೀರುಗಳೆ, ನೀವು ಸುಖಕ್ಕೆ ಕಾರಣವಾಗಿರುವಿರಿ. ನಮಗೆ ಅನ್ನವನ್ನು ಕೊಡಿರಿ, ಹೆಚ್ಚಿನ ರಮಣೀಯವಾದ ಜ್ಞಾನವನ್ನು ಕೊಡಿರಿ. ನಿಮ್ಮಲ್ಲಿರುವ ಆನಂದಕರವಾದ ರಸವನ್ನು, ಪ್ರೇಮವುಳ್ಳ ತಾಯಿಯರು ಮಕ್ಕಳನ್ನು ಸ್ತನ್ಯಪಾನವನ್ನು ಕೊಟ್ಟು ಕಾಪಾಡುವಂತೆ, ನಮಗೆ ದೊರಕಿಸಿರಿ. ಯಾವ ರಸದಲ್ಲಿ ರುವದರಿಂದ ನೀವು ಪರಮಾನಂದಭರಿತರಾಗಿರುವಿರೋ, ಆ ರಸಕ್ಕಾಗಿ ನಿಮ್ಮನ್ನು ಆದರಪೂರ್ವಕವಾಗಿ ಸಮೀಪಿಸಿರುವೆವು. ಎಲೈ ನೀರುಗಳೆ, ನಮ್ಮನ್ನು ವಂಶ ವರ್ಧಕರನ್ನಾಗಿ ಮಾಡಿರಿ."

ಜಡವಾದ ನೀರನ್ನು ಪ್ರಾರ್ಥಿಸುವದರಿಂದ ಯಾವ ಪ್ರಯೋಜನವೂ ಸಿದ್ಧಿಸುವದಿಲ್ಲವಾದಕಾರಣ ನೀರೆಂಬ ಉಪಾಧಿಯಿಂದ ಕೂಡಿದ ಪರಮಾತ್ಮನನ್ನೇ ಈ ಮಂತ್ರದಲ್ಲಿ ಪ್ರಾರ್ಥಿಸಿರುತ್ತದೆಯೆಂದರಿಯಬೇಕು. ಪರಮಾತ್ಮನು ಸರ್ವವ್ಯಾಪಿಯೆಂದು ವೇದದಲ್ಲಿ ಎಷ್ಟೋ ಕಡೆಗಳಲ್ಲಿ ತಿಳಿಸಿರುತ್ತದೆಯಷ್ಟೆ; ಅಂಥ ಪರಮಾತ್ಮನ ಅನುಗ್ರಹ ದಿಂದಲೇ ನಮಗೆ ಸುಖವು ದೊರಕಬೇಕು. ನಾವು ತಿನ್ನುವ ಆಹಾರವು ಪ್ರಾಣ, ಬಲ, ತಪಸ್ಸು, ಶ್ರದ್ಧಾ, ಮೇಧಾ- ಮುಂತಾದವುಗಳ ವೃದ್ಧಿಯ ಕ್ರಮದಿಂದ ಉತ್ತಮವಾದ ಜ್ಞಾನಕ್ಕೆ ಕಾರಣವಾಗಬೇಕಾದರೆ ಆತನ ಅನುಗ್ರಹವೇ ಬೇಕು. ಲೋಕದಲ್ಲೆಲ್ಲ ನೀರು ಇರುವದು; ಅದನ್ನು ಉಪಯೋಗಿಸುವದರಿಂದ ಪರಮಾತ್ಮನ ಹೊರಮೆಯ್ಯೇ ಅದೆಂದು ನಾವು ತಿಳಿದಿದ್ದರೂ ತಿಳಿಯದಿದ್ದರೂ ಅದರಿಂದಾಗುವಷ್ಟು ಪ್ರಯೋಜನವು ಆಗಿಯೇ ಆಗುವದು. ಆದರೆ ದೇಹದಲ್ಲಿಯೂ ಮನಸ್ಸಿನಲ್ಲಿಯೂ ಶುದ್ಧಭಾವನೆಯನ್ನು ತಂದು ಕೊಂಡು ''ಪರಮಾತ್ಮನೇ, ನೀನೇ ಈ ಬ್ರಹ್ಮಾಂಡಕ್ಕೆಲ್ಲ ರಸಸ್ವರೂಪನು, ನೀನೇ ಈ ಬ್ರಹ್ಮಾಂಡದಲ್ಲಿರುವ ಸವಿಯು. ನಿನ್ನ ಸ್ವರೂಪದ ಸವಿಯನ್ನು ನಮಗೆ ಹತ್ತಿಸು; ಹೊರಗಿನ ಅಶುಚಿಯಾದ ಯೋಚನೆಗಳ ಸವಿಯನ್ನು ಬಿಡಿಸು; ಮಕ್ಕಳಿಗೆ ಪ್ರೇಮ ದಿಂದ ಎದೆಯ ಹಾಲನ್ನು ಕೊಟ್ಟು ಪುಷ್ಟಿಗೂ ಮುಂದಿನ ಬೆಳವಣಿಗೆಗೂ ಕಾರಣ ರಾಗುವ ತಾಯಿಯರಂತೆ ನೀನು ನಮ್ಮನ್ನು ನಿನ್ನ ಆನಂದರಸದ ಸವಿಯನ್ನು ಕೊಟ್ಟು ಕಾಪಾಡಬೇಕು; ನಾವೆಲ್ಲರೂ ಮಕ್ಕಳು, ನೀನು ನಮ್ಮೆಲ್ಲರ ತಾಯಿಯು'' ಎಂದು ಭಗವದ್ಭಾವನೆಯಿಂದ ಮಂತ್ರಪೂತವಾದ ನೀರನ್ನು ನಮ್ಮ ಮೇಲೆ ನಾವು ಚಿಮುಕಿಸಿ ಕೊಳ್ಳುವಾಗ ನಮ್ಮ ಮನಸ್ಸಿನ ಸ್ಥಿತಿಯು ಹೇಗಿರಬೇಕು! ಅದನ್ನು ಅನುಭವದಿಂದಲೇ ತಿಳಿಯಬೇಕಲ್ಲದೆ ಮಾತಿನಿಂದ ವರ್ಣಿಸುವದಕ್ಕೆ ಎಂದಿಗೂ ಬರುವ ಹಾಗಿಲ್ಲ. ಈ ಮನಸ್ಸಿನ ಸ್ಥಿತಿಯನ್ನು ತಂದುಕೊಡುವದೇ 'ಆಪೋಹಿಷ್ಠಾ' ಎಂಬ ಮಾರ್ಜನಮಂತ್ರದ ಪ್ರಯೋಜನವು.

ಈ ಮಂತ್ರಗಳಲ್ಲಿರುವ ಮಾತುಗಳ ಅಕ್ಷರಾರ್ಥದ ಕಡೆಗೇ ಲಕ್ಷ್ಯವನ್ನಿಟ್ಟು ''ಹಿಂದುಗಳು ಬಲು ಪುರಾತಕಾಲದಲ್ಲಿ 'ಪರಮಾತ್ಮನು ಒಬ್ಬನೇ' ಎಂಬ ತಿಳಿವಳಿಕೆ ಯಿಲ್ಲದವರಾಗಿದ್ದರು. ಆಗ ನೀರು, ಬೆಂಕಿ, ಗಾಳಿ-ಮುಂತಾದ ಪ್ರಪಂಚದ ಭೌತಿಕ ಭಾಗಗಳನ್ನೇ ಅವುಗಳಲ್ಲಿರುವ ಶಕ್ತಿವಿಶೇಷವನ್ನು ಗುರಿಯಲ್ಲಿಟ್ಟು ದೇವರೆಂದು ಭಾವಿಸುತ್ತಿದ್ದರು. ಆ ಕಾಲದಲ್ಲಿ ಪಂಚಭೂತಗಳನ್ನೇ ಅವರು ಭಕ್ತಿಯಿಂದ ಪೂಜಿಸುತ್ತಿದ್ದರು; ಈಚೆಗೆ

ನಾಗರಿಕರಲ್ಲಿ ಉಂಟಾಗಿರುವ ಏಕೇಶ್ವರಮತಕ್ಕೂ ಅವರ ಮತಕ್ಕೂ ಬಹಳ ತಾರತಮ್ಯ ವುಂಟು" ಎಂದು ಕೆಲವರು ಅನ್ನುತ್ತಿರುವರು. ಇದು ಶುದ್ಧವಾಗಿಯೂ ತಪ್ಪುಭಾವನೆಯು. ಗ್ರೀಸ್ ಮುಂತಾದ ಕೆಲವು ಪಾಶ್ಚಾತ್ಯದೇಶಗಳಲ್ಲಿ ಪಂಚಭೂತಗಳಿಗೆ ಜಗತ್ಕಾರಣತ್ವವನ್ನು ಹೇಳುವ ತತ್ತ್ವವಾದಿಗಳು ಇದ್ದರು; ಆದ್ದರಿಂದ ಆ ದೇಶದ ಜನರು ಮೊದಮೊದಲು ಪಂಚಭೂತಗಳನ್ನೇ ಪೂಜಿಸುತ್ತಿದ್ದರೇನೋ ಎಂದು ಸಂದೇಹಪಡುವದಕ್ಕೂ ಅವಕಾಶವಿದೆ. ಆದರೆ ನಮ್ಮ ದೇಶದಲ್ಲಿ ಹಾಗಲ್ಲ. ಪರಮಾತ್ಮನನ್ನು ಜಗತ್ತಿನಲ್ಲಿ ಪ್ರಸಿದ್ಧವಾಗಿರುವ ಉಪಾಧಿಗಳ ಮೂಲಕವಾಗಿ ಉಪಾಸನೆಮಾಡುವದು ಬಹು ಪುರಾತನಕಾಲದಿಂದಲೂ ನಮ್ಮ ಪೂರ್ವಿಕರ ಪದ್ಧತಿಯು. "ಆ ಪರಮಾತ್ಮನ ಮಹಿಮೆಯನ್ನು ಹಿಮವತ್ಪರ್ವತವು ಹೊಗಳುತ್ತಿರುವದು" ಎಂದು ಋಗ್ವೇದದ ಒಂದು ಮಂತ್ರದಲ್ಲಿ ಹೇಳಿರುವದು ಕಂಡು ಬಂದಿದೆ. ಅದಿರಲಿ, ಪ್ರಕೃತದಲ್ಲಿ ನೀರಿಗೆ ಸಂಸ್ಕೃತದಲ್ಲಿ 'ಆಪಃ' ಎಂದು ಹೆಸರಾಗಿರುವ ದರಿಂದ ಸರ್ವವ್ಯಾಪಿಯಾದ ಭಗವಂತನನ್ನು 'ಆಪಃ' ಎಂಬ ಹೆಸರಿನಿಂದ ಋಷಿಗಳು ಕರೆದಿರುತ್ತಾರೆಂದು ತಿಳಿಯಬೇಕು. 'ಆಪ್ನುವನ್ತೀತಿ ಆಪಃ' (ವ್ಯಾಪಿಸಿರುವದರಿಂದ 'ಆಪಃ' ಎಂದು ಹೆಸರು) ಎಂಬುದು ಈ ಶಬ್ದದ ವ್ಯುತ್ಪತ್ತಿಯು, ಇದೇ ಸರಿಯಾದ ಅಭಿಪ್ರಾಯವೆಂಬುದಕ್ಕೆ ಈ ಕೆಳಗಿನ ಮಂತ್ರವೂ ಸಾಕ್ಷಿಯಾಗಿರುವದು : –

**ಮಾರ್ಜನೆಯ ಮಂತ್ರ :**

**ಆಪೋ ವಾ ಇದಂ ಸರ್ವಂ ವಿಶ್ವಾಭೂತಾನ್ಯಾಪಃ ಪ್ರಾಣಾ ವಾ ಆಪಃ ಪಶವ ಆಪೋಽನ್ನಮಾಪೋಽಮೃತಮಾಪಃ ಸಮ್ರಾಡಾಪೋ ವಿರಾಡಾಪಃ ಸ್ವರಾಡಾ ಪಶ್ಛನ್ದಾಂಸ್ಯಾಪೋ ಜ್ಯೋತಿಷ್ಯಾಪೋ ಯಜೂಂಷ್ಯಾಪಃ ಸತ್ಯಮಾಪಃ ಸರ್ವಾ ದೇವತಾ ಆಪೋ ಭೂರ್ಭುವಃ ಸುವರಾಪ ಓಂ ॥ –(ತೈ. ಆ –29.47)**

**ಅರ್ಥ :** "ಇದೆಲ್ಲವೂ ನೀರೆ. ಸಮಸ್ತ ಭೂತಗಳೂ ನೀರೆ, ಪ್ರಾಣಗಳೂ ನೀರೆ, ಪಶುಗಳೂ ನೀರೆ, ಅನ್ನವೂ ನೀರು, ಅಮೃತವೂ ನೀರು; ಸಮ್ರಾಜನೂ[1] ನೀರು, ವಿರಾಜನೂ ನೀರು, ಸ್ವರಾಜನೂ ನೀರು; ವೇದಛಂದಸ್ಸುಗಳೆಲ್ಲ ನೀರು; ನಕ್ಷತ್ರಗಳೆಲ್ಲ ನೀರು; ಯಜುಸ್ಸುಗಳೂ

1. ಸ್ಥೂಲಪ್ರಪಂಚವೆಂಬ ಉಪಾಧಿಯಿಂದ ಪರಮಾತ್ಮನಿಗೆ ವಿರಾಜನೆಂದೂ ಸೂಕ್ಷ್ಮ ಪ್ರಪಂಚವೆಂಬ ಉಪಾಧಿಯಿಂದ ಸ್ವರಾಜನೆಂದೂ ಅವ್ಯಾಕೃತವಾದ ಕಾರಣಪ್ರಪಂಚವೆಂಬ ಉಪಾಧಿಯಿಂದ ಸಂರಾಜನೆಂದೂ ಹೆಸರಾಗಿರುವವು.

ನೀರು; ಸತ್ವವೂ ನೀರು, ದೇವತೆಗಳೆಲ್ಲರೂ ನೀರು; ಭೂಲೋಕವೂ ಭುವರ್ಲೋಕವೂ ಸುವರ್ಲೋಕವೂ ನೀರು; ಈ ನೀರೇ ಓಂಕಾರದಿಂದ ಹೇಳಲ್ಪಡುವ ಪರಮಾತ್ಮನು."

ಸರ್ವವ್ಯಾಪಿಯಾದ ಪರಮಾತ್ಮನಿಗೆ "ಆಪಃ" ಎಂದು ಹೆಸರಿಟ್ಟಿದೆಯೆಂದೂ 'ಆಪಃ' ಎಂದರೆ ನೀರೆಂದು ರೂಢಿಯ ಅರ್ಥವಾದ್ದರಿಂದ ನೀರಿನ ಉಪಾಧಿಯ ಮೂಲಕ ಆ ಪರಮಾತ್ಮನನ್ನೇ 'ಆಪಃ' ಎಂಬ ಹೆಸರಿನಿಂದ ಕರೆದು ಈ ಮಾರ್ಜನ ಮಂತ್ರದಲ್ಲಿ ಪ್ರಾರ್ಥನೆಮಾಡಿರುತ್ತದೆಯೆಂದೂ ಇದರಿಂದ ಸ್ಪಷ್ಟವಾಗುವದಿಲ್ಲವೆ?

*****

# 7. ಮಂತ್ರಾಚಮನ-1

ಸಂಧ್ಯಾವಂದನೆಯಲ್ಲಿ ದೇಹದ ಶುದ್ಧಿಗಾಗಿಯೂ ಮನಸ್ಸಿನ ಶುದ್ಧಿಗಾಗಿಯೂ ಕೆಲವು ಮಂತ್ರಗಳನ್ನು ಉಪಯೋಗಿಸುವದು ರೂಢಿಯಲ್ಲಿದೆಯಷ್ಟೆ. ಇವುಗಳಲ್ಲಿ ದೇಹಶುದ್ಧಿಗಾಗಿ ಉಪಯೋಗಿಸುವ ಮಂತ್ರಗಳಿಗೆ ಮಾರ್ಜನೆಯ ಮಂತ್ರಗಳೆಂದೂ ಮನಃಶುದ್ಧಿಗಾಗಿ ಉಪಯೋಗಿಸುವ ಮಂತ್ರಗಳಿಗೆ ಜಲಪಾನ ಮಂತ್ರಗಳೆಂದೂ ಹೆಸರು. ಜಲಪಾನಮಂತ್ರಗಳನ್ನು ಹೇಳಿಕೊಂಡು ಅವುಗಳ ಅರ್ಥದ ಭಾವನೆಯಿಂದ ಪವಿತ್ರವಾದ ನೀರನ್ನು ಕುಡಿಯುವದನ್ನು 'ಮಂತ್ರಾಚಮನ'ವೆನ್ನುವರು.

ಸಾಯಂಕಾಲದಲ್ಲಿ **'ಅಗ್ನಿಶ್ಚ ಮಾ ಮನ್ಯುಶ್ಚ'** ಎಂಬ ಮಂತ್ರವನ್ನೂ ಬೆಳಗ್ಗೆ **'ಸೂರ್ಯಶ್ಚ ಮಾ ಮನ್ಯುಶ್ಚ'** ಎಂಬ ಮಂತ್ರವನ್ನೂ ಮಧ್ಯಾಹ್ನದಲ್ಲಿ **'ಆಪಃ ಪುನನ್ತು ಪೃಥಿವೀಮ್'** ಎಂಬ ಮಂತ್ರವನ್ನೂ ಉಪಯೋಗಿಸುತ್ತಾರೆ. ಈ ಮಂತ್ರಗಳೆಲ್ಲ ತೈತ್ತಿರಿಯಾರಣ್ಯಕದಲ್ಲಿರುತ್ತವೆ. ಇವುಗಳ ಅಭಿಪ್ರಾಯವನ್ನು ಕುರಿತು ಚರ್ಚಿಸುವದೇ ಈ ಬರಹದ ಉದ್ದೇಶವು.

ಸಾಯಂಕಾಲದ[1] ಈ ಮಂತ್ರದ ಅಕ್ಷರಾರ್ಥವೇನೆಂದರೆ : "ಅಗ್ನಿಯೂ

---

**1.** ಸಾಯಂಕಾಲದ ಮಂತ್ರಕ್ಕೂ ಬೆಳಗಿನ ಮಂತ್ರಕ್ಕೂ ಅಷ್ಟೇನೂ ಹೆಚ್ಚುಕಡಿಮೆಯಿಲ್ಲ, 'ಅಗ್ನಿ' ಎಂಬುದಕ್ಕೆ 'ಸೂರ್ಯ', 'ಯದಹ್ನಾ' ಎಂಬುದಕ್ಕೆ 'ಯದ್ರಾತ್ರಿಯಾ', 'ಅಹಃ' ಎಂಬುದಕ್ಕೆ 'ರಾತ್ರಿಃ', 'ಸತ್ಯೇ' ಎಂಬುದಕ್ಕೆ 'ಸೂರ್ಯೇ'– ಹೀಗೆ ಬೇರೆ ಮಾತುಗಳು ಬಂದಿರುತ್ತವೆ. ಆದ್ದರಿಂದ ಸಾಯಂಕಾಲದ ಮಂತ್ರದ ಅರ್ಥದ ವಿಚಾರದಿಂದಲೇ ಬೆಳಗಿನ ಮಂತ್ರಕ್ಕೆ ತಾತ್ಪರ್ಯವೇನೆಂಬುದನ್ನೂ ವಾಚಕರು ಸುಲಭವಾಗಿ ಗೊತ್ತುಪಡಿಸಿಕೊಳ್ಳಬಹುದಾಗಿರುತ್ತದೆ.

ಮನ್ಯುವೂ ಮನ್ಯುಪತಿಗಳೂ ಸಿಟ್ಟಿನಿಂದ ನಾನು ಮಾಡಿದ ಪಾಪಗಳಿಂದ ನನ್ನನ್ನು ಬಿಡುಗಡೆ ಮಾಡಿ ಕಾಪಾಡಲಿ. ಹಗಲುಹೊತ್ತಿನಲ್ಲಿ ಮನಸ್ಸಿನಿಂದಲೂ ವಾಕ್ಕಿನಿಂದಲೂ ಕೈಗಳಿಂದಲೂ ಕಾಲುಗಳಿಂದಲೂ ಹೊಟ್ಟೆಯಿಂದಲೂ ಶಿಶ್ನದಿಂದಲೂ ಯಾವ ಪಾಪ ವನ್ನು ಮಾಡಿರುವೆನೋ, ಹಗಲು ಅದನ್ನು ನಾಶಗೊಳಿಸಲಿ. ಇದಲ್ಲದೆ ನನ್ನಿಂದ ಇನ್ನೂ ಯಾವ ಪಾಪವಾಗಿರುವದೋ ಇದನ್ನೂ ನನ್ನನ್ನೂ ಅಮೃತಯೋನಿಯಾದ ಸತ್ಯಜ್ಯೋತಿ ಯಲ್ಲಿ ಹೋಮಮಾಡುವೆನು; ಇದು ಸರಿಯಾಗಿ ಹೋಮ ಮಾಡಿದ್ದಾಗಲಿ.''

ಇಲ್ಲಿ 'ಅಗ್ನಿ', 'ಮನ್ಯು', 'ಮನ್ಯುಪತಿಗಳು', 'ಅಹಸ್ಸು'- ಎಂಬಿವು ದೇವತೆಗಳ ಹೆಸರು. ಪರಮಾತ್ಮನು ತೋರಿಕೊಳ್ಳುವ ಬಗೆಬಗೆಯ ವಿಭೂತಿಗಳಾದ ಈ ಅಗ್ನಿಯೇ ಮುಂತಾದವುಗಳ ಮೂಲಕ ಪರಮಾತ್ಮನನ್ನೇ ಇಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇ ವೆಂಬುದನ್ನು ಉಪಾಸಕನು ನೆನಪಿನಲ್ಲಿಟ್ಟರೆ ವೇದದಲ್ಲಿ ಬರುವ ದೇವತಾವಾಚಿಗಳಾದ ಶಬ್ದಗಳ ಅರ್ಥವನ್ನು ಚೆನ್ನಾಗಿ ತಿಳಿದುಕೊಳ್ಳುವದರಲ್ಲಿ ಯಾವ ತೊಡಕೂ ಉಂಟಾಗುವದಿಲ್ಲ. ಇದಿರಲಿ. ಅಗ್ನಿ ಎಂದರೆ ರಾತ್ರಿಯಲ್ಲಿ ತೋರಿಕೊಳ್ಳುವ ಎಲ್ಲಾ ಬಗೆಯ ಬೆಳಕಿನ ಅಭಿಮಾನದೇವತೆ; ಮನ್ಯು ಎಂದರೆ ಸಿಟ್ಟಿನ ಅಭಿಮಾನದೇವತೆ; ಮನ್ಯುಪತಿಗಳು ಎಂದರೆ ರಾಗದ್ವೇಷಗಳೇ ಮುಂತಾದ ಭಾವಗಳ ಅಭಿಮಾನ ದೇವತೆಗಳು, ಅಹಸ್ಸೆಂದರೆ ಹಗಲಿಗೆ ಅಭಿಮಾನಿಯಾದ ದೇವತೆ-ಇವರೆಲ್ಲರೂ, ಎಂದರೆ ಈ ರೂಪದಲ್ಲಿ ತೋರಿಕೊಳ್ಳುತ್ತಿರುವ ಪರಮಾತ್ಮನು, ನನ್ನ ಪಾಪವನ್ನು ತೊಲಗಿಸಲಿ- ಎಂಬುದು ಒಟ್ಟು ತಾತ್ಪರ್ಯ.

ಸಿಟ್ಟಿನಿಂದ ನಾನು ಮಾಡಿದ ಪಾಪಗಳು ಎಂಬುದರ ಅರ್ಥವನ್ನು ಇಲ್ಲಿ ಸ್ವಲ್ಪ ವಿವೇಚನೆ ಮಾಡುವದು ಅವಶ್ಯವು. ಮೂಲದಲ್ಲಿರುವ 'ಮನ್ಯು' ಎಂಬ ಮಾತಿಗೆ ಕೋಪ, ಶೋಕ- ಎಂಬ ಎರಡು ಅರ್ಥಗಳೂ ಉಂಟು. ಮನುಷ್ಯನು ಮಾಡುವ ಪಾಪಗಳಿಗೆಲ್ಲ ಕಾಮವೇ ಮೂಲವು, ಅವನು ತನ್ನ ಕಾಮವು ಪರಿಪೂರ್ತಿಯಾದರೆ ಉಬ್ಬುತ್ತಾನೆ; ಇಲ್ಲದಿದ್ದರೆ ಸಿಟ್ಟಾಗುತ್ತಾನೆ, ಸಿಟ್ಟು ನಡೆಯದಿದ್ದರೆ ಅಳುತ್ತಾನೆ. ಹೀಗೆ ಕಾಮವೊಂದೇ ಆಯಾ ಸಂದರ್ಭಕ್ಕೆ ತಕ್ಕಂತೆ ಕ್ರೋಧ, ಲೋಭ, ಮದ, ಮಾತ್ಸರ್ಯ, ಶೋಕ -ಮುಂತಾದ ರೂಪಗಳನ್ನು ತೆಗೆದುಕೊಳ್ಳುತ್ತಾ ಹೋಗುತ್ತದೆ. ಈ ಎಲ್ಲಾ ಪಾಪ ಭಾವನೆಗಳ ಒಟ್ಟನ್ನೇ ಇಲ್ಲಿ ಮನ್ಯುವೆಂದು ಕರೆದಿದೆ. ಪರಮಾತ್ಮನನ್ನು ಶರಣು ಹೊಕ್ಕರೆ ಈ ಭಾವನೆಗಳ ಬಿಕ್ಕಟ್ಟನ್ನು ಬಿಡಿಸಿಕೊಂಡು ಪಾರಾಗಬಹುದು, ಇಲ್ಲದಿದ್ದರೆ ಇವುಗಳ ಹಿಡಿತಕ್ಕೆ ಸಿಕ್ಕಿಬಿದ್ದು ಆಸುರಸಂಪತ್ತಿನ ಸಂಸಾರದಲ್ಲಿ ಬಿದ್ದು ನರಳಬೇಕಾಗುವದು.

ಮನ್ಯುವಿಗೆ ವಶನಾದ ಮನುಷ್ಯನು ಏನೇನು ಪಾಪವನ್ನು ಮಾಡುವನು? ಮನಸ್ಸಿನಲ್ಲಿ ಮತ್ತೊಬ್ಬರ ವಿಷಯದಲ್ಲಿ ಕೆಟ್ಟದ್ದನ್ನು ಆಲೋಚಿಸುವನು; ಮಾತಿನಲ್ಲಿ ಮತ್ತೊಬ್ಬರಿಗೆ ನೋವಾಗುವ ಸುಳ್ಳುಮಾತುಗಳನ್ನು ಕೇಳುವದಕ್ಕೆ ಕಠೋರವಾಗಿರುವಂತೆ ಆಡುತ್ತಿರುವನು; ಕೈಯಿಂದ ಹೊಡೆಯುವದು ಬಡಿಯುವದು ಮುಂತಾದ ರೂಪ ಗಳಲ್ಲಿ ಪ್ರಾಣಿಗಳನ್ನು ಪೀಡಿಸುವನು; ಕಾಲುಗಳಿಂದ ದೊಡ್ಡವರನ್ನು ಕೂಡ ಒದೆಯು ವದಕ್ಕೆ ಹೋಗುವನು; ತಿನ್ನಬಾರದ್ದನ್ನು ತಿನ್ನುವದು, ಕುಡಿಯಬಾರದ್ದನ್ನು ಕುಡಿಯುವದು, ಯೋಗ್ಯವಾದದ್ದನ್ನಾದರೂ ಮಿತಿಮೀರಿ ತಿನ್ನುವದು, ಮಿತಿಮೀರಿ ಕುಡಿಯುವದು– ಹೀಗೆಲ್ಲ ಮಾಡುತ್ತಾ ಹೊಟ್ಟೆಬಾಕನಾಗುವನು; ಸ್ತ್ರೀಸಂಗಾದಿಗಳಲ್ಲಿಯೂ ನೀತಿಯ ಮೇರೆಯನ್ನು ದಾಟಿ ನಡೆಯುವನು. ಇದೆಲ್ಲ ನಾಶವಾಗಬೇಕಾದರೆ, ಈ ಕೃತ್ಯ ಗಳಿಗೆಲ್ಲ ಮೂಲವಾದ ಮನ್ಯುವನ್ನೇ ಗೆಲ್ಲಬೇಕು; ಇದಕ್ಕೆ ಮನ್ಯುವಿಗೆಲ್ಲ ಒಡೆಯನಾದ ಪರಮಾತ್ಮನನ್ನೇ ಶರಣುಹೋಗಬೇಕು.

ಪಾಪಗಳು ಇಷ್ಟೆಂಬ ಲೆಕ್ಕವಿಲ್ಲ; ಇಂಥಿಂಥ ಪಾಪಗಳನ್ನು ನಾನು ಮಾಡಿ ದ್ದೇನೆಂದು ಮನುಷ್ಯನು ಅವುಗಳನ್ನು ಗೊತ್ತುಹಚ್ಚುತ್ತಾ ಕೂರುವದಕ್ಕೂ ಆಗುವದಿಲ್ಲ, ಆದರೆ ಯಾವ ಯಾವ ಪಾಪವನ್ನು ನಾನು ಅರಿತೋ ಅರಿಯದೆಯೋ ಮಾಡಿರು ವೆನೋ ಅದೆಲ್ಲವನ್ನೂ ಬಿಡುಗಡೆಮಾಡಿಸಲೆಂದು ಪರಮೇಶ್ವರನಲ್ಲಿ ಮೊರೆಯಿಟ್ಟರೆ ಅವುಗಳೆಲ್ಲಕ್ಕೂ ಶುದ್ಧಿಯಾದಂತಾಯಿತು. ಏಕೆಂದರೆ ಅಂತಃಕರಣದಲ್ಲಿರುವ ಮನ್ಯು ವೊಂದು ಹೋದರೆ ಸಕಲಪಾಪಗಳೂ ಹೋದಂತೆಯೇ. ಈ ಮನ್ಯುವೇ ಸಕಲ ಪಾಪ ಗಳಿಗೂ ಬೀಜವಾಗಿದೆ.

ಪರಮಾತ್ಮನು 'ಅಮೃತಯೋನಿಯು', ಎಂದರೆ ನಾಶರಹಿತನಾದ ಜಗತ್ಕಾರಣನು; ನಾಶರಹಿತವಾದ ಮೋಕ್ಷಸ್ವರೂಪಕ್ಕೂ ಕಾರಣನು. ಆತನ ಭಾವನೆಯನ್ನು ಬಲವಾಗಿ ಮನಸ್ಸಿಗೆ ತಂದುಕೊಂಡು ''ಹೇ ಭಗವಂತ, 'ನಾನು' ಎಂಬ ವ್ಯಕ್ತಿಭಾವನೆಯನ್ನು ನನ್ನಲ್ಲಿರಗೊಡಬೇಡ. ಈ 'ನಾನು' ಎಂಬ ಭಾವನೆಯಿಂದ ಬಗೆಬಗೆಯ ಪಾಪಗಳನ್ನು ಆಚರಿಸಿ ಬಳಲಿರುತ್ತೇನೆ; ಈ 'ನಾನು' ಎಂಬುದನ್ನೇ ಒಂದು ಹೋಮದ್ರವ್ಯವಾಗಿ ಮಾಡಿ ಪರಮಾರ್ಥಸತ್ಯನಾದ ನಿನ್ನನ್ನು ಅಗ್ನಿಯಾಗಿ ಮಾಡಿಕೊಂಡು, ಇಗೋ ನನ್ನನ್ನು ನಿನ್ನಲ್ಲಿ ಹೋಮಮಾಡಿರುತ್ತೇನೆ. ಇನ್ನು ಮೇಲೆ ನಿನಗಿಂತ ಬೇರೆಯಾಗಿ ಈ ನಾನೆಂಬ ವ್ಯಕ್ತಿಭಾವನೆಯು ಹೊರತೋರದಂತೆ ಸುಟ್ಟು ಬೂದಿಮಾಡಿಬಿಡು!' ಎಂದು ಭಾವಿಸಿ ದರೆ ಸಕಲಪಾಪಗಳಿಗೂ ಪ್ರಾಯಶ್ಚಿತ್ತವಾಯಿತೆಂದು ಮತ್ತೆ ಹೇಳುವದು ಅವಶ್ಯವಾದೀತೆ?

# 8. ಮಂತ್ರಾಚಮನ-2

ಬೆಳಗಿನ ಸಂಧ್ಯಾವಂದನೆಯಲ್ಲಿಯೂ ಸಂಜೆಯ ಸಂಧ್ಯಾವಂದನೆಯಲ್ಲಿಯೂ ಉಪಯೋಗಿಸುವ ಜಲಪಾನದ ಮಂತ್ರದ ತಾತ್ಪರ್ಯವನ್ನು ಹಿಂದಿನ ಲೇಖನದಲ್ಲಿ ವಿವರಿಸಿದ್ದೆ ನಷ್ಟೆ. ಈಗ ಮಧ್ಯಾಹ್ನದಲ್ಲಿ ಉಪಯೋಗಿಸುವ **"ಆಪಃ ಪುನನ್ತು ಪೃಥಿವೀಮ್"** ಎಂಬ ಮಂತ್ರದ ಅರ್ಥವನ್ನು ವಿಚಾರಕ್ಕೆ ತೆಗೆದುಕೊಳ್ಳುವೆನು.

ಈ ಮಂತ್ರದ ಅಕ್ಷರಾರ್ಥವು ಹೀಗಾಗುವದು : "ನೀರುಗಳು ಭೂಮಿಯನ್ನು ಪರಿಶುದ್ಧಿಗೊಳಿಸಲಿ; ಹೀಗೆ ಪರಿಶುದ್ಧಿಗೊಂಡ ಭೂಮಿಯು ನನ್ನನ್ನು ಪರಿಶುದ್ಧಿ ಗೊಳಿಸಲಿ, ವೇದಾಚಾರ್ಯನನ್ನು ಪರಿಶುದ್ಧಿಗೊಳಿಸಲಿ; ವೇದವು ಪವಿತ್ರವಾಗಿ ನನ್ನನ್ನು ಪವಿತ್ರಗೊಳಿಸಲಿ. ಉಚ್ಛಿಷ್ಟ, ಅಭೋಜ್ಯ- ಇವುಗಳನ್ನು ಉಂಡ, ಮತ್ತು ಮತ್ತೆ ಯಾವದಾದರೂ ದುರಾಚಾರವನ್ನು ಮಾಡಿದ, ದೋಷವನ್ನೆಲ್ಲವನ್ನೂ ಬಿಡುಗಡೆಮಾಡಿಸಿ ನನ್ನನ್ನು ಶುದ್ಧಿಗೊಳಿಸಲಿ ಮತ್ತು ಕೆಟ್ಟವರಿಂದ ದಾನವನ್ನು ತೆಗೆದುಕೊಂಡ ದೋಷವನ್ನೂ ಪರಿಹರಿಸಿ ಶುದ್ಧಿಗೊಳಿಸಲಿ. ಇದು ಸರಿಯಾದ ಹೋಮವಾಗಲಿ."

ಈ ಮಂತ್ರದಲ್ಲಿ ಮೂರು ಭಾಗಗಳಿರುವವು. ಭೂಮಿಯು ನನ್ನನ್ನು ಶುದ್ಧಿಗೊಳಿಸಲೆಂದು ಪ್ರಾರ್ಥಿಸುವದು ಮೊದಲನೆಯ ಭಾಗ; ವೇದವು ನನ್ನನ್ನು ಶುದ್ಧಿಗೊಳಿಸಲೆಂದು ಪ್ರಾರ್ಥಿಸುವದು ಎರಡನೆಯ ಭಾಗ; ಆಹಾರದೋಷವೂ ದುರಾಚಾರವೂ ಬಿಡುಗಡೆಯಾಗಲೆಂದು ಪ್ರಾರ್ಥಿಸುವದು ಮೂರನೆಯ ಭಾಗ . ಈ ಮೂರಕ್ಕೂ ಪವಿತ್ರಕಾರಣವಾದದ್ದು ನೀರೆ. ಇಲ್ಲಿ ನೀರೆಂದರೆ[1] ಪರಮಾತ್ಮನ ಉಪಾಧಿ ಯಾಗಿರುವ ಪರಿಶುದ್ಧ ವಸ್ತುವೆಂಬರ್ಥವನ್ನೇ ಇಟ್ಟುಕೊಳ್ಳಬೇಕು.

ಭೂಮಿಯ ಮೇಲೆ ಚೆನ್ನಾಗಿ ಮಳೆಬಿದ್ದು ಎಲ್ಲೆಲ್ಲೂ ಶುದ್ಧಿಯಾಗಲೆಂಬುದು ಮೊದಲನೆಯ ಹಾರೈಕೆಯು. ಭೂಮಿಯು ಶುದ್ಧವಾಗಿರಬೇಕು, ಅದರ ಮೇಲೆ ಶುದ್ಧವಾದ ನೀರು ಹರಿಯುತ್ತಿರಬೇಕು; ಇಂಥ ಶುದ್ಧವಾದ ನೀರಿನಲ್ಲಿಯೇ ಸಂಧ್ಯಾವಂದನೆಯನ್ನು ಮಾಡಬೇಕು- ಎಂದು ವಿಧಿಯಿದೆ. ಹಿಂದೆ ಋಷಿಗಳು

---

**1.** ಈ ಬಗೆಯ ಮಂತ್ರಗಳಲ್ಲಿ ನೀರೆಂಬ ಉಪಾಧಿಯ ಮೂಲಕ ಸರ್ವವ್ಯಾಪಿ ಯಾದ ಪರಮಾತ್ಮನನ್ನೇ **'ಆಪಃ'** ಎಂಬ ಹೆಸರಿನಿಂದ ಕರೆದು ಪ್ರಾರ್ಥನೆ ಮಾಡಿರುತ್ತದೆ ಯೆಂಬುದನ್ನು ಹಿಂದಿನ ಲೇಖನದಲ್ಲಿ ಮಾರ್ಜನೆಯ ಮಂತ್ರಾರ್ಥ ವಿಚಾರದಲ್ಲಿ ವಿವರಿಸಿದೆ.

ನದಿಯ ದಂಡೆಗಳಲ್ಲಿರುವ ಬಯಲುಗಳಲ್ಲಿಯೇ ವಾಸಮಾಡಿಕೊಂಡು ಇದ್ದದ್ದನ್ನು ಇಲ್ಲಿ ಸ್ಮರಿಸಿ ಕೊಳ್ಳಬೇಕು. ಶುದ್ಧವಾದ ಗಾಳಿ, ಶುದ್ಧವಾದ ನೆಲ, ಶುದ್ಧವಾದ ನೀರು- ಇವು ಮೂರೂ ಮನಶ್ಶುದ್ಧಿಗೂ ಮನಶ್ಶಾಂತಿಗೂ ಕಾರಣವಾಗುವವು. ಈಗಿನ ಕಾಲದಲ್ಲಿ ಋಷಿಗಳ ಹಾಗೆ ದೇಶಕೋಶವನ್ನು ಬಿಟ್ಟು ನಾವು ದೂರವಾಗಿ ಬಯಲುಗಳಲ್ಲಿ ಪರ್ಣಶಾಲೆಯನ್ನು ಕಟ್ಟಿಕೊಂಡು ಇರುವದು ಸಾಧ್ಯವಲ್ಲವಾದರೂ ನಾವು ವಾಸವಾಗಿ ರುವ ಮನೆಯ ಒಳಗೂ ಹೊರಗೂ ನೆಲವನ್ನು ಚೊಕ್ಕಟವಾಗಿ ಗುಡಿಸಿಟ್ಟುಕೊಳ್ಳುವದು, ಬೀದಿಯಲ್ಲಿ ಸಿಕ್ಕಿದ ಕಡೆ ಕಸವನ್ನು ಹಾಕದಿರುವದು- ಇವೆರಡೂ ಈಗಲೂ ಸಾಧ್ಯ ವಾಗಿವೆ. ಜಲ ಸಮೃದ್ಧಿಯಿರುವಂತೆ ಪ್ರತಿಯೊಬ್ಬನೂ ಮಾಡಿಕೊಳ್ಳುವದಕ್ಕೆ ಆಗದಿದ್ದರೂ ಊರಿನವರೆಲ್ಲರೂ ಸೇರಿ ಪ್ರಯತ್ನಮಾಡಿದರೆ ಅಲ್ಲಲ್ಲಿ ಕೆರೆ, ಕಟ್ಟೆ, ಭಾವಿಗಳನ್ನು ಮಾಡಿ ಕೊಂಡು ಅವುಗಳನ್ನು ಶುಚಿಯಾಗಿಟ್ಟುಕೊಳ್ಳುವದಕ್ಕೆ ಪ್ರಯತ್ನಮಾಡುವದು ಕಷ್ಟವಲ್ಲ. ಇದು ಹೇಗೇ ಇರಲಿ; ದ್ವಿಜನಾದವನು, ಅದರಲ್ಲಿಯೂ ಬ್ರಾಹ್ಮಣನೆನಿಸಿಕೊಂಡವನು, ತಾನಿರುವ ಸ್ಥಳವೆಲ್ಲವೂ ಶುಚಿಯಾಗಿ ಪವಿತ್ರವಾಗಿ ತನಗೂ ತನ್ನ ನೆರೆಯವರಿಗೂ ಮನಶ್ಶಾಂತಿಯಾಗುವದಕ್ಕೆ ಸಹಾಯಕವಾಗಿರಬೇಕೆಂಬುದನ್ನು ಪ್ರತಿಯೊಂದು ದಿನವೂ ಮಾಧ್ಯಾಹ್ನಿಕವನ್ನು ಮಾಡುವಾಗ ನೆನಪಿಗೆ ತಂದುಕೊಳ್ಳುವದು ಅತ್ಯವಶ್ಯವು.

ವೇದವನ್ನು ಹೇಳುವ ಆಚಾರ್ಯನೂ ಅದನ್ನು ಕಲಿಯುವ ಶಿಷ್ಯನೂ ಪರಿಶುದ್ಧರಾಗಿದ್ದುಕೊಂಡಿರಬೇಕೆಂಬುದು ಎರಡನೆಯ ಹಾರೈಕೆಯು. ಹೊರಗೆ ಸ್ಥಳ ಶುದ್ಧಿ, ದೇಹಶುದ್ಧಿ- ಇವುಗಳಿಂದ ಕೂಡಿರುವವರು ಮಾಡುವ ವೇದಶಾಸ್ತ್ರಗಳ ಅಭ್ಯಾಸವು ಮನಸ್ಸಿಗೂ ಶುದ್ಧಿಯನ್ನು ಕೊಡುವದು, ಅದಕ್ಕೆ ವೀರ್ಯವೂ ಬರುವದು. 'ಅಂಥ ವಿದ್ಯಾಭ್ಯಾಸವೇ ಮುಂದೆ ವ್ಯವಹಾರದಲ್ಲಿ ತನಗೂ ಲೋಕಕ್ಕೂ ಕಲ್ಯಾಣ ವನ್ನುಂಟುಮಾಡುವದು. ನಮ್ಮ ಗುರುಗಳು ತಾವೂ ಶುದ್ಧಾಚಾರದಲ್ಲಿದ್ದುಕೊಂಡು ಶುದ್ಧಮನಸ್ಸಿನಿಂದ ನನಗೆ ವೇದಾಭ್ಯಾಸವನ್ನು ಮಾಡಿಸಲಿ, ನಾನೂ ಸ್ನಾನಾದಿಗಳಿಂದ ಶುದ್ಧನಾಗಿ ಶುದ್ಧಮನಸ್ಸಿನಿಂದ ಕಲಿತು ಅದರಿಂದ ಪವಿತ್ರನಾಗುವಂತೆ ಆಗಲಿ - ಎಂಬುದು ಎರಡನೆಯ ಭಾಗದ ಭಾವಾರ್ಥವು. ತಾನೂ ವೇದಶಾಸ್ತ್ರಗಳನ್ನು ಕಲಿಯುವದು, ಮತ್ತೊಬ್ಬರಿಗೂ ಕಲಿಸುವದು- ಇವೆರಡೂ ಬ್ರಾಹ್ಮಣನ ಧರ್ಮಗಳಲ್ಲಿ ಬಹು ಮುಖ್ಯ ವಾದವು. ಯಾವ ಪ್ರತಿಫಲವನ್ನೂ ಅಪೇಕ್ಷಿಸದೆ ಜ್ಞಾನಾರ್ಜನೆಯನ್ನು ಮಾಡಬೇಕು, ಇತರರಿಗೆ ಕಲಿಸಬೇಕು. ಇದೇ ಬ್ರಾಹ್ಮಣನ ಗುರಿಯಾಗಿರಬೇಕೆಂಬುದನ್ನು ಈ ಮಂತ್ರವು ನೆನಪುಕೊಡುತ್ತದೆ.

ಮನುಷ್ಯನು ಎಂಥ ಆಚಾರವನ್ನಿಟ್ಟುಕೊಂಡಿರುವನೋ ಅಂಥ ಮನಸ್ಸು ಅವನಿಗೆ ಬರುವದು. ಶುಚಿಯಾಗಿರುವದಕ್ಕೂ ಜ್ಞಾನಾರ್ಜನೆಯಲ್ಲಿ ಆಸಕ್ತಿಯುಂಟಾಗುವದಕ್ಕೂ ಅನುಕೂಲವಾಗುವದು ಸದಾಚಾರ. ಆಹಾರವು ಶುದ್ಧವಾಗಿದ್ದರೆ ಅದು ಜೀರ್ಣವಾಗಿ ದೇಹಕ್ಕಂಟಿದ ಮೇಲೆ ಅದಕ್ಕೆ ತಕ್ಕ ಶುದ್ಧ ವಾಸನೆಗಳೇ ಉಂಟಾಗುವವು. ಅಯೋಗ್ಯವಾದ ಆಹಾರವನ್ನುಣ್ಣುವದು, ಕುಡಿಯಬಾರದ್ದನ್ನು ಕುಡಿಯುವದು, ತಿನ್ನಬಾರದ್ದನ್ನು ತಿನ್ನುವದು, ಮಾಡಬಾರದ್ದನ್ನು ಮಾಡುವದು- ಮುಂತಾದ ದುಶ್ಚರಿತಗಳನ್ನು ಬಿಟ್ಟು ಸದಾಚಾರದಲ್ಲಿ ನಿರತನಾದವನಿಗೇ ಒಳ್ಳೆಯ ಬುದ್ಧಿಯು ಹುಟ್ಟುವದು. ಆದ್ದರಿಂದ ಯಾವದಾದರೂ ದುರಾಚಾರಗಳನ್ನು ತಾನು ಅರಿಯದೆ ಮಾಡಿದ್ದರೆ ಅಂಥ ದೋಷವನ್ನೂ ಪರಮಾತ್ಮನು ಪರಿಹರಿಸಲಿ ಎಂದು ಪ್ರಾರ್ಥಿಸುವದು ಮೂರನೆಯ ಭಾಗದ ಉದ್ದೇಶವು.

ಜಲಪಾನಕ್ಕೆ ಮನಶ್ಶುದ್ಧಿಯೇ ಮುಖ್ಯೋದ್ದೇಶವೆಂದು ಹಿಂದಿನ ಲೇಖನದಲ್ಲಿಯೇ ತಿಳಿಸಿರುತ್ತೇನೆ. "ಪರಮಾತ್ಮನೇ, ನನ್ನ ಸುತ್ತಮುತ್ತಲಿನ ಪ್ರದೇಶವು ಶುದ್ಧವಾಗಿದ್ದು ನನ್ನ ಮನಶ್ಶುದ್ಧಿಗೆ ಕಾರಣವಾಗಲಿ; ನಾನು ಆಚಾರ್ಯನಿಂದ ಕಲಿಯುವ ಪಾಠವು ನನ್ನ ಮನಶ್ಶುದ್ಧಿಗೆ ಕಾರಣವಾಗಲಿ; ನನ್ನ ಮನಸ್ಸಿನಲ್ಲಿರುವ ಕೆಟ್ಟವಾಸನೆಗಳೆಲ್ಲ ತೊಲಗಿ ನಾನು ಶುದ್ಧಮನಸ್ಕನಾಗಿಯೇ ವರ್ತಿಸುವಂತೆ ಅನುಗ್ರಹಿಸು" - ಎಂದು ಮನಃಪೂರ್ವಕವಾಗಿ ಧ್ಯಾನಿಸಿ ಅಭಿಮಂತ್ರಿಸಿದ ನೀರನ್ನು ಕುಡಿಯುವದರಿಂದ ಮನಸ್ಸಿನ ಮೇಲೆ ಉತ್ತಮಪರಿಣಾಮವಾಗುವದೆಂಬುದನ್ನು ಮತ್ತೆ ಹೇಳುವದೇನಿದೆ?

*****

# 9. ಗಾಯತ್ರೀ ಮಂತ್ರ

ಸಂಧ್ಯಾವಂದನೆಯ ಮುಖ್ಯಭಾಗವು ಗಾಯತ್ರೀಮಂತ್ರದಲ್ಲಿ ಅಡಗಿರುತ್ತದೆ. ಗಾಯತ್ರೀಮಂತ್ರವನ್ನು ಸರಿಯಾಗಿ ಜಪಮಾಡುವದೇ ಸಂಧ್ಯಾವಂದನೆಯೆಂದು ಹೇಳಿದರೂ ಸಲ್ಲುವಂತಿದೆ. ಸಂಧ್ಯಾವಂದನೆಯಲ್ಲಿ ಮಾರ್ಜನ, ಅರ್ಘ್ಯ- ಇವು ಎರಡೂ ಮೊದಲಿನ ಭಾಗ; ಗಾಯತ್ರೀಹೃದಯಪಠನ, ಗಾಯತ್ರೀಜಪ- ಇವೆರಡೂ ಎರಡನೆಯ ಭಾಗ; ಉಪಸ್ಥಾನವು ಮೂರನೆಯ ಭಾಗ. ಇವುಗಳಲ್ಲಿ ಮೊದಲನೆಯ

ಭಾಗವನ್ನು ಸಂಧ್ಯೋಪಾಸನೆಗೆ ಸಿದ್ಧವಾಗುವ ಭಾಗವೆಂದು ಹೇಳಬಹುದು. ಮೂರನೆಯ ಭಾಗವನ್ನು ಸಂಧ್ಯಾವಂದನೆಯ ಉಪಸಂಹಾರಭಾಗವೆಂದು ಕರೆಯಬಹುದು; ಉಳಿಯುವ ನಡುವಿನ ಭಾಗವೇ ಈ ಕರ್ಮದ ತಿರುಳಾಗಿರುತ್ತದೆ.

ಗಾಯತ್ರೀಮಂತ್ರವು ಎಷ್ಟು ಪ್ರಧಾನವೆಂಬುದನ್ನು ಮನಗಾಣಬೇಕಾದರೆ ಅದನ್ನು ಎಲ್ಲೆಲ್ಲಿ ಉಪಯೋಗಿಸಿದೆ ಎಂಬುದನ್ನು ಲಕ್ಷ್ಯವಿಟ್ಟುನೋಡಬೇಕು. ಸಂಧ್ಯಾವಂದನೆಯನ್ನು ಮಾಡುತ್ತಿರುವ ಸಂಕಲ್ಪ ಮಾಡುವದಕ್ಕೆ ಪೂರ್ವದಲ್ಲಿಯೇ ಪ್ರಾಣಾಯಾಮವನ್ನು ಮಾಡಬೇಕಷ್ಟೆ; ಪ್ರಾಣಾಯಾಮಕ್ಕೆ ಗಾಯತ್ರಿಯು ಅವಶ್ಯವಾಗಿ ಬೇಕಾಗುತ್ತದೆ. ಮಾರ್ಜನ, ಅರ್ಘ್ಯ– ಇವುಗಳ ಮೊದಲೂ ಪ್ರಾಣಾಯಾಮವು ಬೇಕೇ ಬೇಕಾಗಿರುವದರಿಂದ ಆಗಲೂ ಗಾಯತ್ರಿಯು ಬೇಕು. ಅರ್ಘ್ಯವನ್ನು ಬಿಡುವಾಗಲೂ ಗಾಯತ್ರೀ ಮಂತ್ರವೇ ಬೇಕು. ಆಮೇಲಂತೂ ಗಾಯತ್ರಿಯ ಹೃದಯಪಠನಪೂರ್ವಕವಾಗಿ ಗಾಯತ್ರಿಯನ್ನೇ ನೇರಾಗಿ ಜಪಿಸಬೇಕಾಗುವದು. ಆದ್ದರಿಂದ ಗಾಯತ್ರೀ ಮಂತ್ರವು ಸಂಧ್ಯಾವಂದನೆಯಲ್ಲಿ ಅತ್ಯಂತ ಮುಖ್ಯಸ್ಥಾನವನ್ನು ಹೊಂದಿರುವದೆಂದಾಯಿತು.

ಗಾಯತ್ರೀಮಂತ್ರದಲ್ಲಿ ಮೂರು ಪಾದಗಳಿರುತ್ತವೆ. ಇವುಗಳನ್ನು ಕ್ರಮವಾಗಿ ಋಗ್ವೇದವೇ ಮುಂತಾದ ಮೂರು ವೇದಗಳಿಂದ ಹಿಂಡಿ ತೆಗೆದಿರುತ್ತದೆ ಎಂದು ಮನುಸ್ಮೃತಿಯಲ್ಲಿ ಹೇಳಿರುತ್ತದೆ. ಆದ್ದರಿಂದ ಅಧಿಕಾರಿಯಾದವನು ಗುರೂಪದಿಷ್ಟವಾದ ಮಾರ್ಗದಿಂದ ನಿಯಮಪೂರ್ವಕವಾಗಿ ಶ್ರದ್ಧೆಯಿಂದ ಅರ್ಥವನ್ನು ಸ್ಮರಿಸಿಕೊಳ್ಳುತ್ತಾ ಈ ಮಂತ್ರವನ್ನು ಜಪಿಸಿದರೆ ಮೂರುವೇದಗಳನ್ನೂ ಅಧ್ಯಯನ ಮಾಡಿದ ಫಲವು ದೊರೆಯುವುದರಲ್ಲಿ ಆಶ್ಚರ್ಯವೇನು?

ಈ ಮಂತ್ರದಲ್ಲಿ ಮೊದಲು ಓಂಕಾರವೂ ಆಮೇಲೆ ಮೂರು ವ್ಯಾಹೃತಿಗಳೂ ಇರುತ್ತವೆ. ಓಂಕಾರವಾಚ್ಯನಾದ ಪರಮಾತ್ಮನೇ ಭೂರಾದಿಲೋಕತ್ರಯಸ್ವರೂಪನೆಂದು ಇದರಿಂದ ಸೂಚಿಸಿದಂತಾಯಿತು. "**ಸರ್ವವೂ ಬ್ರಹ್ಮವೇ**" ಎಂಬ ಉಪನಿಷತ್ಸಾರವು ಈ ಮಂತ್ರಭಾಗದಲ್ಲಿ ಅಡಕವಾಗಿರುತ್ತದೆ.

ಮುಂದಿನ ಭಾಗಕ್ಕೆ ಅಕ್ಷರಾರ್ಥವು ಹೇಗಾಗುವದೆಂದರೆ "ಆ ಪ್ರಸಿದ್ಧದೇವನಾದ ಸವಿತೃವಿನ ಎಲ್ಲರೂ ಬಯಸುವ ತೇಜಸ್ಸನ್ನು ಧ್ಯಾನಮಾಡೋಣ; ಆತನು ನಮ್ಮಗಳ ಬುದ್ಧಿವೃತ್ತಿಗಳನ್ನು ಪ್ರೇರಣೆಮಾಡಲಿ". ಸವಿತೃವೆಂದರೆ ಸೂರ್ಯನೆಂದು ಅರ್ಥವಾಗುತ್ತದೆ.

ಗಾಯತ್ರಿಯ ಜಪವಾದ ಮೇಲೆ ಮಾಡುವ ಉಪಸ್ಥಾನದಲ್ಲಿಯೂ ಮಿತ್ರ, ಸೂರ್ಯ – ಎಂಬ ಹೆಸರುಗಳಿರುವ ಮಂತ್ರಗಳಿರುತ್ತವೆ. ಸೂರ್ಯನನ್ನೇ ಪ್ರಸಿದ್ಧದೇವತೆಯೆಂದು ಇಲ್ಲಿ ಕರೆದಿದೆಯೆಂದು ಭಾವಿಸುವದಕ್ಕೆ ಅಡ್ಡಿಯೂ ಕಾಣುವದಿಲ್ಲ; ಏಕೆಂದರೆ ಸೂರ್ಯನನ್ನು ಬ್ರಹ್ಮವೆಂದು ಉಪಾಸನೆ ಮಾಡಬೇಕೆಂದು ಶಾಸ್ತ್ರದಲ್ಲಿ ಅನೇಕ ಕಡೆಗಳಲ್ಲಿ ಹೇಳಿಯೂ ಇರುತ್ತದೆ. ಸೂರ್ಯನು ದನಕಾಯುವವರಿಗೂ ನೀರು ತರುವ ಸ್ತ್ರೀಯರಿಗೂ ಸಹ ಪ್ರಸಿದ್ಧನಾಗಿರುವ ದೇವನು– ಎಂದು ತೈತ್ತಿರೀಯ ಸಂಹಿತೆಯಲ್ಲಿಯೂ ಇದೆ.

ಆದರೆ ಮೇಲೆ ಹೇಳಿರುವಂತೆ ಸೂರ್ಯನಿಗೆ ಅರ್ಘ್ಯವನ್ನು ಕೊಡುವಾಗಲೂ ಗಾಯತ್ರೀಮಂತ್ರವನ್ನು ಉಪಯೋಗಿಸುತ್ತೇವಷ್ಟೆ; ಇಲ್ಲಿ ಅರ್ಘ್ಯವಾದ ಬಳಿಕ ಈ ಆದಿತ್ಯನು ಬ್ರಹ್ಮವು (**ಅಸಾವಾದಿತ್ಯೋ ಬ್ರಹ್ಮ**) ಎಂಬ ಮಂತ್ರವೊಂದನ್ನು ಪಠಿಸುವ ವಾಡಿಕೆ ಇದೆ. ಈ ಸಂಪ್ರದಾಯದ ಕಡೆಗೆ ತಿರುಗಿ ನೋಡಿದರೆ ಸೂರ್ಯಾಂತರ್ಗತವಾದ ಪರಮಾತ್ಮನನ್ನೇ ಇಲ್ಲಿ ಸವಿತೃಶಬ್ದದಿಂದ ಹೇಳಿರುತ್ತದೆ ಎನ್ನಬೇಕಾಗುವದು. ಆಗ ಓಂಕಾರ ವಾಚ್ಯವಾದ ಬ್ರಹ್ಮವು ಲೋಕ ತ್ರಯಾತ್ಮಕವಾಗಿರುವದು ಎಂಬ ಮಂತ್ರದ ಮೊದಲನೆಯ ಭಾಗಕ್ಕೂ ಈ ಅಭಿಪ್ರಾಯಕ್ಕೂ ಹೊಂದಿಕೆಯೂ ಆದಂತೆ ಆಗುತ್ತದೆ.

ಸವಿತೃವೆಂದರೆ ಜಗತ್ಕಾರಣನಾದ ಪರಮಾತ್ಮನೇ ಎಂದು ಅರ್ಥಮಾಡುವದಕ್ಕೆ ಮತ್ತೂ ಒಂದು ಕಾರಣವಿದೆ. ಅದೇನೆಂದರೆ ಇಲ್ಲಿ ನಮ್ಮಗಳ ಬುದ್ಧಿವೃತ್ತಿಗಳನ್ನು ಆತನು ಪ್ರೇರಿಸಲಿ ಎಂಬ ಪ್ರಾರ್ಥನೆಯಿದೆ. 'ಪರಮಾತ್ಮನು ಜಗತ್ತನ್ನೆಲ್ಲ ಸೃಷ್ಟಿಮಾಡಿ, ಜಗತ್ತಿನೊಳಗೆ ಪ್ರವೇಶಮಾಡಿರುವನು; ಆತನೇ ನಾವೆಂದು ತಿಳಿಯಬೇಕು' ಎಂಬ ಉಪನಿಷತ್ತಿನ ಉಪದೇಶವು ಇಲ್ಲಿ ಸೂಚಿತವಾಗಿದೆ ಎಂದು ತಿಳಿದರೆ "ಸರ್ವವೂ ಪರಮಾತ್ಮನೇ" ಎಂಬರ್ಥದ ಮಂತ್ರಭಾಗಕ್ಕೆ ಸಾಫಲ್ಯವು ಬಂದಂತಾಗುತ್ತದೆ. "ಸಕಲವನ್ನೂ ಸೃಷ್ಟಿಸಿ ನಮ್ಮ ಅಂತಃಕರಣಕ್ಕೆ ಸಾಕ್ಷಿಯಾಗಿ ನಮ್ಮಗಳೆಲ್ಲರ ಆತ್ಮನೇ ಆಗಿ ಅಂತಃಕರಣದೊಳಗೆ ತೋರಿಕೊಳ್ಳುತ್ತಿರುವ ಪರಮಾತ್ಮನ ಅನುಗ್ರಹದಿಂದ ನಮಗೆ ಸರಿಯಾದ ಸಾತ್ತ್ವಿಕ ವೃತ್ತಿಗಳು ಉಂಟಾಗಲಿ! ನಮ್ಮ ಅವಿದ್ಯೆಯೆಲ್ಲ ನೀಗಿಹೋಗುವಂತೆ ಆತನ ಅನುಗ್ರಹವಾಗಲಿ! ಇದಕ್ಕೆ ಶಾಸ್ತ್ರಪ್ರಸಿದ್ಧನಾಗಿರುವ ಆ ಪರಮಾತ್ಮನ ಚಿತ್ಪ್ರಕಾಶವನ್ನು ನಾವು ಧ್ಯಾನಮಾಡುವೆವು" ಎಂಬುದು ಮಂತ್ರದ ಭಾವಾರ್ಥವಾಗುತ್ತದೆ.

ಹಾಗಾದರೆ ಸೂರ್ಯನಿಗೆ ಅರ್ಘ್ಯವನ್ನು ಕೊಡುವದು, ಸೂರ್ಯನ ಕಡೆಗೆ ತಿರುಗಿ ಸೂರ್ಯವಾಚಕವಾದ ಶಬ್ದಗಳುಳ್ಳ ಮಂತ್ರಗಳನ್ನು ಜಪಿಸುವದು- ಇದಕ್ಕೆಲ್ಲ ಏನು ಉದ್ದೇಶವೆಂದು ಯಾರಾದರೂ ಕೇಳಬಹುದು. ಭೌತಿಕಪ್ರಪಂಚದಲ್ಲಿ ಸೂರ್ಯ ಮಂಡಲವು ನಮಗೆ ತಿಳಿದಿರುವ ಅತ್ಯಂತ ಉತ್ಕೃಷ್ಟವಾದ ಪರಮಾತ್ಮವಿಭೂತಿಯಾಗಿ ರುವದು; ಆದಿತ್ಯನೊಳಗೆ ಪರಮಾತ್ಮನೇ ಇರುವನೆಂದು ಶ್ರುತಿಸ್ಮೃತಿಗಳು ಸಾರುತ್ತಿರುವವು. ಆ ಪರಮಾತ್ಮನೂ ನಮ್ಮಗಳ ಅಂತಃಕರಣಸಾಕ್ಷಿಯೂ ಒಬ್ಬನೇ **ಸ ಯಶ್ಚಾಯಂ ಪುರುಷೇ । ಯಶ್ಚಾಸಾವಾದಿತ್ಯೇ । ಸ ಏಕಃ ॥** ಎಂಬ ಉತ್ತಮಸಿದ್ಧಾಂತವನ್ನು ತಿಳಿಸುವದೇ ಇದರ ಉದ್ದೇಶವು. ಆದ್ದರಿಂದಲೇ ಸಂಧ್ಯಾವಂದನೆಗೆ ಅಧಿಕಾರವಿಲ್ಲದ ಹಿಂದುಗಳು ಕೂಡ ಬೆಳಗ್ಗೆ ಎದ್ದು ಶುಚಿಯಾಗಿ ತಿಲಕವನ್ನಿಟ್ಟುಕೊಂಡು "ದೇವರು ಮೂಡಿದನು" ಎಂದು ಸೂರ್ಯನಿಗೆ ನಮಸ್ಕರಿಸುವ ಅಥವಾ ಕೈಮುಗಿಯುವ, ಸಂಪ್ರದಾಯವು ಬಂದಿರುತ್ತದೆ.

*****

# 10. ಧ್ಯಾನ

ಬೆಳಗಿನ ಹೊತ್ತುಮುಂಚಿತವಾಗಿ ಏಳುವದರಿಂದಲೇ ಶರೀರಕ್ಕೆ ಲವಲವಿಕೆ ಯುಂಟಾಗುತ್ತದೆ; ಸ್ನಾನದಿಂದ ಮೈ ಚೊಕ್ಕಟವಾಗುತ್ತದೆ. ಇವೆರಡೂ ಸ್ವಲ್ಪ ಮಟ್ಟಿಗೆ ಚಿತ್ತವನ್ನು ಹರ್ಷದಿಂದ ಕೂಡಿರುವಂತೆ ಮಾಡುವದಕ್ಕೆ ಸಾಧನಗಳಾಗಿರುತ್ತವೆ. ಆದರೆ ಮನುಷ್ಯನಿಗೆ ಬೇಕಾಗಿರುವ ಆನಂದಸಾಧನಗಳಲ್ಲಿ ಧ್ಯಾನವೆಂಬುದು ಇವರೆಡಕ್ಕಿಂತಲೂ ಹೆಚ್ಚಿನದಾಗಿರುತ್ತದೆ.

ಧ್ಯಾನವೆಂದರೆ ಚಿಂತಿಸುವದು. ವ್ಯವಹಾರದಲ್ಲಿ ಮನುಷ್ಯನು ಏನನ್ನಾದರೂ ಚಿಂತಿಸುತ್ತಲೇ ಇರುವನಾದರೂ ಎಲ್ಲಾ ಚಿಂತೆಗಳಿಂದಲೂ ಅವನ ಚಿತ್ತಕ್ಕೆ ನೈರ್ಮಲ್ಯ ವಾಗಲಿ ಶಾಂತಿಯಾಗಲಿ ಉಂಟಾಗುವದಿಲ್ಲ.ಯಾವ ಪರಮಾರ್ಥಧ್ಯಾನದಿಂದ ನಮ್ಮಲ್ಲಿ ಆನಂದದ ಬುಗ್ಗೆಯು ಉಕ್ಕೇರುವದೋ, ಯಾವದರ ಫಲವಾಗಿ ನಮಗೆ ವ್ಯವಹಾರ ದಲ್ಲೆಲ್ಲ ಚಿತ್ತದ ಉಲ್ಲಾಸವು ಹಿಂಬಾಲಿಸುವದೋ ಆ ಚಿಂತನವನ್ನೇ ಇಲ್ಲಿ ಧ್ಯಾನವೆಂದು ಕರೆದಿರುತ್ತದೆ.

ವಿವೇಕಿಯಾದವನು ಪ್ರಶಾಂತವಾಗಿರುವ ಬೆಳಗಿನ ಜಾವದಲ್ಲಿಯೂ ಸಂಜೆಯ ಹೊತ್ತಿನಲ್ಲಿಯೂ ತಪ್ಪದೆ ಧ್ಯಾನಮಾಡಬೇಕು. ಅವಕಾಶವು ಸಿಕ್ಕರೆ ಮಧ್ಯಾಹ್ನವೂ ಮಾಡಬೇಕು. ಪ್ರಾತಃಕಾಲ, ಸಂಗವಕಾಲ, ಮಧ್ಯಾಹ್ನಕಾಲ, ಅಪರಾಹ್ಣಕಾಲ, ಸಾಯಂಕಾಲ- ಎಂಬ ಐದು ಕಾಲಗಳಲ್ಲಿಯೂ ಧ್ಯಾನಮಾಡುವವರು ಇನ್ನೂ ಹೆಚ್ಚಿನ ಅಂತಸ್ತಿನವರು. ಮಹಾತ್ಮರಾದವರು ಪರಮಾತ್ಮನ ಚಿಂತನವನ್ನು ಒಂದು ಮುಹೂರ್ತವೂ ಬಿಡದೆ ನಡೆಸಿಕೊಂಡು ಬರುತ್ತಾರೆ; ಏಕೆಂದರೆ ಪರಮೇಶ್ವರನ ಚಿಂತೆಯಿಲ್ಲದೆ ಕಳೆದ ಒಂದು ಕ್ಷಣವು ಕೂಡ ಮಹಾ ಅನರ್ಥಕ್ಕೆ ದ್ವಾರವಾಗಿರುತ್ತದೆಯೆಂದು ಅವರ ಭಾವನೆ. ಆದ್ದರಿಂದಲೇ ಭಗವದ್ಧ್ಯಾನವನ್ನು ತಪ್ಪದೆ ಮಾಡುತ್ತಿರಬೇಕೆಂದು ಎಲ್ಲಾ ಧರ್ಮಗಳಲ್ಲಿಯೂ ಉಪದೇಶಿಸಿರುತ್ತದೆ.

ಪರಮೇಶ್ವರನನ್ನು ಯಾವ ರೂಪದಿಂದ ಧ್ಯಾನಿಸಬೇಕು? ಹೇಗೆ ಧ್ಯಾನಿಸಬೇಕು? – ಎಂಬ ಪ್ರಶ್ನೆಗಳಿಗೆ ಎಲ್ಲರಿಗೂ ಅನ್ವಯಿಸುವಂಥ ಒಂದೇ ಉತ್ತರವನ್ನು ಕೊಡುವದಕ್ಕೆ ಆಗುವಹಾಗಿಲ್ಲ. ಅವರವರು ತಮ್ಮ ತಮ್ಮ ಚಿತ್ತದ ಅಂತಸ್ತಿಗೆ ತಕ್ಕಂತೆ ಧ್ಯಾನಿಸಬೇಕು. ನಿಷ್ಕಲ್ಮಷರಾದ ಮಹಾತ್ಮರು ನಿರ್ಗುಣನೂ ನಿಷ್ಕ್ರಿಯನೂ ನಿರಾಕಾರನೂ ಕೂಟಸ್ಥ ಸಚ್ಚಿದಾನಂದಸ್ವರೂಪನೂ ಆಗಿರುವ ಪರಮಾತ್ಮನ ಸ್ವರೂಪವನ್ನು ಅನನ್ಯಭಕ್ತಿಯಿಂದ ಧ್ಯಾನಮಾಡುತ್ತಾರೆ. ಅದಕ್ಕೆ ಶಕ್ತಿಯಿಲ್ಲದವರು ಅನೇಕ ಕಲ್ಯಾಣಗುಣಗಳಿಂದ ಕೂಡಿದ ಅದೇ ಪರಮೇಶ್ವರನ ಸಾಕಾರ ಸ್ವರೂಪವನ್ನು ಧ್ಯಾನಿಸುತ್ತಾರೆ. ಪರಮೇಶ್ವರನು ಸರ್ವಜ್ಞನೂ ಸರ್ವಶಕ್ತನೂ ಪರಮದಯಾಘನನೂ ಆಗಿರುವದರಿಂದ ತನ್ನ ಉಪಾಸಕರ ಅನುಗ್ರಹಾರ್ಥವಾಗಿ ಅನೇಕ ವೇಳೆ ಬೇರೆ ಬೇರೆ ಆಕಾರಗಳನ್ನು ಸ್ವೀಕರಿಸಿ ಅವರವರ ಇಷ್ಟಾರ್ಥಗಳನ್ನು ಈಡೇರಿಸಿಕೊಟ್ಟಿರುತ್ತಾನೆ. ಇಂಥ ಆಕಾರಗಳಲ್ಲಿ ಕೆಲವನ್ನು ಶ್ರುತಿಸ್ಮೃತಿಪುರಾಣಗಳಲ್ಲಿ ವರ್ಣಿಸಿ ಆಯಾ ಅವತಾರದಲ್ಲಿ ಪರಮೇಶ್ವರನು ಪ್ರಕಟಗೊಳಿಸಿದ ಗುಣಗಳನ್ನೂ ಲೀಲೆಗಳನ್ನೂ ಹೃದಯಂಗಮವಾಗಿ ವಿವರಿಸಿರುತ್ತದೆ. ಎಲ್ಲಾ ಆಕಾರಗಳೂ ಆತನದೇ ಆಗಿರುವದರಿಂದ ಸಾಧಕನಾದವನು ತನಗೆ ಇಷ್ಟವಾದ ಒಂದು ಆಕಾರದ ಸುಂದರಮೂರ್ತಿಯನ್ನು ಆರಿಸಿಕೊಂಡು ಒಂದೇ ನಿಷ್ಠೆಯಿಂದ ಆ ಮೂರ್ತಿಯನ್ನೇ ಧ್ಯಾನಮಾಡಬೇಕು.

ಧ್ಯಾನಮಾಡುವದಕ್ಕೆ ಅನುಕೂಲಿಸುವಂತೆ ಬಾಹ್ಯಮೂರ್ತಿಯಲ್ಲಿ ತನ್ನ

ಇಷ್ಟದೇವತೆಯನ್ನು ಅರ್ಚನೆ ಮಾಡುತ್ತಿರಬೇಕು. ಬಾಹ್ಯಮೂರ್ತಿಯಾಗಲಿ ಅಂತರ ಮೂರ್ತಿಯಾಗಲಿ ಭಾವದಿಂದ ಅರ್ಚನಧ್ಯಾನಗಳನ್ನು ಮಾಡಿದರೇ ಫಲದಾಯಕ ವಾಗುವದೇ ಹೊರತು ಸುಮ್ಮನೆ ಆಟಕ್ಕೆ ಮಾಡುವ ಅನುಷ್ಠಾನದಿಂದ ಫಲವನ್ನು ಕೊಡಲಾರದೆಂಬುದನ್ನು ಮರೆಯದೆ ಇರಬೇಕು. ಇಡಿಯ ಜಗತ್ತೇ ಪರಮೇಶ್ವರನ ಮೂರ್ತಿಯಾಗಿರುವದಾದರೂ ವಿಷಯವಾಸನೆಯಿಂದ ಕಲುಷವಾಗಿರುವ ನಮ್ಮ ಚಿತ್ತಕ್ಕೆ ಅದು ಆತನಿಗಿಂತ ಬೇರೆಯಾದ ಜಡವಸ್ತುವಾಗಿ ತೋರುವದು. ಭಾವ ವಾಸಿತವಾದ ಶುದ್ಧಚಿತ್ತದಿಂದ ಅರ್ಚನೆಮಾಡಿದರೆ ಪ್ರಪಂಚದ ಯಾವದೊಂದು ಭಾಗವೇ ಆದರೂ ಭಗವತ್ಸ್ವರೂಪವಾಗಿ ಮಾರ್ಪಡುವದು.

ಎಲ್ಲವೂ ಪರಮಾತ್ಮನ ಅಭಿವ್ಯಕ್ತರೂಪವೇ ಆದರೂ ರಾಮಕೃಷ್ಣಶಿವಾದಿ ವಿಶೇಷ ರೂಪಗಳಲ್ಲಿ ನಮ್ಮ ಚಿತ್ತವನ್ನು ಬೇಗನೆ ಸಾತ್ತ್ವಿಕಭೂಮಿಗೆ ಏರಿಸುವ ಶಕ್ತಿಯಿರುವ ದರಿಂದ ಅಂಥ ರೂಪಗಳ ಚಿತ್ರಗಳನ್ನು ಇಟ್ಟುಕೊಂಡು ಭಾವನೆ ಮಾಡುತ್ತಿರಬೇಕು; ಅರ್ಚನೆಗೂ ಧ್ಯಾನಕ್ಕೂ ಒಂದೇ ರೂಪವನ್ನೇ ಇಟ್ಟುಕೊಳ್ಳಬೇಕು. ಪರಮೇಶ್ವರನು ಪರಮಾರ್ಥ ವಾಗಿ ನಮ್ಮ ಆತ್ಮನೇ ಆಗಿದ್ದು ರೂಪಾಂತರಗಳನ್ನು ಪಡೆದುಕೊಂಡಂತೆ ನಮ್ಮ ಅಂತಃಕರಣಕ್ಕೆ ತೋರಿಕೊಳ್ಳುವದರಿಂದ ಹೊರಗಿನ ಅರ್ಚನೆಗಿಂತ ನಮ್ಮ ಹೃದಯದಲ್ಲಿ ಮಾಡುವ ಆರಾಧನೆಗೇ ಬೆಲೆ ಹೆಚ್ಚು. ಈ ಮಾನಸಾರ್ಚನೆಯ ಕ್ರಮವನ್ನೂ ಹೆಚ್ಚಿನ ಧ್ಯಾನದ ಕ್ರಮವನ್ನೂ ಮುಂದಿನ ಲೇಖನದಲ್ಲಿ ಅರಿಕೆಮಾಡಿಕೊಳ್ಳುವೆನು.

*****

## 11. ಮಾನಸ ಪೂಜೆ-1

ಪರಮೇಶ್ವರನ ಧ್ಯಾನಕ್ಕೆ ಅಂಗವಾಗಿ ಅರ್ಚನೆಯನ್ನು ಮಾಡಬೇಕೆಂದು ಹಿಂದಿನ ಲೇಖನದಲ್ಲಿ ಬಿನ್ನವಿಸಿಕೊಂಡಿರುತ್ತೇನೆ. ಬಾಹ್ಯಮೂರ್ತಿಯ ಅರ್ಚನೆ ಗಿಂತಲೂ ಹೃದಯದಲ್ಲಿಮಾಡುವ ಆರಾಧನೆಯೇ ಹೆಚ್ಚಿನದೆಂದು ಅಲ್ಲಿ ತಿಳಿಸಿರುತ್ತೇನೆ. ಈ ಆರಾಧನೆಯನ್ನು ಹೇಗೆ ಮಾಡಬೇಕೆಂಬುದೇ ಈಗಿನ ವಿಷಯವು.

ಮಾನಸಪೂಜೆಯನ್ನು ಮಾಡುವ ಬಗೆಯನ್ನು ವಿಷ್ಣುಪುರಾಣ, ಭಾಗವತ, ಸೂತಸಂಹಿತೆ- ಮುಂತಾದವುಗಳಲ್ಲಿ ವಿಸ್ತಾರವಾಗಿ ತಿಳಿಸಿರುತ್ತದೆ. ತನ್ನ ಶರೀರದೊಳಗಿನ ಹೃದಯಕಮಲವು ಮೇಲಕ್ಕೆದ್ದು ಅರಳಿರುವಂತೆ ಭಾವಿಸಿಕೊಂಡು ಅದರ ನಡುವೆ ತನ್ನ

ಇಷ್ಟಮೂರ್ತಿಯನ್ನು ಭಾವಿಸಿಕೊಳ್ಳಬೇಕು. ಆಯಾ ಮೂರ್ತಿಗೆ ಪುರಾಣಗಳಲ್ಲಿ ವರ್ಣಿತವಾಗಿರುವಂತೆ ಅವಯವಲಕ್ಷಣಗಳನ್ನೂ ಭೂಷಣಗಳನ್ನೂ ಕಲ್ಪಿಸಿಕೊಳ್ಳಬೇಕು. ಬಾಹ್ಯಾರ್ಚನೆಗೆ ಇಟ್ಟುಕೊಂಡ ಶ್ರೀಮೂರ್ತಿಯೂ ಚಿತ್ರವೂ ತನ್ನ ಮನಸ್ಸಿನ ಮೇಲೆ ಪರಿಣಾಮಕಾರಕವಾಗಿದ್ದರೆ ಬೇಗಬೇಗನೆ ಮಾನಸಮೂರ್ತಿಯ ಕಲ್ಪನೆಯೂ ವಶಕ್ಕೆ ಬರುತ್ತದೆ.

ಪರಮೇಶ್ವರ ಮೂರ್ತಿಯನ್ನು ಮನಸ್ಸಿಗೆ ತಂದುಕೊಳ್ಳುವಾಗ ಪಾದಾದಿಯಾಗಿ ತಲೆಯವರೆಗೂ ಕಲ್ಪಿಸಿಕೊಳ್ಳುತ್ತಾ ಹೋಗಬೇಕೆಂದೂ ಒಂದೊಂದು ಅವಯವವು ಸ್ಥಿರವಾಗಿ ಚಿತ್ತದಲ್ಲಿ ನಿಂತಮೇಲೆಯೇ ಮೇಲುಮೇಲಿನ ಅವಯವವನ್ನು ಚಿಂತಿಸುತ್ತಾ ಹೋಗಬೇಕೆಂದೂ ಪುರಾಣಗಳಲ್ಲಿ ವರ್ಣಿಸಿರುತ್ತದೆ. ಹೀಗೆ ಮೂರ್ತಿಯು ಬೆಳೆಯುತ್ತಾ ಹೋದಂತೆಲ್ಲ, ಬೆಳೆಯುತ್ತಿರುವ ಕಟ್ಟಡವು ಅಥವಾ ಪೂರ್ಣವಾಗುತ್ತಿರುವ ಚಿತ್ರವು ಮನಸ್ಸಿಗೆ ಉಲ್ಲಾಸವನ್ನು ಕೊಡುವಂತೆ, ಮೂರ್ತಿಯು ಮನಸ್ಸನ್ನು ಸತ್ತ್ವಮಯವಾಗಿ ಮಾಡುತ್ತಾ ಹೋಗುತ್ತದೆ.

ಹೊರಗಿನ ವಿಗ್ರಹಾದಿಗಳಲ್ಲಿ ಮಾಡುವ ಪೂಜೆಗೂ ಹೃದಯದಲ್ಲಿ ಮಾಡುವ ಮಾನಸಾರ್ಚನೆಗೂ ಒಂದು ಮುಖ್ಯವಾದ ತಾರತಮ್ಯವೇನೆಂದರೆ : ಹೊರಗಿನ ವಿಗ್ರಹಾದಿಗಳು ಶಿಲ್ಪ್ಯಾದಿಗಳಿಂದ ಏರ್ಪಟ್ಟವೆಂಬ ಭಾವನೆಯು ನಮಗೆ ಇದ್ದರೂ ಮಂತ್ರಾದಿಗಳಿಂದ ಸಂಸ್ಕೃತವಾದ ಮೇಲೆ ಇದು ಈಶ್ವರನ ಪ್ರತೀಕವೆಂಬ ಭಾವನೆ ಯೊಂದು ಮೊಳಕೆಯಾಗಿರುತ್ತದೆ. ಒಳಗಿನ ಮೂರ್ತಿಯು ಹಾಗಲ್ಲ, ಪರಮೇಶ್ವರನೇ ನಮ್ಮ ಮೇಲಿನ ಅನುಗ್ರಹದಿಂದ ನಮ್ಮ ಕಲ್ಪನೆಗೆ ತಕ್ಕಂತೆ ರೂಪವನ್ನು ಧರಿಸಿಕೊಂಡಿರು ತ್ತಾನೆಂಬ ಭಾವನೆಯಿರುತ್ತದೆ. ನಮ್ಮ ಮನೆಗೆ ಯಾರಾದರೂ ಪೂಜ್ಯರಾದ ಮಹನೀಯರು ಬಂದರೆ ಅವರಲ್ಲಿ ಹೇಗೆ ಗೌರವಬುದ್ಧಿಯಿಂದ ನಡೆದುಕೊಳ್ಳುವೆವೋ ಮತ್ತು ಅವರಿಗೆ ಬೇಕಾದ ಉಪಚಾರಗಳನ್ನು ಆದರದಿಂದ ಸಲ್ಲಿಸುವೆವೋ, ಅದರಂತೆಯೇ ಇಲ್ಲಿಯೂ ನಡೆಯಬೇಕು. ನೀರು ಗಟ್ಟಿಯಾಗಿ ಮಂಜಿನಗಡ್ಡೆಯಾಗು ವಂತೆ ಪರಮೇಶ್ವರನು ತನ್ನ ಅವ್ಯಕ್ತಚಿತ್ಸ್ವರೂಪವನ್ನೇ ನಮಗಾಗಿ ಈ ದಿವ್ಯಸುಂದರ ರೂಪವಾಗಿ ಮಾರ್ಪಡಿಸಿಕೊಂಡು ನಮ್ಮನ್ನು ಅನುಗ್ರಹಿಸುತ್ತಿರುವನೆಂದು ಭಾವಿಸಿ ಕೊಂಡು ಆತನಲ್ಲಿ ಭಯಭಕ್ತಿಗಳಿಂದ ನಡೆದುಕೊಳ್ಳಬೇಕು. ಆತನನ್ನು ಉತ್ತಮವಾದ

ಆಸನದಲ್ಲಿ ಕುಳ್ಳಿರಿಸುವದು, ಪರಿಮಳಯುಕ್ತವಾದ ಎಣ್ಣೆಯನ್ನು ಒತ್ತಿ ಅಭ್ಯಂಗವನ್ನು ಮಾಡಿಸುವದು, ದಿವ್ಯಾಂಬರವನ್ನು ತೊಡಿಸುವದು, ಉತ್ತಮವಾದ ಪಾತ್ರೆಯಲ್ಲಿ ಮೃಷ್ಟಾನ್ನವನ್ನೂ ಭಕ್ಷ್ಯಭೋಜ್ಯಗಳನ್ನೂ ಉಣಬಡಿಸುವದು, ಕೈಯನ್ನು ಸುಗಂಧಯುಕ್ತ ವಾದ ನೀರಿನಿಂದ ತೊಳೆದು, ತಾಂಬೂಲಪುಷ್ಪಾದಿಗಳನ್ನು ಸಮರ್ಪಿಸುವದು, ಅನರ್ಘ ವಾದ ಮಂಚದ ಮೇಲೆ ಮೃದುತರವಾದ ಶಯ್ಯೆಯಲ್ಲಿ ಮಲಗಿಸಿ ಕಾಲುಗಳನ್ನು ಒತ್ತುವದು, ಬೀಸಣಿಗೆಯಿಂದ ಸೆಕೆಬೀಸುವದು- ಮುಂತಾದ ಉಪಚಾರಗಳನ್ನೆಲ್ಲ ಪ್ರೇಮದಿಂದ ಮಾಡಬೇಕು. ಕೊನೆಯಲ್ಲಿ ತನ್ನ ಹೃದಯದಲ್ಲಿರುವ ಅತ್ಯಂತ ರಹಸ್ಯ ವಾದ ಅಭಿಪ್ರಾಯಗಳನ್ನೆಲ್ಲ ಆತನ ಬಳಿಯಲ್ಲಿ ಬಿಚ್ಚಿಹೇಳಿಕೊಂಡು ಆತನು ಅನುಗ್ರಹಿಸಿ "ಇನ್ನು ಮುಂದೆ ನಿನ್ನ ಯೋಗಕ್ಷೇಮವನ್ನು ನಾನು ನೋಡಿಕೊಳ್ಳುವೆನು, ಅಂಜದಿರು" ಎಂದು ವಾಗ್ದಾನಮಾಡಿದಂತೆ ಭಾವಿಸಬೇಕು. ಬಳಿಕ ತನ್ನ ಹೃದಯ ದಲ್ಲಿಯೇ ಆತನು ತನ್ನ ಅವ್ಯಕ್ತರೂಪದಿಂದ ನೆಲಸಿದಂತೆ ಭಾವಿಸಿ ಈ ಆರಾಧನೆಯನ್ನು ಪರಿಸಮಾಪ್ತಿಗೊಳಿಸಬೇಕು.

ಸಗುಣಸಾಕಾರದ ಅರ್ಚನೆಯ ಸವಿಯನ್ನು ಕಾಣದವರಿಗೆ ಈ ಪೂಜೆಯು ಮೊದಮೊದಲು ಒಗ್ಗುವದಿಲ್ಲ. "ಸರ್ವಗತನಾದ ಪರಮೇಶ್ವರನಿಗೆ ಒಂದು ಆಕಾರದಲ್ಲಿ ಅಭಿಮಾನವು ಹೇಗೆ ಬಂದೀತು?" ಎಂದು ಅವರಲ್ಲಿ ಕೆಲವರು ಕೇಳುತ್ತಾರೆ. "ಆತನೇ ಸೃಷ್ಟಿಸಿರುವ ಗಂಧಪುಷ್ಪಾದಿಗಳನ್ನು ಆತನಿಗೆ ಅರ್ಪಿಸುವದು ಎಂಥ ಪೂಜೆ?" ಎಂದು ಮತ್ತೆ ಕೆಲವರು ಆಕ್ಷೇಪಿಸುತ್ತಾರೆ."ಮನಸ್ಸಿನಲ್ಲಿ ಕಲ್ಪಿಸಿದ ಮೂರ್ತಿಗೆ ಮನಸ್ಸಿನಲ್ಲಿ ಕಲ್ಪಿಸಿದ ಪದಾರ್ಥಗಳನ್ನು ಅರ್ಪಿಸಿದರೆ ಈಶ್ವರನಿಗೇನಾಯಿತು?" ಎಂದು ಇನ್ನೂ ಕೆಲವರು ಹಾಸ್ಯಮಾಡುವರು. ಈ ಪ್ರಶ್ನೆಗಳಿಗೆ ಮುಂದಿನ ಲೇಖನದಲ್ಲಿ ಉತ್ತರವನ್ನು ಹೇಳುವೆನು.

*****

# 12. ಮಾನಸ ಪೂಜೆ-2

ನಿತ್ಯನಿರಾಕಾರನಾದ ಪರಮೇಶ್ವರನಿಗೆ ನಾವು ಪೂಜೆಗಾಗಿ ಕಲ್ಪಿಸಿಕೊಳ್ಳುವ ಆಕಾರದಲ್ಲಿ ಅಭಿಮಾನವು ಬಂದೀತೆ?-ಎಂಬ ಶಂಕೆಯು ಕೆಲವರಿಗೆ ಬರುವದುಂಟು. ನಿಜವಾಗಿ ಈಶ್ವರನಿಗೆ ಮನುಷ್ಯರಾದ ನಮಗಿರುವಂಥ ಅಭಿಮಾನವು ಏತರಲ್ಲಿಯೂ

ಉಂಟಾಗುವಹಾಗಿಲ್ಲ, ಸಂಕಲ್ಪಮಾತ್ರದಿಂದ ಎಂಥ ದಿವ್ಯ ಸುಂದರವಿಗ್ರಹವನ್ನಾದರೂ ಕಲ್ಪಿಸಿಕೊಳ್ಳಬಲ್ಲ ಆ ಮಹಾಮಹಿಮನಿಗೆ ಇಂಥದ್ದೊಂದು ಆಕಾರವೇ ತನ್ನದು ಎಂಬ ಅಭಿಮಾನವು ಹೇಗೆತಾನೆ ಬಂದೀತು?

ಆದರೆ ಒಂದು ವಿಷಯವು ಮಾತ್ರ ನಿಶ್ಚಯ. ಆತನ ಸ್ವರೂಪವನ್ನು ಬಿಟ್ಟು ಯಾವ ಆಕಾರವೂ ಸ್ವತಂತ್ರವಾಗಿರಲಾರದು; ಆತನೇ ಸ್ವೇಚ್ಛೆಯಿಂದ ನಿರ್ಮಿಸಿಕೊಳ್ಳಲಿ, ಆತನು ಅನುಗ್ರಹಿಸಿರುವ ಮನಸ್ಸಿನ ಬಲದಿಂದ ನಾವೇ ಕಲ್ಪಿಸಿಕೊಳ್ಳಲಿ, ಯಾವ ಆಕಾರವಾದರೂ ಆತನಿಂದ ಹೊರಗಾಗಲಾರದು; ಆಕಾರಕ್ಕೆಲ್ಲಾ ತಿರುಳು ಕೊಡುವವನು ಆತನೇ. ಈ ದೃಷ್ಟಿಯಿಂದ ಸಕಲ ಚರಾಚರವಸ್ತುಗಳ ಆಕಾರವೂ ಆತನದೇ. ಆದ್ದರಿಂದ ದಯಾಮಯನಾದ ಮಹೇಶ್ವರನ ಭಕ್ತಿಯ ತಂಗಾಳಿಯು ಬೀಸಿತೆಂದರೆ ಆತನು ಅದಕ್ಕೆ ಅಧೀನನಾದಂತಾಗಿ ಭಕ್ತರು ಕಲ್ಪಿಸಿಕೊಳ್ಳುವ ಆಕಾರದಲ್ಲಿಯೇ ಸನ್ನಿಹಿತ ನಾಗುತ್ತಾನೆ. ಆದ್ದರಿಂದಲೇ ಮಹಾತ್ಮರಿಗೆ ಇಂಥಿಂಥ ಆಕಾರದಿಂದ ಆತನು ಪ್ರಸನ್ನನಾಗಿ ಸಂಭಾಷಣಾದಿ ಸೌಭಾಗ್ಯಗಳನ್ನು ಕೊಟ್ಟನೆಂದು ಶ್ರುತಿಸ್ಮೃತಿ ಪುರಾಣಗಳು ಹೇಳುತ್ತವೆ.

ಮೇಲೆ ಹೇಳಿದ ರೀತಿಯಿಂದ ಸಕಲವಸ್ತುಗಳ ಮೂಲಕಾರಣನೂ ಭಗವಂತನೇ. ಆದರೆ ಆತನ ಪೂಜೆಗೆಂದು ನಾವು ಉಪಯೋಗಿಸುವ ಗಂಧಪುಷ್ಪಾದಿಗಳೂ ಆತನ ಸೃಷ್ಟಿಯೇಅಲ್ಲವೇ? ಹಾಗಾದರೆ ಆತನು ಸೃಷ್ಟಿಸಿರುವ ವಸ್ತುಗಳನ್ನೇ ಆತನಿಗೆ ಅರ್ಪಿಸುವದು ಎಂಥ ಪೂಜೆ? ಎಂದು ಕೆಲವರು ಶಂಕಿಸಬಹುದು. ಆದರೆ ಭಗವಂತನು ಸೃಷ್ಟಿಸದೆ ಇರುವ ಯಾವ ಪದಾರ್ಥವನ್ನು ತಾನೆ ನಾವು ಆತನಿಗೆ ಅರ್ಪಿಸಬಲ್ಲೆವು? ಈ ಪ್ರಪಂಚದಲ್ಲಿ ನಮ್ಮದಾಗಿರುವದು ಯಾವದು ತಾನೆ ಇದೆ? ಯಾವದೊಂದೂ ಇಲ್ಲ, ಆದರೂ 'ನಾನು, ನನ್ನದು'- ಎಂಬ ಅಭಿಮಾನವು ನಮ್ಮನ್ನು ಬಾಧಿಸುತ್ತಿರು ವದಷ್ಟೆ; ಇದನ್ನು ಕಳೆಯುವದಕ್ಕಾಗಿಯೇ, ಎಲ್ಲವೂ ಆ ಪರಮೇಶ್ವರನದೇ ಎಂದು ಮನಗಾಣುವದಕ್ಕಾಗಿಯೇ, ಅರ್ಚನಾಪದ್ಧತಿಯನ್ನು ದೊಡ್ಡವರು ಏರ್ಪಡಿಸಿರುತ್ತಾರೆ.

ಈ ಭೂಮಿಯಲ್ಲಿ ಎಂಥ ಚಕ್ರಾಧಿಪತಿಯೇ ಇದ್ದರೂ ಆತನು ಕೂಡ ಆ ಪರಮೇಶ್ವರನ ಅನುಗ್ರಹದಿಂದಲೇ ಐಶ್ವರ್ಯವನ್ನನುಭವಿಸುತ್ತಿರುತ್ತಾನೆ. ಹೀಗಿದ್ದರೂ ಅವನು ಇಹಸುಖಗಳ ಭೋಗದಿಂದ ಮುಕ್ತನಾಗಿ ಆ ಭಗವಂತನನ್ನು ಮರೆತು ದುಃಖಕ್ಕೆ ಈಡಾಗುವ ಸಂಭವವೇ ಹೆಚ್ಚಾಗಿರುತ್ತದೆ. ಆದ್ದರಿಂದ ಅವನು ಕೂಡ ತನ್ನ ವಶದಲ್ಲಿರುವ ಅತ್ಯಂತ ಅನರ್ಘವಾದ ಪದಾರ್ಥಗಳನ್ನೆಲ್ಲ ಭಗವಂತನಿಗೆ ಅರ್ಪಿಸಿ

ಆತನ ಪ್ರಸಾದವಾಗಿಯೇ ಅಂದಂದಿನ ಸುಖವನ್ನು ಅನುಭವಿಸುತ್ತಾಬರಬೇಕು. ಹೀಗಿರುವಲ್ಲಿ ಕ್ಷುದ್ರ ಭೋಗಗಳನ್ನು ಅನುಭವಿಸುತ್ತಿರುವ ಸಾಮಾನ್ಯರ ವಿಷಯದಲ್ಲಿ ಹೇಳಬೇಕಾದದ್ದೇನು? ಮನುಷ್ಯಮಾತ್ರನಾದವನು ತನ್ನ ಸರ್ವಸ್ವವೂ ನಿಜವಾಗಿ ಆ ಪರಮೇಶ್ವರನೇ ಎಂಬುದನ್ನು ಅನವರತವೂ ಚಿಂತಿಸುವದೇ ಶ್ರೇಯಸ್ಕರವು; ವ್ಯವಹಾರದಲ್ಲಿ ಇದು ಯಾವಾಗಲೂ ದಕ್ಕಲಾರದಾದ್ದರಿಂದ ಕ್ಲೃಪ್ತಕಾಲದಲ್ಲಾದರೂ ಇಂಥ ಚಿಂತನೆಯನ್ನು ಮಾಡುವದು ಅತ್ಯವಶ್ಯವಾಗಿರುತ್ತದೆ. ಹೀಗೆ ನೋಡಿದರೆ ನಾನು ನನ್ನದೆಂಬ ಬುದ್ಧಿಯನ್ನು ಮಟ್ಟುಮಾಡಿಕೊಳ್ಳುವದಕ್ಕೆ ಈ ಅರ್ಚನೆಯೇ ಮೊದಲನೆಯ ಮೆಟ್ಟಲಾಗಿರುವದೆಂಬುದು ಸ್ಪಷ್ಟವಾಗುತ್ತದೆ.

ಸಾಧಕನಾದವನು ಈ ಒಣಚರ್ಚೆಯಲ್ಲಿ ಸಿಕ್ಕಿಕೊಳ್ಳುವದಕ್ಕಿಂತ ತನಗೆ ಇಷ್ಟವಾದ ಯಾವದಾದರೊಂದು ಆಕಾರವನ್ನು ಆರಿಸಿಕೊಂಡು ಅದಕ್ಕೆ ಸಂಬಂಧವಾದ ಭಗವಂತನ ದಿವ್ಯಕರ್ಮಗಳನ್ನೂ ಲೀಲೆಗಳನ್ನೂ ಮನಸ್ಸಿಗೆ ತಂದುಕೊಳ್ಳುತ್ತಾ ಅದನ್ನು ಹೊರಗೂ ತನ್ನ ಹೃದಯದಲ್ಲಿಯೂ ಪೂಜಿಸುತ್ತಾ ಬರಬೇಕು. ಪೂಜೆಗೆ ಭಾವವೇ ಮುಖ್ಯವು; ಆದ್ದರಿಂದ ಇಷ್ಟದೇವತೆಗೂ ತನಗೂ ಸಂಬಂಧವನ್ನುಂಟುಮಾಡುವ ಭಾವವನ್ನು ಯಾವಾಗಲೂ ಇಟ್ಟುಕೊಳ್ಳಬೇಕು. ಸರ್ವವ್ಯಾಪಿಯಾದ ಪರಮೇಶ್ವರನು ತನ್ನ ಅತ್ಯಂತ ಮಹಿಮೆಯಿಂದಲೂ ಅಪಾರ ಕರುಣೆಯಿಂದಲೂ ಈ ರೂಪಿನಿಂದ ನಿಜವಾಗಿಯೇ ಸನ್ನಿಹಿತನಾಗಿರುವನೆಂಬ ಮನೋಭಾವವನ್ನು ದಿನದಿನಕ್ಕೆ ಹೆಚ್ಚಿಸಿಕೊಳ್ಳ ಬೇಕು. ತನ್ನ ರಹಸ್ಯವಾದ ಕಷ್ಟಸೌಖ್ಯವನ್ನು ಕುರಿತು ಆತನ ಸನ್ನಿಧಿಯಲ್ಲಿ ಹೇಳಿ ಕೊಳ್ಳುವದನ್ನು ಅಭ್ಯಾಸಮಾಡಬೇಕು. ಆಗ ಅರ್ಚನೆಯ ಸವಿಯು ಗೊತ್ತಾಗುವದಕ್ಕೆ ಮೊದಲಾಗುತ್ತದೆ. ಆಗ ಧ್ಯಾನದ ಮೆಟ್ಟಿಲಿಗೇರುವ ಯೋಗ್ಯತೆಯು ಬರುತ್ತದೆ.

ಸಾಧಕಗಣ, ಪರಮೇಶ್ವರನ ಆಕಾರದಲ್ಲಿ ಭೌತಿಕತ್ವಬುದ್ಧಿ, ಕಲ್ಪಿತತ್ತ್ವಬುದ್ಧಿ-ಮುಂತಾದವುಗಳು ಉಂಟಾಗುವದಕ್ಕೆ ದೇಹಾತ್ಮವಾದವೂ ನಾಸ್ತಿಕ್ಯವೂ ಕಾರಣ ವಾಗಿರುತ್ತವೆ. ಶ್ರದ್ಧೆಯಿಂದ ಬಾಹ್ಯಾರ್ಚನೆಯನ್ನು ಮಾಡಿರಿ, ಆಮೇಲೆ ಅಂತರ ಪೂಜೆಗೂ ಅಧಿಕಾರವನ್ನು ಸಂಪಾದಿಸಿಕೊಳ್ಳಿರಿ, ಚಿತ್ತಶುದ್ಧಿಯನ್ನು ಪಡೆದು ತಚ್ಚಿತ್ತರಾಗಿ ಆ ಪರಮೇಶ್ವರನ ಪಾದಾರವಿಂದಗಳ ಮೇಲೆ ಬಿದ್ದು ಹೊರಳಾಡುವ ಆನಂದದ ಪ್ರೇಮವಿಕಾರದ ಸುಖವನ್ನು ಅನುಭವಿಸಿರಿ!

*****

# 13. ಸಗುಣ ಧ್ಯಾನ -1

ಅರ್ಚನೆಯ ಕಾಲದಲ್ಲಿ ಪರಮೇಶ್ವರನ ಗುಣಗಳ ಧ್ಯಾನವು ಅವಶ್ಯವಾಗಿರಬೇಕು. ಆಗಲೇ ಅರ್ಚನೆಯ ಸವಿಯು ಸಾಧಕನಿಗೆ ಹತ್ತುವದು, ಆಗಲೇ ಮನಸ್ಸು ವಿಷಯದ ಕೆಳಮಟ್ಟವನ್ನು ಬಿಟ್ಟು ಆನಂದದ ಮೇಲುಮಟ್ಟಕ್ಕೆ ಏರಲು ಅನುವಾಗುವದು. ಅರ್ಚನೆಯು ವೈದಿಕವಾಗಿರಲಿ, ಆಗಮಿಕವಾಗಿರಲಿ, ಭಾವಭರಿತವಾಗಬೇಕಾದರೆ ಪರಮೇಶ್ವರನ ಮಹಿಮೆಯು ಮನದಲ್ಲಿ ಮೂಡಿರಬೇಕು. ಆತನ ಸುಗುಣಗಳು ಅಡಿಗಡಿಗೆ ಮನಸ್ಸಿನಲ್ಲಿ ಬಿಂಬಿಸುತ್ತಿರಬೇಕು. ಅಂಥ ಭಾವದಿಂದ ಪೂಜೆ ಮಾಡುವವನು ಯಾವ ಕುಲದವನು, ಯಾವ ಜಾತಿಯವನು, ಸ್ನಾನಮಾಡಿರುವನೋ ಇಲ್ಲವೋ - ಎಂಬುದೇ ಮುಂತಾದ ವಿಂಗಡವೇನೂ ಬೇಕಿರುವದಿಲ್ಲ. ಅವನು ಪರಮೇಶ್ವರನಲ್ಲಿ ತನ್ನ ಮನಸ್ಸನ್ನು ಏಕರಮಾಡಿರುವನೆಂಬುದಿಷ್ಟೇ ಸಾಕು, ಅವನನ್ನೂ ಸುತ್ತಮುತ್ತಲಿನವರನ್ನೂ ಪವಿತ್ರಗೊಳಿಸುವದಕ್ಕೆ.

ಭಾವದಿಂದ ಪೂಜಿಸುವಾತನ ಸ್ಥಿತಿಯು ಹೇಗಿರುವದೆಂಬುದನ್ನು **ಹರಿಹರದೇವನು** ವರ್ಣಿಸಿರುವ ಬಗೆಯನ್ನು ನೋಡಿ :

**"ಅಡಿಗಡಿಗೆ ನೋಡಿ ಮಾತಾಡಿ ಮೈವೆರ್ಚುತುಂ ।**
**ಹಾಡಿ ತಣಿವತೆ ಮತ್ತೆ ಮತ್ತೆ ಮಿಗೆ ಕೂರ್ಬುತುಂ ।**
**ಪುಳಕಿಸುತೆ ಪುಟವೇರಿ ತವಕಿಸುತ ಮದವೇರಿ ।**
**ಎಳಸುತುಂ ಬಳವೇರಿ ಬಳಸುತುಂ ಬಲ್ಪೇರಿ ।**
**ನಡೆಯುತುಂ ಗದುಗದುಸಿ ಬೆದುರುತುಂ ಸಡಗರಿಸಿ ।**
**ನಡೆವುತುಂ ದೆಂಡಣಿಸಿ ಬೀಳುತುಂ ತರಹರಿಸಿ ।**
**ಮೆಲ್ಲನೆಚ್ಚತ್ತು ಶಿವಲಿಂಗಮುಂ ನಡೆನೋಡಿ ।**
**ಲಿಲ್ಲೆಗರೆವುತ್ತೆ ಪರಮಸ್ನೇಹಮಂ ಮಾಡಿ ॥"**

-(ಚನ್ನಯ್ಯಗಳ ಮಾಹಾತ್ಮ್ಯ, ಶಿವಾನುಭವಪತ್ರಿಕೆಯಲ್ಲಿ ಉದಾಹರಿಸಿರುವದು.)

ಮೇಲೆ ಬಣ್ಣಿಸಿರುವಂಥ ಪರಿಣಾಮವಾಗುವದಕ್ಕೆ ಪರಮೇಶ್ವರನ ಗುಣಗಳ ಧ್ಯಾನವೇ ಮೂಲಕಾರಣವು. ಆದ್ದರಿಂದಲೇ ಸಾಕಾರಪೂಜೆಯಿಲ್ಲದೆ ಇದ್ದರೂ ಸಗುಣ

ಧ್ಯಾನದಿಂದಲೇ ಅವೈದಿಕಮತಗಳಲ್ಲಿ ಎಷ್ಟೋ ಭಕ್ತರು ಕೃತಕೃತ್ಯರಾಗಿ ಲೋಕಪಾವನ ರೆನಿಸಿರುವರು.

ಪರಮಾತ್ಮನ ಯಾವ ಗುಣಗಳನ್ನು ನಾವು ಧ್ಯಾನಕ್ಕೆ ಇಟ್ಟುಕೊಳ್ಳಬೇಕು? ಎಂಬುದೊಂದು ಪ್ರಶ್ನೆಯು ಸಹಜವಾಗಿ ಇಲ್ಲಿ ಹುಟ್ಟುತ್ತದೆ; ಏಕೆಂದರೆ ಆತನ ಗುಣಗಳು ಅನಂತವಾಗಿವೆ, ಅವುಗಳೆಲ್ಲವನ್ನೂ ಎಣಿಸಿ ಮುಗಿಸುವದು ಆದಿಶೇಷನಿಗೂ ಅಳವಲ್ಲ. ಯಾವ ಗುಣವನ್ನು ನೆನಸಿಕೊಂಡಮಾತ್ರದಿಂದ ನಮ್ಮ ಮನದಳಲು ಮಾಯವಾಗುವದೋ, ಅಜ್ಞಾನವು ಅಳಿಯುವದೋ, ಸಂಕಟವು ಸರಿಯುವದೋ, ಕಷ್ಟವು ಕರಗುವದೋ, ಅಂಜಿಕೆಯು ಅಡಗುವದೋ, ಬಡತನವು ಹುಡಿಯಾಗು ವದೋ, ಧೈರ್ಯವು ಉಕ್ಕುವದೋ, ಆನಂದವು ಹೊರಸೂಸುವದೋ, ಚಿತ್ತಕ್ಕೆ ತೃಪ್ತಿ ಯುಂಟಾಗುವದೋ- ಅಂಥ ಗುಣಗಳನ್ನು ಅವಶ್ಯವಾಗಿ ಮನಸ್ಸಿನಲ್ಲಿ ತಂದುಕೊಂಡು ಎಡೆಬಿಡದೆ ಚಿಂತಿಸಬೇಕು.

ಪರಮೇಶ್ವರನಿಗಿಂತ ಮಿಗಿಲುಸತ್ಯವಾದ ವಸ್ತುವಿಲ್ಲ; ಆತನೇ ಸಕಲ ಜಗತ್ತಿಗೂ ತಿರುಳಾಗಿರುವವನು; ಆತನೇ ಸರ್ವಜಗತ್ಕಾರಣನು, ಸರ್ವಜ್ಞನು, ಸರ್ವಶಕ್ತನು; ಆತನು ಸತ್ಯಕಾಮನು, ಸತ್ಯಸಂಕಲ್ಪನು; ಆತನು ಸರ್ವವ್ಯಾಪಕನು, ನಮ್ಮ ಹೃದಯದಲ್ಲಿರುವ ಅಂತರ್ಯಾಮಿಯು; ಆತನು ನಿತ್ಯತೃಪ್ತನು, ದಯಾಮಯನು. ಸರ್ವಕರ್ಮಫಲದಾತನು, ಸರ್ವಬಂಧವಿಮೋಚಕನು, ಅಭಯದಾತೃವು, ನಿತ್ಯಾನಂದದಾಯಕನು; ಇಂಥ ಪರಮಾತ್ಮನು ನಮ್ಮಗಳೆಲ್ಲರ ಹೃದಯದಲ್ಲಿ ಯಾವಾಗಲೂ ನೆಲೆಸಿರುತ್ತಾನೆ. ಆತನೇ ಆಪದ್ಬಂಧುವು, ಅನಾಥನಾಥನು, ದೀನರಕ್ಷಕನು, ಭುಕ್ತಿಮುಕ್ತಿಪ್ರದನು- ಎಂದು ಶ್ರುತಿಸ್ಮೃತಿ ಪುರಾಣಗಳು ಹೊಗಳುತ್ತಿವೆ. ಅವೈದಿಕಧರ್ಮಗಳೂ ಅದನ್ನು ಅನುಮೋದಿಸುತ್ತಿವೆ, ಅನುಭವಿಗಳಾದ ಭಕ್ತರೆಲ್ಲರೂ ಇದನ್ನೇ ಸಾರಿಸಾರಿ ಹೇಳಿರುತ್ತಾರೆ.

ಈ ಮೇಲೆ ಹೇಳಿದ ಗುಣಗಳನ್ನು ಪಟ್ಟಿಮಾಡಿಕೊಂಡು ಗಟ್ಟಿಮಾಡಬೇಕೆಂದು ತಿಳಿಯಬಾರದು. ಈ ಗುಣಗಳು ಮನಸ್ಸಿನ ಮೇಲೆ ಪರಿಣಾಮವನ್ನುಂಟುಮಾಡು ವಂಥ ಭಗವಂತನ ಲೀಲೆಗಳನ್ನು ತಿಳಿಸುವ ಕಥೆಗಳನ್ನು ಶ್ರವಣ ಮಾಡುತ್ತಿರಬೇಕು. ಆ ಗುಣಗಳ ಸವಿಯನ್ನು ಕಂಡುಕೊಂಡಿರುವ ಭಗವದ್ಭಕ್ತರ ಸಂಭಾಷಣೆಗಳನ್ನು ಕೇಳಿ ಮನಸ್ಸನ್ನು ತೋಯಿಸಿಕೊಳ್ಳಬೇಕು. ಹಾಗಾದರೆ ಮನಸ್ಸನ್ನು ಅವುಗಳ ಧ್ಯಾನಕ್ಕೆ ತಿರುಗಿಸುವದಕ್ಕೆ ಆಗುತ್ತದೆ, ಧ್ಯಾನದಲ್ಲಿ ಗುಣಗಳ ಸಾರವು ಮನಸ್ಸಿನಲ್ಲಿ ಹರಿ

ಮಾಡುವದಕ್ಕೆ ಶಕ್ಯವಾಗುತ್ತದೆ, ಮನಸ್ಸು ಕೆಳಗಿನ ನೆಲಗಟ್ಟನ್ನು ಬಿಟ್ಟು ಮೇಲಿನ ಅಂತಸ್ತಿಗೆ ಏರುವದಕ್ಕೆ ಕಲಿತುಕೊಳ್ಳುತ್ತದೆ.

ಈ ಸಗುಣಧ್ಯಾನವನ್ನು ಹೇಗೆ ಮಾಡಿದರೆ ಅದರ ಫಲವು ಬೇಗನೆ ಅನುಭವಕ್ಕೆ ಬರುವದೆಂಬುದನ್ನು ಮುಂದಿನ ಲೇಖನದಲ್ಲಿ ಸ್ವಲ್ಪಮಟ್ಟಿಗೆ ವಿವರಿಸುವೆನು.

*****

## 14. ಸಗುಣಧ್ಯಾನ - 2

ಪರಮೇಶ್ವರನನ್ನು ಧ್ಯಾನಿಸುವದು ಹೇಗೆ? ಅದರಿಂದಾಗುವ ಪ್ರಯೋಜನ ವೇನು? - ಈ ಎರಡು ಪ್ರಶ್ನೆಗಳೂ ಸಾಧಕರಿಗೆ ಬಹುಮುಖ್ಯವಾಗಿರುತ್ತವೆ. ಇಲ್ಲಿ ಇವುಗಳಿಗೆ ಸಂಕ್ಷೇಪದಿಂದ ಉತ್ತರವನ್ನು ಹೇಳಲಾಗುವದು.

ಮನುಷ್ಯನ ಮನಸ್ಸು ಯಾವದನ್ನು ಮೆಚ್ಚುವದೋ ಅದನ್ನು ಸತತವಾಗಿ ಧ್ಯಾನಿಸುತ್ತಿರುವದು. ಲೋಕದಲ್ಲಿ ಒಬ್ಬೊಬ್ಬನಿಗೆ ಒಂದೊಂದು ಧ್ಯೇಯವು ಏರ್ಪಟ್ಟಿರು ವದು ಹೀಗೆಯೇ, ಆಯಾ ಧ್ಯೇಯವನ್ನು ಅವರು ಬೇಡವೆಂದರೂ ಅವರ ಮನಸ್ಸು ಚಿಂತಿಸದೆ ಇರುವದಕ್ಕಾಗುವಂತಿಲ್ಲ, ಆದ್ದರಿಂದ ಪರಮೇಶ್ವರನ ಧ್ಯಾನವು ಅಳವಡ ಬೇಕಾದರೆ ಆತನಲ್ಲಿ ಸರ್ವಾತಿಶಯವಾದ ಗುಣಗಳು ಇರುವವೆಂದು ನಮಗೆ ಮನದಟ್ಟಾಗಬೇಕು. ಇದು ಅತ್ಯಂತ ಅವಶ್ಯವು. ಇಂಥ ಗುಣಗಳಲ್ಲಿ ಮುಖ್ಯವಾದ ಕೆಲವನ್ನು ಹಿಂದಿನ ಲೇಖನದಲ್ಲಿ ತಿಳಿಸಿರುತ್ತೇನೆ.

ಪರಮೇಶ್ವರನು ಸರ್ವಜ್ಞನೆಂದೂ ಸರ್ವಶಕ್ತನೆಂದೂ ಸರ್ವವ್ಯಾಪಕನೆಂದೂ ನಮ್ಮ ಹೃದಯದಲ್ಲಿಯೇ ಇದ್ದುಕೊಂಡು ನಮ್ಮ ಯೋಗಕ್ಷೇಮವನ್ನು ನೋಡಿ ಕೊಳ್ಳುತ್ತಿರುವನೆಂದೂ ಪ್ರೇಮಮೂರ್ತಿಯಾದ ಆತನನ್ನು ನೆನಸಿಕೊಂಡಮಾತ್ರದಿಂದ ಆನಂದವಾಗುವದೆಂದೂ ನಮ್ಮ ಮನಸ್ಸಿಗೆ ಚೆನ್ನಾಗಿ ಹತ್ತಿದರೆ ಆಗ ಆತನ ಧ್ಯಾನ ವಿಲ್ಲದಿರುವದೇ ನಮ್ಮ ದುಃಖಕ್ಕೆಲ್ಲ ಪರಮಮೂಲವೆಂಬುದು ತಾನೇಸ್ಫುಟವಾಗುವದು. ಕೂಡಲೆ ನಮ್ಮ ಮನಸ್ಸು, ಸರಿಯಾಗಿ ಶ್ರುತಿಮಾಡಿದ ವೀಣೆಯಂತೆ, ಇಂಪಾದ ಒಳಗಿನ ಗಾನದ ಸುಖವನ್ನು ಅನುಕರಿಸುವದಕ್ಕೆ ಅಣಿಮಾಡಿಕೊಳ್ಳುವದು. ಇದೇ ಧ್ಯಾನಕ್ಕೆ ಮೊದಲನೆಯ ಮೆಟ್ಟಿಲು.

ಅರ್ಚನೆಯಿಂದಲೂ ಜಪದಿಂದಲೂ ಗುಣಲೀಲೆಗಳ ಶ್ರವಣದಿಂದಲೂ ಕೀರ್ತನದಿಂದಲೂ ಮನಸ್ಸು ಈ ಮೊದಲನೆಯ ಮೆಟ್ಟಿಲನ್ನು ಹತ್ತುವದು. ಅರ್ಚನೆಯನ್ನು ಶ್ರದ್ಧೆಯಿಂದ ಮಾಡುವವರು ಕೊನೆಯಲ್ಲಿ ತಮ್ಮ ಅಭೀಷ್ಟವಾದ ಪ್ರಾರ್ಥನೆಯನ್ನು ಮಾಡಿಕೊಳ್ಳುವ ವಾಡಿಕೆಯಿದೆಯಷ್ಟೇ. ಈ ಪ್ರಾರ್ಥನೆಯು ಸಾತ್ತ್ವಿಕವಾಗಿ ಬೆಳೆದ ಹಾಗೆಲ್ಲ ಮನಸ್ಸು ಮೇಲುಮೇಲಿನ ಸ್ಥಿತಿಗೆ ಬರುತ್ತಿರುವದು. "ಪರಮೇಶ್ವರನೇ, ನನಗೆ ಇಂಥ ವಿಷಯವನ್ನು ಕೊಡು, ಕಷ್ಟವನ್ನು ಪರಿಹರಿಸು, ನನ್ನ ಇಷ್ಟಮಿತ್ರರಾದ ಇಂಥವರನ್ನು ರಕ್ಷಿಸು, ನನ್ನ ಶತ್ರುಗಳಾದ ಇಂಥವನನ್ನು ದಂಡಿಸು" ಎಂದು ಕೇಳಿಕೊಳ್ಳುವ ಕೀಳುತನದ ಪ್ರಾರ್ಥನೆಯು ಬರುಬರುತ್ತಾ ಮಾಯವಾಗಿ "ಪರಮೇಶ್ವರನೆ, ನಿನ್ನ ದಯೆಯೊಂದಿರಲಿ, ಆಮೇಲೆ, ನನಗೆ ಯಾವ ಕಷ್ಟವು ಬಂದರೂ ಚಿಂತೆಯಿಲ್ಲ, ನಿನ್ನ ಸಂಕಲ್ಪಕ್ಕನುಗುಣವಾಗಿ ನಡೆಯುವಂತೆ ಬುದ್ಧಿಯನ್ನು ನನಗೆ ಅನುಗ್ರಹಿಸು" ಎಂದು ಬೇಡಿಕೊಳ್ಳುವ ಉತ್ಕೃಷ್ಟಪ್ರಾರ್ಥನೆಯು ಬಲಿತು ಕೊಳ್ಳುವ ಹೊತ್ತಿಗೆ ಪರಮೇಶ್ವರನ ಧ್ಯಾನಕ್ಕೆ ಮನಸ್ಸು ತಕ್ಕದ್ದಾಗಿರುತ್ತದೆ.

'ಪರಮೇಶ್ವರನು ನನ್ನ ಹೃದಯದಲ್ಲಿಯೇ ಇರುತ್ತಾನೆ'- ಎಂಬ ನೆನಪು ಬಂದ ಮಾತ್ರದಿಂದಲೇ ಮನಸ್ಸಿನಲ್ಲಿ ಒಂದು ದೊಡ್ಡ ಮಾರ್ಪಾಡು ಆಗುತ್ತದೆ. ನಾವು ಹೊರಗೆ ಸಾಕಾರವಾಗಿ ಅರ್ಚನೆಯನ್ನು ಮಾಡಲಿ, ಮಾಡದಿರಲಿ, ಪರಮಾತ್ಮನು ನಮ್ಮ ಹೃದಯದಲ್ಲಿ ಎಂದೆಂದಿಗೂ ಇದ್ದುಕೊಂಡುಬಿಟ್ಟಿರುತ್ತಾನೆ; ಇದನ್ನು ನಾವು ಮನಸ್ಸಿಗೆ ತಂದುಕೊಳ್ಳುವದೇ ಆತನ ಆವಾಹನೆಯು, ಅದನ್ನು ಮರೆಯುವದೇ ವಿಸರ್ಜನೆಯು. ವಾಚಕವೃಂದ, ಇದನ್ನು ಸ್ವಲ್ಪ ಯೋಚಿಸಿಕೊಳ್ಳಿರಿ: ಅರಸನ ಹೃದಯದಲ್ಲಿರುವಂತೆ ಆಳಿನ ಹೃದಯದಲ್ಲಿಯೂ ಅಷ್ಟು ಮಟ್ಟಿಗೇ ಆ ಪ್ರೇಮದ ಗಟ್ಟಿಯಾದ ಭಗವಂತನು ನೆಲಸಿರುತ್ತಾನೆ; ಕುಲೀನನ ಹೃದಯದಲ್ಲಿರುವಂತೆ ಅತ್ಯಂತ ನೀಚಕುಲದವನೆನಿಸಿಕೊಂಡಿರುವವನ ಹೃದಯದಲ್ಲಿಯೂ, ಅಷ್ಟೇಪಾವಿತ್ರ್ಯದಿಂದ ಇರುತ್ತಾನೆ. ಹಣವಂತರಲ್ಲಿರುವಂತೆ ಬಡವರಲ್ಲಿಯೂ, ವಯಸ್ಸಾದವರಲ್ಲಿರುವಂತೆ ಮಕ್ಕಳಲ್ಲಿಯೂ ಗಂಡಸರಲ್ಲಿರುವಂತೆ ಹೆಂಗಸರಲ್ಲಿಯೂ, ರೂಪವಂತರಲ್ಲಿರುವಂತೆ ಕುರೂಪಿಗಳಲ್ಲಿಯೂ ಪಂಡಿತರಲ್ಲಿರುವಂತೆ ಪಾಮರರಲ್ಲಿಯೂ- ಎಲ್ಲರಲ್ಲಿಯೂ, ನಮ್ಮೆಲ್ಲರಲ್ಲಿಯೂ, ಅದೇ ಪರಮೇಶ್ವರನು ನಮ್ಮ ಜೀವನದ ತಿರುಳಾಗಿ, ನಮಗೆ ವ್ಯವಹಾರದಲ್ಲಿ ಬೇಕಾದ ಅಕ್ಷಯನಿಧಿಯಾಗಿ, ನಮ್ಮ ಆಪತ್ತಿಗೆ ಬೇಕಾಗುವ ಬಾಂಧವನಾಗಿ, ನಮ್ಮ ಅಜ್ಞಾನವನ್ನು

ನೀಗುವ ಗುರುವಾಗಿ, ನಮ್ಮ ಅಂಜಿಕೆಯನ್ನು ತೊಲಗಿಸುವ ಅಭಯಹಸ್ತನಾಗಿ ಕುಳಿತಿರುತ್ತಾನೆ!

"ನಾನು ಪರಮೇಶ್ವರನನ್ನು ಕಾಣೆನಲ್ಲ! ಆತನನ್ನು ನಾನು ಹೇಗೆ ಧ್ಯಾನಿಸಲಿ?" ಎಂಬ ಚಿಂತೆಯನ್ನು ಹಚ್ಚಿಕೊಳ್ಳಬೇಡಿರಿ. ಪರಮೇಶ್ವರನು ನಿಮ್ಮ ಆತ್ಮನ ಸ್ವರೂಪವೇ ಆಗಿರುತ್ತಾನೆ. "**ಅಹಮಾತ್ಮಾ ಗುಡಾಕೇಶ ಸರ್ವಭೂತಾಶಯಸ್ಥಿತಃ||**" (ಅರ್ಜುನನೆ, ಸಮಸ್ತ ಪ್ರಾಣಿಗಳ ಹೃದಯದಲ್ಲಿಯೂ ಇರುವ ಆತ್ಮನೇ ನಾನು) ಎಂಬ ಗೀತೋಕ್ತಿಯನ್ನು ಸ್ಮರಿಸಿಕೊಳ್ಳಿರಿ. ಹೊರಗಿನ ವಿಷಯಗಳಲ್ಲಿ ಹರಿದಾಡುವ ಮನಸ್ಸನ್ನು ಹರಿಯಬಿಟ್ಟು ವ್ಯರ್ಥವಾಗಿ ಜೀವನವನ್ನು ಪೋಲುಮಾಡಿಕೊಳ್ಳಬೇಡಿ. ನಿಮ್ಮೊಳಗೇ ಇರುವ ಆತ್ಮನೇ ಆ ಭಗವಂತನೆಂಬುದನ್ನು ಮನಸ್ಸಿಗೆ ತಂದುಕೊಳ್ಳಿರಿ.

*****

# 15. ಸಗುಣ ಧ್ಯಾನ - 3

ಸಗುಣಧ್ಯಾನವು ಮಾಗಿ ಹಣ್ಣಾಗಿ ಅದರ ಸವಿಯನ್ನು ಸಾಧಕನು ಕಂಡುಕೊಂಡು ಚಪ್ಪರಿಸುವಂತೆ ಆಗಬೇಕಾದರೆ ಅದರಲ್ಲಿ ಆದರವು ಬೇಕು, ಎಡೆಬಿಡದ ಪ್ರಯತ್ನವು ಬೇಕು. ಈಶ್ವರಗುಣಗಳ ಶ್ರವಣವಾಗಿರಬೇಕು, ಆ ಗುಣಗಳ ಅನುಸಂಧಾನವಾಗಿರಬೇಕು. ಆ ಗುಣಗಳಿಗೆ ಮನಸೋತು ಹೊರಗಿನ ಯೋಚನೆಗಳನ್ನೆಲ್ಲ ಕಡೆಗಾಣಿಸಿ ಬದಿಗೊತ್ತಿ ಮೆಲ್ಲಮೆಲ್ಲನೆ ಒಳಕ್ಕೆ ಸರಿದು ಭಗವಂತನ ಅಂಶವಾಗಿರುವ ತನ್ನ ಆತ್ಮನಲ್ಲಿಯೇ ಮನಸ್ಸನ್ನು ನಿಲ್ಲಿಸಿಕೊಳ್ಳುವ ಸಾಧನೆಯು ಒಂದೇ ಸಮನೆ ಬಹುಕಾಲದವರೆಗೆ ನಡೆದಿರಬೇಕು. ಇಷ್ಟೆಲ್ಲ ಆದಮೇಲೆ ಆ ದಯಾನಿಧಿಯಾದ ಪರಮೇಶ್ವರನ ಅನುಗ್ರಹದಿಂದ ಈ ಸಾಧನವು ಸಫಲವಾಗುವದೇ ಹೊರತು ಯಾವಾಗಲೆಂದರೆ ಆಗ, ಯಾರಿಗೆಂದರೆ ಅವರಿಗೆ, ಎಲ್ಲಿಯೆಂದರೆ ಅಲ್ಲಿ, ನೆನಸಿಕೊಂಡ ಮಾತ್ರದಿಂದ ಮನಸ್ಸಿನಲ್ಲಿ ಈ ಧ್ಯಾನವು ತಾನೇ ಬಂದುಕೂತುಕೊಳ್ಳಲಾರದು.

**ಧ್ಯಾನಕ್ಕೆ ಧ್ಯೇಯವೇ ಮುಖ್ಯವಷ್ಟೆ.** ಆದ್ದರಿಂದ ಭಗವಂತನ ಗುಣಗಳ ಸ್ವರೂಪವನ್ನು ಬಲ್ಲವರಿಂದಲೂ ಸದ್ಗ್ರಂಥಗಳಿಂದಲೂ ಕಿವಿಯಾರೆ ಕೇಳಿ ಮನಸಾರೆ ಅವುಗಳ ತಿರುಳನ್ನು ಅನುಸಂಧಾನ ಮಾಡಿಕೊಳ್ಳುವ ಪದ್ಧತಿಯನ್ನು ತಪ್ಪದೆ ದಿನದಿನವೂ ಆಚರಿಸುತ್ತಿರಬೇಕು. ನೆಲವನ್ನು ಆಳವಾಗಿ ಉತ್ತು ಸಾರವಾದ ಗೊಬ್ಬರ

ವನ್ನು ಬೆರೆಸಿಕೊಂಡಿರುವಾಗ ಅದರಲ್ಲಿ ಬೀಜವನ್ನು ಬಿತ್ತಿದರೆ ಕ್ಷಿಪ್ರವಾಗಿ ಅಂಕುರಿಸಿ ಹುಲುಸಾಗಿ ಪೈರಾಗುವಂತೆ ಗುಣಶ್ರವಣಾನುಸಂಧಾನದಿಂದಲೇ ಮನಸ್ಸು ಒಳಮುಖ ವಾಗಿ ತಿರುಗುವದಕ್ಕೂ ಧ್ಯಾನಸುಖವನ್ನು ಅನುಭವಿಸುವದಕ್ಕೂ ತಕ್ಕದ್ದಾಗುವದು. ಪರಮಾತ್ಮನೇ ನಮ್ಮ ತಂದೆಯು, ತಾಯಿಯು, ತಂದೆತಾಯಿಗಳಿಗೂ ತಂದೆ ತಾಯಿಯು; ನಮ್ಮ ಹಿತವನ್ನೇ ಕೋರುತ್ತಾ ನಮಗೆ ಸರಿಯಾದ ಉಪದೇಶವನ್ನು ಮಾಡಿ ಸರಿಯಾದ ಹಾದಿಯಲ್ಲಿ ನಡೆಯುವಂತೆ ನೋಡಿಕೊಳ್ಳುವದಲ್ಲದೆ ಸಚ್ಛಾಸ್ತ್ರವೂ ಸದ್ಗುರುವೂ ಆಗಿ ನಮ್ಮ ಹೊರಗೂ ಇದ್ದುಕೊಂಡಿರುವನು. ನಾವು ಮುಟ್ಟಬೇಕಾದ ಗತಿಯು ಆತನೇ; ನಮ್ಮನ್ನು ಪೋಷಣೆ ಮಾಡುತ್ತಿರುವವನು ಆತನೇ; ನಮ್ಮ ಕರ್ಮಗಳ ಯುಕ್ತಾಯುಕ್ತತೆಯನ್ನು ಮೇಲುವಿಚಾರಣೆಯಿಂದ ನೋಡುತ್ತಿರುವಾತನು ಆತನೇ, ಅವುಗಳಿಗೆ ಫಲವನ್ನು ಕೊಡುವಾತನು ಆತನೇ; ಕಷ್ಟಕಾಲದಲ್ಲಿ ನಮ್ಮನ್ನು ರಕ್ಷಿಸುವವನು ಆತನೇ. ನಮಗೆ ಇರುವದಕ್ಕೆ ಮನೆಯನ್ನೂ ಉಣ್ಣುವದಕ್ಕೆ ಆಹಾರ ವನ್ನೂ ಉಡುವದಕ್ಕೆ ಬಟ್ಟೆಯನ್ನೂ ಮನಸ್ಸಿಗೆ ಬುದ್ಧಿಯನ್ನೂ ಶಾಂತಿಯನ್ನೂ ಸುಖ ವನ್ನೂ ಕೊಡುವಾತನು ಆತನೇ. ಹೆಚ್ಚೇನು? ನಾವೆಲ್ಲರೂ ಹುಟ್ಟುವದಕ್ಕೆ ಕಾರಣನೂ ಇರುವದಕ್ಕೆ ಆಶ್ರಯನೂ, ಮರಣಾನಂತರದಲ್ಲಿ ನಮಗೆ ಆಸರೆಯನ್ನು ಕೊಟ್ಟು ತನ್ನ ಆನಂದಧಾಮದಲ್ಲಿ ಸೇರಿಸಿಕೊಳ್ಳುವವನೂ ಆತನೇ. ಆತನು ನಮ್ಮ ಅಕ್ಷಯವಾದ ನಿಧಿಯು, ನಮಗೆ ಬೇಕಾದ ಫಲಕ್ಕೆಲ್ಲ ಮೂಲವಾಗಿರುವ ಅವ್ಯಯವಾದ ಬೀಜವು. ಗೀತಾದಿಗಳಲ್ಲಿ ಉಕ್ತವಾಗಿರುವ ಈ ಬಗೆಯ ಗುಣಗಳನ್ನು ಮನಸ್ಸಿನಲ್ಲಿ ನೆನೆನೆನೆದು ಮೈನವಿರುನಿಮಿರೆ, ಆನಂದದ ಕಣ್ಣೀರು ಸುರಿಯೆ, ಗುಣಗಾನವನ್ನು ಉಚ್ಚಸ್ವರದಿಂದ ಮಾಡುತ್ತಾ ಕುಣಿಕುಣಿದು ನಲಿದಾಡಿ ಸಕಲ ಪ್ರಪಂಚವೂ ತಾನೂ ಭಗವನ್ಮಯ ವೆಂಬುದನ್ನು ಕೆಲಕಾಲವಾದರೂ ಅನುಭವಿಸಿದವನಿಗೆ ಮನಸ್ಸು ಮತ್ತೆ ಕೆಳಗಿನ ಮೆಟ್ಟಿಲಿಗೆ ಇಳಿದೀತೆಂಬ ಭಯವುಂಟೆ? ಆಗ ಅದು ಸಹಜವಾಗಿ ಹೊರಗನ್ನೆಲ್ಲ ಮರೆತು ಒಳಮುಖವಾಗಿ ಭಗವಂತನಲ್ಲಿಯೇ ನಿಂತು ಕೊಂಡುಬಿಡುತ್ತದೆ.

ಪಾಠಕಮಹಾಶಯರಲ್ಲಿ ಕೆಲವರು "ನಿಜ, ಹೀಗೆ ಧ್ಯಾನಮಾಡುವದು ಒಳ್ಳೆಯದೇ ಸರಿ, ಇದು ಕೆಲವರಿಗೆ ಸಾಧ್ಯವೂ ಆಗುತ್ತದೆ; ಆದರೆ ನಮ್ಮ ಸ್ಥಿತಿಯು ಇದಕ್ಕೆ ತಕ್ಕಂತಿಲ್ಲ! ಹೊಟ್ಟೆಗೆ ಬಟ್ಟೆಗೆ ನೇರವಾಗಿರುವದಕ್ಕೇ ಕಷ್ಟವಾಗಿ ಅದಕ್ಕಾಗಿ ದುಡಿಯುವದಕ್ಕೇ ಕಾಲವು ಸಿಕ್ಕದೆ ಇರುವಾಗ ಸಂಸಾರದ ತಾಪತ್ರಯದಲ್ಲಿ ಸಿಕ್ಕಿ ಕೊಂಡಿರುವ ನಾವೂ ಹೀಗೆ ಧ್ಯಾನ ಮಾಡಿ ನಲಿದಾಡುವದು ಸಾಧ್ಯವೆ?"– ಎಂದು

ಕೇಳಬಹುದು. ಇದಕ್ಕೆ ಉತ್ತರವನ್ನು ಹೇಳಬೇಕಾದರೆ ಒಂದು ದೊಡ್ಡ ಲೇಖನವನ್ನೇ ಬರೆಯಬೇಕಾಗುವದು. ಆದರೂ ಈ ಪ್ರಶ್ನೆಯನ್ನು ಕೇಳುವವರು ನಿಜವಾಗಿಯೂ ಧ್ಯಾನದ ಸುಖದಲ್ಲಿ ಆಶೆಯುಳ್ಳವರಾಗಿದ್ದರೆ ಅವರಿಗೆ ಸ್ವಲ್ಪದರಲ್ಲಿಯೇ ಒಂದು ಉತ್ತರವನ್ನು ಕೊಡಬಹುದು. "ಅಣ್ಣಗಳಿರ, ನಿಮ್ಮ ದುಡಿತದಿಂದಲೇ ನಿಜವಾಗಿ ನಿಮ್ಮ ಹೊಟ್ಟೆ ಬಟ್ಟೆಗಳು ಸಾಗುತ್ತಿರುವದಿಲ್ಲ; ನಾವು ಹೇಳುವ ಭಗವಂತನೇ ಅವನ್ನು ನಿಮಗೆ ಒದಗಿಸುತ್ತಿದ್ದಾನೆ. ಧ್ಯಾನಕ್ಕೆ ಒಂದಿಷ್ಟು ಹೊತ್ತನ್ನು ನೀವು ಇಟ್ಟುಕೊಂಡರೆ ಉಳಿದ ಕಾಲದಲ್ಲಿ ನೀವುಮಾಡುವ ಕೆಲಸಕ್ಕೆ ಮತ್ತಷ್ಟು ಹೊಳಪು ಬಂದು, ಅದರಿಂದಲೇ ನಿಮ್ಮ ಜೀವನವು ಮತ್ತೂ ಸಲೀಸಾಗಿ ಸಾಗುತ್ತದೆ. ನಿಮ್ಮ ಸ್ಥಿತಿಯು ಕೆಟ್ಟಿದೆಯೆಂದು ಮರುಗ ಬೇಡಿರಿ; ಭಗವಂತನ ನಿಷ್ಠೆಯಿಲ್ಲದಿರುವದೇ ನಿಮ್ಮ ಕಷ್ಟಕ್ಕೆ ಕಾರಣವೆಂದು ನಿಶ್ಚಯಿಸಿ, ಧ್ಯಾನಕ್ಕೆ ಮೊದಲು ಮಾಡಿರಿ, ಆಗ ನಿಮ್ಮ ಸ್ಥಿತಿಯೂ ಉತ್ತಮವಾಗುವದು. ನಿಮ್ಮ ಸುತ್ತಮುತ್ತಲಿನ ಸನ್ನಿವೇಶಗಳು ಸರಿಯಾಗಿಲ್ಲವೆಂಬುದಾಗಲಿ, ನಿಮ್ಮ ಸ್ಥಾನವು ಉತ್ತಮ ಸಾಧನಕ್ಕೆ ತಕ್ಕದ್ದಾಗಿಲ್ಲವೆಂಬುದಾಗಲಿ- ಇರುವ ಸನ್ನಿವೇಶವೇ ಬೇಕಾದಷ್ಟಾಯಿತೆಂಬ ಉದಾರಬುದ್ಧಿಯನ್ನು ಕೈಕೊಳ್ಳಿರಿ; ನಿಮ್ಮ ಸ್ಥಾನವೇ ನಿಮ್ಮ ವಿಕಾಸಕ್ಕೆ ತಕ್ಕದ್ದೆಂದು ನಂಬಿ ಅದನ್ನು ಆದರದಿಂದ ಕಾಣುವ ಪದ್ಧತಿಯನ್ನು ಮಾಡಿಕೊಳ್ಳಿರಿ. ಮಾರ್ಪಾಡಾಗ ಬೇಕಾಗಿರುವದು ನಿಮ್ಮ ಮನಸ್ಸಿನ ಭಾವದಲ್ಲಿಯೇ ಹೊರತು ನಿಮ್ಮ ಸ್ಥಾನದಲ್ಲಲ್ಲ, ಸನ್ನಿವೇಶದಲ್ಲೂ, ಅಲ್ಲ. ಇರುವ ಸ್ಥಾನಮಾನಗಳನ್ನು ಗೌರವದಿಂದ ಕಾಣುತ್ತಾ ಸಾಧನಕ್ಕೇ ನೀವು ಮನಸ್ಸು ಹಾಕಿದರೆ ಸರಿ, ನಿಮ್ಮ ಧ್ಯಾನವು ಸಲೀಸಾಗಿ ಸಾಗುವದು. ಉತ್ಕೃಷ್ಟ ಸ್ಥಿತಿಗೆ ಏರುವದು; ನಿಮ್ಮ ಸನ್ನಿವೇಶಗಳೂ ಸ್ಥಾನಮಾನಗಳೂ ನಿಮ್ಮ ಹೊಸ ಭಾವಕ್ಕೆ ತಕ್ಕಂತೆ ತಾವೇ ರೂಪಿಸಿಕೊಳ್ಳುವವು. ಇದೇ ಭಗವಂತನ ನಿಯಮವು."

*****

## 16. ನಿರ್ಗುಣ ಧ್ಯಾನ

ಮೊಗ್ಗು ಅರಳಿ ಹೂವಾಗುವಂತೆಯೂ ನೀರು ಆವಿಯಾಗುವಂತೆಯೂ ಭರಣಿಯಲ್ಲಿಟ್ಟಿದ್ದ ಕಸ್ತೂರಿಯ ತೀರ ಸಣ್ಣ ಚೂರು ತನ್ನ ಸ್ಥೂಲರೂಪವನ್ನು ಬಿಟ್ಟು ಪರಿಮಳದ ರೂಪದಿಂದ ಭರಣಿಯನ್ನೆಲ್ಲ ವ್ಯಾಪಿಸಿಕೊಳ್ಳುವಂತೆಯೂ ಸಗುಣಧ್ಯಾನವು ಬಲಿತು ಕಾಲಕ್ರಮದಲ್ಲಿ ನಿರ್ಗುಣಧ್ಯಾನವಾಗುವದು. ಆ ಧ್ಯಾನವನ್ನಾಗಲಿ ಅದರಿಂದಾಗುವ

ಸುಖವನ್ನಾಗಲಿ ಅನುಭವಿಸಿ ತಿಳಿಯಬೇಕೇ ಹೊರತು ಮಾತಿನಿಂದ ವರ್ಣಿಸುವದಕ್ಕೆ ಎಂದಿಗೂ ಆಗಲಾರದು.

ನಿರ್ಗುಣವೆಂದರೆ ಯಾವ ಗುಣವೂ ಇಲ್ಲದ್ದಾದ್ದರಿಂದ ಅದು ಸಗುಣಕ್ಕಿಂತ ಸಪ್ಪೆಯಾಗಿರಬೇಕೆಂದು ಎಂದಿಗೂ ಭಾವಿಸಬಾರದು. ಏಕೆಂದರೆ ನಿರ್ಗುಣವೆಂದರೆ ಯಾವ ಗುಣವೂ ಇಲ್ಲದ್ದೆಂದು ಅರ್ಥವಲ್ಲ; ಗುಣ, ಗುಣಿ- ಎಂಬ ಭೇದವಿಲ್ಲದೆ ಗುಣಗಳ ತಿರುಳೇ ಆಗಿರುವ ಅತೀಂದ್ರಿಯತತ್ತ್ವವೆಂದು ಅರ್ಥ. ಯಾವ ಯಾವ ಗುಣಗಳು ನಮಗೆ ಪ್ರಕೃತಿಯಲ್ಲಿ ಗೋಚರವಾಗುತ್ತಿರುವವೋ, ಅವಕ್ಕೆಲ್ಲ ಪರಮೇಶ್ವರನೇ ಮೂಲಸ್ಥಾನವು; ಸೂರ್ಯನಿಂದ ಕಿರಣಗಳು ಎಲ್ಲಾ ಕಡೆಗೂ ಪಸರಿಸುತ್ತಿರುವಂತೆ ಪರಮೇಶ್ವರನಿಂದಲೇ ಆ ಗುಣಗಳು ಹೊರಚಿಮ್ಮಿ ತೋರಿಕೊಳ್ಳುತ್ತಿರುವವು. ಆದರೆ ಮತ್ತಷ್ಟು ಮುಂದಕ್ಕೆ ಹೋಗಿ ವಿಚಾರಿಸಿದರೆ ಕಿರಣಗಳು ಸೂರ್ಯನಿಗಿಂತ ಬೇರೆಯಿಲ್ಲ; ಸೂರ್ಯನೆಂದರೆ ಪ್ರಕಾಶಮಯವಾದ ಒಂದು ಗೋಳವು, ಪ್ರಕಾಶವನ್ನು ಬಿಟ್ಟು ಸೂರ್ಯನೇ ಇಲ್ಲ. ಇದರಂತೆ ಸಕಲಗುಣಗಳೂ ಪರಮಾತ್ಮನ ಹೊರತೋರಿಕೆಗಳೇ; ಅವು ಪರಮೇಶ್ವರನಿಗಿಂತ ಬೇರೆಯಿಲ್ಲ, ಆ ಗುಣಗಳ ತಿರುಳೇ ಪರಮೇಶ್ವರನಾಗಿರುವದರಿಂದ ಆ ತಿರುಳಿಗಿಂತ ಬೇರೆಯಾಗಿ ಪರಮೇಶ್ವರನೂ ಇರುವದಿಲ್ಲ.

ಧ್ಯಾನವನ್ನು ಮಾಡುವಾತನು ತನ್ನ ಧ್ಯೇಯವಾದ ಪರಮೇಶ್ವರನ ಸ್ವರೂಪದಲ್ಲಿ ಬೆರೆತುಹೋಗಿರುವಾಗ, ಅವನ ಕಣ್ಣಿಂದ ನೋಡಿದರೆ **'ನಾನು'**, **'ಪರಮೇಶ್ವರ'**, **'ಪ್ರಪಂಚ'**- ಎಂಬ ಭೇದವು ಇರುವದೇ ಇಲ್ಲ. ಧ್ಯಾನವನ್ನು ಮಾಡುವಾಗ ಮಾತ್ರವೇ ಅವನು ಈ ಭೇದವನ್ನು ಮರೆತಿರುವನೆಂದು ತಿಳಿಯಬಾರದು; ನಿಜವಾಗಿ ಪರಮಾರ್ಥ ದೃಷ್ಟಿಯಲ್ಲಿ ಈ ಭೇದವು ಇರುವದೂ ಇಲ್ಲ, ಆ ದೃಷ್ಟಿಯಲ್ಲಿ ಧ್ಯಾನ, ಧ್ಯಾತೃ, ಧ್ಯೇಯ-ಎಂಬ ತಾರತಮ್ಯವು ಕೂಡ ಇರುವದಿಲ್ಲ; ತಾನೇ ತಾನಾಗಿ ಬೆಳಗುತ್ತಿರುವ, ಕಾಲದೇಶನಿಮಿತ್ತಗಳ ನೆಳಲು ಕೂಡ ಸೋಂಕದ ಯಾವದೊಂದು ಮಾರ್ಪಾಡೂ ಇಲ್ಲದೆ ತನಗೆರಡನೆಯದೇ ಇಲ್ಲದ ಸಚ್ಚಿದಾನಂದದ ಗಟ್ಟಿಯೊಂದೇ ನಿಜವಾಗಿ ಇರುವದು. ಆದರೂ ಈಗಿನ ನಮ್ಮ ವ್ಯವಹಾರದೃಷ್ಟಿಯಿಂದ ನಾವು ಅಂಥ ತತ್ತ್ವವನ್ನು ಮನಸ್ಸಿಗೆ ಹಚ್ಚಿಕೊಳ್ಳುವಾಗ ಆ ಅನುಸಂಧಾನವನ್ನೇ **'ನಿರ್ಗುಣಧ್ಯಾನ'** ವೆಂದು ಕರೆಯಬಹುದು.

ನಿರ್ಗುಣಧ್ಯಾನವನ್ನೇ ಹೇಗೆ ಮಾಡಿಕೊಳ್ಳಬೇಕೆಂಬುದನ್ನು ಯಾರೊಬ್ಬರೂ ಹೇಳಿಕೊಡಲಾರರು. ಯಾರಾದರೂ ಅದರ ಕ್ರಮವನ್ನು ವರ್ಣಿಸುವದಕ್ಕೆ ತೊಡಗಿದರೆ ಸುಮ್ಮನೆ ಶಾಸ್ತ್ರದ ಶಬ್ದಗಳ ಗಡಿಬಿಡಿಯನ್ನು ಎಬ್ಬಿಸಿದಂತೆ ಆಗುವದೇ ಹೊರತು ಸಾಧಕರಿಗೆ ಅದರಿಂದ ಯಾವ ಸಹಾಯವೂ ದೊರೆತಂತೆ ಆಗುವದಿಲ್ಲ. ಪರಮಾತ್ಮನ ನಿರ್ಗುಣ ತತ್ತ್ವವು ಇಂಥದ್ದೆಂದು ಶಬ್ದದಿಂದ ಹೇಳುವದಕ್ಕೆ ಬರುವದಿಲ್ಲ. ಯಾವ ದೊಂದು ಪ್ರತ್ಯಯದಿಂದಲೂ ಹಿಡಿದುಕೊಳ್ಳುವದಕ್ಕೆ ಆಗುವದಿಲ್ಲ. ಆದರೂ ಯಾರು ಇಂದ್ರಿಯ ನಿಗ್ರಹವನ್ನು ಮಾಡಿಕೊಂಡು ಯಾವದೊಂದು ಇಷ್ಟವು ಅಥವಾ ಅನಿಷ್ಟವು ಬಂದೊದಗಿದರೂ ಮನಸ್ಸಿನಲ್ಲಿ ಏರಿಳಿತಗಳಿಲ್ಲದೆ ಸಕಲಜೀವರಿಗೂ ಹಿತವನ್ನೇ ಕೋರುತ್ತಲಿರುವರೋ ಅಂಥವರಿಗೆ ಮನಸ್ಸು ತನಗೆ ತಾನೇ ಒಳಸರಿದುಕೊಳ್ಳುವದು. ಉಪ್ಪಿನ ಹರಳನ್ನು ನೀರಿನಲ್ಲಿ ಅದ್ದಿದರೆ ಅದರಲ್ಲಿಯೇ ಕರಗಿಹೋಗುವಂತೆ ಪರಮಾತ್ಮನ ಅಮೃತಸನ್ನಿಧಿಯಲ್ಲಿ ತನ್ನ ಅಸ್ತಿತ್ವವನ್ನು ಕಳೆದುಕೊಂಡು ಆತನಲ್ಲಿಯೇ ಬೆರೆತುಕೊಂಡು ಮಿಗಿಲಿಲ್ಲದ ಆನಂದವನ್ನು ಕೊಡುವದು.

ಆದರೆ ದೇಹಾಭಿಮಾನವುಳ್ಳ ನಮ್ಮಂಥವರಿಗೆ ಈ ನಿರ್ಗುಣೋಪಾಸನೆಯು ದಕ್ಕುವದು ಕಷ್ಟ; ಸುಮ್ಮನೆ ಒಣ ಮಾತುಗಳಿಂದ ಕಾಲಹಾಕುವವರಿಗೆ ಅದು ದೊರಕಲೂ ಆರದು. ಯಾರು ಶ್ರದ್ಧಾಭಕ್ತಿಗಳಿಂದ ಪರಮೇಶ್ವರನ ಸಗುಣರೂಪವನ್ನು ಉಪಾಸನೆ ಮಾಡುತ್ತಿರುವರೋ ಅವರಿಗೆ ಆ ದಯಾನಿಧಿಯ ಅನುಗ್ರಹದಿಂದ ಮನಸ್ಸು ಮೇಲಿನ ಅಂತಸ್ತನ್ನು ಏರುವದು. ಆಮೇಲೆ ಅವರಿಗೆ ನಾನು, ನೀನು, ಜಗತ್ತು- ಎಂಬ ಭೇದವೇ ಕಾಣದೆ ಎಲ್ಲೆಲ್ಲಿಯೂ ತುಂಬಿ ತುಳುಕಾಡುತ್ತಿರುವ ಪರಮಾತ್ಮನ ಅಮೃತಾನಂದ ಸಾಗರವೇ ತಾವೆಂಬ ಉನ್ನತವಾದ ಅನುಭವವೊಂದು ಕಾಣಿಸಿಕೊಳ್ಳುವದು.

ನಿರ್ಗುಣಧ್ಯಾನವೆಂಬುದು ಪರಿಪಕ್ವವಾದ ಒಂದು ಹಣ್ಣೆಂದು ಕಲ್ಪಿಸಿದರೆ ಆ ಹಣ್ಣಿನ ರಸವು ಮರದ ಬೇರಿನ ಮೂಲಕವೇ ಬಂದು ಮಾರ್ಪಾಡನ್ನು ಹೊಂದಿ ಕಾಣಿಸಿಕೊಂಡಿರುವದನ್ನು ನೆನಪಿಡಬೇಕು. ಸಗುಣಧ್ಯಾನವೇ ಇಲ್ಲಿ ಬೇರಿನ ಸ್ಥಾನದಲ್ಲಿರುವದು. ಹಣ್ಣು ಕೊಂಬೆಗಳಲ್ಲಿ ಬಿಡುವದಾದ್ದರಿಂದ ಅದಕ್ಕೆ ನೆಲದ ಕೆಳಕ್ಕಿಳಿಯುವ ಬೇರಿನಿಂದ ಯಾವ ಪ್ರಯೋಜನವೂ ಆಗಲಾರದೆಂದು ಭಾವಿಸಿ ಬೇರಿಗೆ ಕೊಡಲಿಯನ್ನು ಹಾಕಿ ಕೊಂಬೆಗೆ ನೀರೆರೆಯುವ ಮೂರ್ಖರಂತೆ ನಾವು

ಸಗುಣಧ್ಯಾನವನ್ನು ತಿರಸ್ಕರಿಸಿ ನಿರ್ಗುಣದ ಒಣಮಾತುಗಳಿಂದ ಉಭಯ ಭ್ರಷ್ಟರಾಗಬಾರದೆಂಬ ಎಚ್ಚರಿಕೆಯು ಮನದಲ್ಲಿದ್ದರೆ ಸಾಧಕನು ಒಂದಲ್ಲದಿದ್ದರೆ ಒಂದು ದಿನ ಧನ್ಯನಾಗುವನು.

*****

## 17. ಪಾರಾಯಣ

ಧ್ಯಾನವೇ ಧರ್ಮದ ತಿರುಳು, ಧ್ಯಾನವೇ ಭಗವಂತನ ತಂಪಾದ ನೆರಳು, ಧ್ಯಾನವಿಲ್ಲದಿದ್ದರೆ ಉಳಿದದ್ದೆಲ್ಲ ಬರಿಯ ಮಾತು, ಅದರಿಂದ ಯಾವ ಪ್ರಯೋಜನವೂ ಆಗಲಾರದು. ಆದ್ದರಿಂದಲೇ "ಆ ಪರಮಾತ್ಮನೊಬ್ಬನನ್ನೇ ಧ್ಯಾನಿಸಿರಿ; ಮಿಕ್ಕ ಮಾತುಗಳನ್ನು ಬಿಡಿರಿ. ಅವುಗಳಿಂದ ವಾಗಿಂದ್ರಿಯಕ್ಕೆ ಆಯಾಸವೇ ಹೊರತು ಮತ್ತೆ ಬೇರೆ ಇಲ್ಲ" ಎಂದು ಶ್ರುತಿಯು ಸಾರುತ್ತಿರುವದು.

ಆದರೆ ಪರಮಾತ್ಮನ ಸನ್ನಿಧಿಯಲ್ಲಿಯೇ ಮನಸ್ಸನ್ನಿಟ್ಟುಕೊಂಡಿರುವದು ನಮ್ಮೆಲ್ಲರಿಗೂ ಸಾಧ್ಯವಿಲ್ಲ. ಮನಸ್ಸು ಹೊರಮುಖವಾಗಿ ವಿಷಯಗಳ ಚಿಂತೆಯನ್ನು ಮಾಡುತ್ತಿರುವದಕ್ಕೆ ಹವಣಿಸುವದೇ ಹೊರತು ಒಳಕ್ಕೆ ಹೋಗುವದಕ್ಕೆ ಒಲ್ಲದು. ತನ್ನೊಳಗೆ ತಾನು ಹೊಕ್ಕು ಧ್ಯಾನಿಸಿದಲ್ಲದೆ, ತನ್ನೊಳಗೆ ಆ ಪರಮೇಶ್ವರನನ್ನು ಕಂಡುಕೊಂಡಲ್ಲದೆ, ಹೊರಗೆ ಎಲ್ಲೆಲ್ಲಿಯೂ ಆತನನ್ನು ಕಾಣುವದಕ್ಕೆ ಆಗಲಾರದು. ಆದ್ದರಿಂದ ಬಹುಜನರಿಗೆ ಪರಮೇಶ್ವರನ ನೆನಪು ದೊರೆಯುವದು ಕಷ್ಟವಾಗಿರುತ್ತದೆ. ಅಂಥವರಿಗೆಲ್ಲ ಆ ಅಂತಸ್ತಿಗೆ ಮನಸ್ಸನ್ನು ಏರಿಸಿಕೊಳ್ಳುವದಕ್ಕೆ ಹೊರಗಿನ ಸಾಧನೆಗಳು ಬೇಕಾಗಿರುತ್ತವೆ. ಇಂಥ ಸಾಧನಗಳಲ್ಲಿ ಒಂದು ಮುಖ್ಯವಾದ ಸಾಧನವು ಪಾರಾಯಣವು.

**ಪಾರಾಯಣವೆಂದರೇನು?** ಯಾವದಾದರೊಂದು ಧರ್ಮಗ್ರಂಥವನ್ನು ಮಡಿಯಲ್ಲಿದ್ದುಕೊಂಡು ಓದುತ್ತಿರುವದಕ್ಕೆ **'ಪಾರಾಯಣ'**ವೆಂಬ ಹೆಸರು ರೂಢಿಯಲ್ಲಿದೆ. ಈ ಶಬ್ದದ **ವ್ಯುತ್ಪತ್ತಿಯನ್ನು** ನೋಡಿದರೆ ಪಾರಾಯಣವನ್ನು ಹೇಗೆ ಮಾಡಬೇಕೆಂಬುದೂ ಅದರಿಂದ ಏನು ಪ್ರಯೋಜನವೆಂಬುದೂ ಸ್ಪಷ್ಟವಾಗುತ್ತದೆ. **'ಪರಾಯಣ'**ವೆಂದರೆ ಅತ್ಯಂತ ಉತ್ತಮವಾದ ಗತಿಯು, ಇದೇ ನಮಗೆ ಹೆಚ್ಚಿನ ಸದ್ಗತಿಯನ್ನು ನೀಡುವದು ಎಂಬ ಶ್ರದ್ಧೆಯಿಂದ, ಯಾವದಾದರೊಂದು ಅನುಭವಪ್ರದವಾದ ಸದ್ಗ್ರಂಥವನ್ನು ಅದರ ಅರ್ಥಾನುಸಂಧಾನವನ್ನು ಮಾಡಿಕೊಳ್ಳುತ್ತಾ ಓದುವದು **'ಪಾರಾಯಣ'**

ವೆನಿಸುತ್ತದೆ. ಶ್ರದ್ಧೆ, ತಾತ್ಪರ್ಯ, ಬ್ರಹ್ಮಚರ್ಯ- ಇವು ಮೂರೂ ಪಾರಾಯಣಕ್ಕೆ ಬೇಕಾದ ಸಾಧನಗಳು. ಅವುಗಳಿಂದಲೇ ಪಾರಾಯಣವು ಪೂರ್ತಿಯಾಗುವದು, ಅವುಗಳಿಂದಲೇ ಪರಮಾರ್ಥಪರಗತಿಯಾದ ಆತ್ಮನ ಧ್ಯಾನವು ನಮಗೆ ಅಳವಡುವಂಥ ಮನಸ್ಸಿನ ಮಟ್ಟವು ನಮಗೆ ದೊರಕುವದು.

"ಒಂದು ಗ್ರಂಥವನ್ನು ಒಂದು ಸಲ ಓದಬಹುದು. ಅದು ಚೆನ್ನಾಗಿದೆಯೆಂದು ತೋರಿದರೆ ಮತ್ತೂ ಒಂದು ಸಲ ಓದಬಹುದು. ಆದರೆ ಅದೇ ಪುಸ್ತಕವನ್ನು ಪ್ರತಿ ದಿನವೂ ಬದುಕಿರುವವರೆಗೂ ಓದುತ್ತಲೇ ಇರುವದೆಂದರೆ ಹುಚ್ಚುತನವಲ್ಲವೆ?" ಎಂದು ಕೆಲವರು ಕೇಳಬಹುದು. ಸಾಮಾನ್ಯ ಪುಸ್ತಕಗಳ ವಿಷಯದಲ್ಲಿ ಈ ಆಕ್ಷೇಪವು ಸರಿಯಾದದ್ದೇ. ಏಕೆಂದರೆ ಒಂದೇ ಪುಸ್ತಕವನ್ನು ಮತ್ತೆ ಮತ್ತೆ ಓದುತ್ತಿದ್ದರೆ ಬೇಸರ ವಾಗುವದು, ಅದು ಮೊದಲಿಗಿಂತಲೂ ಎರಡನೆಯ ಸಲ ಸಪ್ಪೆಯಾಗಿಯೇ ತೋರು ವದು. ದಿನದಿನಕ್ಕೂ ಹೊಸದೊಂದನ್ನು ಹುಡುಕುತ್ತಿರುವ ಚಿತ್ತಕ್ಕೆ ಒಂದೇ ಹಳೆಯ ಗ್ರಂಥವು ಯಾವಾಗ್ಯೂ ಹೇಗೆ ಸೊಗಸೀತು? ಆದರೆ ಉಪನಿಷತ್ತುಗಳು, ಭಗವದ್ಗೀತೆ, ರಾಮಾಯಣ, ಭಾಗವತ- ಇಂಥ ಅಮೂಲ್ಯವಾದ ಧರ್ಮಗ್ರಂಥಗಳಿಗೆ ಇದೇ ಆಕ್ಷೇಪಣೆಯು ಹೊಂದುವದಿಲ್ಲ. ಏಕೆಂದರೆ ಈ ಗ್ರಂಥಗಳಲ್ಲಿ ಒಬ್ಬೊಬ್ಬ ಅಧಿಕಾರಿಗೂ ಬೇರೆಬೇರೆ ದೇಶ, ಕಾಲ, ನಿಮಿತ್ತಗಳಿಂದ ಬೇರೆಬೇರೆಯ ಪರಿಣಾಮವನ್ನು ಮನಸ್ಸಿನ ಮೇಲೆ ಮೂಡಿಸುವ ಶಕ್ತಿಯಿರುತ್ತದೆ.

ಭಗವದ್ಗೀತೆಯಂಥ ಧರ್ಮಗ್ರಂಥದಲ್ಲಿ ಅನುಭವಾಮೃತವು ಎಲ್ಲೆಲ್ಲಿಯೂ ತುಂಬಿರುತ್ತದೆ. ಆದರೆ ಒಬ್ಬೊಬ್ಬ ಅಧಿಕಾರಿಯು ಒಂದೊಂದು ಶ್ಲೋಕದಲ್ಲಿ ಆ ಅಮೃತದ ಸವಿಯನ್ನು ಕಂಡುಕೊಳ್ಳಬೇಕಾಗಿರುತ್ತದೆ. ಅದರಲ್ಲಿಯೂ ಅದೇ ಅಧಿಕಾರಿಗೆ ಒಂದಾನೊಂದು ದೇಶದಲ್ಲಿ ಒಂದಾನೊಂದು ಕಾಲದಲ್ಲಿ ಒಂದಾನೊಂದು ನಿಮಿತ್ತ ದಿಂದ ಆಯಾ ಶ್ಲೋಕದಲ್ಲಿ ಆಯಾ ಸ್ವಾರಸ್ಯವು ತೋರಿಬರುತ್ತದೆಯೇ ಹೊರತು ಯಾವಾಗಲೂ ತೋರಲಾರದು. ಇದಕ್ಕೆ ಕಾರಣವೇನೆಂದರೆ ಆಯಾ ಸ್ವಾರಸ್ಯವನ್ನು ಅನುಭವಿಸುವದಕ್ಕೆ ಚಿತ್ತವು ಒಂದಾನೊಂದು ಸಂಸ್ಕಾರವನ್ನು ಹೊಂದಬೇಕಾಗಿರುತ್ತದೆ. ಆ ಸಂಸ್ಕಾರವು ಹಲವು ಬಾರಿ ಗ್ರಂಥಗಳನ್ನು ಸರಿಯಾದ ಕ್ರಮದಲ್ಲಿ ಪಾರಾಯಣ ಮಾಡಿದವರಿಗೆ ಮಾತ್ರ ಸಾಧ್ಯವಾಗಿರುತ್ತದೆ.

ಪಾರಾಯಣದಲ್ಲಿ ಶ್ರದ್ಧೆಯಿರಬೇಕೆಂದೂ ತಾತ್ಪರ್ಯವಿರಬೇಕೆಂದೂ ಮೇಲೆ ಬಿನ್ನವಿಸಿಕೊಂಡಿರುತ್ತೇನಷ್ಟೇ. ಈ ಶ್ರದ್ಧೆಯು ನಮ್ಮ ನಮ್ಮ ಆಯಾ ಕಾಲದ ಮನಃಸ್ಥಿತಿಯನ್ನವಲಂಬಿಸಿರುತ್ತದೆ; ಗ್ರಂಥವು ತಿಳಿಸುವ ವಿಷಯದಲ್ಲಿ ತತ್ಪರತೆಯೂ ಕೂಡ ಆ ಮನಃಸ್ಥಿತಿಯನ್ನೇ ಅವಲಂಬಿಸಿರುತ್ತದೆ. ನಮ್ಮ ಮನಸ್ಸು ಬಾಲ್ಯದಲ್ಲಿ ಒಂದು ಬಗೆ, ಯೌವನದಲ್ಲಿ ಒಂದು ಬಗೆ- ಹೀಗೆ ಬೇರೆ ಬೇರೆಯ ವಯಸ್ಸಿನಲ್ಲಿ ಬೇರೆ ಬೇರೆಯ ಬಗೆಯ ಮಟ್ಟದಲ್ಲಿರುತ್ತದೆ. ಆಯಾ ವಯಸ್ಸಿನಲ್ಲಿಯೂ ತಮ್ಮ ಸುತ್ತಲಿನ ಸನ್ನಿವೇಶಗಳು, ನಮಗೆ ಆಗಿರುವ ವಿದ್ಯಾಸಂಸ್ಕಾರ, ನಾವು ಮಾಡುವ ಸ್ಥಿರಪ್ರಯತ್ನ- ಇವುಗಳಿಗೆಲ್ಲ ಅನುಸಾರವಾಗಿ ಈ ಶ್ರದ್ಧಾತಾತ್ಪರ್ಯಗಳು ಉಂಟಾಗುತ್ತವೆ. ಇವೆರಡರ ಜೊತೆಗೆ ಇಂದ್ರಿಯಸಂಯಮವೂ ಸೇರಿದ್ದರೆ ಏಕಾಗ್ರತೆಯಿಂದ ಗ್ರಂಥ ಪಾರಾಯಣ ವನ್ನು ನಾವು ಮಾಡಬಹುದು. ಆಗಲೇ ನಮಗೆ ಪಾರಾಯಣದ ಪೂರ್ಣಫಲವು ಕೈವಶವಾಗುವದು. ಪಾರಾಯಣ ಮಾಡುವಾಗ ನಾವು ಯಾವ ಪ್ರಯತ್ನವಿಶೇಷವನ್ನು ಮಾಡಿದರೆ ನಮಗೆ ಈ ಫಲವು ಬೇಗನೆ ಕೈಗೂಡುವದೆಂಬುದನ್ನು ಮುಂದಿನ ಲೇಖನದಲ್ಲಿ ವಿಚಾರಿಸೋಣ.

*****

## 18. ಪಾರಾಯಣ ಕ್ರಮ

ಭಗವದ್ಗೀತೆಯೇ ಮುಂತಾದ ಗ್ರಂಥಗಳನ್ನು ಶ್ರದ್ಧೆಯಿಂದ ಪಾರಾಯಣ ಮಾಡುವದು ಉತ್ತಮಫಲವನ್ನು ಕೊಡುವದೆಂದು ಹಿಂದಿನ ಲೇಖನದಲ್ಲಿ ತಿಳಿಸಿದ್ದೆನಷ್ಟೆ. ಪಾರಾಯಣಕ್ಕೆ ಕ್ರಮವೇನಾದರೂ ಅವಶ್ಯವೆ?- ಎಂಬುದನ್ನೀಗ ವಿಚಾರಿಸೋಣ. ಯಾವ ಕೆಲಸಕ್ಕಾದರೂ ಒಂದು ಕ್ರಮವಿಶೇಷವಿದ್ದರೇ ಅದು ಪೂರ್ಣ ಫಲವನ್ನು ಕೊಡುವ ದೆಂಬುದು ಸ್ಪಷ್ಟವೇ ಆಗಿರುತ್ತದೆ. ಆದ್ದರಿಂದ ಪಾರಾಯಣಕ್ಕೂ ಒಂದು ಕ್ರಮವು ಅವಶ್ಯವಾಗಿರುತ್ತದೆ. ಎಷ್ಟೋ ಜನರು ಪಾರಾಯಣಗ್ರಂಥಗಳನ್ನು ಗಿಳಿಯಂತೆ ಹೇಗೋ ಓದಿಮುಗಿಸುತ್ತಾರೆ. 'ಇಷ್ಟು ಸಲ ರಾಮಾಯಣವನ್ನು ಮುಗಿಸಿ ಮಂಗಳವನ್ನು ಮಾಡಿರುತ್ತೇನೆ' ಎಂದು ಹೇಳಿಕೊಳ್ಳುವವರು ಅಲ್ಲಲ್ಲಿ ಕಂಡುಬರುತ್ತಾರೆ; ಆದರೆ 'ಪಾರಾಯಣದಲ್ಲಿ ಇಂಥಿಂಥ ಸತ್ಫಲವು ನನಗೆ ಲಭಿಸಿತು. ನಾನು ಇಂಥ ಕ್ರಮವನ್ನು ಅನುಸರಿಸಿದೆನು' ಎಂದು ತಿಳಿಸುವವರು ವಿರಳವಾಗಿರುತ್ತಾರೆ.

ಪಾರಾಯಣದ ಕ್ರಮವೆಂದರೆ ಮಡಿಯಲ್ಲಿ ಮೌನವಾಗಿ ಕುಳಿತು ಪೂಜಾದಿಗಳನ್ನು ಮಾಡಿ ನ್ಯಾಸಜಪಾದಿಗಳ ಅನಂತರ ಓದುವದೆಂಬ ನಿಯಮವೆಂದು ನನ್ನ ಅಭಿಪ್ರಾಯವಲ್ಲ. ಆ ನಿಯಮದಿಂದಲೂ ಅಲ್ಪಸ್ವಲ್ಪ ಪ್ರಯೋಜನವಿದೆ; ಆದರೆ ಪೂರ್ಣಪ್ರಯೋಜನವಾಗಬೇಕಾದರೆ ಪಾರಾಯಣ ಮಾಡುವವರ ಮನಃಸ್ಥಿತಿಯು ಒಂದಾನೊಂದು ವಿಶೇಷಕ್ರಮವನ್ನು ಅಂಗೀಕರಿಸುವದು ಅತ್ಯವಶ್ಯವಾಗಿರುತ್ತದೆ.

ಗೀತೆಗಳಂಥ ಗ್ರಂಥಗಳನ್ನು ಆದಷ್ಟುಮಟ್ಟಿಗೆ ಮೂಲದಲ್ಲಿ ಓದಬೇಕು. ಅವುಗಳ ವಿಷಯವಾಗಿ ಬರೆದಿರುವ ವ್ಯಾಖ್ಯಾನಗಳನ್ನೂ ಉಪನ್ಯಾಸಗಳನ್ನೂ ಪಾರಾಯಣಕ್ಕೆ ಇಟ್ಟುಕೊಳ್ಳದೆ ಇರುವದೇ ಮೇಲು. ಏಕೆಂದರೆ ಮೂಲಗ್ರಂಥಗಳಲ್ಲಿ ಒಂದು ವಿಧವಾದ ದೈವಿಕಪ್ರಸಾದವಿರುತ್ತದೆ; ಮನಸ್ಸನ್ನು ಉತ್ಕೃಷ್ಟಸ್ಥಿತಿಗೆ ಏರಿಸಿ ಭಗವಂತನ ಸನ್ನಿಧಿಗೆ ಬಿಡುವ ಪರಿಣಾಮವನ್ನು ಮಾಡುವಂಥ ಶಕ್ತಿಯಿರುತ್ತದೆ. ಆ ಗ್ರಂಥಗಳನ್ನು ಮೊದಲು ಲೋಕಕ್ಕೆ ಕೊಟ್ಟವರು ತಾವು ತತ್ತ್ವವನ್ನು ಮನಗಂಡ ಸ್ಥಿತಿಯಲ್ಲಿಯೇ ಮನಸ್ಸಿಟ್ಟುಕೊಂಡು ಅವುಗಳನ್ನು ಅನುಗ್ರಹಿಸಿದರು. ಆದ್ದರಿಂದ ಅವುಗಳಿಂದ ನಮಗೆ ಬರಬಹುದಾದ ಅಧ್ಯಾತ್ಮಶಕ್ತಿಯನ್ನು ಮಿಕ್ಕ ವಾಕ್ಯಗಳ ವಿಚಾರದಿಂದ ಚದರಿಸಿಕೊಳ್ಳಬಾರದು.

ಪಾರಾಯಣಮಾಡುವಾಗ ಆಯಾ ಸನ್ನಿವೇಶವು ಈಗಲೆ ನಮ್ಮೆದುರಿಗೇ ಇರುವಂತೆ ಕಲ್ಪಿಸಿಕೊಳ್ಳುವ ಅಭ್ಯಾಸವನ್ನು ಮಾಡಬೇಕು. ಉದಾಹರಣೆಗೆ ಶ್ರೀಕೃಷ್ಣನು ಅರ್ಜುನನಿಗೆ ಮಾಡಿದ ಉಪದೇಶಗಳನ್ನು ಈಗ ನಮ್ಮೆದುರಿಗೆ ಆತನು ಮಾಡುತ್ತಿರುವಂತೆ ಕಲ್ಪಿಸಿಕೊಳ್ಳಬೇಕು. ಉಪನಿಷತ್ತುಗಳಲ್ಲಿ ಹೇಳುವ ಆತ್ಮತತ್ತ್ವವು ನಮ್ಮ ಆತ್ಮನೇ ಆಗಿರುವದೆಂಬುದನ್ನು ಲಕ್ಷ್ಯದಲ್ಲಿಡಬೇಕು, ರಾಮಾಯಣದಲ್ಲಿ ರಾಮನು ಪಿತೃವಾಕ್ಯ ಪರಿಪಾಲನೆಗೆ ಕೊಡುವ ಬೆಲೆಯನ್ನು ಈಗ ನಮ್ಮೆದುರಿಗೆ ಆತನು ತೋರಿಸುತ್ತಿರುವಂತೆ ಕಲ್ಪಿಸಬೇಕು, ಭಾಗವತದಲ್ಲಿ ಶುಕರು ಪರೀಕ್ಷಿತನಿಗೆ ಮಾಡುತ್ತಿರುವ ಉಪದೇಶವು ನಮಗಾಗಿ ಈಗಲೇ ಆಗುತ್ತಿರುವಂತೆ ಭಾವಿಸಬೇಕು– ಇತ್ಯಾದಿ. ಈ ಅಭ್ಯಾಸವು ಬಲಿತಂತೆ ಪಾರಾಯಣಕಾಲದಲ್ಲಿ ನಮ್ಮ ಮನಸ್ಸು ತನ್ನದೇ ಒಂದು ಶುದ್ಧ ಪ್ರಪಂಚವನ್ನು ಏರ್ಪಡಿಸಿಕೊಂಡುಬಿಡುತ್ತದೆ. ಮನಸ್ಸೇ ಬಂಧಮೋಕ್ಷಗಳಿಗೆ ಕಾರಣವಾಗಿರುವುದರಿಂದ ತತ್ಕಾಲದಲ್ಲಿ ನಮಗೆ ಮೋಕ್ಷಸಾಮ್ರಾಜ್ಯವೇ ದೊರೆತಂತೆ ಆಗಿಬಿಡುತ್ತದೆ.

ಓದುವ ಗ್ರಂಥಭಾಗದಲ್ಲಿ ಏನಾದರೂ ಸಂದೇಹವು ಬಂದರೆ ವಿಚಾರ

ಮಾಡುತ್ತಾ ಕೂರಬಾರದು. ಅದೇ ಗ್ರಂಥದಲ್ಲಿ ಹಿಂದಿನ ಭಾಗದಲ್ಲಿ ಹೇಳಿರುವ ಅಥವಾ ಮುಂದೆ ಹೇಳುವ ಉಪದೇಶಗಳಿಂದ ನಮ್ಮ ಸಂದೇಹವು ಖಂಡಿತವಾಗಿ ಪರಿಹಾರ ವಾಗುವದೆಂಬ ಭರವಸೆಯನ್ನು ಇಟ್ಟುಕೊಳ್ಳಬೇಕು. ಹಾಗೆಯೇ ಆಗಿಯೂ ತೀರುತ್ತವೆ.

ಪಾರಾಯಣಗ್ರಂಥವೆಂದರೆ ಪರಮೇಶ್ವರನೊಡನೆ ನಾವು ಸಂಭಾಷಿಸುವದಕ್ಕೆ ಮಾಡಿಕೊಳ್ಳುವ ದ್ವಾರವು. ಗ್ರಂಥದಲ್ಲಿ ಅತ್ಯಂತ ಪೂಜ್ಯಬುದ್ಧಿಯಿರಬೇಕು. ಅದರಲ್ಲಿ ಪರಮೇಶ್ವರನ ಸನ್ನಿಧಿಯನ್ನು ಭಾವಿಸಬೇಕು, ಅದರಲ್ಲಿರುವ ಉಪದೇಶಗಳನ್ನೂ ವಾಗ್ದಾನಗಳನ್ನೂ ಕುಹಕಬುದ್ಧಿಯಿಂದ ಕಾಣದೆ ದೃಢವಿಶ್ವಾಸದಿಂದ ಅವುಗಳನ್ನು ಆಧಾರವಾಗಿಟ್ಟುಕೊಂಡು ನಡೆಯಬೇಕು. ಹೀಗಾದರೆ ಅಲ್ಲಿಗಲ್ಲಿಗೆ ವಾಕ್ಯಗಳಲ್ಲಿ ನಮಗೆ ವಿಶೇಷಾರ್ಥಗಳು ಸ್ಫೂರ್ತಿಯಾಗುವುವು. ಸಾವಿರಾರು ವ್ಯಾಖ್ಯಾನಕಾರರು ಬಿಡಿಸ ಲಾರದೆ ಇದ್ದ ಕ್ಲಿಷ್ಟಭಾಗಗಳು ತಮಗೆ ತಾವೇ ಬಿಡಿಸಿಕೊಳ್ಳುವವು. ಪಾರಾಯಣ ಗ್ರಂಥವು ಕೆಲವು ನಿಮಿಷಗಳವರೆಗೆ ಓದಿಡುವ ಬಾಹ್ಯಾಚಾರದ ಕಾಟದ ಪುಸ್ತಕ ವಾಗಿರದೆ, ನಮ್ಮ ಜೀವನಪಥದಲ್ಲಿ ಬೆಳಕನ್ನು ಬೀರುತ್ತಿರುವ ದಿವ್ಯಜ್ಯೋತಿ ಎಂಬ ಭಾವವು ಬಲವಾದಂತೆಲ್ಲ ಪಾರಾಯಣದ ಪ್ರಯೋಜನವು ಹೆಚ್ಚು ಹೆಚ್ಚಾಗಿ ಅನುಭವಕ್ಕೆ ಬರುವದು. ರಾಮಾಯಣದಲ್ಲಿರುವ ಧರ್ಮ, ಭಾಗವತದಲ್ಲಿರುವ ಭಕ್ತಿ, ಉಪನಿಷತ್ತು ಗಳಲ್ಲಿರುವ ಪರಮಾರ್ಥ, ಗೀತೆಯಲ್ಲಿರುವ ಯೋಗಗಳು- ಇವು ಸಜೀವವಾಗಿ ನಮ್ಮ ಹೃದಯದಲ್ಲಿ ನೆಲಸುವವು.

*****

# 19. ಸದ್ವ್ಯವಹಾರ -1

ವ್ಯವಹಾರವೆಂದರೇನು? ನಾವೆಲ್ಲರೂ ಏನನ್ನಾದರೂ ಅರಿಯಬೇಕೆಂದು ಅಥವಾ ಏನನ್ನಾದರೂ ಪಡೆದುಕೊಳ್ಳಬೇಕೆಂದು ಕೆಲಸದಲ್ಲಿ ತೊಡಗುತ್ತಿರುವೆವು. ಇದಕ್ಕೆ **'ವ್ಯವಹಾರ'** ವೆಂದು ಹೆಸರು. ಕೋರ್ಟುಕಚೇರಿಗಳಲ್ಲಿ ಜನರು ತಮ್ಮ ಜಗಳವನ್ನು ವ್ಯವಸ್ಥೆ ಮಾಡಿಕೊಳ್ಳುವದಕ್ಕೆಂದು ನಡೆಯಿಸುವ ಕಾರ್ಯಕ್ರಮವನ್ನೇ ವ್ಯವಹಾರವೆಂದು ಕರೆಯುವದು ರೂಢಿಯಲ್ಲಿದೆ. ಅಲ್ಲಿಯೂ ಒಂದಾನೊಂದು ಪ್ರಯೋಜನಕ್ಕಾಗಿ ಕೆಲಸ ವನ್ನು ಮಾಡುವದರಿಂದ ಅದನ್ನು ವ್ಯವಹಾರವೆಂದು ಕರೆಯಲು ಅಡ್ಡಿಯಿಲ್ಲ. ಆದರೆ

ಅದೇ ವ್ಯವಹಾರವಲ್ಲ, ಅದೂ ಒಂದು ವ್ಯವಹಾರ- ಅಷ್ಟೆ. ಇದರಂತೆ ವಿನೋದಕ್ಕಾಗಿ ಆಡುವ ಆಟಗಳು ಕೂಡ ವ್ಯವಹಾರಗಳೆನಿಸುವವು.

ವ್ಯವಹಾರವನ್ನು ಸದ್ವ್ಯವಹಾರವೆಂದೂ ಅಸದ್ವ್ಯವಹಾರವೆಂದೂ ಎರಡು ಬಗೆಯಾಗಿ ವಿಂಗಡಿಸಬಹುದು. ಸದ್ವ್ಯವಹಾರವೆಂದರೆ ವ್ಯವಹಾರದ ಪರವು ಪ್ರಯೋಜನವನ್ನು ಗುರಿಯಲ್ಲಿಟ್ಟುಕೊಂಡು ಮಾಡುವ ವ್ಯವಹಾರವು; ಅಸದ್ವ್ಯವಹಾರವೆಂದರೆ ಕೊನೆಯ ಪ್ರಯೋಜನವನ್ನು ಲೆಕ್ಕಿಸದೆ ಸದ್ಯಕ್ಕೆ ನಮಗೆ ಪ್ರಿಯವೆಂದು ತೋರುವ ಯಾವದಾದರೊಂದು ಕೆಲಸದಲ್ಲಿ ತೊಡಗುವದು. ಅಸದ್ವ್ಯವಹಾರದಿಂದ ನಮಗೇ ಅಲ್ಲದೇ ಮಿಕ್ಕವರಿಗೂ ಕೆಟ್ಟದ್ದಾಗಬಹುದು, ಸದ್ವ್ಯವಹಾರದಿಂದ ಮಾತ್ರ ಎಲ್ಲರಿಗೂ ಒಳ್ಳೆಯದೇ ಆಗುವದು.

ವ್ಯವಹಾರದ ಗುರಿಯಾವದು? ಯಾವ ಪ್ರಯೋಜನಕ್ಕಾಗಿ ನಾವುಗಳು ದುಡಿಯುತ್ತಿದ್ದರೆ ಅದನ್ನು ಸದ್ವ್ಯವಹಾರವೆಂದು ಕರೆಯಬಹುದು?- ಎಂಬ ಪ್ರಶ್ನೆಯನ್ನು ಬಹುಜನರು ತಮ್ಮ ಮುಂದಕ್ಕೆ ಬರಗೊಡಿಸುವುದಿಲ್ಲ. ನಮ್ಮಲ್ಲಿ ಬಹು ಮಂದಿ ನಮಗೆ ಸದ್ಯಕ್ಕೆ ಪ್ರಿಯವಾದದ್ದನ್ನು ಮಾಡುತ್ತೇವೆ, ಅಥವಾ ಸದ್ಯಕ್ಕೆ ಅವಶ್ಯವೆಂದು ಕಾಣುವದನ್ನು ಮಾಡುತ್ತೇವೆ, ಉಳಿದ ಜನರು ಹೇಗೆ ಮಾಡುತ್ತಿರುವರೋ ಹಾಗೆ ಮಾಡಿದರೆ ವ್ಯವಹಾರವಾಯಿತೆಂದೇ ಎಷ್ಟೋ ಜನರು ಭಾವಿಸಿರುವಂತೆ ತೋರುತ್ತದೆ.

"ನೀನೇತಕ್ಕೆ ಇಷ್ಟೊಂದು ಕಷ್ಟಪಡುತ್ತೀಯೆ?" ಎಂದು ನಿಮ್ಮ ಗುರುತಿನವರನ್ನು ಕೇಳಿದರೆ ಸಾಧಾರಣವಾಗಿ ಬರುವ ಉತ್ತರವು ನಿಮಗೆ ತಿಳಿದೇ ಇದೆ. "ಕಷ್ಟಪಡುವದೇ ಮತ್ತೇತಕ್ಕೆ? ಹೊಟ್ಟೆಗೆ ಬಟ್ಟೆಗೆ- ಇವೆರಡು ನೇರವಾದರೆ ಯಾರು ದುಡಿಯುತ್ತಾರೆ?" ಇದೇ ಆ ಉತ್ತರ. ಪಾಪ! ಈ ನಮ್ಮ ಬಡದೇಶದಲ್ಲಿ ಮುಕ್ಕಾಲುವಾಸಿ ಜನರಿಗೆ ಅಷ್ಟೂ ದೊರೆಯುವ ಹಾಗಿಲ್ಲ.

ಇನ್ನೂ ಸ್ವಲ್ಪ ಮುಂದಕ್ಕೆ ಹೋಗಿರುವವರು "ನಮಗೆ ಜೀವನಸೌಕರ್ಯ ಬೇಕು. ಉಣ್ಣುವದಕ್ಕೆ ಉಡುವದಕ್ಕೇ ಅಲ್ಲದೆ, ನಮಗೆ ಯಾವಾಗಲೂ ಸಂತೋಷದಿಂದ ಇರುವದಕ್ಕೆ ಬೇಕಾದ ಸಾಮಗ್ರಿಗಳೂ ಬೇಕು. ಮನೆ ಮಠ, ಹೊಲ ಕಣ, ಹಣ ಕಾಸು, ಹೆಂಡಿರು ಮಕ್ಕಳು, ನೆಂಟರು ಇಷ್ಟರು, ವಿದ್ಯಾಬುದ್ಧಿಗಳು- ಎಲ್ಲವೂ ಬೇಕು" ಎಂದು ಬಯಸುತ್ತಿರುವರು. ಇದು ತಿಳಿವಳಿಕೆಯುಳ್ಳವರಲ್ಲಿ ಬಹುಜನರ ಗುರಿಯು. ಇದನ್ನು 'ಭೋಗದ ಆಶೆ' ಎಂದು ಕರೆಯಬಹುದು.

ಭೋಗಸಾಮಗ್ರಿಯನ್ನು ಬಯಸುವದರಲ್ಲಿ ತಪ್ಪೇನೂ ಇಲ್ಲ. ಮನುಷ್ಯನಿಗೆ ಭೋಗದಿಂದ ಸುಖವು ತೋರುವದುಂಟೆಂಬುದು ಅನುಭವದಲ್ಲಿಯೂ ಇದೆ. ಆದರೆ ಭೋಗಸಾಮಗ್ರಿಯನ್ನು ರಾಶಿಹಾಕಿಕೊಳ್ಳುವದೇ ವ್ಯವಹಾರದ ಗುರಿ -ಎಂದು ಇಟ್ಟುಕೊಳ್ಳುವದರಲ್ಲಿ ಒಂದು ಅಪಾಯವಿದೆ. ಅದೇನೆಂದರೆ ಬಹು ಜನರಿಗೆ ಈ ರಾಶಿಯು ಕನಸಿನ ಗಂಟೇ ಆಗಿರುತ್ತದೆ; ಯಾರಿಗೆ ಅದು ನಿಜವಾಗಿ ದೊರೆಯುತ್ತದೆಯೋ ಅವರಿಗೆ ನಿರಾತಂಕವಾಗಿ ಆ ವಿಷಯಗಳನ್ನು ಭೋಗಿಸುವ ಸಾಮರ್ಥ್ಯವೂ ಅನುಕೂಲ್ಯವೂ ಇದ್ದೇ ಇರುತ್ತದೆಯೆಂಬ ನಿಯಮವೇನೂ ಇರುವದಿಲ್ಲ; ಅವರ ಭೋಗವಿಲಾಸದ ರಾಶಿಯನ್ನು ಕಂಡ ಇತರರಿಗೆ ಅದರ ಮೇಲೆ ಕಣ್ಣು ಬಿದ್ದು ಒಬ್ಬೊಬ್ಬರಿಗೆ ವೈಮನಸ್ಯವುಂಟಾಗುವ ಸಂದರ್ಭಗಳೂ ಬಹಳವಾಗಿರುತ್ತವೆ. ಈ ನಿಯಮವು ವ್ಯಕ್ತಿಗಳಿಗೇ ಅಲ್ಲದೆ ಜನಾಂಗಗಳಿಗೂ ಹೊಂದುತ್ತದೆ. ಈಗಿನ ಕಾಲದಲ್ಲಿ ಜನಾಂಗಗಳು ಪರಸ್ಪರವಾಗಿ ಕಲಹವಾಡುತ್ತ ಭೂಲೋಕವನ್ನು ನರಬಲಿಯ ಮಾರಿಗುಡಿಯನ್ನಾಗಿ ಮಾಡುತ್ತಿರುವದಕ್ಕೆ ಸ್ವಾರ್ಥದ ಭೋಗೇಚ್ಛೆಯಲ್ಲದೆ ಮತ್ತೇನು ಕಾರಣ?

ಅರಿಯದ ಅವಿವೇಕಿಗಳಂತೆ ಹೊಟ್ಟೆಬಟ್ಟೆಗಳಿಗೆ ದುಡಿಯುವದೂ ವ್ಯವಹಾರದ ಗುರಿಯಲ್ಲ. ಅರಿತ ಮೂಢರಂತೆ ವಿಲಾಸಕ್ಕೆ ಮರುಳಾಗಿ ಭೋಗಸಾಮಗ್ರಿಗಳ ಬೇಟೆಗೆ ಹರಿಯುವದೂ ವ್ಯವಹಾರದ ಗುರಿಯಲ್ಲ. ದೇವರು ಹೇಗೆ ಹುಟ್ಟಿಸಿದನೋ ಹಾಗೆಯೇ ಓಡಾಡುತ್ತ ಪಶುಗಳಂತೆ ಇರುವ ಕಾಡು ಜನರ ವರ್ತನೆಯಾಗಲಿ, ಬುದ್ಧಿಯನ್ನುಪಯೋಗಿಸಿ ಯಂತ್ರಾದಿಗಳನ್ನು ನಿರ್ಮಿಸಿಕೊಂಡು ಸಾಮಾನ್ಯರಿಗೆಲ್ಲ ಜೀತದ ಸಂಕೋಲೆಗಳನ್ನು ತೊಡಿಸಿ ಅವರಿಂದ ತಮ್ಮ ಭೋಗಕ್ಕಾಗಿ ದುಡಿಸಿಕೊಳ್ಳುವ 'ನಾಗರಿಕತನ'ವಾಗಲಿ ವ್ಯವಹಾರದ ಹೆಗ್ಗುರಿಯಲ್ಲ. ಪರಮಾರ್ಥವಾದ ಆನಂದವನ್ನು ಕಂಡುಕೊಂಡು ತಾನೂ ಆನಂದಿಸುತ್ತಾ ತನ್ನ ಸುತ್ತಲೂ ಇರುವವರನ್ನು ಆನಂದದಲ್ಲಿ ಮುಳುಗಿಸುವದೇ ವ್ಯವಹಾರದ ಗುರಿಯು. ಆ ಗುರಿಯನ್ನು ಯಾವಾಗಲೂ ಇಟ್ಟುಕೊಂಡಿರುವ ವ್ಯವಹಾರವೇ **ಸದ್ವ್ಯವಹಾರವು.**

*****

# 20. ಸದ್ವ್ಯವಹಾರ -2

ಪರಮಾರ್ಥವಾದ ಆನಂದವನ್ನು ಕಂಡುಕೊಂಡು ತಾನೂ ಆನಂದಿಸುತ್ತಾ ತನ್ನ ಸುತ್ತಲೂ ಇರುವವರನ್ನೂ ಆನಂದದಲ್ಲಿ ಮುಳುಗಿಸುವದೇ ವ್ಯವಹಾರದ ಗುರಿಯು, ಆ ಗುರಿಯನ್ನು ಯಾವಾಗಲೂ ಇಟ್ಟುಕೊಂಡಿರುವ ವ್ಯವಹಾರವೇ ಸದ್ವ್ಯವಹಾರವು ಎಂದು ಹಿಂದೆ ತಿಳಿಸಿರುತ್ತೇನೆ. ಸದ್ವ್ಯವಹಾರವನ್ನೇ ಅನುಸರಿಸಬೇಕೆನ್ನುವವರು 'ನಾನು ಪರಮಾರ್ಥವಾದ ಆನಂದವನ್ನು ಹುಡುಕುತ್ತಿದ್ದೇನೆಯೇ, ಇಲ್ಲವೆ?' ಎಂಬ ಪ್ರಶ್ನೆ ಯನ್ನು ಬಾರಿ ಬಾರಿಗೂ ತಮಗೆ - ತಾವು ಹಾಕಿಕೊಳ್ಳುತ್ತಿರಬೇಕೆಂದು ಇದರಿಂದಲೇ ಸಿದ್ಧವಾಗುತ್ತದೆ.

ನಿಜವಾದ ಆನಂದವು ಪರಮೇಶ್ವರನ ಸ್ವರೂಪವಾಗಿರುತ್ತದೆ; ಅದು ಎಲ್ಲೆಲ್ಲಿ ಯೂ ತುಂಬಿತುಳುಕಾಡುತ್ತಿದೆ- ಎಂದು ಶಾಸ್ತ್ರಗಳು ಮೊಳಗುತ್ತಿರುವವು, ತಿಳಿದವರು ಸಾರಿಸಾರಿ ಹೇಳುತ್ತಿರುವರು. ಆದ್ದರಿಂದ ನಮಗೆ ಯಾವ ವ್ಯವಹಾರದಿಂದಲಾದರೂ ದುಃಖವಾದರೆ ನಾವು ಅಜ್ಞಾನದಿಂದ ಆನಂದವನ್ನು ಕಳೆದುಕೊಂಡು ಆ ರೀತಿ ವ್ಯವಹರಿಸುತ್ತಿದೇವೆ ಎಂಬುದನ್ನು ಅದು ಸೂಚಿಸುತ್ತದೆ. ಅಷ್ಟೇ ಅಲ್ಲ, ನಾವು ಯಾವ ದಾದರೂ ವ್ಯವಹಾರವನ್ನು ಮಾಡುವಾಗ ಅದರಿಂದ ಮತ್ತೊಬ್ಬರಿಗೆ ದುಃಖವುಂಟಾಗು ವಂತಿದ್ದರೂ ಅದು ಸದ್ವ್ಯವಹಾರವಾಗಲಾರದು. ಏಕೆಂದರೆ ಸದ್ವ್ಯವಹಾರವು ತಿಳಿದವರ ವ್ಯವಹಾರವು; ಆ ವ್ಯವಹಾರದಲ್ಲಿ ತನಗಾಗಲಿ ಮತ್ತೊಬ್ಬರಿಗಾಗಲಿ ದುಃಖವಾಗುವದಕ್ಕೆ ಕಾರಣವಿಲ್ಲ,

ಆನಂದವು ಎಲ್ಲೆಲ್ಲಿಯೂ ಇರುತ್ತಿದ್ದರೆ ನಮಗೇಕೆ ಅದುಕಾಣಬರುವುದಿಲ್ಲ? ಅಡಿಗಡಿಗೂ ನಮಗೇಕೆ ದುಃಖವು ಕಾಣಿಸಿಕೊಳ್ಳುತ್ತಿರುವದು? ಒಂದೊಂದು ವೇಳೆ ಸುಖವು ತೋರಿದರೂ ಅದೆಲ್ಲಿ ಹಾರುವದೋ ಎಂಬ ಅಂಜಿಕೆಯೂ ಅದು ದುಃಖದಲ್ಲಿ ಕೊನೆಗಾಣಬಹುದೆಂಬ ಅಳುಕೂ ನಮ್ಮನ್ನೇಕೆ ಬೆನ್ನಂಟಿರುವದು?ಎಂದು ಕೇಳಬಹುದು. ಏಕೆಂದರೆ ಆನಂದಕ್ಕೆ ಕವಿದುಕೊಂಡಿರುವ ಅಜ್ಞಾನದ ಕಾವಳವನ್ನು ನಾವು ತೊಲಗಿಸಿ ಕೊಂಡಿರುವದಿಲ್ಲ; ಕೆರೆಯಲ್ಲಿ ಎಲ್ಲೆಲ್ಲಿಯೂ ನೀರು ಇರುತ್ತಿದ್ದರೂ ಅದನ್ನು ಹಾವಸೆಯು (ಪಾಚಿ) ಮುಚ್ಚಿಕೊಂಡಿದ್ದರೆ ಅದು ಕಾಣದೆ ಇರುವಂತೆ ನಮ್ಮಲ್ಲಿಯೂ ನಮ್ಮ ಸುತ್ತು ಮುತ್ತಲೂ ಇರುವ ಆನಂದರಸವು ಕಾಣದಂತೆ ಅದರ ಮೇಲೆ ಅಜ್ಞಾನದ ಹಾವಸೆಯು ಕಟ್ಟಿಕೊಂಡಿರುತ್ತದೆ. ಈ ಅಜ್ಞಾನವನ್ನು ತೊಲಗಿಸುವ ಪ್ರಯತ್ನವೇ ಸದ್ವ್ಯವಹಾರವು.

ಸ್ವಾರ್ಥದಿಂದ ನಾವು ಮಾಡುವ ಪ್ರತಿಯೊಂದು ಪ್ರಯತ್ನದಿಂದಲೂ ಈ ಹಾವಸೆಯು ಬೆಳೆದುಕೊಂಡು ದಟ್ಟವಾಗುತ್ತಿರುವದು. ಅಸ್ವಾರ್ಥತೆಯ ಪ್ರಯತ್ನದಿಂದ ಅದು ತೆಳುವಾಗುತ್ತಾ ಹೋಗುತ್ತಿರುವದು. ಆದ್ದರಿಂದ ಜಾಣನಾದವನು ಅಸ್ವಾರ್ಥದ ಕಾರ್ಯಗಳಿಗೇ ತನ್ನ ದೇಹವನ್ನೂ ಇಂದ್ರಿಯಗಳನ್ನೂ ಮನಸ್ಸನ್ನೂ ವಿನಿಯೋಗಿಸ ಬೇಕು. ಅದರಿಂದಲೇ ಅಜ್ಞಾನದ ಮುಸುಕು ಕಳೆದು ನಿತ್ಯಾನಂದವು ಕಾಣಿಸಿ ಕೊಳ್ಳುತ್ತದೆ. ಆದ ಕಾರಣ ಅಸ್ವಾರ್ಥತೆಯಿಂದ ನಡೆಯುವದೇ ಸದ್ವ್ಯವಹಾರವು.

ನಿತ್ಯಾನಂದಸ್ವರೂಪನಾದ ಭಗವಂತನನ್ನು ನಮ್ಮಲ್ಲಿಯೂ ಪರರಲ್ಲಿಯೂ ಕಂಡು ಕೊಳ್ಳುವದೇ ಜೀವನದ ಹೆಗ್ಗುರಿಯು- ಎಂಬುದನ್ನು ಮರೆಯದಿದ್ದರೆ ಸದ್ವ್ಯವಹಾರಕ್ಕೆ ಒಂದು ಮುಖ್ಯ ಸೂತ್ರವು ದೊರೆತಂತಾಗುವದು. ನಾವುಗಳು ಉಪಾಧ್ಯಾಯ, ವೈದ್ಯ, ವಕೀಲ, ವ್ಯಾಪಾರಿ, ಬೇಸಾಯಗಾರ, ಸಂಗೀತಗಾರ, ಚಿತ್ರಗಾರ, ಅಕ್ಕಸಾಲೆ, ಬಡಗಿ- ಮುಂತಾದ ಯಾವ ವೃತ್ತಿಯನ್ನವಲಂಬಿಸಿರಲಿ, ನಮ್ಮೆಲ್ಲರಿಗೂ ಜೀವನದ ಹೆಗ್ಗುರಿಯು ಒಂದೇ; ನಮ್ಮಲ್ಲಿ ಯಾರೊಬ್ಬರಿಗೂ ದುಃಖವು ಬೇಡ, ಆನಂದವು ಎಲ್ಲರಿಗೂ ಬೇಕಾಗಿದೆ. ಆದ್ದರಿಂದ ನಮ್ಮ ನಮ್ಮ ವೃತ್ತಿಯನ್ನು ಮುಖ್ಯವಾಗಿ ನಿತ್ಯಾನಂದ ರೂಪನಾದ ಭಗವಂತನ ಸಾಕ್ಷಾತ್ಕಾರಕ್ಕೆ ತಕ್ಕಂತೆ ಉಪಯೋಗಿಸುವದೇ ನಮ್ಮ ಪ್ರಯತ್ನ ವಾಗಿರಬೇಕು. ಆಗ ವ್ಯಾವಹಾರಿಕ ಪ್ರಯತ್ನವೆಲ್ಲವೂ ಆಧ್ಯಾತ್ಮಿಕಸಾಧನವಾಗುವದು, ನಮ್ಮ ವ್ಯವಹಾರವೆಲ್ಲವೂ ಸದ್ವ್ಯವಹಾರವಾಗುವದು.

ವಾಚಕವೃಂದ, ನಾವೆಲ್ಲರೂ ನಿತ್ಯಾನಂದರೂಪವಾದ ತತ್ತ್ವದಿಂದಲೇ ಬಂದಿರ ಬೇಕೆಂದು ನೀವೆಲ್ಲರೂ ಒಪ್ಪುತ್ತೀರಿ; ಹಾಗಿಲ್ಲದಿದ್ದರೆ ನಾವು ಎಂದಿಗೂ ಕಾಣದೆ ಇದ್ದ ನಿತ್ಯಾನಂದಕ್ಕಾಗಿ ನಾವುಗಳು ಹಾತುವರಿಯುತ್ತಿದ್ದೇವೆ? ನಾವು ಈ ಲೋಕದ ವ್ಯವಹಾರದಲ್ಲಿ ಬಹುಕಾಲ ನಿಲ್ಲಲಾರೆವು; ನಾವು ಇಲ್ಲಿಗೆ ವಿನೋದಕ್ಕೇ ಬಂದಿರಲಿ, ವ್ಯಾಪಾರಕ್ಕೇ ಬಂದಿರಲಿ, ಅಂತು ಆ ನಮ್ಮ ನಿತ್ಯಾನಂದಧಾಮಕ್ಕೆ ಹಿಂತಿರುಗಲೇಬೇಕು. ನಮ್ಮಲ್ಲಿ ಕೆಲವರು ಗಾಡಿಯ ಮೇಲೆ, ಕೆಲವರು ರೈಲಿನ ಮೇಲೆ, ಮತ್ತೆ ಕೆಲವರು ಹಡಗಿನ ಮೇಲೆ, ಇನ್ನೂ ಕೆಲವರು ವಿಮಾನದ ಮೇಲೆ ಬಂದಿರುತ್ತೇವೆ; ನಾವು ತಂದಿರುವ ಸಾಧನಸಂಪತ್ತಿಗಳೂ ನಾವು ಇಲ್ಲಿ ಮಾಡುವ ವ್ಯವಹಾರವೂ ಬಗೆಬಗೆ ಯಾಗಿರುತ್ತವೆ. ಆದರೆ ಈ ಪಯಣದಲ್ಲಿ ಅಲ್ಲಲ್ಲಿ ತಂಗಿ ಕೊಡುವದನ್ನು ಕೊಟ್ಟು ಕೊಳ್ಳುವದನ್ನು ಕೊಂಡು, ಕೊನೆಗೆ ನಾವೆಲ್ಲರೂ ಒಂದೇ ಕಡೆಗೆ ಹಿಂತೆರಳಬೇಕಾಗುವದು. ಅದೇ ನಿತ್ಯಾನಂದಪದವಿ- ಜೀವನದ ಈ ಹೆಗ್ಗುರಿಯನ್ನು ಹೇಗೆ ಮರೆಯಲಾದೀತು?

ಆದ್ದರಿಂದ ನಮ್ಮ ಮನೋವಾಕ್ಕಾಯಗಳನ್ನು ನಮ್ಮ ಆನಂದನಗರಿಯ ಕಡೆಗೆ ತಿರುಗುವಂತೆ ಒಲಿಸಿಕೊಳ್ಳೋಣ. ಆ ಆನಂದ ನಗರಿಯ ಮರಹು ಎಂದಿಗೂ ನಮ್ಮನ್ನು ಮುಸುಕದಂತೆ ಎಚ್ಚರದಿಂದರೋಣ. ಅದರ ನೆನಹಿನಿಂದಲೇ ವ್ಯವಹಾರ ಮಾಡುತ್ತಿರುವವರ ಗೆಳೆತನವನ್ನು ಸಂಪಾದಿಸಿಕೊಂಡೇ ಬಾಳೋಣ. ಅದೇ **ಸದ್ವ್ಯವಹಾರವು.**

*****

## 21. ತ್ರಿಕರಣ ಸಂಯಮ

ಶರೀರ, ವಾಕ್ಕು ಮನಸ್ಸು- ಇವು ಮೂರನ್ನೂ ಹಿಡಿತದಲ್ಲಿಟ್ಟುಕೊಳ್ಳುವ ಸಾಧನಕ್ಕೆ **ತ್ರಿಕರಣ ಸಂಯಮ**ವೆಂದು ಹೆಸರು.

ಕರಣಗಳು ನಮ್ಮ ಸ್ವಾಧೀನದಲ್ಲಿರದೆ ಕಂಡಕಡೆಗೆ ಹರಿಯುವದೇಕೆ? ಎಂದರೆ ತಕ್ಕ ಸಾಧನವಿಲ್ಲದ್ದರಿಂದ. ನಾವು ಶರೀರಕ್ಕೆ ತಕ್ಕ ಆಹಾರವನ್ನು ಕೊಡುವದಿಲ್ಲ, ಅದನ್ನು ಸರಿಯಾಗಿ ಕೆಲಸಮಾಡಿಸುವದಿಲ್ಲ; ಇಂದ್ರಿಯಗಳನ್ನು ಬಿಗಿಯಲ್ಲಿಟ್ಟುಕೊಳ್ಳುವದಕ್ಕೆ ಪ್ರಯತ್ನಿಸುವದೂ ಇಲ್ಲ, ಆದ್ದರಿಂದ ಶರೀರವು ನಮ್ಮ ಮಾತನ್ನು ಕೇಳುವದಿಲ್ಲ, ಕುದುರೆಗೆ ಉತ್ತಮವಾದ ಆಹಾರವನ್ನು ಹಾಕಿ ಲಾಯದಲ್ಲಿ ಕಟ್ಟಿ ಮೇಯಿಸಬೇಕಲ್ಲದೆ ಆಗಿಂದಾಗ್ಗೆ ಅದಕ್ಕೆ ಮೈ ಬೆವರುವಂತೆ ಸವಾರಿಯನ್ನೂ ಒದಗಿಸುತ್ತಿರಬೇಕು; ಹಾಗಾದರೆ ಮಾತ್ರ ಆ ಪ್ರಾಣಿಯು ನಮಗೆ ಪ್ರಯೋಜನಕಾರಿಯಾಗುತ್ತದೆ. ಹಾಗಿಲ್ಲದಿದ್ದರೆ ಆಹಾರವೂ ಕೆಲಸವೂ ಇಲ್ಲದೆ ಸೋಮಾರಿಯಾಗಿಯೋ ಕೃಶವಾಗಿಯೋ ಸಾಯುತ್ತದೆ, ಅಥವಾ ತಿಂಡಿ ಹೆಚ್ಚಾಗಿ ಕೊಬ್ಬಿ ತುಂಟುಕುದುರೆಯಾಗುತ್ತದೆ. ಅಲ್ಲವೆ? ಇದರಂತೆಯೇ ನಮ್ಮ ಶರೀರದ ವಿಷಯವನ್ನು ತಿಳಿಯಬೇಕು.

ಇದರಂತೆ ವಾಗಿಂದ್ರಿಯದ ಸಂಯಮವನ್ನು ಮಾಡಿಕೊಳ್ಳಬೇಕಾಗುತ್ತದೆ. ನಾಲಗೆಯಿದೆಯೆಂದು ಕಂಡಕಂಡಂತೆ ಮಾತನಾಡುವದಕ್ಕೆ ಹೊರಟರೆ ಸುಳ್ಳೋ ಬಿರುನುಡಿಯೋ ಅದರಿಂದ ಹೊರಟುಬಿಡುತ್ತದೆ. ಇಷ್ಟೇ ಅಲ್ಲ, ಸತ್ಯವನ್ನೂ ಪ್ರಿಯವಾದ ಇಂಪಾದ ನುಡಿಗಳನ್ನೂ ಒಂದು ವೇಳೆ ಆಡಿದರೂ ನಾಲಗೆಯಿದ್ದದ್ದಕ್ಕೆ ಸಾಧಿಸಬೇಕಾದ ಶಾಸ್ತ್ರಪಾಠ ಭಗವನ್ನಾಮೋಚ್ಚಾರಣವೇ ಮುಂತಾದ ಸತ್ಕಾರ್ಯಕ್ಕೂ ಪ್ರಾಕೃತದ ನಾಲಗೆಯು ಒಲಿಯುವದಿಲ್ಲ, ಯಾವಾಗ ಮಾತನಾಡಬೇಕೋ, ಯಾವಾಗ ಸುಮ್ಮನಿರಬೇಕೋ-

ಎಂಬ ವಿವೇಕವಿಲ್ಲದವನಿಗೆ ತನಗೆ ತಿಳಿದದ್ದನ್ನೂ ತಿಳಿಯದ್ದನ್ನೂ ಎಲ್ಲೆಂದರೆ ಅಲ್ಲಿ ಅಲ್ಲಗಳೆಹಬೇಕೆಂಬ ಲವಲವಿಕೆಯೇ ಹೆಚ್ಚಾಗಿರುತ್ತದೆ. ಆದ್ದರಿಂದ ವಾಗಿಂದ್ರಿಯಕ್ಕೆ ತಕ್ಕ ವಿಷಯವನ್ನೊದಗಿಸಿ ಅದನ್ನು ಮಿತವಾಗಿ ಉಪಯೋಗಿಸುತ್ತಾ ತನಗೂ ಮಿಕ್ಕವರಿಗೂ ಹಿತವಾಗುವ ವ್ಯಾಪಾರದಲ್ಲಿಯೇ ಅದನ್ನು ತೊಡಗಿಸಿದ ಹೊರತು ಎಂದಿಗೂ ಅದು ನಮ್ಮ ಹಿಡಿತದಲ್ಲಿರಲಾರದು.

ಶರೀರವಾಕ್ಕುಗಳೆರಡಕ್ಕೂ ಬೇರಿನಂತಿರುವದು ಮನಸ್ಸು, ಬೇರಿಗೆ ನೀರು ಹಾಕಿ ಕಾಪಾಡಿಕೊಂಡಲ್ಲದೆ ಮರವು ಹೇಗೆ ಸುಖವಾಗಿ ಬೆಳೆಯಲಾರದೆ ಇರುವದೋ ಹಾಗೆಯೇ ಮನಸ್ಸನ್ನು ಹಿಡಿದಿಟ್ಟುಕೊಳ್ಳಲಾಗದೆ ಇರುವವರೆಗೂ ಶರೀರ ವಾಕ್ಕುಗಳು ಸ್ವಾಧೀನಕ್ಕೆ ಬರುವ ಹಾಗೆಯೇ ಇಲ್ಲ, ಒಂದು ಸಲ ಹರಿಯಬಿಟ್ಟ ಮನಸ್ಸು ಎಷ್ಟೋ ದೀರ್ಘಕಾಲದವರೆಗೂ ನಮ್ಮನ್ನು ಗಾಡಿಯನ್ನೆಳೆದೊಯ್ಯುವ ತುಂಟಕುದುರೆಯಂತೆ ಎಳೆದೊಯ್ದು ಕೆಟ್ಟ ಮಾರ್ಗದಲ್ಲಿ ತೊಡಗಿಸುತ್ತಿರುವದು. ಆದ್ದರಿಂದ ತನ್ನೊಳಗೆ ತಾನು ತನ್ನನ್ನು ಪರೀಕ್ಷಿಸುವ ಅಭ್ಯಾಸವನ್ನು ಮಾಡಿಕೊಳ್ಳಬೇಕು; ತತ್ತ್ವವಿಚಾರವನ್ನು ಮಾಡುವ ಹಾದಿಗೆ ಮನಸ್ಸನ್ನು ಬಿಡಬೇಕು; ಎಲ್ಲಕ್ಕೂ ಮೇಲಾಗಿ ಸದ್ಭಾವನೆಗಳನ್ನು ಅಡಿಗಡಿಗೆ ತಂದುಕೊಳ್ಳುತ್ತಿರಬೇಕು. ಈ ಕ್ರಮದಿಂದ ಮನಸ್ಸಿಗೆ ಉತ್ತಮವಾದ ಆಹಾರವನ್ನು ಒದಗಿಸಿ ಸರಿಯಾದ ಕೆಲಸವನ್ನು ಕೊಟ್ಟರೆ ಅದು ನಮ್ಮ ವಶವಾಗುತ್ತದೆ.

ಯಾವನಿಗೆ ಮನಸ್ಸು ವಶವಾಗಿರುವದೋ ಅವನಿಗೆ ವಾಕ್ಕು ವಶವಾಗಿರುವದು. ಶರೀರವೂ ವಶವಾಗಿರುವದು. ಈ ತ್ರಿಕರಣದ ಸಂಯಮವನ್ನು ಮಾಡಿಕೊಂಡಿರುವ ಮಹಾಪುರುಷರೇ ಈ ಲೋಕದಲ್ಲಿ ಸುಖಸಾಮ್ರಾಜ್ಯವನ್ನು ಸೂರೆಗೊಳ್ಳುವವರು. ಈ ಸಂಯಮದ ವಿವರವನ್ನು ಮುಂದಿನ ಲೇಖನಗಳಲ್ಲಿ ಅರಿಕೆಮಾಡಿಕೊಳ್ಳುವೆನು.

*****

# 22. ಸಾತ್ತ್ವಿಕಾಹಾರ -1

ಶರೀರವನ್ನು ಸ್ವಾಧೀನದಲ್ಲಿಟ್ಟುಕೊಳ್ಳುವದು ಅಧ್ಯಾತ್ಮಸಾಧನಕ್ಕೆಲ್ಲ ಮೊದಲನೆಯ ಮೆಟ್ಟಲಾಗಿರುತ್ತದೆ. ಅದರಲ್ಲಿಯೂ ಸಾತ್ತ್ವಿಕಾಹಾರವನ್ನು ಸೇವಿಸುವದು ಶರೀರವನ್ನು ವಶದಲ್ಲಿಟ್ಟುಕೊಳ್ಳುವದಕ್ಕೆ ಮೊದಲನೆಯ ಮೆಟ್ಟಲಾಗಿರುತ್ತದೆ.

ಸಾತ್ತ್ವಿಕಾಹಾರವೆಂದರೆ ನಮ್ಮಲ್ಲಿ ಸತ್ತ್ವಗುಣವುಂಟಾಗುವದಕ್ಕೆ ತಕ್ಕ ಆಹಾರವು . ಯಾವ ಆಹಾರವನ್ನು ತೆಗೆದುಕೊಂಡರೂ ಚಿಂತೆಯಿಲ್ಲ, ಹಸಿವಡಗಿ ಬಲ ಬಂದರೆ ಸಾಕು - ಎಂದು ನಾವು ಯೋಚಿಸುವ ಸಂಭವವುಂಟು. ಆದರೆ ಹಸಿವಡಗುವದು, ಆರೋಗ್ಯದಿಂದಿರುವದು, ಬಲವನ್ನು ಸಂಪಾದಿಸಿಕೊಳ್ಳುವದು- ಇಷ್ಟೇ ಜೀವನದ ಉದ್ದೇಶವಲ್ಲ. ಜೀವನದಲ್ಲಿ ನಮಗೆ ಶರೀರವು ಮುಖ್ಯವಾಗಿ ಬೇಕಾದದ್ದಾದರೂ ಅದರಿಂದ ನಮಗೂ ನಮ್ಮ ಸುತ್ತಮುತ್ತಿನವರಿಗೂ ಸುಖಶಾಂತಿಗಳುಂಟಾಗುವಂತಿರಬೇಕು; ಅದಾಗಬೇಕಾದರೆ ನಮ್ಮ ಮನಸ್ಸಿನಲ್ಲಿ ಸತ್ತ್ವಗುಣವುಂಟಾಗಿ ಆ ಮನಸ್ಸಿನ ಆಳ್ವಿಕೆಗೆ ಶರೀರವು ಒಳಪಟ್ಟಿರಬೇಕು. ಹಾಗಾದರೆ ಮಾತ್ರ ಶರೀರವು ನಮಗೆ ಒಂದು ನಿಜವಾದ ಸಾಧನವಾಗುತ್ತದೆ; ಇಲ್ಲದಿದ್ದರೆ ಅದೇ ಒಂದು ದೊಡ್ಡ ಹೊರೆಯಾಗಿ ತೋರುತ್ತದೆ. ಜೀವನದ ಪರಮೋದ್ದೇಶವು ನೆರವೇರುವದಕ್ಕೆ ಸಾತ್ತ್ವಿಕಾಹಾರವು ಬೇಕೆಂಬುದು ಇದರಿಂದಲೇ ವ್ಯಕ್ತವಾಗುತ್ತದೆ.

ನಾವು ತಿಂದ ಆಹಾರವೂ ಕುಡಿದ ಪಾನವೂ ಮೂರು ಬಗೆಯಾಗಿ ಪರಿಣಮಿಸುವದೆಂದು ಶ್ರುತಿಯಲ್ಲಿ ಹೇಳಿರುತ್ತದೆ; ಅದರಲ್ಲಿ ಸ್ಥೂಲವಾದ ಭಾಗವು ಪುರೀಷಾದಿಗಳಾಗಿ ಹೊರಕ್ಕೆ ಬರುತ್ತದೆ, ಮಧ್ಯಮಭಾಗವು ಮಾಂಸಾದಿಗಳಾಗುತ್ತದೆ, ಸೂಕ್ಷ್ಮವಾದ ಭಾಗವು ನಮ್ಮ ವಾಙ್ಮನಃಪ್ರಾಣಗಳಿಗೆ ಪುಷ್ಟಿಯನ್ನು ಕೊಡುತ್ತದೆ- ಎಂಬುದು ಶ್ರುತಿಸಿದ್ಧಾಂತವು. ಇದು ನಿಜವಾದರೆ ನಮ್ಮ ನಡೆನುಡಿಗಳೂ ವಿಚಾರಗಳೂ ಸಾತ್ತ್ವಿಕವಾಗಿರಬೇಕಾದರೆ ನಾವು ತಿನ್ನುವ ಆಹಾರವೂ ಸಾತ್ತ್ವಿಕವಾಗಿರಬೇಕೆನ್ನುವದು ಯುಕ್ತವೇ ಆಗುತ್ತದೆ. ಆದ್ದರಿಂದಲೇ "ಆಹಾರವು ಶುದ್ಧವಾದರೆ ಸತ್ತ್ವವು ಶುದ್ಧಿಯಾಗುತ್ತದೆ; ಸತ್ತ್ವಶುದ್ಧಿಯಾದರೆ ಅಧ್ಯಾತ್ಮತತ್ತ್ವದ ನೆನಪುಬಂದೇ ತೀರುತ್ತದೆ." ಎಂದು ಶ್ರುತಿಯು ಸಾರುತ್ತಿದೆ.

ಸತ್ತ್ವಗುಣಕ್ಕೆ ತಕ್ಕಂತೆ ಆಹಾರವು ಹೇಗಿರಬೇಕು?- ಎಂಬುದನ್ನು ವಿಚಾರಿಸುವ ಮೊದಲು ಆಹಾರವು ಹೇಗಿರಬೇಕು?- ಎಂಬುದನ್ನು ತಿಳಿದುಕೊಳ್ಳುವದು ಮೇಲು, ಏಕೆಂದರೆ ಸತ್ತ್ವಗುಣಕ್ಕೆ ಅಡ್ಡಿಯಾಗಿರುವದನ್ನು ಕಡಿಮೆಮಾಡಿಕೊಂಡರೂ ನಾವು ಸಾತ್ತ್ವಿಕತನಕ್ಕೆ ಎಷ್ಟೋ ಹತ್ತಿರವಾದಂತಾಯಿತು. ಗೀತೆಯಲ್ಲಿ ಕೊಟ್ಟಿರುವ ಸೂಚನೆಗಳು ಈ ವಿಷಯದಲ್ಲಿ ಬಹಳ ಸಹಾಯಕವಾಗಿರುತ್ತವೆ.

ಯಾವದು ತಂಗಳಾಗಿರುವದೋ, ಯಾವದು ಒಣಕಲಾಗಿ ನೀರಸವಾಗಿರುವದೋ, ಯಾವದು ಹಳಸಿ ಕೆಟ್ಟ ವಾಸನೆಯೂ ಬರುವಂತಿರುವದೋ, ಯಾವದು ಎಂಜಲು, ಮೈಲಿಗೆ- ಇವುಗಳ ಸೋಂಕಿರತಕ್ಕದ್ದೋ, ಅಂಥ ಪದಾರ್ಥಗಳನ್ನು ತೀರ ಕಡಿಮೆಯಂತಸ್ತಿನ ಮನಸ್ಸಿನ ಜನರು ಮೋಹಿಸುವರು. ನೋಡುವಾಗಲೆ ಮನಸ್ಸಿನಲ್ಲಿ ಕರೆಕರೆಯನ್ನುಂಟುಮಾಡುವದಾಗಿ ಆಮೇಲೆ ಶರೀರಸ್ವಾಸ್ಥ್ಯವನ್ನೇ ಕೆಡಿಸುವಂಥ ಪದಾರ್ಥಗಳನ್ನು ಯಾರು ತಾನೆ ಬಯಸಿಯಾರು? ಯಾರಾದರೂ ಅವುಗಳನ್ನು ತಿಂದು ಅರಗಿಸಿಕೊಂಡರೂ ಅವರ ಮನಸ್ಸೂ ನಡೆನುಡಿಗಳೂ ಅವರು ತಿಂದರಗಿಸಿಕೊಂಡ ಆಹಾರಕ್ಕನುಗುಣವಾಗಿ ತಾಮಸವಾಗಿಯೇ ಇರುತ್ತದೆಯೆಂಬುದನ್ನು ಹೇಳಬೇಕಾಗಿಲ್ಲ; ನಿದ್ರೆ, ಸೋಮಾರಿತನ, ಮನಸ್ಸಿನಲ್ಲಿ ಚಟುವಟಿಕೆಯಿಲ್ಲದಿರುವದು, ತನಗೆ ತೋಚಿದ ಮಾತುಗಳನ್ನು ಔಚಿತ್ಯವಿಲ್ಲದೆ ಆಡುವದು- ಇಂಥ ನಡೆವಳಿಕೆಯೇ ಆ ಆಹಾರದ ಫಲವು. ಅಂಥ ಜೀವನವು ಸಾಗಿದರೆಷ್ಟು ಸಾಗದಿದ್ದರೆಷ್ಟು?

ಈ ತೀರ ಕೆಳಗಿನ ಮೆಟ್ಟಲನ್ನು ಬಿಟ್ಟರೂ ಬಹುಜನರು ತಿನ್ನುವ ಆಹಾರವು ಸಾತ್ತ್ವಿಕವೆನಿಸುವದಕ್ಕೆ ಯೋಗ್ಯವಾಗಿರುವದಿಲ್ಲ, ಆದ್ದರಿಂದ ಯಾವದು ತಿನ್ನತಕ್ಕದ್ದು ಯಾವದು ತಿನ್ನತಕ್ಕದ್ದಲ್ಲ- ಎಂಬುದನ್ನು ಮಾತ್ರವೇ ಅಲ್ಲದೆ, ಯಾವದು ಪರಿಣಾಮದಲ್ಲಿ ನಮಗೆ ಹಿತಕಾರಿಯಾದದ್ದು ಎಂಬುದನ್ನೂ ಇಲ್ಲಿ ವಿಚಾರಮಾಡತಕ್ಕದ್ದು ಅವಶ್ಯವಾಗಿರುತ್ತದೆ. "ಊಟವು ನಿದ್ರೆಯೂ ಪಾಟಿಸಿದ ಹಾಗೆ"- ಎಂಬ ಗಾದೆಯೊಂದುಂಟು. ಅದಕ್ಕನುಗುಣವಾಗಿಯೇ ಕೆಲವರು ಕಹಿಯಾದ ಆಹಾರದಲ್ಲಿ ಪ್ರೀತಿಯುಳ್ಳವರಾಗಿರುತ್ತಾರೆ; ಕೆಲವರಿಗೆ ಹುಳಿಯೇ ಆಗಬೇಕು; ಕೆಲವರಿಗೆ ಉಪ್ಪಿನಲ್ಲಿ ಹೆಚ್ಚು ಪ್ರೀತಿ; ಮತ್ತೆ ಕೆಲವರಿಗೆ ಬಿಸಿಬಿಸಿಯ ಊಟವಾಗಬೇಕು; ಇನ್ನು ಕೆಲವರಿಗೆ ಕಾರವಾಗಿರುವ ಆಹಾರದಲ್ಲಿ ಅಕ್ಕರೆ; ಮತ್ತೆಕೆಲವರಿಗೆ ಜಿಡ್ಡಿಲ್ಲದ ಹಾರಕ, ಬರಗ- ಮುಂತಾದವುಗಳೇ ಆಗಬೇಕು; ಮತ್ತೆ ಕೆಲವರಿಗೆ ನಾಲಗೆಯುರಿಯುವಂಥ ಸಾಸಿವೆಯೇ ಮುಂತಾದವುಗಳಾಗಬೇಕು. ಇಂತಿಷ್ಟೇ ಕಹಿ, ಇಂತಿಷ್ಟೇ ಕಾರ- ಎಂಬ ಪರಿಮಾಣವಿಲ್ಲದೆ ಇವುಗಳನ್ನು ದಿನದಿನಕ್ಕೂ ಹೆಚ್ಚಿಸಿಕೊಳ್ಳುತ್ತಾ, ನಾಲಗೆಯು ಒರಟಾಗಿ ರುಚಿಯನ್ನೇ ಅರಿತುಕೊಳ್ಳದಂತೆ ಮಾಡಿಕೊಂಡು ತಿಂದಾಗ, ದುಃಖವಾದರೂ ಅದನ್ನೇ ಸಂತೋಷವೆಂದುಕೊಂಡು ಆಮೇಲೆ ಶೋಕಕ್ಕೂ ರೋಗಕ್ಕೂ ತುತ್ತಾಗುವವರೂ ಕೆಲವರು ಇರುತ್ತಾರೆ. ಇವೆಲ್ಲ ರಾಜಸಾಹಾರಗಳು, ಇವುಗಳಿಂದ ಕಾಮಕ್ರೋಧಾದಿ ರಜೋಗುಣಗಳು ಬೆಳೆದಾವೇ ಹೊರತು ಎಂದಿಗೂ ಸತ್ತ್ವವೃದ್ಧಿಯಾಗಲಾರದು.

ಇನ್ನು ನೇರಾಗಿ ಸತ್ತ್ವಗುಣವನ್ನೇ ಕೊಡುವ ಆಹಾರದ ಸ್ವಭಾವವು ಹೇಗಿರಬೇಕೆಂಬುದನ್ನು ಮುಂದಿನ ಲೇಖನದಲ್ಲಿ ವಿಚಾರಮಾಡೋಣ.

*****

## 23. ಸಾತ್ತ್ವಿಕಾಹಾರ -2

ಆಹಾರವು ಸತ್ತ್ವಶುದ್ಧಿಗೆ ಅನುಕೂಲವಾಗುವಂತೆ ಆಗಬೇಕಾದರೆ ಯಾವ ಯಾವ ದೋಷವು ಅದರಲ್ಲಿರಬಾರದೆಂಬುದನ್ನು ಹಿಂದಿನ ಲೇಖನದಲ್ಲಿ ತಿಳಿಸಿದ್ದಾಯಿತು. ಅಂಥ ಆಹಾರದಲ್ಲಿ ಯಾವ ಗುಣಗಳಿರುವದು ಅವಶ್ಯವೆಂಬುದನ್ನು ಇಲ್ಲಿ ತಿಳಿಸುತ್ತೇನೆ.

ಭಗವದ್ಗೀತೆಯಲ್ಲಿ ಹೇಳಿರುವ ಒಂದು ಶ್ಲೋಕವನ್ನು ಇಲ್ಲಿ ನೆನಪಿಡುವದು ಸಹಕಾರಿಯಾಗುತ್ತದೆ.

**ಆಯುಃ ಸತ್ತ್ವಬಲಾರೋಗ್ಯಸುಖಪ್ರೀತಿವಿವರ್ಧನಾಃ ।**
**ರಸ್ಯಾಃ ಸ್ನಿಗ್ಧಾಃ ಸ್ಥಿರಾ ಹೃದ್ಯಾ ಆಹಾರಾಃ ಸಾತ್ತ್ವಿಕಪ್ರಿಯಾಃ ॥** 17-8

ಆಹಾರವು ಆಯಸ್ಸು ಬುದ್ಧಿ ಬಲ, ಆರೋಗ್ಯ, ಸುಖ, ಸಂತೋಷ- ಇವುಗಳನ್ನು ಹೆಚ್ಚಿಸುವಂತೆ ಇರಬೇಕು- ಎಂಬುದು ಶ್ಲೋಕದ ಭಾವಾರ್ಥವು. ಇಲ್ಲಿ **ವಿಶೇಷಣ**ವನ್ನು ಅರ್ಥಮಾಡಿಕೊಳ್ಳುವದರಲ್ಲಿ ಎಚ್ಚರಿಕೆಯಿರಬೇಕು. ಏಕೆಂದರೆ ಯಾವದು ನಮಗೆ ದಿನ ದಿನವೂ ತಿನ್ನುವ ಆಹಾರವಾಗಿರುತ್ತದೆಯೋ ಅದನ್ನು ಕಂಡರೆ ನಮಗೆ ಸಂತೋಷವಾಗುತ್ತದೆ. ಅದನ್ನು ತಿಂದರೆ ಸುಖವೂ ಆಗುತ್ತದೆ; ಆದರೆ ಈ ಸುಖಸಂತೋಷಗಳೇನೂ ಆಹಾರವು ಒಳ್ಳೆಯದೆಂಬುದಕ್ಕೆ ಹೆಗ್ಗುರುತಲ್ಲ, ಯಾವ ಆಹಾರವೇ ಆಗಲಿ ಅಭ್ಯಾಸದಿಂದ ಪ್ರಿಯವಾಗುವದು ಸ್ವಾಭಾವಿಕವಾಗಿದೆ. ಆದ್ದರಿಂದ ಆಹಾರದಿಂದಾಗುವ ಸುಖ ಸಂತೋಷಗಳಿಂದಲೇ ತೃಪ್ತರಾಗದೆ ಇದು ಆರೋಗ್ಯಕ್ಕೆ ಕಾರಣವಾದದ್ದೆ, ಇದನ್ನು ತಿನ್ನುವದರಿಂದ ಆರೋಗ್ಯವುಂಟಾಗುವದೆಂದು ಬಲ್ಲ ವೈದ್ಯರು ಹೇಳುತ್ತಾರೆಯೇ?- ಎಂಬುದನ್ನೂ ನೋಡಬೇಕು.

ಆದರೆ ಸೂಕ್ಷ್ಮದೃಷ್ಟಿಯಿಂದ ನೋಡಿದರೆ ಆರೋಗ್ಯಕ್ಕೂ ಬಲಕ್ಕೂ ಸಾಧಕವಾಗಿರುವ ಆಹಾರಗಳಲ್ಲಿಯೂ ಎರಡು ಬಗೆಯಿರುತ್ತದೆ; ಕೆಲವಕ್ಕೆ ಬಲವನ್ನು ಕೊಡುವ ಯೋಗ್ಯತೆಯಿದ್ದರೂ ಅವು ಬುದ್ಧಿಯನ್ನು ಹೆಚ್ಚಿಸುವವಾಗಿರುವದಿಲ್ಲ, ಸುಮ್ಮನೆ ಆಹಾರ

ವನ್ನು ತಿಂದು ಮೈಕೊಬ್ಬಿಸಿಕೊಳ್ಳುವದೇನೂ ಮನುಷ್ಯರ ಜನ್ಮದ ಉದ್ದೇಶವಲ್ಲವಾದ್ದ ರಿಂದ ವಿವೇಕಿಯಾದವನು ಅಂಥ ಆಹಾರಗಳನ್ನು ಕೈಬಿಟ್ಟು ಆರೋಗ್ಯವನ್ನೂ ಬಲವನ್ನೂ ಜೊತೆಗೆ ಬುದ್ಧಿಯನ್ನೂ ಹೆಚ್ಚಿಸುವಂಥ ಆಹಾರಗಳನ್ನು ಆರಿಸಿಕೊಳ್ಳಬೇಕು. ಬುದ್ಧಿ ಬಲಾರೋಗ್ಯದಿಂದ ಕೂಡಿರುವ ಆಹಾರವನ್ನು ಕ್ರಮವರಿತು ಉಪಯೋಗಿಸುವದು ಆಯುರ್ವೃದ್ಧಿಗೂ ಧರ್ಮವೃದ್ಧಿಗೂ ಒಂದು ಉತ್ತಮಸಹಕಾರಿಯಾಗುವದೆಂಬುದನ್ನು ಹೇಳಬೇಕಾದದ್ದೇ ಇಲ್ಲ.

ಮೇಲೆ ಹೇಳಿದ ಸ್ವಭಾವವು ಇಂಥ ಆಹಾರಕ್ಕಿರುವದೆಂದು ಹೇಗೆ ತಿಳಿಯಬೇಕು? - ಎಂದರೆ, ಆ ಬಗೆಯ ಆಹಾರವು ರಸವತ್ತಾಗಿರುತ್ತದೆ, ಒಣಕಲಾಗಿರುವದಿಲ್ಲ; ಜಿಡ್ಡಾಗಿರುತ್ತದೆ, ಪಿಸುಕಲಾಗಿರುವದಿಲ್ಲ; ಗಟ್ಟಿಯಾಗಿರುತ್ತದೆ, ಜಳ್ಳಾಗಿರುವದಿಲ್ಲ; ಹೃದ್ಯವಾಗಿರುತ್ತದೆ, ಎಂದರೆ ನೋಡುವಾಗಲೂ ತಿನ್ನುವಾಗಲೂ ತಿಂದ ಮೇಲೂ ಮನಸ್ಸಿಗೆ ಇಂಪನ್ನುಂಟುಮಾಡುತ್ತದೆ, ಅಸಹ್ಯಕರವಾಗಿರುವದಿಲ್ಲ. ಈ ಗುಣಗಳೆಲ್ಲ ಒಂದು ಆಹಾರದಲ್ಲಿದ್ದರೆ ಸಾಧಾರಣವಾಗಿ ಅದು ಯೋಗ್ಯವಾದದ್ದೆಂದು ನಂಬಬಹುದು.

ಆಹಾರವು ಸರಿಯಾದದ್ದೋ ಅಲ್ಲವೋ ಎಂಬುದನ್ನು ನಾವೇ ಪರೀಕ್ಷಿಸಿ ನೋಡಿ ತಿಳಿದುಕೊಳ್ಳುವದು ಕಷ್ಟ. ಆದ್ದರಿಂದ ಶಾಸ್ತ್ರದಲ್ಲಿ ಭಕ್ಷ್ಯಾಭಕ್ಷ್ಯಗಳನ್ನು ವಿಂಗಡಿಸಿ ಹೇಳಿರುತ್ತದೆ. ಜಾತಿದೋಷ, ಆಶ್ರಯದೋಷ, ನಿಮಿತ್ತದೋಷ- ಎಂಬ ಮೂರು ದೋಷಗಳೂ ಇಲ್ಲದೆ ಇರುವದೇ ಶುದ್ಧವಾದ ಆಹಾರವಾದ್ದರಿಂದ ಶಾಸ್ತ್ರದೃಷ್ಟಿ ಯಿಂದಲೂ ಶುದ್ಧವಾದ ಆಹಾರವನ್ನೇ ಸಾಧಕನು ಸೇವಿಸಬೇಕಾಗುತ್ತದೆ. ಆಹಾರವು ಹುಟ್ಟುವಾಗಲೇ ದುಷ್ಟವಾಗಿದ್ದರಂತೂ ಅದನ್ನು ದೂರಪಡಿಸತಕ್ಕದ್ದು ಅತ್ಯವಶ್ಯ ವಾಗುತ್ತದೆ. ಯಾರಿಂದ ಆಹಾರವು ಬರುವದೋ ಆ ಆಶ್ರಯವನ್ನು ಪರೀಕ್ಷೆ ಮಾಡ ತಕ್ಕದ್ದು ಅವಶ್ಯವೆಂದೂ ಆಹಾರವು ಯಾವ ನಿಮಿತ್ತದಿಂದ ಮಾರ್ಪಟ್ಟಿರುವದೋ ಅದನ್ನೂ ವಿಚಾರಮಾಡಿ ದೋಷವಿಲ್ಲದಿದ್ದರೇ ಅದನ್ನು ತೆಗೆದುಕೊಳ್ಳಬಹುದೆಂದೂ ಬಲ್ಲವರು ಹೇಳುವರು. ಆದರೆ ಇಷ್ಟೆಲ್ಲ ಪರೀಕ್ಷೆಯನ್ನು ಮಾಡಿದರೂ ಉತ್ತಮವಾದ ಆಹಾರವೆಂಬುದು ಯಾವದು ಎಂಬುದು ನಮಗೆ ಗೊತ್ತಾಗುವದೆಂದು ಭರವಸೆ ಯಿಂದ ಹೇಳುವದಕ್ಕಾಗುವದಿಲ್ಲ. ಆದ್ದರಿಂದ ಉತ್ತಮವಾದ ಆಹಾರಕ್ಕೆ ಒಂದು ಹೆಗ್ಗುರುತು ಬೇಕಾಯಿತಷ್ಟೆ. ಅದೇ ಆಹಾರವು ಸಾತ್ತ್ವಿಕ ಪ್ರಿಯವಾಗಿರಬೇಕೆನ್ನುವದು. ಯಾವ ಮಹಾತ್ಮರು ಸತ್ತ್ವಪ್ರಧಾನವಾದ ಚಿತ್ತವುಳ್ಳವರಾಗಿರುವರೋ ಅವರು ನಡತೆಯಿಂದಲೂ ತಮ್ಮ ಸತ್ತ್ವಶುದ್ಧಿಯ ಹೆಚ್ಚಿಗೆಯನ್ನು ತೋರಿಸಿಕೊಳ್ಳುವವರಾದ್ದರಿಂದ

ಅಂಥವರು ಯಾವ ಆಹಾರವನ್ನು ಶುದ್ಧವೆಂದು ಎಣಿಸುವರೋ ಅದನ್ನು ನಾವೂ ಪರಿಶುದ್ಧವೆಂದು ಭಾವಿಸಿದರೆ ತಪ್ಪಾಗದು. ಸಾತ್ತ್ವಿಕರಾದವರು ಮೇಲೆ ಬಣ್ಣಿಸಿರುವ ಪ್ರಕಾರದ ಆಹಾರವನ್ನೇ ಮೆಚ್ಚುತ್ತಾರೆ; ಅವರಿಗೆ ರಾಜಸತಾಮಸ ಆಹಾರಗಳು ಎಂದಿಗೂ ಒಗ್ಗಲಾರವು.

ಆಹಾರದ ವಿಷಯಕ್ಕೆ ಇನ್ನೊಂದು ಮಾತನ್ನು ತಿಳಿಸಿ ಈ ಲೇಖನವನ್ನು ಮುಗಿಸುವೆನು. ಆಹಾರವು ಸಾತ್ತ್ವಿಕವಾಗಿದ್ದರೂ ಅದು ಮಿತವಾಗಿರಬೇಕು. ಸಾತ್ತ್ವಿಕಾ ಹಾರವೆಂದು ಮಿತಿಮೀರಿ ತಿಂದರೆ ಅದೇ ರಾಜಸತಾಮಸಸ್ವಭಾವಗಳಿಗೆ ಉತ್ತೇಜಕ ವಾಗುತ್ತದೆ. ಹಿತಮಿತಮೇಧ್ಯವಾಗಿರುವದೇ ನಿಜವಾದ ಸಾತ್ತ್ವಿಕಾಹಾರವೆಂಬುದನ್ನು ಎಂದಿಗೂ ಮರೆಯಬಾರದು. **ಹಿತ**ವೆಂದರೆ ಮೇಲೆ ಹೇಳಿದಂತೆ ರಸ್ಯಸ್ನಿಗ್ಧಾದಿಗುಣ ಗಳಿಂದ ಕೂಡಿಕೊಂಡು ಸಾತ್ತ್ವಿಕಸ್ವಭಾವದ ಜನರ ಮೆಚ್ಚಿಗೆಯನ್ನು ಪಡೆದಿರುವ ಆಹಾರವು; **ಮಿತ**ವೆಂದರೆ ಹಸಿವನ್ನುಂಟುಮಾಡದೆ ಅಜೀರ್ಣಕ್ಕೆ ಅವಕಾಶವನ್ನು ಕೊಡದೆ ಸುಖಸಂತೋಷಗಳನ್ನು ಕೊಟ್ಟು ಸಾಧನೆಗೆ ತಕ್ಕ ಆರೋಗ್ಯವನ್ನೂ ಪುಷ್ಟಿಯನ್ನೂ ಉಂಟುಮಾಡುವ ಹಾಳತವಾದ ಪರಿಮಾಣದ ಆಹಾರವು; **ಮೇಧ್ಯ**ವೆಂದರೆ ಜಾತಿ ದೋಷವೇ ಮುಂತಾದ ಯಾವ ದೋಷವೂ ಇಲ್ಲದೆ ಪರಿಶುದ್ಧವಾದ ಚಿತ್ತದಿಂದ ಪರಮೇಶ್ವರನ ಅರ್ಪಣೆಗೆಂದು ಸಿದ್ಧವಾಗಿ ಪ್ರಸಾದರೂಪವಾಗಿ ಬಂದಿರುವ ಆಹಾರವು, ಇಂಥ ಆಹಾರವು ಯಾರಿಗೆ ಸಿಕ್ಕುವದೋ ಅವರೇ ಧನ್ಯರು.

*****

# 24. ವ್ಯಾಯಾಮ -1

ಅಧ್ಯಾತ್ಮಸಾಧಕರಿಗೆ ಪರಮಾತ್ಮನಲ್ಲಿಯೇ ದೃಷ್ಟಿಯಿರಬೇಕಾದದ್ದು ಯುಕ್ತ ವಾದದ್ದು, ಆದರೆ ಈ ಕಾರಣದಿಂದ ಶರೀರದ ಆರೋಗ್ಯವನ್ನಾಗಲಿ ಬಲವನ್ನಾಗಲಿ ಅಸಡ್ಡೆಯಿಂದ ಕಾಣುವದು ಎಂದಿಗೂ ಒಳ್ಳೆಯದಲ್ಲ. ಕೆಲವರು ತಾವು ಮುಮುಕ್ಷು ಗಳೆಂದೂ ಆದ್ದರಿಂದ ಶರೀರವನ್ನು ದಂಡಿಸುವದೇ ತಮ್ಮ ಕರ್ತವ್ಯವೆಂದೂ ಬಗೆದು ಉಪವಾಸ ವನವಾಸಗಳಿಂದ ದೇಹವನ್ನು ಬಳಲಿಸುತ್ತಾರೆ; ಮತ್ತೆ ಕೆಲವರು ತಾವು ಧ್ಯಾನ ಮಾಡುವವರಾದ್ದರಿಂದ ಶರೀರವನ್ನು ನೋಡಬೇಕಾದದ್ದಿಲ್ಲವೆನ್ನುತ್ತಾ ಕೂತಕಡೆ ಯಲ್ಲಿಯೇ ಕೂತಿರುತ್ತಾರೆ. ಇವರಿಬ್ಬರಿಗೂ ಶರೀರಸಂಯಮದ ರಹಸ್ಯವು ತಿಳಿಯದು.

ಭಗವದ್ಗೀತೆಯ ಈ ಶ್ಲೋಕವನ್ನು ನೆನಪಿಟ್ಟರೆ ಇಂಥ ತಪ್ಪುದಾರಿಯನ್ನು ತುಳಿಯುವದು ನಿಂತು ಹೋಗುತ್ತದೆ:

**ಯುಕ್ತಾಹಾರವಿಹಾರಸ್ಯ ಯುಕ್ತಚೇಷ್ಟಸ್ಯ ಕರ್ಮಸು ।**
**ಯುಕ್ತಸ್ವಪ್ನಾವಬೋಧಸ್ಯ ಯೋಗೋ ಭವತಿ ದುಃಖಹಾ ॥**

ಮಿತವಾದ ಆಹಾರವಿಹಾರಗಳು, ಕರ್ಮಗಳಲ್ಲಿ ಮಿತವಾದ ಪ್ರವೃತ್ತಿ ಮಿತವಾದ ಎಚ್ಚರನಿದ್ರೆಗಳು- ಹೀಗೆ ತನ್ನ ನಡೆವಳಿಯಲ್ಲಿ ಮಿತವಾಗಿರುವವನಿಗೇ ಸಾಧನದಿಂದ ಎಲ್ಲಾ ದುಃಖವೂ ತೊಲಗುವದು. ಆದ್ದರಿಂದ ಶರೀರವನ್ನು ಬೀದಿಬೀದಿಯ ನಾಯಿಯಂತೆ ಅಲೆಯುವದಕ್ಕೂ ಬಿಡಬಾರದು; ಅಥವಾ ಕಲ್ಲಿನಂತೆ ಬಿದ್ದಲ್ಲಿ ಬಿದ್ದಿರು ವದಕ್ಕೂ ಎಡೆಗೊಡಬಾರದು. ಕಂಡ ಕಂಡ ಕೆಲಸಗಳಿಗೆ ಕೈ ಹಾಕುತ್ತಾ ದೇಹವನ್ನು ದಣಿಸಲೂಬಾರದು ಅಥವಾ ಯಾವ ಕೆಲಸವೂ ಇಲ್ಲದೆ ಸೋಮಾರಿಯಾಗಿ ಕೊರಿಸಲೂ ಬಾರದು. ತಾಮಸಾಹಾರಾದಿಗಳ ಸೇವನೆಯಿಂದ ಯಾವಾಗಲೂ ಗೊರಕೆಹೊಡೆಯು ತ್ತಿರುವಂತೆಯೂ ಮಾಡಬಾರದು, ಅಥವಾ ಕಾಫಿಯೇ ಮುಂತಾದವುಗಳನ್ನು ಸೇವಿಸಿ ರಾತ್ರಿಯಲ್ಲಿಯೂ ಅನವಶ್ಯವಾದ ಜಾಗರಣವನ್ನೂ ಮಾಡಬಾರದು. ಹೀಗೆ ದೇಹದ ವ್ಯಾಪಾರದಲ್ಲಿ ಹಾಳತವಿರುವವನೇ ಅದನ್ನು ಸ್ವಾಧೀನದಲ್ಲಿಟ್ಟು ಕೊಂಡು ಮನಃಪ್ರಾಣ ಗಳನ್ನು ವಶಗೊಳಿಸುವದಕ್ಕೆ ತಕ್ಕಯೋಗ್ಯತೆಯನ್ನು ಪಡೆಯುತ್ತಾನೆ.

ಶರೀರವನ್ನು ಆರೋಗ್ಯವಾಗಿರುವದಕ್ಕೆ ತಕ್ಕಂತೆ ಆಹಾರವಿಹಾರಗಳಿಂದ ಹಿಡಿತ ದಲ್ಲಿಟ್ಟುಕೊಂಡೇ ತೀರಬೇಕೆಂದು ಇದರಿಂದ ಸಿದ್ಧವಾಗುವದಷ್ಟೇ. ಆದರೆ ಶರೀರಕ್ಕೆ ಆರೋಗ್ಯವೂ ಬಲವೂ ಇಲ್ಲದಿದ್ದರೆ ಯಾವ ಧರ್ಮಸಾಧನೆಯನ್ನೂ ಮಾಡುವದಕ್ಕಾಗು ವದಿಲ್ಲವೆಂಬ ಸುಭಾಷಿತವನ್ನು ಕುಂಟನೆಪವಾಗಿ ಹೇಳಿಕೊಳ್ಳುತ್ತಾ, ಶರೀರಕ್ಕೆ ಸವಿಸವಿ ಯಾದ ಆಹಾರವನ್ನು ಒದಗಿಸಿಕೊಳ್ಳುವದಕ್ಕಾಗಲಿ ಅಥವಾ ಗರಡಿಯ ಮನೆಗೆ ಹೋಗಿ ವ್ಯಾಯಾಮಶಿಕ್ಷಣವನ್ನು ಪಡೆದು ಮೈ ದುಂಡಗೆ ಮಾಡಿಕೊಳ್ಳುವದಕ್ಕಾಗಲಿ ಹವಣಿಸು ತ್ತಿರಬೇಕೆಂದೇನೂ ಇದರ ಅಭಿಪ್ರಾಯವಲ್ಲ. ಮನುಷ್ಯನಿಗೆ ಆರೋಗ್ಯವೂ ಬಲವೂ ಬರುವದಕ್ಕೆ ಅತ್ಯಂತ ಪುಷ್ಟಿಕರವಾದ ಆಹಾರವು ದೊರೆತು ಜಗಜಟ್ಟಿಯೆನಿಸಿಕೊಳ್ಳಬೇಕೆಂಬ ಕಟ್ಟುನಿಯಮವೇನೂ ಇಲ್ಲ; ಅಧ್ಯಾತ್ಮಸಾಧಕರಿಗೆ ಅದರ ಆವಶ್ಯಕತೆಯೂ ಇಲ್ಲ. ಲೌಕಿಕ ವ್ಯವಹಾರದಲ್ಲಿ ಮಾಡಬೇಕಾದ ತನ್ನ ದಿನ ದಿನದ ಕೆಲಸಗಳನ್ನು ತಾನೇ ಮಾಡಿ

ಕೊಳ್ಳುತ್ತಾ ಶುದ್ಧವಾದ ಆಹಾರ, ಗಾಳಿ, ಬೆಳಕು-ಇವುಗಳ ಸೇವನೆಯನ್ನು ಮಾಡುತ್ತಿದ್ದರೆ ಸಾಕಾಗಿದೆ.

ಆದರೆ ಇದಕ್ಕಿಂತಲೂ ಹೆಚ್ಚಾಗಿ ತಾನು ಮಾಡಬೇಕಾಗಿರುವ ಕೆಲಸಗಳನ್ನು ಕೂಡ ಇಹಕ್ಕೂ ಪರಕ್ಕೂ ಅನುಕೂಲವಾಗುವಂತೆಯೇ ಸಾಧಕನು ಏರ್ಪಡಿಸಿ ಕೊಳ್ಳುವದಕ್ಕೆ ಪ್ರಯತ್ನಿಸುವದು ಅತ್ಯಂತ ಅವಶ್ಯವಾಗಿರುತ್ತದೆ. ವ್ಯಾಯಾಮಕ್ಕಾಗಿ ವ್ಯಾಯಾಮವನ್ನು ಮಾಡದೆ ಪರಮಾರ್ಥ ಸಾಧನೆಯಲ್ಲಿಯೇ ಲಕ್ಷ್ಯವಿಟ್ಟಿರುವವನಿಗೂ ದೇಹಾರೋಗ್ಯವು ತಾನೇ ದೊರೆತು ಎಲ್ಲಾ ವ್ಯವಹಾರವೂ ಸುಲಭವಾಗಿ ಸಾಗುವಂತೆ ಮಾಡಿಕೊಳ್ಳುವದಕ್ಕೆ ಅವಕಾಶವಿದ್ದೇ ಇದೆ. ಅದು ಹೇಗೆಂಬುದನ್ನು ಮುಂದೆ ವಿಚಾರಕ್ಕೆ ತೆಗೆದುಕೊಳ್ಳೋಣ.

*****

# 25. ವ್ಯಾಯಾಮ - 2

ಶರೀರವನ್ನು ಆರೋಗ್ಯವಾಗಿಟ್ಟುಕೊಂಡಿರುವದಕ್ಕೆ ವ್ಯಾಯಾಮವು ಅತ್ಯವಶ್ಯ ವಾದರೂ ಎಲ್ಲರಿಗೂ ವ್ಯಾಯಾಮಕ್ಕೆಂದು ಒಂದು ಕಾಲವನ್ನು ಗೊತ್ತುಮಾಡಿಕೊಳ್ಳುವು ವದಕ್ಕೆ ಅನುಕೂಲ್ಯವಿರುವದಿಲ್ಲ, ಅದು ಜನರಿಗೆ ತಮ್ಮ ನಿತ್ಯಜೀವನವು ಸಾಗುವದಕ್ಕೆ ಬೇಕಾದ ಹವಣಿಕೆಯನ್ನು ಮಾಡುವದರಲ್ಲಿಯೇ ಬಹಳ ಕಾಲವನ್ನು ಕಳೆಯ ಬೇಕಾದದ್ದು ಅವಶ್ಯವಾಗಿರುತ್ತದೆ. ಆದ್ದರಿಂದ ಜಾಣನಾದವನು ತಾನು ಮಾಡಿ ಕೊಳ್ಳಬೇಕಾದ ನಿತ್ಯ ಜೀವನದ ಕೆಲಸವನ್ನೇ ವ್ಯಾಯಾಮಕ್ಕೂ ಅನುಕೂಲಿಸುವಂತೆ ಹೊಂದಿಸಿಕೊಳ್ಳುವನು. ಜೀವನದ ನಿತ್ಯಸ್ಥಿತಿಯು ಅಷ್ಟು ಮೇಲ್ತರದ್ದಾಗಿಲ್ಲದವರಿಗೆ ನೀರುಸೇದುವದು, ಬಟ್ಟೆ ಒಗೆಯುವದು, ತೋಟ ತುಡಿಕೆಯ ಕೆಲಸವನ್ನು ನೋಡಿಕೊಳ್ಳು ವದು- ಮುಂತಾದ ಕೆಲಸಗಳಲ್ಲಿಯೂ ಅಷ್ಟಷ್ಟು ವ್ಯಾಯಾಮವು ದೊರೆಯುತ್ತಿರುತ್ತದೆ.

ಸಾಧಕನಾದವನು ಅಧ್ಯಾತ್ಮಸಾಧನಗಳಲ್ಲಿಯೂ ಆರೋಗ್ಯಕ್ಕೆ ಬೇಕಾದಷ್ಟು ವ್ಯಾಯಾಮಕ್ಕೆ ಅವಕಾಶವನ್ನು ಕಲ್ಪಿಸಿಕೊಳ್ಳಬೇಕು. ಉದಾಹರಣೆಗೆ ಬೆಳಗಿನ ಜಾವದಲ್ಲಿ ಎದ್ದು ಊರಿನಿಂದ ದೂರವಾಗಿ ಬಹಿರ್ಭೂಮಿಗೆ ಹೋಗಿ ತಣ್ಣೀರಿನಲ್ಲಿ ಮಿಂದು ಮಡಿಯುಟ್ಟು ಬರುವದು, ಮನೆಯಲ್ಲಿ ಪರಮೇಶ್ವರನ ಬಾಹ್ಯಾರ್ಚನ ನಮಸ್ಕಾರವೇ ಮುಂತಾದವುಗಳನ್ನು ಆಚರಿಸುವದು, ಮನೆಗೆ ಬಂದ ಅತಿಥಿ ಅಭ್ಯಾಗತರಿಗೆ

ಸೇವೆಯನ್ನು ಈಶ್ವರಾರ್ಪಣಬುದ್ಧಿಯಿಂದ ಮಾಡುವದು- ಮುಂತಾದವುಗಳಲ್ಲಿ ಇಂಥ ಅವಕಾಶವು ದೊರೆಯುವದು. ಗುರುಗಳು ಸಿಕ್ಕಿದರೆ ಅವರ ಉಪದೇಶದಿಂದ ಪ್ರಾಣಾಯಾಮವೇ ಮುಂತಾದ ಹಠಯೋಗದ ಪ್ರಥಮಸಾಧನಗಳನ್ನೂ ಸ್ವಲ್ಪ ಮಟ್ಟಿಗೆ ಅನುಸರಿಸಬಹುದು. ಈ ಎಲ್ಲಾ ಬಗೆಯ ಸಾಧನಗಳಲ್ಲಿಯೂ ಈಶ್ವರನನ್ನು ಲಕ್ಷ್ಯ ದಲ್ಲಿಟ್ಟು ನಡೆಯುತ್ತಿದ್ದರೆ ಆರೋಗ್ಯವೇ ಅಲ್ಲದೆ ಅಧ್ಯಾತ್ಮವಿಚಾರಕ್ಕೆ ಬೇಕಾದ ಚಟುವಟಿಕೆಯೂ ದೊರೆಯುತ್ತದೆ.

ಶರೀರವು ಧರ್ಮಕ್ಕೆ ಮೊದಲನೆಯ ಸಾಧನವು. ಶರೀರವನ್ನು ಶಾಸ್ತ್ರೋಕ್ತವಾದ ಸಂಸ್ಕಾರಗಳಿಂದ ಪವಿತ್ರವಾಗಿಟ್ಟುಕೊಂಡು ಮಿತವಾದ ನಡೆನುಡಿಗಳಿಂದ ಅದನ್ನು ಹದ್ದು ಮೀರಿ ನಡೆಯದಂತೆ ನೋಡಿಕೊಳ್ಳುತ್ತಾ ತನ್ನ ಶರೀರವು ಈಶ್ವರನ ಸೇವೆಗೆ ಮೀಸಲೆಂಬುದನ್ನು ನೆನಪಿನಲ್ಲಿಟ್ಟುಕೊಂಡು ಇಂದ್ರಿಯಗಳನ್ನು ಬಿಗಿಹಿಡಿದುಕೊಂಡಿರು ವಾತನಿಗೆ ಧರ್ಮಾರ್ಥಕಾಮಗಳಲ್ಲದೆ ಮೋಕ್ಷವೂ ಮುಡುಪಾಗಿರುತ್ತದೆ.

*****

## 26. ಇಂದ್ರಿಯ ನಿಗ್ರಹ - 1

ಶರೀರವನ್ನು ಸ್ವಾಧೀನದಲ್ಲಿಟ್ಟುಕೊಳ್ಳಬೇಕೆನ್ನುವಾತನು ಇಂದ್ರಿಯಗಳನ್ನು ಮೊದಲು ಹಿಡಿತದಲ್ಲಿಟ್ಟುಕೊಳ್ಳಬೇಕು. ಏಕೆಂದರೆ ಇಂದ್ರಿಯಗಳು ಹಿಡಿತದಲ್ಲಿರುವ ವನಿಗೆ ಶರೀರಕ್ಕೆ ಬೇಕಾದ ಆರೋಗ್ಯ, ಬಲ- ಮುಂತಾದವುಗಳ ಸಾಮಗ್ರಿಯು ಅವುಗಳ ಮೂಲಕವೇ ಸೇರಿಹೋಗಿರುತ್ತದೆ.

ಶರೀರದಲ್ಲಿ ಇಂದ್ರಿಯಸ್ಥಾನಗಳೆಂಬಿವು ಬಲವಾದ ದುರ್ಗದ ಮರ್ಮ ಸ್ಥಾನಗಳಂತೆ ಇರುತ್ತವೆ. ಕೋಟೆಯ ಮರ್ಮಸ್ಥಳಗಳಲ್ಲಿಯೇ ಶತ್ರುಗಳು ನುಗ್ಗುವಂತೆ ಶರೀರವನ್ನು ವಶಪಡಿಸಿಕೊಳ್ಳುವದಕ್ಕೆಂದು ಹೊರಗಿನ ವಿಷಯಗಳು ಇಂದ್ರಿಯಗಳ ಮೂಲಕವೇ ಒಳನುಗ್ಗುವವು. ಸೇನಾಪತಿಯು ಎಚ್ಚರಿಕೆಯಿಂದ ಕಾಪಾಡಿಕೊಳ್ಳದೆ ಇರುವ ವೀರರು ಕೂಡ ಶತ್ರುಗಳ ಭೇದೋಪಾಯಕ್ಕೆ ವಶವಾಗುವಂತೆ ಎಚ್ಚರಿಕೆ ಯಿಲ್ಲದ ಸಾಧಕನ ಮನೋವೃತ್ತಿಗಳು ಇಂದ್ರಿಯಗಳ ಮೂಲಕವಾಗಿ ಹೊರಕ್ಕೆ ಹಾರಿ ಹೋಗುತ್ತವೆ. ಇಂದ್ರಿಯಗಳಿಗೆ ವಿಷಯಗಳನ್ನು ಕಂಡಾಗ ಸುಮ್ಮನೆ ಇರುವದಕ್ಕೆ ಆಗುವದಿಲ್ಲ. ವಿಷಯಗಳಲ್ಲಿ ಸಂಚರಿಸುವ ಇಂದ್ರಿಯಗಳನ್ನು ಕಂಡು ಮನಸ್ಸಿಗೆ

ಸುಮ್ಮನೆ ಇರುವದಕ್ಕೆ ಆಗುವದಿಲ್ಲ. ಆದ್ದರಿಂದ ಮನುಷ್ಯನು ಅಧ್ಯಾತ್ಮಸಾಧನೆಯಲ್ಲಿ ಸೋಲುವದಕ್ಕೂ ಗೆಲ್ಲುವದಕ್ಕೂ ಇಂದ್ರಿಯಗಳೇ ಮೂಲಕಾರಣವೆನ್ನಬಹುದಾಗಿದೆ.

ಇಂದ್ರಿಯಗಳಲ್ಲಿ ಕರ್ಮೇಂದ್ರಿಯಗಳೆಂದೂ ಜ್ಞಾನೇಂದ್ರಿಯಗಳೆಂದೂ ಎರಡು ಬಗೆ. ಜ್ಞಾನೇಂದ್ರಿಯಗಳು ಮನುಷ್ಯನಿಗೆ ಹೊರಗಿನ ವಿಷಯಗಳ ಪರಿಚಯವನ್ನು ಮಾಡಿಕೊಡುತ್ತವೆ; ಕರ್ಮೇಂದ್ರಿಯಗಳು ಬೇರೆಬೇರೆಯ ಕೆಲಸಗಳನ್ನು ಮಾಡುವದಕ್ಕೆ ಸಹಾಯವಾಗಿರುತ್ತವೆ. ಹೊರಗಿನ ವಸ್ತುಗಳ ಶಬ್ದ, ಸ್ಪರ್ಶ, ರೂಪ, ರಸ, ಗಂಧ- ಇವುಗಳನ್ನು ಅರಿಯುವದು ಜ್ಞಾನೇಂದ್ರಿಯಗಳ ಕೆಲಸ; ಹಿಡಿಯುವದು, ದೂಡು ವದು, ನಡೆಯುವದು-ಮುಂತಾದ ಕೆಲಸಗಳನ್ನು ನೆರವೇರಿಸುವದು ಕರ್ಮೇಂದ್ರಿಯ ಗಳ ಕೆಲಸ. ಈ ಎರಡು ಬಗೆಯ ಇಂದ್ರಿಯಗಳಲ್ಲಿ ಕರ್ಮೇಂದ್ರಿಯಗಳನ್ನು ಬಿಗಿಹಿಡಿ ಯುವದು ಹೆಚ್ಚು ಸುಲಭವಾಗಿರುತ್ತದೆ; ಸಾಮಾನ್ಯರು ಆಗಲೂ ಜ್ಞಾನೇಂದ್ರಿಯ ಗಳಿಂದ ಬಂದ ತಿಳಿವಳಿಕೆಯನ್ನು ಮನಸ್ಸಿನಲ್ಲಿ ಹೊರಳಿಸುತ್ತಲೇ ಇರುವರು. ಆದರೆ ಅದು ಮಿಥ್ಯಾಚಾರವು, ಬರಿಯ ತೋರಿಕೆಯ ಇಂದ್ರಿಯ ನಿಗ್ರಹವು. ನಿಜವಾದ ಇಂದ್ರಿಯನಿಗ್ರಹವು ಅಳವಡಬೇಕಾದರೆ ಈ ಎರಡು ಬಗೆಯ ಇಂದ್ರಿಯಗಳನ್ನೂ ವಶಪಡಿಸಿಕೊಂಡಿರಬೇಕು.

*****

# 27. ಇಂದ್ರಿಯ ನಿಗ್ರಹ -2

ಮನುಷ್ಯನು ಇಂದ್ರಿಯಗಳಿಂದ ಕೆಳಗೆ ಬೀಳುವಷ್ಟು ಮತ್ತೆ ಯಾವದರಿಂದಲೂ ಬೀಳುವದಿಲ್ಲ. ಮೊದಮೊದಲು ನೋಡುವದಕ್ಕೆ ಜ್ಞಾನೇಂದ್ರಿಯಗಳೆಂಬಿವು ಬರಿಯ ಸ್ವಚ್ಛವಾದ ಕನ್ನಡಿಯಂತೆ ತೋರುತ್ತವೆ; ಆದರೆ ಅವು ವಿಷಯಗಳು ಎದುರಿಗೆ ಇರುವಾಗ ಬೆಂಕಿಯ ಮುಂದಿರುವ ಬೆಣ್ಣೆಯಂತೆ ತಾವೂ ಕರಗಿ ಮನುಷ್ಯನ ಮನಸ್ಸನ್ನು ಕರಗಿಸಿಬಿಡುತ್ತವೆ. ಆದ್ದರಿಂದ ಜಾಣನಾದವನು ಇಂದ್ರಿಯಗಳ ವಿಷಯಕ್ಕೆ ಬಲು ಎಚ್ಚರಿಕೆಯಿಂದಿರಬೇಕು.

ಇಂದ್ರಿಯಗಳಿಂದ ನಮಗೆ ತೋರಿ ಬರುವ ಸುಂದರವಾದ ರೂಪ, ಇಂಪಾದ ಧ್ವನಿ, ಮೆತ್ತನೆಯ ಸ್ಪರ್ಶ, ಸರಿಯಾದ ರಸ, ಪರಿಮಳದ ವಾಸನೆ- ಇವು ನಮ್ಮನ್ನು ಮೈಮರೆವಂತೆ ಮಾಡಿ ಗಾಳಿಯು ತೆಪ್ಪವನ್ನು ಹೊಡೆದುಕೊಂಡು ಹೋಗುವಂತೆ ತಮ್ಮ

ಕಡೆಗೆ ಸೆಳೆದುಕೊಂಡುಬಿಡುತ್ತದೆ. ಮೊದಲನೆಯ ಸಲಕ್ಕೇ ಇಂದ್ರಿಯ ಗೋಚರವಾಗುವ ವಿಷಯವು ಇಷ್ಟು ಬಲವಾಗಿರುವದರಿಂದ, ಮತ್ತೆ ಮತ್ತೆ ಅದನ್ನು ಸೇವನೆ ಮಾಡುತ್ತಿದ್ದರೆ ಹೇಳಬೇಕಾದದ್ದೇ ಇಲ್ಲ. ಇಂದ್ರಿಯಗಳು ವಿಷಯಸೇವನೆ ಮಾಡಿದಂತೆಲ್ಲ ನಾಜೂಕಾಗುತ್ತದೆ. ಅದಕ್ಕೆ ಬರಬರುತ್ತಾ ಹೆಚ್ಚು ಹೆಚ್ಚು ಸುಂದರವಾದ ನೋಟವನ್ನು ನೋಡಬೇಕೆಂಬ, ಹೆಚ್ಚು ಹೆಚ್ಚು ಇಂಪಾದ ರಾಗವನ್ನು ಕೇಳಬೇಕೆಂಬ, ಹೆಚ್ಚು ಹೆಚ್ಚಿನ ಪರಿಮಳಗಂಧವನ್ನು ಮೂಸಬೇಕೆಂಬ, ತಹತಹ ಉಂಟಾಗುತ್ತದೆ. ಹೂಗಂಧವೇ ಮುಂತಾದವುಗಳನ್ನು ಭೋಗಿಸುವ ಲಾಲಸೆ, ಸಿನಿಮ, ನಾಟಕ– ಮುಂತಾದವುಗಳಿಗೆ ಹೋಗಬೇಕೆಂಬ ಚಟ, ಟೀ ಕಾಫಿಯೇ ಮುಂತಾದವುಗಳನ್ನು ಕುಡಿಯಬೇಕೆಂದು ಹಾತುವರಿಯುವದು, ಪ್ರಿಯಳಾದವಳ ಅಥವಾ ಪ್ರಿಯನಾದವನ ಕೂಟಕ್ಕೆಂದು ಸಮಯವನ್ನು ಕಾಯುವ ಕುತೂಹಲ– ಇವೆಲ್ಲ ಹೀಗೆಯೇ ದಿನ ದಿನಕ್ಕೆ ಬೆಳೆಯುತ್ತಿರುತ್ತವೆ.

ಯಾವ ವೀರನು ಇಂದ್ರಿಯಗಳನ್ನು ಇಂದ್ರಿಯಾರ್ಥಗಳಿಂದ ಹಿಂತಿರುಗಿಸ ಬಲ್ಲನೋ, ಯಾವನಿಗೆ ಇಂದ್ರಿಯಗಳು ವಿಷಯವನ್ನು ಸೇವಿಸಿದರೂ ಅವುಗಳಲ್ಲಿ ರಾಗದ್ವೇಷಗಳುಂಟಾಗದೆ ಇರುವವೋ, ಅವನ ಮನಸ್ಸು ಸ್ತಿಮಿತವಾಗಿರುತ್ತದೆ. ಅಂಥವನು ಮಾತ್ರ ಮನುಷ್ಯತ್ವವನ್ನು ಮೀರಿ ದೇವತ್ವವನ್ನು ಏರಬಲ್ಲ ಹಾದಿಯನ್ನು ತುಳಿಯಲು ಅರ್ಹನಾಗಿರುತ್ತಾನೆ.

*****

## 28. ಬ್ರಹ್ಮಚರ್ಯ

ವಿಷಯಗಳನ್ನು ನೋಡುವದು, ಮುಟ್ಟುವದು, ಮೂಸುವದು– ಮುಂತಾದ ರೀತಿಯಿಂದ ಮನಸ್ಸನ್ನು ಹೊಲಸುಮಾಡಿಕೊಳ್ಳದೆ ಬರುವದಕ್ಕೆ ಬ್ರಹ್ಮಚರ್ಯವೆಂದು ಹೆಸರು. ಸಾತ್ತ್ವಿಕದ್ರವ್ಯಗಳನ್ನು ಭಗವದರ್ಪಣೆಮಾಡಿ ಭಗವಂತನ ಪ್ರಸಾದವೆಂದು ಸ್ವೀಕರಿಸುತ್ತಾಬಂದರೆ ಅವುಗಳಲ್ಲಿ ರಾಗದ್ವೇಷಗಳಿಲ್ಲದೆ ಮನಸ್ಸು ಸಮತೂಕದಲ್ಲಿರುವದಕ್ಕೆ ಆಗುತ್ತದೆ. ಆಗ ಇಂದ್ರಿಯಗಳ ಉಪಟಳದಿಂದ ಸುಲಭವಾಗಿ ತಪ್ಪಿಸಿಕೊಳ್ಳಬಹುದಾಗುತ್ತದೆ.

ವಿಷಯಗಳನ್ನು ಸೇವನೆ ಮಾಡದೆ ಇದ್ದರೂ ವಿಷಯಗಳ ಸಂಬಂಧ ವಿಲ್ಲದ್ದರಿಂದ ಇಂದ್ರಿಯಗಳ ಹಾವಳಿಯು ಸ್ವಲ್ಪಮಟ್ಟಿಗೆ ಕಡಿಮೆಯಾಗುತ್ತದೆ. ಆದರೆ ಅವುಗಳನ್ನು ಹಿಂದೆ ಅನುಭವಿಸಿದ್ದರಿಂದ ಆಗಿರುವ ವಾಸನೆಯು ಮಾತ್ರ ಮನಸ್ಸಿನಲ್ಲಿ ಹತ್ತಿಕೊಂಡಿರುತ್ತದೆ. ಏಕಾದಶಿಯ ದಿನ ಉಪವಾಸ ಮಾಡಿದವರು ದ್ವಾದಶಿಯ ದಿನ ಪಾರಣೆಗೆ ಹಾತುವರಿಯುವಂತೆ, ಬಲಾತ್ಕಾರದಿಂದ ವಿಷಯಗಳನ್ನು ಬಿಟ್ಟವರು ಮತ್ತೆ ಸಂದರ್ಭವು ದೊರಕಿದಾಗ ಬಲು ಜೋರಾದ ಆಸಕ್ತಿಯಿಂದ ಅವುಗಳ ಸೇವನೆಗೆ ಮುಂದೆ ಬರುತ್ತಾರೆ. ಎಷ್ಟೋ ಜನರು ಕೆಟ್ಟಚಟಗಳನ್ನು ಹಠದಿಂದ ಬಿಟ್ಟು ಕೆಲವು ಕಾಲದ ಮೇಲೆ ಮತ್ತೆ ಮೊದಲಿಗಿಂತಲೂ ಜೋರಾಗಿ ಆಯಾ ಅಭ್ಯಾಸದಲ್ಲಿ ತೊಡಗಿರುವದಕ್ಕೆ ಇದೇ ಕಾರಣ.

ಆದ್ದರಿಂದ ಇಂದ್ರಿಯಗಳನ್ನು ಗೆಲ್ಲಬೇಕೆನ್ನುವವರು ಅವುಗಳನ್ನು ಸುಮ್ಮನೆ ವಿಷಯಗಳಿಂದ ಹಿಮ್ಮೆಟ್ಟಿಸಿದರೆ ಸಾಲದು; ಅವುಗಳ ಪ್ರವೃತ್ತಿಯನ್ನು ಸಾತ್ತ್ವಿಕ ರೀತಿಗೆ ತಿರುಗಿಸಿ ಮೆಲ್ಲಮೆಲ್ಲಗೆ ಪರಮೇಶ್ವರನ ಕಡೆಗೆ ಒಲವು ಆಗುವಂತೆ ಅವುಗಳನ್ನು ಉಪಯೋಗಿಸಬೇಕು. ಪರಮೇಶ್ವರನ ಸಗುಣಮೂರ್ತಿಯನ್ನು ನೋಡುವದು, ಪರಮೇಶ್ವರನ ಗುಣಗಾನವನ್ನು ಕೇಳುವದು, ಪರಮೇಶ್ವರನ ಪಾದಸೇವನೆಯನ್ನು ಮಾಡುವದು, ಆತನನ್ನು ಸ್ನಾನ ಮಾಡಿಸಿದ ಪಾದತೀರ್ಥವನ್ನು ಸೇವಿಸುವದು, ಆತನ ಪ್ರಸಾದವಾದ ಹೂಗಂಧ ಮೊದಲಾದವುಗಳನ್ನು ಧರಿಸುವದು– ಇಂಥ ಉಪಾಯ ಗಳಿಂದ ಇಂದ್ರಿಯಗಳ ಮಾಯಾವಿಲಾಸವನ್ನು ತಡೆದುಕೊಳ್ಳಬೇಕು. ಹೀಗೆ ಮಾಡುತ್ತಿದ್ದರೆ ಮೆಲ್ಲಮೆಲ್ಲಗೆ ಇಂದ್ರಿಯಗಳು ತಮ್ಮ ಹರಿದಾಟವನ್ನು ಕಡಿಮೆ ಮಾಡುವವು. ಪಳಗಿದ ಹೋರಿಗಳು ಗಾಡಿಯನ್ನು ಎಳೆಯುವದಕ್ಕೆ ಸಜ್ಜಾಗುವಂತೆ ಸಾಧಕನನ್ನು ಸತ್ಪಥದಲ್ಲಿ ಬಿಡುವದಕ್ಕೆ ಅನುಕೂಲವಾಗುವವು. ಹೀಗೆ ಇಂದ್ರಿಯಗಳನ್ನು ಪರಮೇಶ್ವರನ ಕಡೆಗೆ ತಿರುಗಿಸುವದೇ ಬ್ರಹ್ಮಚರ್ಯೆಯು.

*****

# 29. ವಾಕ್ಸಂಯಮ

ಮನುಷ್ಯನಲ್ಲಿರುವ ಇಂದ್ರಿಯಗಳಲ್ಲಿ ಸೋಂಕಿನ ಇಂದ್ರಿಯ, ಸವಿಯ ಇಂದ್ರಿಯ, ಮಾತಿನ ಇಂದ್ರಿಯ- ಈ ಮೂರೂ ನಾಲಿಗೆಯೊಂದರಲ್ಲಿಯೇ ಸೇರಿ ಕೊಂಡಿರುತ್ತವೆ. ಆದ್ದರಿಂದ ಮನುಷ್ಯನು ನಾಲಗೆಯನ್ನು ಹತೋಟಿಯಲ್ಲಿಟ್ಟುಕೊಂಡರೆ ಮೂರು ಇಂದ್ರಿಯಗಳನ್ನೂ ಹಿಡಿತದಲ್ಲಿಟ್ಟುಕೊಂಡಂತೆ ಆಗುವದೆನ್ನಬಹುದು.

ಈ ಮೂರು ಇಂದ್ರಿಯಗಳಲ್ಲಿ ಸೋಂಕು ಮೃದುಸ್ಪರ್ಶವನ್ನು ಬಯಸುತ್ತದೆ, ಸವಿಯು ಪ್ರಿಯವಾದ ಉತ್ತೇಜಕವಾದ ರುಚಿಯನ್ನು ಬಯಸುತ್ತದೆ, ಮಾತು ತನಗೆ ತಡೆ ಯಾವದೂ ಇರಬಾರದೆಂದು ಬಯಸುತ್ತದೆ. ಸ್ಪರ್ಶವೂ ರುಚಿಯೂ ಹೊರಗಿನ ವಸ್ತುವಿನ ಸಂಬಂಧದಿಂದ ಎಚ್ಚತ್ತು ಕೆಲಸಮಾಡುತ್ತವೆ; ಆದರೆ ಮಾತಿನ ಇಂದ್ರಿಯವು ಹೊರಗಿನ ವಿಷಯದ ಸಂಬಂಧವು ಇದ್ದರೂ ಇಲ್ಲದಿದ್ದರೂ ಎದ್ದು ಓಡಾಡುತ್ತದೆ. ನಾಲಗೆಯ ಮೇಲೆ ಒಂದು ಕಲ್ಲು ಸಕ್ಕರೆಯನ್ನು ಇಟ್ಟಾಗ ಮೊದಲು ತಣ್ಣನೆಯ ಸ್ಪರ್ಶದ ವೇದನೆಯಾಗುತ್ತದೆ; ಆಮೇಲೆ ಇಷ್ಟವಾದ ಸಿಹಿ ಸವಿಯು ತೋರುತ್ತದೆ. ಆದರೆ ಕಲ್ಲುಸಕ್ಕರೆಯ ಮಾತು ಹೊರಗೆ ಕಲ್ಲುಸಕ್ಕರೆಯನ್ನು ನೋಡಿದರೂ ಅದರ ಸಂಬಂಧದ ಯಾವದಾದರೂ ಒಂದು ವಸ್ತುವನ್ನು ಕಂಡರೂ ಅಥವಾ ಹಿಂದಿನ ಅದರ ಸಂಬಂಧವಾದ ಯಾವದಾದರೊಂದು ಅನುಭವದ ನೆನಪು ಬಂದರೂ ಹೊರ ತೋರಿಕೊಂಡುಬಿಡುತ್ತದೆ.

ಸ್ಪರ್ಶೇಂದ್ರಿಯ, ರಸನೇಂದ್ರಿಯ, ವಾಗಿಂದ್ರಿಯ, ಇವು ಮೂರರಲ್ಲಿ ವಾಗಿಂದ್ರಿಯವು ನೋಡುವದಕ್ಕೆ ಪೂರ ನಿರಪರಾಧಿಯಂತೆ ಕಾಣುತ್ತಿರುವದು. ಆದರೆ ಅದರಿಂದಾಗುವ ಅಪಾಯಗಳು ನಿಧಾನವಾಗಿ ನಮಗೆ ತಿಳಿಯಬರುತ್ತದೆ. ವಾಗಿಂದ್ರಿಯಕ್ಕೆ ವಶನಾದ ಮನುಷ್ಯನು ಎಲ್ಲಾ ಇಂದ್ರಿಯಗಳನ್ನೂ ಒಂದೊಂದಾಗಿ ಎಚ್ಚರಗೊಳಿಸಿ, ಎಬ್ಬಿಸಿ, ಕುಣಿದಾಡಿಸುತ್ತಾನೆಂಬುದು ಅನೇಕರಿಗೆ ತಿಳಿಯದು. 'ಮಾತು ಮನೆ ಕೆಡಿಸಿತು' ಎಂಬುದು ಎಲ್ಲಾ ಬಗೆಯಿಂದಲೂ ನಿಶ್ಚಯವು. ಮನುಷ್ಯನೇ ಒಂದು ಮನೆ, ಇಂದ್ರಿಯಗಳೇ ಅದರ ನಿವಾಸಿಗಳು. ಮಾತು ಯಾವನ ವಶದಲ್ಲಿರುವು ದಿಲ್ಲವೋ ಅವನು ತನ್ನಲ್ಲಿರುವ ಇಂದ್ರಿಯಗಳನ್ನೆಲ್ಲಾ ದಂಗೆಯೇಳುವುದಕ್ಕೆ ಅವಕಾಶ ಕೊಟ್ಟವನಾಗುತ್ತಾನೆ. ಆದ್ದರಿಂದ ಮಾತಿನಿಂದ ಯಾವ ಯಾವ ದೋಷಗಳು

ಉಂಟಾಗುವದೆಂಬುದನ್ನು ಮೊದಲು ತಿಳಿದುಕೊಂಡು ಅವುಗಳನ್ನು ದೂರವಾಗಿರಿಸುವದಕ್ಕೆ ತಕ್ಕ ಸಾಧನಗಳನ್ನು ಅವಲಂಬಿಸಬೇಕು. ವಾಕ್ಸಂಯಮವನ್ನು ಮಾಡಿಕೊಳ್ಳದಿದ್ದರೆ ವ್ಯವಹಾರದಲ್ಲಿ ಎಂದಿಗೂ ಜಯವಿಲ್ಲ.

*****

## 30. ಮಾತಿನಲ್ಲಿ ದೋಷಗಳು

ಇಂದ್ರಿಯಗಳಿಗೆಲ್ಲ ಚಾಪಲ್ಯವು ಸಹಜ. ಇದರಂತೆ ವಾಗಿಂದ್ರಿಯವೂ ಸುಮ್ಮನೆ ಕೆಲಸವನ್ನು ಮಾಡುತ್ತಲೇ ಇರಬೇಕೆನ್ನುತ್ತದೆ. ಅನವಶ್ಯವಾಗಿ ಮಾತನಾಡುವದು, ಅರ್ಥವಿಲ್ಲದೆ ಮಾತುಗಳನ್ನಾಡುವದು, ಮತ್ತೊಬ್ಬರನ್ನು ಮಾತನಾಡುವದಕ್ಕೆ ಬಿಡದಿರುವದು- ಇವೆಲ್ಲ ವಾಗಿಂದ್ರಿಯದ ಚಾಪಲ್ಯಕ್ಕೆ ಸೇರಿದವುಗಳೇ.

ಮಾತನಾಡುತ್ತಲೇ ಇರುವ ಅಭ್ಯಾಸವಾಗಿಬಿಟ್ಟರೆ ಎಲ್ಲಿ, ಯಾವಾಗ, ಹೇಗೆ ಏನನ್ನು ನುಡಿಯಬೇಕೆಂಬ ವಿಚಾರವು ಇಲ್ಲದೆಹೋಗುತ್ತದೆ. ನಮಗೆ ಅಥವಾ ಮತ್ತೊಬ್ಬರಿಗೆ ಬೇಡವಾದದ್ದನ್ನೂ ಅಪಾಯಕರವಾದದ್ದನ್ನೂ ದೇಶವನ್ನಾಗಲಿ ಕಾಲವನ್ನಾಗಲಿ ನೋಡದೆ ಮನಸ್ಸಿಗೆ ತೋರಿದ ರೀತಿಯಲ್ಲಿ ಆಡುವ ಚಟವು ಹೆಚ್ಚಿಬಿಟ್ಟರೆ ಸತ್ಪುರುಷರ ಸಹವಾಸವು ನಮಗೆ ತಪ್ಪಿಹೋಗುತ್ತದೆ. ಸಭ್ಯರೂ ಸಾಧುಗಳೂ ಆದವರು ಹೊಣೆಗಾರಿಕೆಯಿಲ್ಲದೆ ಮಾತನಾಡುವವನ ಸ್ನೇಹವನ್ನೂ ಮಾಡಿಕೊಳ್ಳುವದಕ್ಕೆ ಎಂದಿಗೂ ಇಷ್ಟಪಡುವದಿಲ್ಲ.

ಯಾವಾಗಲೂ ಮಾತನಾಡುತ್ತಲೇ ಇರಬೇಕಾದವನು ವಿಷಯಗಳನ್ನು ಇದ್ದದ್ದು ಇದ್ದಂತೆ ನುಡಿಯಬೇಕೆಂಬ ಕಟ್ಟನ್ನು ಅವಶ್ಯವಾಗಿ ಮೀರುತ್ತಾನೆ. ಅಂಥವನು ತನ್ನ ಸಂತೋಷಕ್ಕಾಗಿಯೇ ಮಾತನಾಡುತ್ತಿರುವದರಿಂದ, ನಿಜವನ್ನೇ ಹೇಳಬೇಕೆಂಬ ನಿಯಮ ವೇನೂ ಉಳಿಯುವದಿಲ್ಲ. ತನ್ನ ಹೆಚ್ಚಿಗೆಯನ್ನು ಹೇಳಿಕೊಳ್ಳುವದಕ್ಕಾಗಲಿ, ತನಗೆ ಬೇಕಾದ ಇನ್ನೊಬ್ಬರ ಹಿರಿಮೆಯನ್ನು ಹರಡುವದಕ್ಕಾಗಲಿ ವಿಷಯದ ಅಳತೆಯನ್ನು ಹಿಗ್ಗಿಸುವದೂ ತನ್ನ ಅಥವಾ ತನ್ನವರ ದೋಷವನ್ನು ಮುಚ್ಚುವದಕ್ಕೆ ಅಥವಾ ಮತ್ತೊಬ್ಬರ ಕೀಳ್ಮೆಯನ್ನು ಎತ್ತಿತೋರಿಸುವದಕ್ಕೆಂದು ವಿಷಯವನ್ನು ಹೆಚ್ಚುಕಡಿಮೆ ಮಾಡುವದೂ ಸ್ವಾಭಾವಿಕವಾಗಿರುತ್ತದೆ. ಇದರಂತೆ ಮತ್ತೊಬ್ಬರ ಮನಸ್ಸಿಗೆ ತನ್ನ ಮಾತಿನಿಂದ ಸಂತೋಷವಾಗುವದೋ ದುಃಖವಾಗುವದೋ ವಿನೋದವಾಗು

ವದೋ ಯಾವದನ್ನೂ ಲೆಕ್ಕಿಸದೆ ಹರಟುವದೊಂದೇ ಚಟವು ಬೇರೂರಿಕೊಂಡು ಬಿಡುತ್ತದೆ. ಹರಟೆಗಾರನಿಗೆ ಗುಟ್ಟನ್ನು ಇಟ್ಟುಕೊಳ್ಳುವದೂ ಆಗುವದಿಲ್ಲ. ಅವನು ಆಡಬಾರದ ಮಾತುಗಳನ್ನು ಗಳಹಿ ತನಗೂ ಮತ್ತೊಬ್ಬರಿಗೂ ಅಪಾಯವನ್ನು ತಂದಿಟ್ಟುಕೊಂಡು ಬಿಡಬಹುದು.

ಈ ಎಲ್ಲಾ ಕಾರಣಗಳಿಂದ ಪ್ರತಿಯೊಬ್ಬನೂ ಮಾತನಾಡುವಾಗ ಎಚ್ಚರಿಕೆಯಿಂದಿರಬೇಕು. ನಾನು ಆಡುವ ಮಾತು ಬರಿಯ ಹರಟೆಯೇ? ಅಲ್ಲದಿದ್ದರೆ ಅದು ಕೇಳುವವರಿಗೆ ಅಪ್ರಿಯವಾಗಿ ಅಥವಾ ಅಸಹ್ಯವಾಗಿದೆಯೆ? ನಾನು ಮಾತನಾಡಬೇಕಾದ ಕಡೆಯಲ್ಲಿಯೇ, ಅವಶ್ಯವಿದ್ದಷ್ಟನ್ನು ಎಲ್ಲರಿಗೂ ಪ್ರಿಯವಾಗಿರುವಂತೆಯೇ ಸತ್ಯವಾದದ್ದನ್ನೇ ನುಡಿದಿರುತ್ತೇನೆಯೆ?-ಎಂಬುದನ್ನು ಮೊದಲು ವಿಚಾರಿಸಿಕೊಳ್ಳಬೇಕು.

*****

# 31. ಸತ್ಯಪ್ರಿಯ ವಚನ

ವಾಕ್ಯವು ಸತ್ಯವಾಗಿಯೂ ಪ್ರಿಯವಾಗಿಯೂ ಇರಬೇಕೆಂಬುದೊಂದು ನಿಯಮವನ್ನು ಮನುಷ್ಯನು ಇಟ್ಟುಕೊಂಡರೆ ಲೋಕದಲ್ಲಿರುವ ಅಶಾಂತಿಯ ಅರ್ಧಭಾಗವು ಕಡಿಮೆಯಾದೀತು. 'ಮಾತು ಬಲ್ಲವನಿಗೆ ಜಗಳವಿಲ್ಲ, ಊಟಬಲ್ಲವನಿಗೆ ರೋಗವಿಲ್ಲ' ಎಂಬ ಮಾತಿನಲ್ಲಿ ಎಷ್ಟು ಅರ್ಥಗಾಂಭೀರ್ಯವಿದೆ! ಅಳತೆ ತಪ್ಪಿ ಊಟ ಮಾಡಿದವರಿಗೆ ರೋಗವು ನಿಶ್ಚಿತವಾಗಿರುವಂತೆ, ತಪ್ಪಿ ಮಾತನಾಡಿದವನಿಗೆ ಜನರ ಮನಸ್ಸಿನಲ್ಲಿ ಕಳವಳವನ್ನುಂಟುಮಾಡುವದು ಸಹಜವಾಗಿರುತ್ತದೆ. ತನ್ನ ಸುತ್ತಮುತ್ತಲಿನವರ ಮನಸ್ಸನ್ನು ನೋಯಿಸುವವನಿಗೆ ಅದರ ಅಶಾಂತಿಯ ಸೆಕೆಯು ತನಗೂ ತಟ್ಟಿಯೇ ತೀರುವದರಿಂದ ಅಸತ್ಯವಾದ ಅಪ್ರಿಯವಾದ ಕೆಟ್ಟಮಾತೆಂಬುದು ಒಂದು ಬಗೆಯ ರೋಗಾಣುವಾಗಿ ಪರಿಣಮಿಸುತ್ತದೆ. ದೇಹದ ಆರೋಗ್ಯಸ್ಥಿತಿಗೆ ಊಟವು ಶುದ್ಧವಾಗಿರುವದು ಹೇಗೆ ಅವಶ್ಯವೋ ಹಾಗೆ ಮನಸ್ಸಿನ ಆರೋಗ್ಯ ಸ್ಥಿತಿಗೆ ಸತ್ಯಪ್ರಿಯವಚನವು ಅತ್ಯವಶ್ಯವಾಗಿರುತ್ತದೆ.

ಆದರೆ ಸತ್ಯವನ್ನೂ ಪ್ರಿಯವನ್ನೂ ಹೇಳುವದು ಕಡುಕಷ್ಟ. ಮಾತು ಸತ್ಯವಾಗಿದ್ದರೆ ಪ್ರಿಯವಾಗಿರುವದೆಂಬ ನಿಯಮವಿಲ್ಲ. ಪ್ರಿಯವಾಗಿದ್ದರೆ ಸತ್ಯವಾಗಿರುವ

ದೆಂಬ ನಿಯಮವಿಲ್ಲ. ಇಂಥ ಸಂದರ್ಭದಲ್ಲಿ ಹೇಗೆಮಾಡಬೇಕು? ಶಾಸ್ತ್ರವು ಹೀಗೆಂದು ಉಪದೇಶಮಾಡುತ್ತದೆ; 'ಸತ್ಯವನ್ನು ಹೇಳಬೇಕು, ಪ್ರಿಯವನ್ನು ಹೇಳಬೇಕು, ಅಪ್ರಿಯವಾದ ಸತ್ಯವನ್ನು ಹೇಳಬಾರದು, ಪ್ರಿಯವಾದ ಅಸತ್ಯವನ್ನು ಹೇಳಬಾರದು, ಇದು ಸನಾತನಧರ್ಮವು.'

ಸತ್ಯವನ್ನೇ ನುಡಿಯುವದೆಂಬುದೊಂದು ದೊಡ್ಡ ವ್ರತವು. ಅದನ್ನು ಪೂರ್ತಿಗೊಳಿಸಬೇಕಾದರೆ ಮನುಷ್ಯನು ಬಹಳ ಎಚ್ಚರಿಕೆಯಿಂದಿರಬೇಕಾಗುವದು. ತಾನು ಕಂಡದ್ದನ್ನೂ ಕೇಳಿದ್ದನ್ನೂ ತಿಳಿದಿರುವದನ್ನೂ ಮತ್ತೊಬ್ಬರಿಗೆ ತಿಳಿಯಪಡಿಸುವಾಗ, ಅದನ್ನು ಚೆನ್ನಾಗಿ ಆಲೋಚನೆಮಾಡಿ, ಸ್ಫುಟವಾಗಿ ನಿಸ್ಸಂಶಯವಾಗಿರುವ ರೀತಿಯಿಂದ ಮಿತವಾದ ನುಡಿಗಳಿಂದ ಹೇಳಬೇಕು. ಮಾತುಗಳನ್ನು ಕೇಳುವಾಗಲೂ ಕೇಳಿದವನಿಗೆ ಸಂತೋಷವಾಗಬೇಕು. ಆಮೇಲೆ ಅದರಂತೆ ತಾನು ನಡೆದುಕೊಳ್ಳಬೇಕೆಂಬ ಉತ್ಸಾಹವುಂಟಾಗಬೇಕು; ಬಳಿಕ ಎಂದೆಂದಿಗೂ ಆ ಮಾತನ್ನು ಹೇಳಿದವರ ಉಪಕಾರವನ್ನು ಸ್ಮರಣೆ ಮಾಡುವಂತಿರಬೇಕು. ಸತ್ಯವಾಗಿ, ಪ್ರಿಯವಾಗಿ, ಮನಸ್ಸಿನಲ್ಲಿ ಯಾವ ಕಳವಳವನ್ನೂ ಉಂಟುಮಾಡದೆ ಇರುವ, ಹಿತಕಾರಿಯಾದ ಮಾತಿಗೆ ಬೆಲೆಕಟ್ಟುವದು ಯಾರಿಂದಲೂ ಆಗುವದಿಲ್ಲ. ಅದು ಪರಮೇಶ್ವರನಿಂದ ಬಂದ ವೇದವೇ ಎನ್ನಬಹುದು.

*****

# 32. ಭಗವನ್ನಾಮೋಚ್ಚಾರಣ

ವಾಗಿಂದ್ರಿಯವನ್ನು ಹಿಡಿತದಲ್ಲಿಟ್ಟುಕೊಳ್ಳಬೇಕಾದ ಅವಶ್ಯಕತೆಯನ್ನೂ ಅದರಲ್ಲಿರುವ ದೋಷಗಳನ್ನೂ ಅದಕ್ಕೆ ಬೇಕಾದ ಸತ್ಯಪ್ರಿಯವಚನವೆಂಬ ಸಾಧನವನ್ನೂ ಬಹು ಸಂಕ್ಷೇಪದಿಂದ ತಿಳಿಸಿದ್ದಾಗಿರುತ್ತದೆ. ಆದರೆ ಸತ್ಯವಾಗಿ ಪ್ರಿಯವಾಗಿರುವ ಮಾತನ್ನೇ ಆಡಬೇಕೆಂದು ಪ್ರತಿಜ್ಞೆ ಮಾಡಿಕೊಂಡವರು ಕೂಡ ಮೈಮರೆತು ಅಸತ್ಯವನ್ನೂ ಅಪ್ರಿಯವನ್ನೂ ಆಡಿಬಿಡುತ್ತಾರಲ್ಲ ! ಇದನ್ನು ತಪ್ಪಿಸಿಕೊಳ್ಳುವದಕ್ಕೆ ಏನಾದರೂ ಉಪಾಯವುಂಟೆ? ಇದನ್ನೀಗ ವಿಚಾರಕ್ಕೆ ತೆಗೆದುಕೊಳ್ಳೋಣ.

ನಾಲಗೆಯು ಹಿಡಿತದಲ್ಲಿರುವದಕ್ಕೆ ಆಗಾಗ್ಗೆ ಸತ್ಯಪ್ರಿಯವಚನವನ್ನು ಆಡುತ್ತಿದ್ದರೇ ಸಾಲದು; ಸತ್ಯವೂ ಪ್ರಿಯವೂ ಆದ ವಚನವು ಅದಕ್ಕೆ ಮೆಚ್ಚಾಗಿ ತೋರುವಂತೆ

ಮಾಡಿಕೊಳ್ಳುವದು ಅವಶ್ಯವಾಗಿರುತ್ತದೆ. ಇದಕ್ಕೆ ಭಗವಂತನ ನಾಮವನ್ನು ಅಡಿಗಡಿಗೆ ಉಚ್ಚಾರಣೆಮಾಡುತ್ತಿರುವದೊಂದು ಒಳ್ಳೆಯ ಸಾಧನವಾಗುತ್ತದೆ. ಏಕೆಂದರೆ ಭಗವಂತನು ನಿಜವಾಗಿ ಸತ್ಯಕ್ಕೆಲ್ಲ ಸತ್ಯಸ್ವರೂಪನಾಗಿರುತ್ತಾನೆ, ಪ್ರಿಯಕ್ಕೆಲ್ಲ ಪ್ರಿಯನಾಗಿರುತ್ತಾನೆ. ಯಾವಯಾವದನ್ನು ಸತ್ಯವೆಂದು ನಾವು ಕರೆಯುವೆವೋ ಅದೆಲ್ಲವೂ ಭಗವಂತನ ಸನ್ನಿಧಿಯಿಂದ ಸತ್ಯವಾಗಿರುತ್ತದೆ. ಆದರೆ ಭಗವಂತನು ತಾನೇ ಸತ್ಯ ಸ್ವರೂಪನಾಗಿ ರುತ್ತಾನೆ ಎಂದು ಶ್ರುತಿಯು ಸಾರುತ್ತದೆ. ಇದರಂತೆ ಲೋಕದಲ್ಲಿ ಯಾವ ಯಾವದು ನಮಗೆ ಪ್ರಿಯವಾಗಿರುತ್ತದೆಯೋ ಅದು ಆಗಾಗ್ಗೆ ಪ್ರಿಯವಾಗಿ ತೋರಬಹುದಾದರೂ ನಿಜವಾಗಿ ತನ್ನರೂಪದಿಂದಲೇ ಪ್ರಿಯವಾಗಿರುವದೆಂಬ ನಿಯಮವೇನೂ ಇಲ್ಲ. ಸಕಲ ಜೀವರ ಹೃದಯದಲ್ಲಿಯೂ ವಾಸವಾಗಿ ಎಲ್ಲರ ಪರಮಾತ್ಮನೆಂದೆನಿಸಿಕೊಂಡಿರುವ ಭಗವಂತನು ನಿತ್ಯವಾಗಿ ಎಲ್ಲರಿಗೂ ಎಂದೆಂದಿಗೂ ಪರಮಪ್ರಿಯನಾಗಿರುತ್ತಾನೆ. ಆತನಿ ಗಾಗಿ ಮಿಕ್ಕದ್ದೆಲ್ಲವೂ ಪ್ರಿಯವಾಗಿರುತ್ತದೆ. ಆದ್ದರಿಂದಲೇ ಪರಮಾತ್ಮನು ಆನಂದ ಸ್ವರೂಪ ನೆಂದು ಶ್ರುತಿಯು ಸಾರುತ್ತಿರುವದು. ಈ ಅರ್ಥವನ್ನು ಮನದಂದುಕೊಂಡು ಸಾಧಕ ನಾದವನು ಆಗಾಗ್ಗೆ ಭಗವಂತನ ನಾಮವನ್ನು ಆದರದಿಂದ ಉಚ್ಚರಿಸುತ್ತಿರಬೇಕು.

ಭಗವನ್ನಾಮವನ್ನು ಉಚ್ಚರಿಸುವದೆಂಬುದು ಬರಿಯ ಯಂತ್ರದ ಕೆಲಸವಾಗ ಬಾರದು. ಅದರಿಂದ ತನಗೆ ಆಯಾಸವೂ ದುಃಖವೂ ಪರಿಹಾರವಾಗಬೇಕು, ಉತ್ಸಾಹ ವುಂಟಾಗಬೇಕು, ಧೈರ್ಯವೂ ಬಲವೂ ಬರಬೇಕು. ನಾಮೋಚ್ಚಾರಣೆಯೆಂಬುದು ಆತನ ಸತ್ಯತ್ವದ ಮತ್ತು ಪ್ರಿಯತ್ವದ ಹೆಗ್ಗುರುತೆಂದೂ ಆತನ ಸರ್ವವ್ಯಾಪಕತೆಯ ಸ್ಮಾರಕವೆಂದೂ ಮನಸ್ಸಿನಲ್ಲಿ ಮೂಡಿರಬೇಕು. ತನಗೆ ಯಾವದೊಂದು ಸಹಾಯವು ಬೇಕಾದರೂ ಅದು ಭಗವಂತನಿಂದ ದೊರಕುವದೆಂಬ, ಯಾವದೊಂದು ಕಷ್ಟವಿದ್ದರೂ ಆತನಿಂದ ಅದು ಪರಿಹಾರವಾಗುವದೆಂಬ, ಯಾವ ತಿಳಿವಳಿಕೆಯು ಬೇಕಾದರೂ ಆತನ ಪ್ರಸಾದದಿಂದ ಅದು ಮನದಲ್ಲಿ ಮಿಂಚಿಯೇ ತೀರುವದೆಂಬ, ಪೂರ್ಣವಾದ ನಂಬಿಕೆಯಿಂದ ಮಾಡಿದ ನಾಮೋಚ್ಚಾರಣೆಯೇ ನಿಜವಾದ ನಾಮೋಚ್ಚಾರಣೆಯು.

ಭಗವಂತನ ನಾಮವನ್ನು ಬಿಡುವಿದ್ದಾಗಲೆಲ್ಲ ಉಚ್ಚರಿಸುತ್ತಿದ್ದರೆ, ಆ ನಾಮೋಚ್ಚಾರಣೆಯ ಹಿಂದುಗಡೆಯಲ್ಲಿ ಮೇಲೆ ಹೇಳಿದ ಗಟ್ಟಿಯಾದ ನಂಬಿಕೆಯೂ ತಡಿಕೆಯಾಗಿ ನಿಂತಿದ್ದರೆ, ಆಗ ತನ್ನೆದುರಿಗೆ ಯಾರೇ ಇರಲಿ, ಅವರಲ್ಲೆಲ್ಲ ಭಗವಂತನು ಸನ್ನಿಹಿತನಾಗಿರುವನೆಂಬ, ಆ ರೂಪದಿಂದಲೇ ಭಗವಂತನು ತನಗೆ ಕಾಣಿಸಿಕೊಂಡಿರುವ

ನೆಂಬ, ಭಾವನೆಯು ತಟ್ಟನೆ ಹೊಳೆದುಬಿಡುತ್ತದೆ. ಸರ್ವಗತನಾದ ಭಗವಂತನ ಮುಂದೆ ಸುಳ್ಳನ್ನಾಡುವದು ಹೇಗೆ? ಅಪ್ರಿಯವಾದ ಮಾತನ್ನಾಡುವದು ಹೇಗೆ? ಅಸತ್ಯವಚನವೂ ಅಪ್ರಿಯವಚನವೂ ಸೂರ್ಯನ ಬಿಸಿಲಿಗೆ ಕರಗುವ ಕಾವಳದಂತೆ ಕೂಡಲೆ ಮಾಯವಾಗಿಬಿಡುತ್ತವೆ.

ಅವಶ್ಯವಿದ್ದರೆ ಮಾತನಾಡುವದು, ಆಗಲೂ ಹಿತವಾಗಿ ಮಿತವಾಗಿರುವ ಸತ್ಯ ವಚನವನ್ನೇ ಸರ್ವರಿಗೂ ಪ್ರಿಯವಾಗುವ ರೀತಿಯಲ್ಲಿ ಮಾತನಾಡುವದು, ಮಾತನಾಡುವ ಅವಶ್ಯಕತೆಯಿಲ್ಲದಿದ್ದರೆ ಆಗಾಗ್ಗೆ ಭಗವಂತನ ನಾಮವನ್ನು ಹೃದಯದಾಳದಿಂದಲೂ ಹೊರಟುಬಂದಂತೆ ಭಾವಿಸಿ ಆದರದಿಂದ ವಿಶ್ವಾಸಪೂರ್ವಕವಾಗಿ ಧೈರ್ಯಪೂರ್ವಕವಾಗಿ ಉಚ್ಚರಿಸುವದು- ಈ ಅಭ್ಯಾಸವು ಒಬ್ಬ ಸಾಧಕನಿಗೆ ಅಳವಟ್ಟರೆ ಅವನ ಸುತ್ತುವಳೆಯವು ಸುಖಮಯವಾಗಿಬಿಡುತ್ತದೆ. ಅವನು ಮಾತನಾಡುವಾಗ ಶ್ರೀಕೃಷ್ಣನ ಕೊಳಲಿಗೆ ಮುಗ್ಧವಾಗಿ ಹತ್ತಿರ ಬರುತ್ತಿದ್ದ ಗೋಗಳಂತೆ ಸತ್ಯಪ್ರಿಯವಚನದ ಪ್ರೇಮಿಗಳಾದ ಜನರೇ ಹತ್ತಿರವಿರುತ್ತಾರೆ. ಅವನ ಮೃದುಮಧುರವಾದ ವಚನಗಳು ಅವರ ಕಿವಿಗೆ ಆನಂದಾಮೃತದ ಸೋನೆಯಾಗುತ್ತದೆ. ಅಂಥ ಮಹಾತ್ಮನು ಭಗವಂತನ ಪರಮಭಕ್ತನಾಗುವದರಿಂದ ಅವನಿಗೆ ವಾಕ್ಸಂಯಮವಾಗುವದೆಂದು ಹೇಳುವದು ಸರಿಯಲ್ಲ, ಅವನ ವಾಕ್ಕೇ ಭಗವಂತನ ವಾಕ್ಕಾಗುತ್ತದೆ.

*****

# 33. ಮೌನ

ವಾಕ್ಸಂಯಮಕ್ಕೆ ಸತ್ಯಪ್ರಿಯವಚನ, ಭಗವನ್ನಾಮೋಚ್ಚಾರಣೆ- ಇವುಗಳಂತೆ ಮೌನವೂ ಒಂದು ದೊಡ್ಡ ಸಾಧನವಾಗಿರುವದು. ಹಿತವಾಗಿ ಮಿತವಾಗಿ ಮತ್ತೊಬ್ಬರಿಗೆ ಪ್ರಿಯವಾಗಿರುವಂತೆ ಮಾತನಾಡುವದಲ್ಲದೆ ವಿರಾಮಕಾಲದಲ್ಲಿ ಭಗವಂತನ ನಾಮವನ್ನು ಭಕ್ತಿಯಿಂದ ಉಚ್ಚರಿಸುತ್ತಿರುವದರಿಂದ ವಾಗಿಂದ್ರಿಯದ ಸಂಯಮವು ವೀರ್ಯವತ್ತಾಗುತ್ತದೆ. ಇದರ ಜೊತೆಗೆ ಅನವಶ್ಯವಾಗಿ ಮಾತನ್ನಾಡದೆ ಮೌನವನ್ನು ಧರಿಸುವದಕ್ಕೆ ಕಲಿಯುವದು ಈ ಸಂಯಮಕ್ಕೆ ಮತ್ತಷ್ಟು ಕಳೆಯನ್ನು ಕೊಡುತ್ತದೆ.

'ಬಾಯುಳ್ಳವನು ಬರದಲ್ಲಿ ಬದುಕಿದ' ಎಂಬಂತೆ ಮಾತಿನಿಂದಲೇ ಜೀವಿಸುವ ಅವಶ್ಯಕತೆಯು ಬಂದಿರುವ ಈಗಿನ ಕಾಲದಲ್ಲಿ ಮೌನವಾಗಿರುವದೆಂದರೆ ಬಹಳ ಕಷ್ಟ.

ಮೌನವಾಗಿದ್ದು ನೋಡಿದಹೊರತು ಅದರಿಂದಾಗುವ ಪ್ರಯೋಜನವನ್ನು ಅರಿತು ಕೊಳ್ಳುವದು ಇನ್ನೂ ಕಷ್ಟ. ತನ್ನ ತಿಳಿವಳಿಕೆಯನ್ನು ಪ್ರಕಟಿಸುವದಕ್ಕೂ ಮತ್ತೊಬ್ಬರನ್ನು ಹಳಿಯುವದಕ್ಕೂ ಅಥವಾ ಯಾವದಾದರೊಂದು ಹೊಸಸುದ್ದಿಯನ್ನು ಮೊದಲು ಹೇಳಿದೆನೆಂಬ ಹೆಸರನ್ನು ಗಳಿಸಿಕೊಳ್ಳುವದಕ್ಕೂ ಮನುಷ್ಯನು ಹಾತುವರಿಯುತ್ತಿರುತ್ತಾನೆ. ಆದರೆ ಮಾತನಾಡದೆ ಸುಮ್ಮನಿರುವದರಿಂದ ಪ್ರಯೋಜನವನ್ನು ಸಂಪಾದಿಸಿಕೊಳ್ಳ ಬೇಕೆಂದು ಹವಣಿಸುವವರು ಬಹು ವಿರಳ.

ಮೌನವೆಂಬ ಶಬ್ದಕ್ಕೆ ಮುನಿಯಾಗಿರುವಿಕೆ ಎಂದರ್ಥ. ಚಾಪಲ್ಯವನ್ನು ತೊರೆದಿರುವವನೇ ಮುನಿಯೆನಿಸುತ್ತಾನೆ. ಆದ್ದರಿಂದ ಮಾತನಾಡದಿರುವದೆಂಬ **ವಾಙ್ಮೌನ,** ಇಂದ್ರಿಯಗಳನ್ನು ಚಂಚಲವಾಗದಂತೆ ಹಿಡಿದುಕೊಳ್ಳುವದೆಂಬ **ಅಕ್ಷಮೌನ.** ಮನಸ್ಸಿನ ಚಂಚಲತೆಯನ್ನು ತಡೆದುಕೊಳ್ಳುವದೆಂಬ **ಮನೋಮೌನ.** ಯಾವ ವ್ಯಾಪಾರವೂ ಇಲ್ಲದ್ದೆಂಬ **ಕಾಷ್ಠಮೌನ** –ಇವೆಲ್ಲವೂ ಮೌನವೇ ಆಗಿರುತ್ತವೆ. ಆದರೂ ಗಾಢನಿದ್ರೆ ಯಲ್ಲಿರುವವನು ಹೇಗೆ ಹೊರಗಿನ ಯಾವದರಿಂದಲೂ ವಿಕಾರವನ್ನು ಹೊಂದದೆ ಇರುವನೋ ಅದರಂತೆ ಪರಮಾರ್ಥತತ್ತ್ವವನ್ನು ತಿಳಿದುಕೊಂಡು, ತತ್ತ್ವಜ್ಞಾನದ ಫಲವಾಗಿ ಶಾಂತಿಯನ್ನು ಹೊಂದಿಕೊಂಡಿರುವ **ಸುಷುಪ್ತಮೌನವೇ** ಈ ಎಲ್ಲಾ ಮೌನಗಳಲ್ಲಿಯೂ ಹೆಚ್ಚಿನದೆಂದು ತಿಳಿದವರು ಹೇಳುತ್ತಾರೆ.

ಪ್ರಕೃತದಲ್ಲಿ ನಾವು ವಿಚಾರಿಸುತ್ತಿರುವದು ವಾಙ್ಮೌನವೇ ಆದರೂ ಸುಮ್ಮನೆ ಮಂಕನಂತೆ ಮಾತನಾಡದೆ ಇರುವದನ್ನೇ ನಾವು ವಾಙ್ಮೌನವೆಂದು ಕರೆದಿಲ್ಲ. ಭಗವನ್ನಾಮೋಚ್ಚಾರಣವನ್ನು ಅನುಸರಿಸಿಕೊಂಡು ಅವಶ್ಯವಾಗಿರುವಾಗ ಮಾತ್ರ ಸತ್ಯ ಪ್ರಿಯವಚನವನ್ನು ಆಡುತ್ತಾ, ಮಿಕ್ಕ ಕಡೆಗಳಲ್ಲಿ ಆಧ್ಯಾತ್ಮಚಿಂತನೆಮಾಡುತ್ತಾ ಇರುವದನ್ನೇ ವಾಙ್ಮೌನವೆಂದು ತಿಳಿಯಬೇಕು. ಒಂದು ವೇಳೆ ಅಧ್ಯಾತ್ಮಚಿಂತನೆಯು ಒದಗದಿದ್ದರೂ ಅನವಶ್ಯವಾಗಿ ಮಾತನಾಡದೆ ಶಾಂತವಾಗಿರುವದೇ ವಾಙ್ಮೌನದ ಪ್ರಧಾನಾಂಶವಾಗಿರುತ್ತದೆ.

*****

# 34. ಭಗವನ್ನಾಮಸ್ಮರಣೆ[1]

ಭರತಖಂಡದ ಮಹರ್ಷಿಗಳ ಉಪದೇಶದಲ್ಲಿರುವ ಒಂದು ಹೆಚ್ಚುಗಾರಿಕೆ ಏನೆಂದರೆ ಅತ್ಯಂತ ಗಹನವಾದ ತತ್ತ್ವರಹಸ್ಯವನ್ನು ಸಾಮಾನ್ಯರಿಗೂ ನಿಲುಕುವಂತೆ ಮಾಡಿರುವದು. ಅವರ ಉಪದೇಶವು ವ್ಯಾಪಾರಕ್ಕಾಗಿ ಹೊಲೆದಿಟ್ಟಿರುವ ಒಂದೇ ಅಳತೆಯ ಅಂಗಿಗಳಂತೆ ಎಲ್ಲರಿಗೂ ಒಂದೇ ರೂಪದಲ್ಲಿರುವದಲ್ಲ; ಅವರವರಿಗೆ ತಕ್ಕಂತೆಯೂ ಪೂರ್ಣಪ್ರಯೋಜನವೂ ಉಂಟಾಗುವಂತೆಯೂ ಹೊಂದಿಸಿ ಮಾಡಿರುವ ಬೋಧನೆಯು ಅವರಿಗೆ ಮೀಸಲಾಗಿರುತ್ತದೆ. ಉದಾಹರಣೆಗಾಗಿ ಸಾಮಾನ್ಯರಿಗೂ ಸುಲಭವಾಗಿ ತಿಳಿಯುವಂತೆಯೂ ಅನುಷ್ಠಾನ ಮಾಡಿದರೆ ವೈದಿಕಧರ್ಮದ ಪರಮ ಪ್ರಯೋಜನವು ಪೂರ್ಣವಾಗಿ ದೊರೆಯುವಂತೆಯೂ ಆ ಮಹಾತ್ಮರು ಉಪದೇಶ ಮಾಡಿರುವ ಭಗವನ್ನಾಮಸ್ಮರಣೆಯ ವಿಷಯವನ್ನು ಸ್ವಲ್ಪ ವಿಮರ್ಶೆ ಮಾಡೋಣ.

ವೇದದ ಸಿದ್ಧಾಂತವೇನು? ಸಚ್ಚಿದಾನಂದಸ್ವರೂಪವಾದ ಏಕರಸವಾದ ಬ್ರಹ್ಮವೊಂದೇ ಪರಮಾರ್ಥವು. ಅದರಲ್ಲಿ ಯಾವ ಭೇದವಾಗಲಿ ವಿಭಾಗವಾಗಲಿ ಒಂದಿಷ್ಟೂ ಇರುವದಿಲ್ಲ, ಹೀಗೆಂದು ಶ್ರುತಿಗಳು ಸಾರುತ್ತವೆ. ಮಹಾತ್ಮರು ಇದನ್ನು ತಮ್ಮ ಅನುಭವದಿಂದ ಕಂಡುಕೊಂಡು, ಆನಂದಿಸುತ್ತಲೂ ಇರುತ್ತಾರೆ. ಆದರೆ ಈ ಸಿದ್ಧಾಂತವು ಸಾಧಾರಣರಾದ ನಮ್ಮಂಥವರ ಮನಸ್ಸಿಗೆ ಹಿಡಿಯುವದಿಲ್ಲ, ದೊಡ್ಡದಾದ ಆನೆಯೊಂದನ್ನು ನಮ್ಮ ಗುಡಿಸಿಲಿನೊಳಕ್ಕೆ ತಂದುಕೊಡೆಂದು ಕಾಡುವ ಬಡವರ ಮಗುವನ್ನು ಸಮಾಧಾನಪಡಿಸುವದಕ್ಕೆ ತಂದೆತಾಯಿಗಳು ಏನಾದರೊಂದು ಉಪಾಯವನ್ನು ಮಾಡಬೇಕೆಂದು ಎಷ್ಟು ಕಷ್ಟಪಟ್ಟರೂ ಆಗುವದಿಲ್ಲ; ದೊಡ್ಡ ಆನೆಯು ಸಣ್ಣ ಗುಡಿಸಿಲಿನೊಳಗೆ ಎಂದಿಗೂ ಹಿಡಿಸಲಾರದು. ಆದರೂ ಮುದ್ದು ಮಗನ ಮೇಲಿನ ಪ್ರೇಮದಿಂದ ಮನೆಯೊಳಗೆ ಒಂದು ಕನ್ನಡಿಯನ್ನು ತಂದಿಟ್ಟರೆ ಆ ದೊಡ್ಡ ಆನೆಯ ಪ್ರತಿಬಿಂಬವೂ ಗುಡಿಸಿಲಿನಲ್ಲಿ ಕಾಣಿಸಿಕೊಳ್ಳಬಹುದು; ಆ ಬಡವರ ಮನೆಯ

---

**1.** (ಹಳೆ ಎಡತೊರೆಯ (ಕೃಷ್ಣರಾಜನಗರ)ಅರ್ಕೇಶ್ವರ ದೇವಾಲಯದಲ್ಲಿ ರಾಮನಾಮಕೋಟಿಜಪದ ಮಂಗಳ ಸಮಾರಂಭದಲ್ಲಿ ಶ್ರೀಶ್ರೀಗಳವರು ಮಾಡಿದ ಉಪನ್ಯಾಸದ ಸಾರಾಂಶ.)

ಮಗುವಿಗೂ ಆನೆಯನ್ನು ಕಂಡ ಅರಸುಕುವರನ ಸಂತೋಷವೇ ಬರಬಹುದು, ಅಲ್ಲವೇ? ಇದರಂತೆ ಪರತತ್ತ್ವವನ್ನು ನೇರಾಗಿ ಕಂಡ ಋಷಿಗಳು ನಮ್ಮಂಥವರಿಗೂ ಆ ತತ್ತ್ವವು ನಿಲುಕುವದಕ್ಕೆ **ಮನಸ್ಸನ್ನು ಸ್ವಚ್ಛಗೊಳಿಸುವ** ಸಾಧನಗಳನ್ನು ಉಪದೇಶಿಸಿ ರುತ್ತಾರೆ. ನಾವು ಆ ಸಾಧನಗಳನ್ನು ಮಾಡಿದರೆ ನಮ್ಮ ಸಣ್ಣ ಮನಸ್ಸಿನಲ್ಲಿಯೂ ಅದೇ ಪರಮಾರ್ಥವು ಮೂಡಿಕೊಳ್ಳಬಹುದಾಗಿರುತ್ತದೆ.

ಋಷಿಗಳು ಪರತತ್ತ್ವದ ಜ್ಞಾನವುಳ್ಳವರು. ವಿಚಾರಸಮರ್ಥರಾದವರಿಗೆ ಅದೇ ಜ್ಞಾನವು ಸಿಕ್ಕಬಹುದಾದರೂ ಬಹುಜನರಿಗೆ ಜ್ಞಾನವು ಅಷ್ಟು ಸುಲಭ ಸಾಧ್ಯವಾಗಿರು ವದಿಲ್ಲ. ವಿದೇಶವನ್ನು ನೋಡಿದವರು ಅದರ ವರ್ಣನೆಯನ್ನು ಉತ್ತಮರೀತಿಯಿಂದ ಮಾಡಿ ನಮ್ಮ ಮನಸ್ಸಿನಲ್ಲಿ ಅದರ ಚಿತ್ರವನ್ನು ತಂದುಕೊಡುವಂತೆ ಜ್ಞಾನಿಗಳು ತಮ್ಮ ಅನುಭವದ ಬಲದಿಂದ ನಮ್ಮ ಮನಸ್ಸಿಗೆ ಹಿಡಿಸುವಂತೆ ಕೆಲವು ಚಿತ್ರಗಳನ್ನು ಕಲ್ಪಿಸಿಕೊಟ್ಟು ಅವುಗಳನ್ನು ಲಕ್ಷ್ಯವಿಟ್ಟು ಸತತವಾಗಿ ಧಾರಾಕಾರವಾಗಿ ಚಿಂತಿಸುತ್ತಿರು ವಂತೆ ಹೇಳಿ ಕೊಡುತ್ತಾರೆ. ಈ ಚಿಂತನೆಯೇ **ಧ್ಯಾನವು**. ಸಾಧಕರು ಒಂದೇ ಸಮನೆ ಸಾಯುವವರೆಗೂ ಮಾಡಿದ ಧ್ಯಾನದಿಂದ ಬದುಕಿರುವಾಗಲೇ ತಾದಾತ್ಮ್ಯಭಾವನೆಯು ಮೈಗೂಡಿಕೊಂಡು ದೇಹವನ್ನು ಬಿಟ್ಟಬಳಿಕ ಆ ತತ್ತ್ವದ ಸಾಯುಜ್ಯವನ್ನೇ ಹೊಂದುತ್ತಾರೆ. ಈ ಧ್ಯಾನವು ಜ್ಞಾನಕ್ಕಿಂತ ಒಂದು ಮೆಟ್ಟಿಲು ಕೆಳಗಿನದಾಗಿರುತ್ತದೆ.

ಆದರೆ ಇಷ್ಟಕ್ಕೂ ಯಾರಿಗೆ ಶಕ್ಯವಿಲ್ಲವೋ ಅಂಥವರಿಗೂ ಋಷಿಗಳು ಕರುಣೆ ಯಿಂದ ಕೆಲವು ಸಾಧನಗಳನ್ನು ಏರ್ಪಡಿಸಿರುತ್ತಾರೆ. ಅಂಥವುಗಳಲ್ಲಿ **ನಾಮಸ್ಮರಣೆಯು** ಒಂದಾಗಿರುತ್ತದೆ. ವೇದದಲ್ಲಿ ಓಂಕಾರ, ಆಕಾಶ, ಮನಸ್ಸು, ಸೂರ್ಯ- ಮುಂತಾದವು ಗಳನ್ನೇ ಬ್ರಹ್ಮವೆಂದು ಉಪಾಸನೆಮಾಡಬೇಕೆಂದು ಹೇಳಿರುವದೂ ನಾಮವನ್ನೇ ಬ್ರಹ್ಮ ವೆಂದು ಉಪಾಸನೆಮಾಡಬೇಕೆಂದುಹೇಳಿರುವದೂ ಈ ಅಂತಸ್ತಿಗೆ ಸೇರತಕ್ಕಸಾಧನ ವಾಗಿರುತ್ತವೆ. ನಾಮನಾಮಿಗಳಿಗೆ ಇರುವ ನಿಕಟಸಂಬಂಧವು ನಮಗೆ ವ್ಯವಹಾರದಲ್ಲಿ ಚೆನ್ನಾಗಿ ಗೊತ್ತಿರುತ್ತದೆ; ಯಾವ ವಸ್ತುವಾದರೂ ವ್ಯವಹಾರದಲ್ಲಿ ಬಳಕೆಗೆ ಬರಬೇಕಾದರೆ ಅದಕ್ಕೆ ಹೆಸರುಕೊಟ್ಟಲ್ಲದೆ ಆಗಲಾರದು. ನಾಮದ ವಶದಲ್ಲಿಯೇ ನಾಮಿಯಿರುವದು. ಆದ್ದರಿಂದ ನಾಮವನ್ನೇ ಬ್ರಹ್ಮವೆಂದು ಉಪಾಸನೆಮಾಡಬೇಕೆಂದು ದೊಡ್ಡವರು ಉಪದೇಶಿಸಿರುತ್ತಾರೆ.

ಇಲ್ಲೊಂದು ಶಂಕೆ : ಹೆಚ್ಚಿನಸಾಧನವಾದ ಉಪಾಸನೆಗಳಲ್ಲಿರುವ ಫಲವು ಸಣ್ಣ ನಾಮಸ್ಮರಣೆಯಂಥ ಸಾಧನಕ್ಕೆ ಹೇಗೆ ಸಿಕ್ಕಬೇಕು?- ಎಂದು ನಮ್ಮಗಳಲ್ಲನೇಕರಿಗೆ ತೋರುತ್ತದೆ. ಆದರೆ ವೇದಾಂತದ ಉಪದೇಶದ ತಿರುಳೇನು? ಯಾವದೊಂದು ಪದಾರ್ಥವೇ ಆಗಲಿ, ಯಾವದೊಂದು ಹೆಸರೇ ಆಗಲಿ, ಪರಮಾರ್ಥಸ್ವರೂಪನಾದ ಪರಮಾತ್ಮನ ರೂಪವಿಶೇಷವೇ ಆಗಿರುತ್ತದೆ. ನಾವು ಪ್ರಪಂಚವೆಲ್ಲವೂ ಓಂಕಾರದ ಕಾರ್ಯವೆಂದೂ ಪ್ರಪಂಚವೆಲ್ಲವೂ ಆತ್ಮನೇ ಎಂದೂ ಓಂಕಾರವೂ ಆತ್ಮನೂ ಪರಮಾರ್ಥವಾಗಿ ಒಂದೇ ಎಂದೂ ಹೇಳಿರುವ ಮಾಂಡೂಕ್ಯೋಪನಿಷತ್ತಿನ ವಚನವನ್ನೂ ಇಲ್ಲಿ ನೆನಪಿಗೆ ತಂದುಕೊಳ್ಳಬೇಕು. ಹೀಗೆ ಎಲ್ಲವೂ ಪರಬ್ರಹ್ಮವೇ ಆದರೆ ಲೋಕದಲ್ಲಿ ಕಾಣುತ್ತಿರುವ ಪದಾರ್ಥತಾರತಮ್ಯಗಳಿಗೂ ಪದಗಳ ಶಕ್ತಿತಾರತಮ್ಯಕ್ಕೂ ಗತಿಯೇನು? – ಎಂದು ಯಾರಾದರೂ ಕೇಳಬಹುದು. ಈ ತಾರತಮ್ಯವು ಮನಸ್ಸಿನ ಕಲ್ಪನೆಯೇ ಹೊರತು ಪರಮಾರ್ಥವಲ್ಲ. ಪ್ರಪಂಚವು ಒಂದೇ ದೇಶದಲ್ಲಿ ಒಂದರ ಪಕ್ಕದಲ್ಲೊಂದು ಹರಡಿರುವ ಪದಾರ್ಥಗಳು ಗುಂಪಾಗಿಯೂ ಒಂದೇ ಕಾಲದಲ್ಲಿ ಒಂದಾಗುತ್ತಲೊಂದು ನಡೆಯುತ್ತಿರುವ ಘಟನೆಗಳ ರಾಶಿಯಾಗಿಯೂ ನಮಗೆ ತೋರುತ್ತಿದ್ದರೂ ನಿಜವಾಗಿ ನಮಗೆ ಒಂದೊಂದು ವಿಷಯವನ್ನು ಮಾತ್ರ ಒಂದೊಂದು ಸಲಕ್ಕೆ ಮನಸ್ಸಿಗೆ ತಂದುಕೊಳ್ಳುವದಕ್ಕಾಗುತ್ತದೆ. ಒಂದು ಕಂಬವನ್ನು ಮನಸ್ಸಿಗೆ ತಂದಾಗ ಅದರ ಸ್ಮರಣೆಯು ನಮ್ಮ ಮನಸ್ಸಿನಲ್ಲಿರುವದಿಲ್ಲ, ಸ್ಮರಣೆಯು ನಮಗಿರುವಾಗ ಕಂಬವನ್ನು ನಾವು ನೋಡುತ್ತಿರುವದಿಲ್ಲ. ಹೀಗೆ ಒಂದಾಗುತ್ತಲೊಂದು ವಿಷಯವನ್ನು ಮನಸ್ಸು ಕಾಣುತ್ತಿದ್ದರೂ ಒಂದೇ ಕಾಲದಲ್ಲಿ ಎಲ್ಲಾ ವಸ್ತುಗಳೂ ಎಲ್ಲಾ ಘಟನೆಗಳೂ ತನಗೆ ವಿಷಯವಾಗಿದ್ದಂತೆ ಕಲ್ಪಿಸಿಕೊಳ್ಳುವ ಶಕ್ತಿಯೊಂದು ಅದಕ್ಕೆ ಇರುತ್ತದೆ. ಈ ಮನಃಸ್ವಭಾವವನ್ನು ಚೆನ್ನಾಗಿ ಮನದಂದುಕೊಂಡು ವಿಮರ್ಶೆಮಾಡಿದವರಿಗೆ ಒಂದು ತತ್ತ್ವವು ಮನಸ್ಸಿನಲ್ಲಿ ಮಿಂಚುತ್ತದೆ. ಅದೇನೆಂದರೆ ಒಂದೇ ಪರಮಾರ್ಥತತ್ತ್ವವು ಜನರಿಗೆ ಬೇರೆಬೇರೆ ದೃಷ್ಟಿಯಿಂದ ಬೇರೆ ಬೇರೆಯ ಬಗೆಯಲ್ಲಿ ಕಾಣಿಸಿಕೊಳ್ಳುತ್ತಿರುವದೇ ಹೊರತು ನಿಜವಾಗಿ ಅಷ್ಟು ಪದಾರ್ಥಗಳು ಬೇರೆಬೇರೆಯಾಗಿಯೇ ಇರುವದಿಲ್ಲ, ಇರುವ ಬ್ರಹ್ಮವೊಂದನ್ನೇ ಬಗೆಬಗೆಯಾಗಿ ನಾವು ತಿಳಿದುಕೊಳ್ಳುತ್ತಿರುವದರಿಂದ ಆಬ್ರಹ್ಮಸ್ತಂಬಪರ್ಯಂತವಾಗಿ ನಾವು ಕಾಣುತ್ತಿರುವ ಸಕಲಪ್ರಾಣಿಗಳೂ ಜಡವಸ್ತುಗಳೂ ಅವುಗಳ ನಾಮಗಳೂ ಎಲ್ಲವೂ ಪರಮಾರ್ಥವಾಗಿ ಬ್ರಹ್ಮವೇ ಆಗಿರುತ್ತದೆ. ಆದ್ದರಿಂದ ಈ ದೃಷ್ಟಿಯಿಂದ ನಾಮವೂ ಬ್ರಹ್ಮವೇ ಆಗಿರುತ್ತದೆ.

ಅದರ ಪರಮಾರ್ಥವನ್ನು ಕಂಡುಕೊಂಡರೆ ಬ್ರಹ್ಮಸಾಕ್ಷಾತ್ಕಾರವೇ ಆಗುವದರಿಂದ ನಾಮಸ್ಮರಣೆಯಿಂದಲೂ ಪರಮಫಲವೇ ಸಿಕ್ಕುವದೆಂದು ಹೇಳಿರುವದು ಬರಿಯ ಉಪಚಾರೋಕ್ತಿಯಲ್ಲವೆಂದು ಸಿದ್ಧವಾಗುತ್ತದೆ.

ಪರಮಾತ್ಮನ ನಾಮಗಳಲ್ಲಿ **ಓಂಕಾರವು** ಅತ್ಯಂತ ಹೆಚ್ಚಿನ ಸನ್ನಿಕೃಷ್ಟವಾಚಕ ವೆಂದು ವೇದದಲ್ಲಿ ಹೇಳಿರುತ್ತದೆ. ಅದು ಪರಮವಿರಕ್ತರಾದ ಪರಮಹಂಸರಿಗೆ ಮಾತ್ರ ದಕ್ಕತಕ್ಕದ್ದಾದ್ದರಿಂದ ಅದಕ್ಕಿಂತಲೂ ರಾಮಕೃಷ್ಣಾದಿ ನಾಮಗಳೇ ನಮ್ಮಂಥವರಿಗೆ ಸುಲಭ ವಾಗಿ ತಿಳಿಯುವಂಥ ನಾಮವೆಂದು ಋಷಿಗಳು ಪುರಾಣಾದಿಗಳಲ್ಲಿ ತಿಳಿಸಿ ಕೊಟ್ಟಿರುತ್ತಾರೆ.

ನಾಮವೆಂಬುದೊಂದು ಹತ್ತುಲಕ್ಷ ರೂಪಾಯಿನ ಚೆಕ್ಕಿನಂತೆ ಇರುತ್ತದೆ. ಚೆಕ್ಕನ್ನು ಕಾಗದವೆಂದು ತಿಳಿದುಕೊಂಡವರಿಗೆ ಅದಕ್ಕೇನೂ ಬೆಲೆಯಿರುವದೇ ಇಲ್ಲ, ಆದರೆ ಅದು ಚೆಕ್ಕು ಎಂಬ ಅರಿವು ಬಂದಕೂಡಲೆ ಅದರ ಬೆಲೆಯ ಮಹತ್ತ್ವವು ಮನದಟ್ಟಾಗುತ್ತದೆ. ಇದರಂತೆ ರಾಮ ಎಂಬ ಹೆಸರು ಒಬ್ಬ ಅರಸಿನ ಮಗನದು. ಧರ್ಮಾತ್ಮನೂ ಸತ್ಯಸಂಧನೂ ಶೂರನೂ ವೀರನೂ ದಯಾಕರನೂ ಆದ ಶ್ರೀರಾಮ ಚಂದ್ರನದು, ಲೋಕಕ್ಕೆಲ್ಲ ಕಲ್ಯಾಣವನ್ನುಂಟುಮಾಡುವದಕ್ಕಾಗಿ ಅವತರಿಸಿದ ಪರಬ್ರಹ್ಮ ಮೂರ್ತಿ ಯಾದ ಶ್ರೀಮಹಾವಿಷ್ಣುವಿನದು- ಎಂದು ನಾವು ಅದರ ಅರ್ಥವನ್ನು ಹಿಗ್ಗಿಸಿ ಹಿಗ್ಗಿಸಿ ಅರಿತುಕೊಂಡಂತೆಲ್ಲ ಅದರ ಹೆಚ್ಚುಗಾರಿಕೆಯು ನಮ್ಮ ಮನಸ್ಸಿಗೆ ಹೆಚ್ಚು ಹೆಚ್ಚಾಗಿ ತಟ್ಟುತ್ತಾ ಬರುತ್ತದೆ. ಇಂಥ ಬೆಲೆಯು ನಮ್ಮ ಹೃದಯದಲ್ಲಿ ನೆಟ್ಟುಕೊಂಡು ತೋರ ಬೇಕಾದರೆ ನಾಮವು ಮಂತ್ರರೂಪದಿಂದ ಸದ್ಗುರುಗಳ ಉಪದೇಶರೂಪವಾಗಿ ಬರಬೇಕು. ಆಗಲೇ ನಾವು ''**ನಾಮ**''ದ ಸ್ಮರಣೆಗೆ ಅಧಿಕಾರವನ್ನು ಪಡೆದು ಕೊಂಡಂತಾಗುವದು.

ಯಾವ ಪುಣ್ಯಾತ್ಮನಿಗೆ ಸದ್ಗುರುಗಳ ಅನುಗ್ರಹದಿಂದ ನಾಮಮಂತ್ರದ ಉಪದೇಶವಾಗಿರುವದೋ, ಯಾವಾತನಿಗೆ, ಶಕ್ತಿಯನ್ನೂ ಪುಷ್ಟಿಯನ್ನೂ ಕೊಡುವ ಔಷಧಿಗಳನ್ನೂ ಇಂಜೆಕ್ಷನ್ನುಗಳನ್ನೂ ಯೋಗ್ಯನಾದ ವೈದ್ಯನಿಂದ ಪಡೆದ ರೋಗಿಯಂತೆ, ಉಪದಿಷ್ಟ ನಾಮದ ಬಲವು ಮೈಯಲ್ಲೆಲ್ಲ ರಕ್ತಗತವಾಗಿ ಮನಸ್ಸೆಲ್ಲ ಮಂತ್ರಮಯ ವಾಗಿ ಬಿಡುವದೋ, ಅಂಥವನಿಗೆ ನಾಮವು ಬ್ರಹ್ಮವೆಂದರೇನೆಂಬುದು ಅನುಭವಕ್ಕೆ ಬರುತ್ತದೆ. ಅಂಥ ಮಹನೀಯನು ತನ್ನ ಶರೀರ, ಪ್ರಾಣ, ಮನಸ್ಸು ಬುದ್ಧಿ ಅಹಂಕಾರ

– ಎಂಬ ಯಾವ ತಾರತಮ್ಯವನ್ನೂ ಕಾಣದೆ ಎಲ್ಲವನ್ನೂ ಭಗವನ್ನಾಮವಾಗಿಯೇ ಕಾಣುತ್ತಿರುವನು. ಎಲ್ಲವೂ ಭಗವಂತನಾಗಿಯೇ ಕಾಣುತ್ತಿರುವನು. ಅಂಥವನು ಭಗವನ್ನಾಮವನ್ನು ಪ್ರಯತ್ನದಿಂದ ಜಪಮಾಡಬೇಕಾಗಿರುವದಿಲ್ಲ; ಕೂತರೆ, ನಿಂತರೆ, ಉಸಿರು ಬಿಟ್ಟರೆ, ಕಣ್ಣುಮಿಟಿಕಿಸಿದರೆ, ಕಿವಿಕೇಳಿದರೆ, ಮುಟ್ಟಿದರೆ, ಮೂಸಿದರೆ, ಎಚ್ಚತ್ತಿದ್ದರೆ, ಕನಸುಕಾಣುತ್ತಿದ್ದರೆ, ನಿದ್ರೆಯನ್ನನುಭವಿಸಿದರೆ ಆತನಿಗೆ ಎಲ್ಲವೂ ನಾಮಮಯವಾಗಿಯೇ ಇದ್ದು ಬಿಡುತ್ತದೆ. ಇದೇ ಭಗನ್ನಾಮಸ್ಮರಣೆಯ ಪರಾಕಾಷ್ಠೆ.

ಹೀಗೆ ಭಗವನ್ನಾಮಸ್ಮರಣೆಯಿಂದ ಉಪಾಸನೆಯ ಫಲವಾದ ಸಗುಣಬ್ರಹ್ಮವೂ ವಿಚಾರದ ಫಲವಾದ ನಿರ್ಗುಣಬ್ರಹ್ಮವೂ ಅನಾಯಾಸವಾಗಿ ಕರತಲಾಮಲಕವಾಗಿ ಬಿಡುತ್ತದೆ. ಆದ್ದರಿಂದ ನಾಮವು ಚಿತ್ತಶುದ್ಧಿ, ಏಕಾಗ್ರತೆ, ತನ್ಮಯತೆ, ತಾದ್ರೂಪ್ಯತೆ- ಎಂಬ ಚಿಗುರು, ಕಾಯಿ, ಹಣ್ಣುಗಳನ್ನು ಕ್ರಮಕ್ರಮವಾಗಿ ಕೊಡುವ ಬ್ರಹ್ಮಬೀಜವೇ ಆಗಿರುತ್ತದೆ.

*****

## 35. ಮನಃ ಸಂಯಮನವಿಚಾರದ ಆವಶ್ಯಕತೆ

ತ್ರಿಕರಣಸಂಯಮವನ್ನು ಕುರಿತು ವಿಚಾರವನ್ನು ಪ್ರಾರಂಭಿಸಿ ಶರೀರ ಸಂಯಮ, ವಾಕ್ಸಂಯಮ, ಇವುಗಳ ವಿಷಯದಲ್ಲಿ ಕೆಲವು ಸೂಚನೆಗಳನ್ನು ಕೊಟ್ಟಿದ್ದಾಯಿತು. ಈಗ ಮನಸ್ಸಂಯಮವನ್ನು ಕುರಿತು ವಿಚಾರವನ್ನು ಮಾಡ ಬೇಕಾದದ್ದು ಉಳಿದಿದೆ. ಸರಿಯಾಗಿ ನೋಡಿದರೆ ಶರೀರದಿಂದ ಮಾಡುವ ಕರ್ಮಕ್ಕೂ ವಾಕ್ಕಿನಿಂದ ಮಾಡುವ ಕರ್ಮಕ್ಕೂ ಮನಸ್ಸು ಹಿಂದುಗಡೆಯಲ್ಲಿದ್ದೇ ಇರುವದರಿಂದ ಅಲ್ಲಿಯೂ ಮನಃ ಸಂಯಮವನ್ನೇ ಕುರಿತು ಮಾತನಾಡಿದಂತೆ ಆಗಿದೆ. ಆದರೂ ಮನಸ್ಸಂಯಮವನ್ನು ಕುರಿತು ಬೇರೆಯಾಗಿ ವಿಚಾರಮಾಡುವದು ಅವಶ್ಯವಾಗಿರುತ್ತದೆ. ಏಕೆಂದರೆ ಶರೀರದ ವ್ಯಾಪಾರವಾಗಲಿ ವಾಕ್ಕಿನ ವ್ಯಾಪಾರವಾಗಲಿ ಇಲ್ಲದಿರುವಾಗಲೂ ನೇರಾಗಿ ಮನಸ್ಸಿನಿಂದಲೇ ಮಾಡುವ ವ್ಯಾಪಾರಗಳೂ ಹಲವು ಇವೆ. ಆದ್ದರಿಂದ ಆ ಮನಸ್ಸನ್ನು ಹೇಗೆ ಹಿಡಿದುಕೊಂಡಿರಬೇಕೆಂಬ ಬಗ್ಗೆ ವಿಚಾರವು ಬೇಕಾಗುತ್ತದೆ.

ಮನಸ್ಸೆಂದರೆ ಮನನಮಾಡುತ್ತಿರುವದೇ; ಆದ್ದರಿಂದ ಯಾವ ರೀತಿಯ ಮನಸ್ಸು ಇರಬೇಕು? ಯಾವ ಮನನವು ಸಾಧಕರಿಗೆ ಬೇಡವಾದದ್ದು? ಅನಿಷ್ಟವಾದ

ಮನನದಿಂದ ಬಿಡುಗಡೆಹೊಂದುವದು ಹೇಗೆ?-ಎಂಬುದನ್ನು ನಾವು ವಿಚಾರಿಸಬೇಕಾಗುತ್ತದೆ. ಮನಸ್ಸಿನಲ್ಲಿ ಮನನಆಲೋಚನೆರೂಪವಾದ ವ್ಯಾಪಾರವಲ್ಲದೆ ಭಾವನಾರೂಪವಾದ ವ್ಯಾಪಾರವೂ ಇರುತ್ತದೆ. ಯಾವದೊಂದು ವಿಷಯವೂ ಇಲ್ಲದಿದ್ದರೂ ಮನಸ್ಸು ಅದರಲ್ಲಿ ಬಗೆಬಗೆಯ ಭಾವನೆಗಳನ್ನು ಮಾಡಿಕೊಳ್ಳುತ್ತಿರುತ್ತದೆ. ಇವುಗಳಲ್ಲಿ ಯಾವ ಬಗೆಯ ಭಾವನೆಯು ಬೇಕು? ಯಾವ ಭಾವನೆಯನ್ನು ಹೇಗೆ ತಡೆದಿಡಬೇಕು? ಇದನ್ನೂ ನಾವು ವಿಚಾರಿಸಬೇಕು. ಮನಸ್ಸಿಗೆ ಗೊತ್ತಿರುವ ವಿಷಯಗಳ ವಿಚಾರವೂ ಭಾವನೆಯೂ ಅಲ್ಲದೆ ಈವರೆಗೆ ಗೊತ್ತಿಲ್ಲದ ವಿಷಯಗಳ ಶೋಧನೆಯೂ ಒಂದು ವ್ಯಾಪಾರವಾಗಿರುತ್ತದೆ. ಅದಕ್ಕೆ ಹೊಸ ತತ್ತ್ವವನ್ನು ಕಂಡುಹಿಡಿದುಕೊಳ್ಳಬೇಕೆಂಬ ಹವಣಿಕೆಯೂ ಇರುತ್ತದೆ. ಆದ್ದರಿಂದ ಈ ವಿಷಯಶೋಧನಶಕ್ತಿಯನ್ನು ನಾವು ಹೇಗೆ ಉಪಯೋಗಿಸಿಕೊಳ್ಳಬೇಕು? ಇದನ್ನೂ ಸಾಧಕನು ವಿಚಾರಮಾಡಬೇಕು.

ಮನಸ್ಸೆಂಬುದೇ ಮನುಷ್ಯನ ಸರ್ವಸ್ವವು. ಮನಸ್ಸಿನಿಂದ ಮನುಷ್ಯನು ಸದ್ಗತಿಯನ್ನಾದರೂ ಪಡೆದುಕೊಳ್ಳಬಹುದು, ದುರ್ಗತಿಗಾದರೂ ಇಳಿಯಬಹುದು. ಮಿಕ್ಕ ಎಲ್ಲಾ ಸಾಮಗ್ರಿಗಳೂ ಇದ್ದರೂ ಮನಸ್ಸಿನ ಸಂಯಮವೊಂದಿಲ್ಲದಿದ್ದರೆ ಮನುಷ್ಯನ ಬಾಳು ವ್ಯರ್ಥವಾದಂತೆ. ಆದ್ದರಿಂದ ಮನಸ್ಸಂಯಮನವನ್ನು ಮಾಡುವ ಬಗೆಯನ್ನು ಅಧ್ಯಾತ್ಮಸಾಧಕರು ಅವಶ್ಯವಾಗಿ ವಿಚಾರಮಾಡಬೇಕು.

*****

# 36. ಆತ್ಮಶೋಧನೆ

ತನ್ನನ್ನು ತಾನು ಪರೀಕ್ಷೆಮಾಡಿಕೊಳ್ಳುತ್ತಿರುವದೆಂಬುದು ಮನಸ್ಸಂಯಮದ ಒಂದು ಮುಖ್ಯವಾದ ಸಾಧನವಾಗಿರುತ್ತದೆ. **"ಮನಸ್ಸೇ ಬಂಧಕ್ಕೂ ಮೋಕ್ಷಕ್ಕೂ ಕಾರಣವು"** ಎಂದು ಶಾಸ್ತ್ರದಲ್ಲಿ ಹೇಳಿರುತ್ತದೆ. ಮನಸ್ಸಿಗೆ ಬಂಧಕರವಾದ ಆಲೋಚನೆಗಳಾದರೂ ಹೊಳೆಯಬಹುದು. ಮೋಕ್ಷಕ್ಕೆ ಸಾಧನವಾದ ಆಲೋಚನೆಗಳಾದರೂ ಹೊಳೆಯಬಹುದು. ಆದ್ದರಿಂದ ಯಾವ ಆಲೋಚನೆ ಬಂದರೂ ವಿಚಾರವಿಲ್ಲದೆ ಅದಕ್ಕೆ ಮನಸ್ಸಿನಲ್ಲಿ ಗೂಡುಮಾಡಿಕೊಡುತ್ತಿರುವವರು ಹೆಚ್ಚಿನ ಅಪಾಯದಲ್ಲಿರುತ್ತಾರೆ. ಹೀಗಿರುವದರಿಂದ ಮನಸ್ಸನ್ನು ಸಂಯಮನಮಾಡಬೇಕೆನ್ನುವವರು ಮೊದಲು ತಮ್ಮ ಮನಸ್ಸಿನ ಕಡೆಗೆ ತಿರುಗಿ ತಮ್ಮನ್ನು ತಾವು ಶೋಧನೆಮಾಡಿಕೊಳ್ಳುವ ಅಭ್ಯಾಸವನ್ನು ಇಟ್ಟುಕೊಳ್ಳಬೇಕು.

ಮನುಷ್ಯನಿಗೆ ಮತ್ತೊಬ್ಬರ ವಿಚಾರವೆಂದರೆ ಬಹಳ ಅಕ್ಕರೆ. “ಇವರು ಹೀಗಿದಾರೆ, ಅವರು ಹಾಗಿದಾರೆ; ಇವರ ನಡತೆ ಸರಿಯಾಗಿದೆ ಅವರದು ಸರಿಯಾಗಿಲ್ಲ” ಎಂದು ಮಿಕ್ಕವರ ನಡತೆಯನ್ನು ತೂಗಿತೂಗಿ ಅದರಲ್ಲಿರುವ ಹೆಚ್ಚು ಕುಂದುಗಳನ್ನು ಗೊತ್ತುಪಡಿಸುವ ಕೆಲಸವು ಬಹುಜನರಿಗೆ ಮೆಚ್ಚಾಗಿರುತ್ತದೆ. ಆದರೆ 'ನನ್ನ ನಡೆ ಹೇಗಿದೆ? ನನ್ನ ನುಡಿ ಹೇಗಿದೆ? ನನ್ನನ್ನು ಮತ್ತೊಬ್ಬರು ಹೇಗೆ ಕಾಣುವರು? ಅವರು ಈ ವಿಷಯದಲ್ಲಿ ಹೇಗೆ ಭಾವಿಸುವರು?'- ಎಂದು ಯೋಚಿಸಿಕೊಳ್ಳುವವರು ಬಹು ವಿರಳ.

ನಮ್ಮ ವ್ಯವಹಾರವು ಬಹುಮಟ್ಟಿಗೆ ಹೊರಗಿನವಸ್ತುಗಳಿಗೇ ಸಂಬಂಧ ಪಟ್ಟಿರುತ್ತದೆ. ಆದ್ದರಿಂದ ನಾವು ಹೊರಗಿನ ಪದಾರ್ಥಗಳನ್ನೂ ಹೊರಗೆ ನಮ್ಮೊಡನೆ ವ್ಯವಹರಿಸುತ್ತಿರುವ ಜನರನ್ನೂ ಮುಖ್ಯವಾಗಿ ನೋಡುತ್ತಾ ಅವರಲ್ಲಿ ಶತ್ರುಮಿತ್ರಾದಿ ಭಾವಗಳನ್ನು ಕಲ್ಪಿಸಿಕೊಳ್ಳುತ್ತಾ ಆ ಕಾರಣದಿಂದ ರಾಗದ್ವೇಷಾದಿಗಳನ್ನು ಹುಟ್ಟಿಹಾಕಿ ಕೊಂಡು ಬೆಳೆಯಿಸುತ್ತಾ ಇರುವದು ಸ್ವಾಭಾವಿಕವಾಗಿದೆ. ಆದರೆ ಹೊರಗಿನ ವಸ್ತುಗಳ ಮತ್ತು ಜನರ ವಿಷಯಕ್ಕೆ ನಾವು ಕೊಡುವ ತೀರ್ಪಿಗೆ ಆಯಾ ಬಾಹ್ಯದೃಶ್ಯಗಳೇ ಕಾರಣವೋ, ಅಥವಾ ನಮ್ಮ ಅಂತಃಕರಣದಲ್ಲಿ ಉಂಟಾಗುತ್ತಿರುವ ಭಾವನೆಗಳು ಮಾತ್ರ ಕಾರಣವೋ? ಎಂಬುದನ್ನು ಮಾತ್ರ ನಾವು ಯೋಚಿಸುತ್ತಿರುವದಿಲ್ಲ; ನಮ್ಮ ನಮ್ಮ ವಿಷಯಕ್ಕೆ ವಿಚಾರವಿಲ್ಲದೆಯೇ ಒಳ್ಳೆಯ ಅಭಿಪ್ರಾಯವನ್ನೇ ಮಾಡಿಕೊಳ್ಳುತ್ತಿರುತ್ತೇವೆ.

ಆದ್ದರಿಂದ ಇಹದಲ್ಲಿಯೂ ಪರದಲ್ಲಿಯೂ ತನಗೆ ಒಳ್ಳೆಯದೇ ಆಗಬೇಕೆಂದು ಕೋರುವಾತನು ಮೊಟ್ಟಮೊದಲು ತನ್ನನ್ನು ತಾನು ಪರೀಕ್ಷಿಸಿಕೊಳ್ಳುವ ಪದ್ಧತಿಯನ್ನು ಇಟ್ಟುಕೊಳ್ಳಬೇಕು. ನನ್ನ ಸ್ವಭಾವವೇನು? ನಾನು ದಿನದಿನವೂ ಹೇಗೆ ಮತ್ತೊಬ್ಬರ ವಿಷಯಕ್ಕೆ ನಡೆಯುತ್ತಿರುವೆನು? ಯಾವ ಯಾವ ತಪ್ಪುಗಳನ್ನು ಮಾಡುತ್ತಿರುವೆನು?- ಎಂದು ನಮಗೆ ನಾವೇ ಪ್ರಶ್ನೆ ಹಾಕಿಕೊಳ್ಳುತ್ತಿರಬೇಕು.

*****

# 37. ಸರ್ವಾತ್ಮಭಾವನೆ

ಮನಸ್ಸಂಯಮಕ್ಕೆ **ಸರ್ವಾತ್ಮಭಾವನೆಯೆಂಬುದೊಂದು** ದೊಡ್ಡ ಸಾಧನವಾಗಿರುತ್ತದೆ. ಏಕೆಂದರೆ ಸಾಮಾನ್ಯಸ್ಥಿತಿಯಲ್ಲಿ ಮನುಷ್ಯನ ಮನಸ್ಸಿಗೆ ವಸ್ತುಗಳಲ್ಲಿ ಭೇದಗಳೂ ತಾರತಮ್ಯಗಳೂ ಸಹಜವಾಗಿ ಕಾಣುತ್ತಿರುತ್ತವೆ. ಈ ಭೇದಗಳೂ ತಾರತಮ್ಯಗಳೂ ತನಗೆ ಒಪ್ಪಾದರೆ ರಾಗವೂ, ಬೇಡವಾದರೆ ದ್ವೇಷವೂ, ಸಹಜವಾಗಿ ಮನಸ್ಸಿನಲ್ಲಿ ಮೂಡಿಕೊಳ್ಳುತ್ತವೆ. ಆದರೆ ಇದಕ್ಕೆ ಬದಲು ಎಲ್ಲೆಲ್ಲಿಯೂ ಪರಮಾತ್ಮಭಾವನೆಯಿದ್ದು ಬಿಟ್ಟರೆ ಆಗ ಯಾವ ದೃಶ್ಯದಿಂದಲೂ ಮನಸ್ಸಿನಲ್ಲಿ ಏರುಪೇರುಗಳಾಗುವದಕ್ಕೆ ಎಡೆಯಿರುವದಿಲ್ಲ.

ನಮ್ಮ ಮುಂದೆ ಕಾಣುವ ಉತ್ತಮದೃಶ್ಯಗಳಲ್ಲಿ ನಮ್ಮ ಮನಸ್ಸಿನ ಒಲವು ಇದ್ದೇ ಇರುತ್ತದೆಯಾದ್ದರಿಂದ ಅವುಗಳಲ್ಲಿ ಆತ್ಮಭಾವನೆಯನ್ನು ಮಾಡುವದು ಕೆಲವರಿಗೆ ಸುಲಭವಾದರೂ ಆಗಬಹುದು; ಆದರೆ ನಮಗೆ ಮೆಚ್ಚಾಗದ, ಅಸಹ್ಯವಾಗಿ ಕಾಣುವ, ನೋಟಗಳಲ್ಲಿಯೂ ಪರಮಾತ್ಮದೃಷ್ಟಿಯುಂಟಾಗುವದು ಎಲ್ಲರಿಗೂ ದಕ್ಕುವದಲ್ಲ. ಆದರೂ ವಸ್ತುಸ್ಥಿತಿಯೇನೆಂದರೆ ಸರ್ವವೂ ಬ್ರಹ್ಮವೇ, ಎಲ್ಲವೂ ಪರಮಾರ್ಥವಾದ ಸಚ್ಚಿದಾನಂದವಸ್ತುವೇ. ಹಾಗೆಂದು ಶಾಸ್ತ್ರವು ಸಾರುತ್ತಿದೆ. ನಮ್ಮ ಹೊರಗಿನ ನೋಟಗಳಲ್ಲಿ ನಮಗೆ ಅಶುಭದೃಷ್ಟಿಯುಂಟಾಗಿರುವದು, ನಮ್ಮ ಪಾಪವಾಸನೆಯಿಂದಲೇ ಹೊರತು ಆ ವಸ್ತುಗಳಲ್ಲಿರುವ ದೋಷದಿಂದಲ್ಲ-ಎಂದು ತಿಳಿದವರು ಹೇಳುತ್ತಾರೆ.

ಜ್ಞಾನಿಗಳ ಕಣ್ಣಿಗೆ ಎಲ್ಲವೂ ಪರಮಾತ್ಮನೇ ಆಗಿರುವದೆಂದು ಬಲ್ಲವರು ಹೇಳುತ್ತಾರೆ. ಆ ಮಟ್ಟಕ್ಕೆ ಇನ್ನೂ ಏರದಿರುವ ನಾವುಗಳು ಎಲ್ಲೆಲ್ಲಿಯೂ ಪರಮಾತ್ಮನ ಸನ್ನಿಧಿಯಿರುವದೆಂದೂ ಆದ್ದರಿಂದ ಅದೆಲ್ಲವೂ ಪರಮಪೂಜ್ಯವಾದದ್ದೆಂದೂ ಭಾವಿಸುತ್ತಿರಬೇಕು. ಸಾಧ್ಯವಾದರೆ ಎಲ್ಲವೂ ಪರಮಾತ್ಮನ ರೂಪವಿಶೇಷವೇ ಎಂದು ಧ್ಯಾನಿಸುತ್ತಿರಬೇಕು. ಇದರಿಂದ ಮನಸ್ಸು ತನ್ನ ಚಾಂಚಲ್ಯವನ್ನು ಬಿಟ್ಟು ಸ್ವಸ್ಥವಾಗುತ್ತದೆ, ಆಗ ನಮಗೆ ಶಾಂತಿಯು ದೊರಕುತ್ತದೆ.

ಸರ್ವಾತ್ಮಭಾವನೆಯು ಅಳವಡುವದಕ್ಕೆ ಸಹಕಾರಿಯಾದ ಕೆಲವು ಸೂಚನೆಗಳನ್ನು ಮುಂದಿನ ಲೇಖನದಲ್ಲಿ ಅರಿಕೆಮಾಡಿಕೊಳ್ಳುವೆನು.

*****

# 38. ಸಾಧನದ ಆವಶ್ಯಕತೆ [1]

ಮನುಷ್ಯನಿಗೆ ಮನಸ್ಸೇ ಬಂಧಮೋಕ್ಷಗಳಿಗೆ ಕಾರಣವಾದದ್ದು- ಎಂದು ಉಪನಿಷತ್ತಿನಲ್ಲಿ ಹೇಳಿರುತ್ತದೆ. ಇಲ್ಲಿ ಮನಸ್ಸೆಂದರೆ ಅಂತಃಕರಣವೆಂದರ್ಥ. ಅಂತಃಕರಣದ ಒಂದಾನೊಂದು ವೃತ್ತಿಯನ್ನು ಮನಸ್ಸೆಂದೇ ಕರೆಯುವದುಂಟು; ಆಗ ಬುದ್ಧಿ ಅಹಂಕಾರ, ಚಿತ್ತ -ಎಂಬ ಇನ್ನೂ ಮೂರು ವೃತ್ತಿಗಳನ್ನು ಲೆಕ್ಕಕ್ಕೆ ಹಿಡಿಯಬೇಕು.

ದರ್ಶನಗಳಲ್ಲಿ ಅಂತಃಕರಣದ ಒಂದೊಂದು ವೃತ್ತಿಗೆ ಒಬ್ಬೊಬ್ಬರು ಪ್ರಾಮುಖ್ಯ ವನ್ನು ಕೊಟ್ಟು ವಿಚಾರಮಾಡಿರುತ್ತಾರೆನ್ನಬಹುದು. ಹೇಗೆಂದರೆ, ತರ್ಕದಲ್ಲಿ ಎಂದರೆ **ನ್ಯಾಯವೈಶೇಷಿಕದರ್ಶನ**ಗಳಲ್ಲಿ ಮನಸ್ಸಿಗೇ ಹೆಚ್ಚು ಪ್ರಾಧಾನ್ಯವನ್ನು ಕೊಟ್ಟಿರುತ್ತದೆ. ನ್ಯಾಯಶಾಸ್ತ್ರದಲ್ಲಿ ಪ್ರಮಾಣವೂ ತರ್ಕವೂ ಎಲ್ಲಕ್ಕಿಂತಲೂ ಮೇಲಿನ ಮಟ್ಟದಲ್ಲಿರುತ್ತದೆ ಎಂಬುದು ನಿಮಗೆ ತಿಳಿದೇ ಇದೆ. ಇವು **'ಮನಸ್ಸು'** ಎಂಬ ಅಂತಃಕರಣದ ವೃತ್ತಿಗೆ ಸೇರಿದ್ದಾಗಿವೆ. **ಸಾಂಖ್ಯರು ಬುದ್ಧಿ** ಎಂಬ ವೃತ್ತಿಗೇ ಹಿರಿಮೆಯನ್ನು ತೋರಿಸುತ್ತಾರೆ ಎನ್ನಬಹುದು; ಏಕೆಂದರೆ ಅವರು ಆತ್ಮ ಅನಾತ್ಮ ಇವುಗಳ ವಿವೇಕವನ್ನೇ ಮುಖ್ಯ ವೆಂದು ಎಣಿಸುತ್ತಾರೆ. ಇದರಂತೆ **ಯೋಗಿಗಳು'ಚಿತ್ತ'**ಕ್ಕೆ ಪ್ರಾಧಾನ್ಯವನ್ನು ಕೊಟ್ಟಿರುತ್ತಾರೆ. ಚಿತ್ತವೆಂದರೆ ವಿಚಾರಾತ್ಮಕವಾದ ಅಂತಃಕರಣವಲ್ಲ, ನಿಶ್ಚಯ ರೂಪವಾದದ್ದೂ ಅಲ್ಲ; ಹೊರಗಿನ ಸಾಮಾನ್ಯವಾದ ಅರಿವು ಏತರಿಂದ ಆಗುವದೋ ಅದೇ ಚಿತ್ತವು. ಈ ಚಿತ್ತವನ್ನು ಒಕ್ಕಡೆಗೆ ಇಡಬೇಕಾದಾಗ 'ಚಿತ್ತವಿಟ್ಟು ಲಾಲಿಸಿರಿ' ಎನ್ನುವದನ್ನು ನೀವು ಕೇಳಿರಬಹುದು. ಚಿತ್ತವು ಬಗೆಬಗೆಯ ಮಟ್ಟಗಳಲ್ಲಿರುತ್ತದೆ; ಚಿತ್ತವೃತ್ತಿಗಳನ್ನೆಲ್ಲ ತಡೆಗಟ್ಟಿ ಸಮಾಧಿಯನ್ನು ಪಡೆಯುವ ಕ್ರಮವನ್ನೇ ಯೋಗದಲ್ಲಿ ವಿಸ್ತರಿಸಿರುತ್ತದೆ. ಚಿತ್ತದಿಂದ ಗ್ರಹಿಸಿದ್ದನ್ನು ಮನಸ್ಸಿನಿಂದ ಮನನಮಾಡಿ ಬುದ್ಧಿಯಿಂದ ನಿಶ್ಚಯಿಸುತ್ತೇವೆ. ಇಲ್ಲಿ ಇವು ಮೂರೂ ಒಂದಕ್ಕಿಂತ ಒಂದು ಒಳಗಿನ ವೃತ್ತಿಗಳು. ಇನ್ನು **ಅಹಂಕಾರ**ವೆಂಬ ವೃತ್ತಿಯನ್ನು ಎಲ್ಲಾ ದರ್ಶನಕಾರರು ಲೆಕ್ಕಕ್ಕೆ ತೆಗೆದುಕೊಂಡಿರುತ್ತಾರೆ. ತಾನಲ್ಲದ ದೇಹಾದಿಗಳಲ್ಲಿ ತಾನೆಂಬ ಹೆಮ್ಮೆಯನ್ನಿಟ್ಟುಕೊಂಡಿರುವದನ್ನೇ **ಅಹಂಕಾರ**ವೆಂದು ಕರೆಯುತ್ತಾರೆನ್ನಬಹುದು.

---

**1.** (ಮೈಸೂರಿನಲ್ಲಿ ಬ್ರ।ಶ್ರೀ। ವಿಠ್ಠಲಶಾಸ್ತ್ರಿಗಳವರ ಮನೆಯಲ್ಲಿ ತಾ॥ 11-01-1942ರಲ್ಲಿ ಕೆಲವು ಜನ ಜಿಜ್ಞಾಸುಗಳಿಗೆ ಸಂಪಾದಕರು ಕೊಟ್ಟ ಸೂತ್ರಾದಿಗಳ ಸಾರ.)

ವೇದಾಂತಿಗಳು ಈ ನಾಲ್ಕು ವೃತ್ತಿಗಳನ್ನೂ ಲೆಕ್ಕಕ್ಕೆ ತೆಗೆದುಕೊಂಡು ಸಾಧನವನ್ನು ಉಪದೇಶಿಸಿರುತ್ತಾರೆ. ಒಂದು ರಾಜ್ಯದ ಮೇಲೆ ಶತ್ರುಗಳ ಧಾಳಿಯು ನಡೆಯುತ್ತಿರುವಾಗ ಅರಸನು ತನ್ನ ನಾಲ್ಕು ಮಂತ್ರಿಗಳ ಸಲಹೆಯನ್ನೂ ಕೇಳಿ ಅವನ ಅಭಿಮತವನ್ನು ಹೊಂದುಗಡೆಮಾಡಿ ಕಾರ್ಯಾಚರಣೆಯನ್ನು ಕೈಕೊಳ್ಳುವಂತೆ ಸಾಧಕನಾದವನು ನಾಲ್ಕು ವೃತ್ತಿಗಳ ವಿಷಯವನ್ನು ಮನದಂದುಕೊಂಡು ನಡೆಯಬೇಕಾಗಿರುತ್ತದೆ. ಮನಸ್ಸಿನಿಂದ ವಿಚಾರಮಾಡಿ ಸುಮ್ಮನಾದರೆ ಸಾಲದು. ಬುದ್ಧಿಯಿಂದ ಒಮ್ಮೆ ವಿವೇಕವನ್ನು ಮಾಡಿಕೊಂಡು ಗೆದ್ದೆನೆಂದು ಭಾವಿಸಲೂಬಾರದು. ಏಕೆಂದರೆ ವಿಚಾರದಿಂದ ಹೋದಂತೆ ಕಂಡ ಸಂಶಯಗಳು ಮತ್ತೆ ಕವಲುಕವಲಾಗಿ ಚಿಗುರುವವು; ವಿವೇಕದಿಂದ ಪ್ರಕೃತಿಯ ಅಧ್ಯಾಸವನ್ನು ಬಿಡಿಸಿಕೊಂಡು ನೋಡಿದ ಮೇಲೂ ಮತ್ತೆ ಅಧ್ಯಾಸವು ಬಗೆಬಗೆಯಿಂದ ತನ್ನ ಕೈಚಳಕವನ್ನು ತೋರಿಸುತ್ತಲೇ ಇರುವದು. ಚಿತ್ತವನ್ನು ಸ್ವಲ್ಪ ಹೊತ್ತು ನಿಲ್ಲಿಸಿಕೊಂಡರೆ ಸಾಲದು; ಅದು ಮತ್ತೆ ಹೇಗೋ ಚದುರಿಬಿಡುತ್ತದೆ. ಒಂದು ಬಗೆಯ ಅಹಂಕಾರವನ್ನು ಗೆದ್ದುಕೊಂಡೆನೆಂದು ಹಿಗ್ಗಬಾರದು; ಅದು ಮತ್ತೆ ಹೇಗೋ ಮತ್ತೊಂದು ಬಗೆಯ ಅಭಿಮಾನವಾಗಿ ತೋರಿಕೊಳ್ಳುತ್ತದೆ. ಅಂತಃಕರಣವು ಇರುವವರೆಗೂ ಅದು ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ ಎಂಬ ರೂಪಗಳಿಂದ ಮತ್ತೆ ಮತ್ತೆ ತೋರಿಕೊಳ್ಳುತ್ತಲೇ ಇರುತ್ತದೆ. ಇದೇ ಅದರ ಸ್ವಭಾವವು.

ಆದ್ದರಿಂದ ನೀವು ಅಂತಃಕರಣದ ನಾಲ್ಕು ವೃತ್ತಿಗಳಿಗೂ ಸಮವಾಗಿ ಕೆಲಸವನ್ನು ಕೊಡುತ್ತಿರಬೇಕು. ಬರಿಯ ಒಣವಿಚಾರದಿಂದ ತೃಪ್ತರಾಗಬೇಡಿರಿ. ಒಣತರ್ಕವನ್ನು ನಂಬಬೇಡಿರಿ. ತರ್ಕಕ್ಕೆ ಆಕಾರಮಾತ್ರದಿಂದ ತೃಪ್ತಿಯಾಗುತ್ತದೆ. ಒಮ್ಮೆ ಬೆಂಗಳೂರಿಗೆ ಒಬ್ಬ ಲಕ್ಕೋಟೆ ಪ್ರಶ್ನೆಯನ್ನು ಹೇಳುವ ಚತುರನು ಬಂದಿದ್ದನಂತೆ. ಕೇಳುವವರು ಲಕ್ಕೋಟೆಯೊಳಗಡೆಯಲ್ಲಿ ಬರೆದಿಟ್ಟಿದ್ದ ಪ್ರಶ್ನೆಗೆ ಅವನು ಉತ್ತರವನ್ನು ಹೇಳುತ್ತಿದ್ದನಂತೆ. ಆಗ ಅವನು ಕೊಟ್ಟ ಉತ್ತರವು 'ಆರು ತಿಂಗಳಿಗೆ' ಎಂದಾಗಿತ್ತು. ಒಬ್ಬ ವಿನೋದಗಾರನು ಹಾಕಿದ್ದ ಪ್ರಶ್ನೆಗೆ ಉತ್ತರವಿದು. ಪ್ರಶ್ನೆಯೇನು ಬಲ್ಲಿರಾ? ''ನಂದಿಬೆಟ್ಟವು ಬೆಂಗಳೂರ ಚೌಕಕ್ಕೆ ಯಾವಾಗ ಬರುತ್ತದೆ?'' ಎಂಬುದೇ ! ಒಂದು ಮರದಲ್ಲಿರುವ ಹಕ್ಕಿಗಳಲ್ಲಿ ಒಂದನ್ನು ಒಂದು ಬಂದೂಕಿನಿಂದ ಹೊಡೆದು ಕೊಂದರೆ ನಾಲ್ಕು ಬಂದೂಕಿನಿಂದ ಎಷ್ಟು ಕೊಲ್ಲಬಹುದು? – ಎಂಬ ಪ್ರಶ್ನೆಗೆ 'ನಾಲ್ಕು ಹಕ್ಕಿಗಳನ್ನು ಕೊಲ್ಲಬಹುದು' ಎಂಬ ಉತ್ತರದಷ್ಟೇ ಈ ಉತ್ತರವು ಸರಿಯಾದದ್ದು. ಉತ್ತರವು ಒಣತರ್ಕದ ಆಧಾರದ ಮೇಲೆ ನಿಂತಿದೆ. ತತ್ತ್ವವು ಒಣತರ್ಕಕ್ಕೆ ಎಂದಿಗೂ ನಿಲುಕಲಾರದು.

ಭಗವಂತನು ಗೀತೆಯಲ್ಲಿ ಏನು ಹೇಳಿರುತ್ತಾನೆಂಬುದನ್ನು ನೆನಪಿಡಿರಿ. **"ಮಚ್ಚಿತ್ತೋ ಯುಕ್ತ ಆಸೀತ"** (ನನ್ನಲ್ಲಿಯೇ ಚಿತ್ತವನ್ನಿಟ್ಟು ನಾನೇ ಹೆಚ್ಚೆಂದು ತಿಳಿದು ಸಮಾಹಿತನಾಗಿರಬೇಕು), **"ಮಚ್ಚಿತ್ತಃ ಸರ್ವದುರ್ಗಾಣಿ ಮತ್ಪ್ರಸಾದಾತ್ ತರಿಷ್ಯಸಿ"** (ನನ್ನಲ್ಲಿಯೇ ಚಿತ್ತವನ್ನಿಟ್ಟುಕೊಂಡಿದ್ದರೆ ಎಲ್ಲಾ ಎಡರುಗಳನ್ನೂ ದಾಟುವೆ) ಎಂದು ಹೇಳಿರುವಂತೆ ಯಾವಾಗಲೂ ಪರಮೇಶ್ವರನಲ್ಲಿಯೇ ಚಿತ್ತವನ್ನಿಟ್ಟುಕೊಳ್ಳಿರಿ; **"ಮಯ್ಯೇವ ಮನ ಆಧತ್ಸ್ವ ಮಯಿಬುದ್ಧಿಂ ನಿವೇಶಯ"** (ನನ್ನಲ್ಲಿಯೇ ಮನಸ್ಸನ್ನಿಟ್ಟು ನನ್ನಲ್ಲಿಯೇ ಬುದ್ಧಿಯನ್ನು ಹೊಗಿಸು) ಎಂದಿರುವಂತೆ ಭಗವಂತನಲ್ಲಿಯೇ ಮನನ ನಿಶ್ಚಯಾತ್ಮಕ ವಾದ ಅಂತಃಕರಣ ವೃತ್ತಿಗಳನ್ನು ಸೇರಿಸಿಕೊಳ್ಳುವದಕ್ಕೆ ಯತ್ನಿಸಿರಿ; **"ಯದಹಂಕಾರ ಮಾಶ್ರಿತ್ಯ" "ಅಹಂಕಾರಂ ಬಲಂ ದರ್ಪಂ ಕಾಮಂ ಕ್ರೋಧಂ ಪರಿಗ್ರಹಮ್ । ವಿಮುಚ್ಯ ನಿರ್ಮಮಃ ಶಾನ್ತೋ ಬ್ರಹ್ಮಭೂಯಾಯ ಕಲ್ಪತೇ"** ಎಂದಿರುವಂತೆ ಅಹಂಕಾರ ಮಮಕಾರಗಳಿಂದ ಮಾಡುವ ಕೆಲಸವು ವ್ಯರ್ಥವೆಂದು ನಿಶ್ಚಯಿಸಿ ನಿರಭಿಮಾನದಿಂದ ಭಗವಂತನಲ್ಲಿಯೇ ಶಾಂತಿಯನ್ನು ಪಡೆಯುವದಕ್ಕೆ ಹವಣಿಸಿರಿ. ಯಾವಾಗಲೋ ಒಂದು ಸಲ ಚಿತ್ತವನ್ನು ಭಗವಂತನ ಕಡೆಗೆ ತಿರುಗಿಸಿ ಒಂದು ಸಲ ಪರಮಾತ್ಮನ ವಿಚಾರವನ್ನು ಮಾಡಿ, ಒಂದು ಸಲ ವಿವೇಕವನ್ನು ಅಭ್ಯಾಸಮಾಡಿ, ಒಂದು ಸಲ ಅಹಂಕಾರವನ್ನು ಗೆಲ್ಲುವ ಪ್ರಯತ್ನವನ್ನು ಮಾಡಿದರೆ ಸಾಲದು; ಶನಿ ಶನಿವಾರ ದೇವಾಲಯಕ್ಕೆ ಹೋಗಿ ಬರುವಂತೆ ಇದೊಂದು ಪದ್ಧತಿಯಾಗಿದ್ದರೆ ಸಾಕೆಂದು ತಿಳಿಯಬೇಡಿರಿ. ನಮ್ಮ ಸರ್ವ ವ್ಯವಹಾರದಲ್ಲಿಯೂ ಪರಮೇಶ್ವರನೇ ನಮ್ಮ ಚಿತ್ತ ಮನ ಬುದ್ಧಿಗಳಿಗೆ ಆಶ್ರಯನಾಗಿರಬೇಕು. ಅಹಂಕಾರವನ್ನು ಯಾವಾಗಲೂ ಮೆಟ್ಟಿ ತುಳಿಯುತ್ತಲೇ ಇರಬೇಕು. ಹಾಗಾದರೆ ಮಾತ್ರ ತಮ್ಮ ಇಷ್ಟಾರ್ಥವು ನೆರವೇರೀತು.

ಚಿತ್ತಕ್ಕೆ ಧ್ಯಾನವನ್ನು ಕೊಡುತ್ತಲೇ ಇರಬೇಕು; ಅಂತಃಕರಣವು ಮನೋ ರೂಪವಾದರೆ ಕೂಡಲೆ ಅದನ್ನು ಸದ್ವಿಚಾರಕ್ಕೆ ಹತ್ತಿಸಬೇಕು; ಬುದ್ಧಿಯಿಂದ ನಿತ್ಯಾನಿತ್ಯ, ಸತ್ಯ ಮಿಥ್ಯ ಮುಂತಾದವುಗಳ ವಿವೇಕವನ್ನು ಮಾಡುತ್ತಲೇ ಇರಬೇಕು; ಅಮಾನಿತ್ವ, ಅದಂಭಿತ್ವ ಮುಂತಾದ ಗುಣಗಳಿಂದ ಅಹಂಕಾರವನ್ನು ಹಿಮ್ಮೆಟ್ಟಿಸುತ್ತಿರಬೇಕು. ಇದು ಹೇಗೆ ಸಾಧ್ಯವೆನ್ನುವಿರೋ? ನಮ್ಮ ಸಕಲ ಕರ್ಮಗಳೂ ಭಗವಂತನ ಅರ್ಚನೆಯಾಗ

ಬೇಕು. ನಮ್ಮ ವಾಕ್ಕುಗಳೆಲ್ಲವೂ ಆತನ ನಾಮಜಪಪಾರಾಯಣವಾಗಬೇಕು, ಆಗ ಅಂತಃಕರಣವು ನಮ್ಮ ವಶಕ್ಕೆ ಬರುತ್ತದೆ; ಅದರ ವೃತ್ತಿಗಳನ್ನು ಪರಮೇಶ್ವರನಲ್ಲಿಡು ವುದಕ್ಕೆ ಸಾಧ್ಯವಾಗುತ್ತದೆ- ಹೀಗೆಂದು ಬಲ್ಲವರೆಲ್ಲರೂ ಹೇಳುತ್ತಿದಾರೆ.

ಸಾಧಕನಾದವನು ಯಾವಾಗಲೂ ಆತ್ಮಪರೀಕ್ಷೆಯನ್ನು ಮಾಡಿಕೊಳ್ಳುತ್ತಲೇ ಇರಬೇಕು. ನನ್ನ ಚಿತ್ತವು ಆತ್ಮಸ್ವರೂಪದ ಅನುಸಂಧಾನವನ್ನೇ ಮಾಡುತ್ತಿದೆಯೋ ಹೊರ ಮುಖವಾಗಿದೆಯೋ, ಮನಸ್ಸು ಭಗವದ್ವಿಚಾರವನ್ನೇ ಮಾಡುತ್ತಿದೆಯೋ ಅಸದ್ವಿಚಾರಕ್ಕೆ ಹಾತುವರಿಯುತ್ತಿದೆಯೋ, ಬುದ್ಧಿಯು ಆತ್ಮಾನಾತ್ಮವಿವೇಚನೆ ಮಾಡಿಕೊಳ್ಳುತ್ತಿದೆಯೋ, ಇಲ್ಲದೆ, ಅಧ್ಯಾಸಪೂರ್ವಕವಾದ ವ್ಯವಹಾರದಲ್ಲಿಯೇ ಅಭಿರುಚಿಯನ್ನು ತೋರಿಸು ತ್ತಿರುವದೋ, ಅಹಂಕಾರವು ಕುಗ್ಗುತ್ತಾ ಪರಮಾತ್ಮನ ಪ್ರಕಾಶವು ಹೊರಸೂಸುವುದಕ್ಕೆ ಅವಕಾಶವನ್ನು ಕೊಡುತ್ತದೆಯೋ, ಇಲ್ಲವೆ ತಾನೇ ತಾನಾಗಿ ಹೊರಹೊಮ್ಮಿಕೊಂಡು ರಜಸ್ತಮೋಗುಣಗಳ ಹಬ್ಬುಗೆಯನ್ನು ಪ್ರೋತ್ಸಾಹಿಸುತ್ತಿದೆಯೋ? - ಎಂದು ತನ್ನಲ್ಲಿ ತಾನು ವಿಚಾರ ಮಾಡಿಕೊಳ್ಳುತ್ತಿರಬೇಕು. ಇದೇ ಮುಮುಕ್ಷುವಿನ ಕರ್ತವ್ಯವು; ಹೀಗೆ ಪರಮಾತ್ಮನೇ ತನಗೆ ಬೇಕೆಂದು ಹವಣಿಸುವವರೇ ಆತನ ಅನುಗ್ರಹದಿಂದ ತತ್ತ್ವಜ್ಞಾನ ವನ್ನು ಪಡೆದು ಕೃತಕೃತ್ಯರಾಗುವರು.

*****

## 39. ತತ್ತ್ವವಿಚಾರ

ಮನಸ್ಸನ್ನು ಹಿಡಿತದಲ್ಲಿಟ್ಟುಕೊಳ್ಳುವದಕ್ಕೆ ಆತ್ಮಶೋಧನೆ, ಸರ್ವಾತ್ಮ ಭಾವನೆ, ಇವುಗಳಂತೆ ತತ್ತ್ವವಿಚಾರವೂ ಒಂದು ಒಳ್ಳೆಯ ಸಾಧನವಾಗಿರುತ್ತದೆ. ಆತ್ಮ ಶೋಧನೆಯು ಹಿಂದೆ ಮಾಡಿದ ತಪ್ಪುಗಳನ್ನು ತಿದ್ದಿಕೊಂಡು ಮುಂದಕ್ಕೆ ಹೀಗಿರ ಬೇಕೆಂಬ ಕಾರ್ಯಕ್ರಮದ ಚಿತ್ರವನ್ನು ಮನಸ್ಸಿನಲ್ಲಿ ಸಿದ್ಧಪಡಿಸಿಕೊಳ್ಳುವದಕ್ಕೆ ನೆರವಾಗುತ್ತದೆ. ಆ ಭಾವನೆಯ ವಾಸನೆಯಿದ್ದರೆ ಮನಸ್ಸು ತಟ್ಟನೆ ತಪ್ಪುದಾರಿಯಲ್ಲಿ ಹರಿಯ ದಂತೆ ಅಡ್ಡಿಯಾಗಲೂಬಹುದು. ಸರ್ವಾತ್ಮಭಾವನೆಯು ಮನಸ್ಸಿಗೆ ಏರುಪೇರುಗಳಿಲ್ಲ ದಂತೆ ಮಾಡುವದಕ್ಕೆ ಸಹಾಯಕವಾಗುವದಲ್ಲದೆ ಆ ಮನಸ್ಸು ಹೆಚ್ಚಿನ ಭೂಮಿಕೆಯಲ್ಲಿ ನಿಲ್ಲುವಂತೆಯೂ ಮಾಡುತ್ತದೆ. ಆದರೆ ತತ್ತ್ವವಿಚಾರವು ಇವೆರಡಕ್ಕೂ ತಳಹದಿಯೆಂದು

ಭಾವಿಸಬೇಕು. ಏಕೆಂದರೆ ವಿಚಾರದಿಂದ ಮನಸ್ಸನ್ನು ವ್ಯವಸ್ಥೆಗೆ ತಂದುಕೊಂಡವನು ಮಾತ್ರವೇ ಆತ್ಮಶೋಧನೆಯನ್ನು ಸರಿಯಾಗಿ ಮಾಡಲಾಪನು, ಅವನಿಗೇ ಸರ್ವಾತ್ಮ ಭಾವನೆಯೂ ಪೂರ್ಣವಾಗಿ ಅಳವಟ್ಟೀತು.

ತತ್ತ್ವವಿಚಾರವೆಂದರೇನು? ಶಾಸ್ತ್ರದ ಪರಿಭಾಷಾಶಬ್ದಗಳನ್ನು ಗಟ್ಟಿಮಾಡಿಕೊಂಡು ಅಥವಾ ಪುಸ್ತಕಗಳಲ್ಲಿರುವ ಕೆಲವು ಅಭಿಪ್ರಾಯಗಳನ್ನು ತಿಳಿದುಕೊಂಡು ಒಬ್ಬ ರೊಡನೊಬ್ಬರು ಹೋರಾಡುವದನ್ನೇ ವಿಚಾರವೆಂದು ಕೆಲವರು ಮೂಢರು ತಿಳಿದು ಕೊಂಡಿರುತ್ತಾರೆ. ನಿಜವಾಗಿ ನೋಡಿದರೆ ವಿಚಾರವೆಂಬುದು ತನ್ನ ತನ್ನ ಮನಸ್ಸಿ ನಲ್ಲಿಯೇ ನಡೆಯತಕ್ಕ ವ್ಯಾಪಾರವಾಗಿರುತ್ತದೆ. ನನ್ನ ಹೊರಗೆ ಕಾಣುತ್ತಿರುವ ಬಗೆ ಬಗೆಯ ದೃಶ್ಯಗಳ ಮತ್ತು ಘಟನೆಗಳ ಅರ್ಥವೇನು? ಇವುಗಳಿಗೂ ನನಗೂ ಏನು ಸಂಬಂಧ? ನಾವು ಯಾವ ಯಾವ ಸನ್ನಿವೇಶದಲ್ಲಿ ಹೀಗೆ ಏತಕ್ಕೆ ನಡೆದುಕೊಳ್ಳಬೇಕು? ನನ್ನ ಅಂತಃಕರಣದಲ್ಲಿ ಆಗಾಗ ಆಗುತ್ತಿರುವ ಉಬ್ಬರವಿಳಿತಗಳಿಗೆ ಕಾರಣವೇನು? ಅದರಲ್ಲಿ ಕೆಲವು ವೇಳೆ ಕೆಟ್ಟ ಆಲೋಚನೆಗಳೂ ಮತ್ತೆ ಕೆಲವು ವೇಳೆ ಒಳ್ಳೆಯ ಆಲೋಚನೆಗಳೂ ಏತಕ್ಕೆ ಹೊರ ಹೊಮ್ಮುತ್ತವೆ? ಈ ಮನಸ್ಸನ್ನು ಅಲೆಗಳಿಲ್ಲದ ಕಡಲಿನಂತೆ ಇಟ್ಟುಕೊಳ್ಳುವದು ಸಾಧ್ಯವೆ?- ಎಂದು ಅಳೆದೂ ಹುಯ್ದೂ ಮಾಡುವ ವ್ಯಾಪಾರವೇ ವಿಚಾರವು. ಆ ವಿಚಾರದಲ್ಲಿ ತೊಡಗಿದವನ ಮನಸ್ಸು ಆಗಲೇ ಅವನ ಹಿಡಿತಕ್ಕೆ ಸಿಕ್ಕಿಕೊಂಡಿತೆಂದು ತಿಳಿಯಬೇಕು.

ನಾವು ಈ ಪ್ರಪಂಚವೆಂಬ ನಾಟಕರಂಗಕ್ಕೆ ಏತಕ್ಕೆ ಇಳಿದಿದ್ದೇವೆ? ಇದರಲ್ಲಿ ನಮ್ಮಪಾತ್ರವು ಯಾವದು? ಅದಕ್ಕೆ ನಾವು ಯಾವ ಸಿದ್ಧತೆಯನ್ನು ಮಾಡಿಕೊಳ್ಳಬೇಕು? ಯಾವಾಗ ನಮ್ಮ ಅಭಿನಯದ ಕೊನೆಯಾಗುವದು? ಆಗ ನಾವು ಪರದೆಯ ಹಿಂದಕ್ಕೆ ಸರಿದುಕೊಂಡರೆ ಎಲ್ಲಿಗೆ ಹೋಗುವೆವು?- ಎಂದು ನಮ್ಮಲ್ಲಿಯೇ ನಾವು ಬಿಡದೆ ಆಲೋಚಿಸುತ್ತಿರಬೇಕು. ಇದೇ ವಿಚಾರವು. ಇದರಿಂದ ಮನಸ್ಸು ಹಿಡಿತಕ್ಕೆ ಸಿಕ್ಕುವದು.

## ಲೋಕಾಃ ಸಮಸ್ತಾಃ ಸುಖಿನೋ ಭವಂತು

ಲೌಕಿಕಶಾಸ್ತ್ರಗಳೂ ಕಲಾಕೌಶಲ್ಯಗಳೂ ಮನಸ್ಸಿನ ಸಾಧನೆಗೆ ವಿಷಯವನ್ನು ಒದಗಿಸುವದು ನಿಜ. ಆದರೆ ಆ ಶಾಸ್ತ್ರಗಳಲ್ಲಿಯೂ ಆ ಕಲೆಗಳಲ್ಲಿಯೂ ಇರುವ

ಹಿರಿಮೆ ಏತರದು? ಅವುಗಳು ವಿವೇಕಿಗಳಾದವರನ್ನು ಏತಕ್ಕೆ ಸಂತೋಷಗೊಳಿಸುತ್ತವೆ? ಅವುಗಳ ಶುದ್ಧಾನಂದದಿಂದ ಜಾರಿ ಮನಸ್ಸು ಸೀಳುಹಾದಿಗೆ ಹೋಗದಂತಿರುವದಕ್ಕೇನು ಮಾಡಬೇಕು? ಇದನ್ನೂ ವಿಚಾರಮಾಡುತ್ತಿರಬೇಕು.

ಸಕಲಶಾಸ್ತ್ರಗಳಿಗೂ ಸಕಲಕಲೆಗಳಿಗೂ ಗುರಿಯಾದ ಪರಮಾರ್ಥವೊಂದುಂಟು. ಆಯಾ ಶಾಸ್ತ್ರಗಳು ತಮ್ಮ ತಮ್ಮ ವಿಷಯವನ್ನು ಅವಾಂತರ ತಾತ್ಪರ್ಯದಿಂದ ಹೇಳಿದರೂ ಮಹಾ ತಾತ್ಪರ್ಯದಿಂದ ಆ ಪರಮಾರ್ಥತತ್ತ್ವನಾದ ಪರಮೇಶ್ವರನನ್ನೇ ಗುರಿಯಿಟ್ಟು ಹೊರಟಿರುತ್ತವೆ. ಪರಂಪರೆಯಿಂದ ಪರಮಾರ್ಥವನ್ನು ತಿಳಿಸುವ ಈ ಶಾಸ್ತ್ರಗಳಿಗಿಂತಲೂ ನೇರಾಗಿಯೇ ಪರಮಾರ್ಥವನ್ನು ತಿಳಿಸುವ ಅಧ್ಯಾತ್ಮಶಾಸ್ತ್ರವೊಂದುಂಟು. ಆ ಶಾಸ್ತ್ರವೇ ನಿಜವಾದ ಅರ್ಥದಲ್ಲಿ ಶಾಸ್ತ್ರವು. ಅದರ ಅರ್ಥವನ್ನು ತತ್ಪರನಾಗಿ ವಿಚಾರ ಮಾಡುತ್ತಿರಬೇಕು. ಅದರ ಅಭಿಪ್ರಾಯವನ್ನು ಮನಸ್ಸಿನಲ್ಲಿ ಹೊರಳಾಡಿಸುತ್ತಿರಬೇಕು. ಆ ವಿಚಾರದಿಂದ ಮನಸ್ಸಿಗೆ ಬಲ ಬರುತ್ತದೆ, ಪುಷ್ಟಿ ಬರುತ್ತದೆ. ಏಕಾಗ್ರತೆ ಬರುತ್ತದೆ; ಪರಮೇಶ್ವರನ ಆನಂದವು ಅಂಥ ಮನಸ್ಸಿನಲ್ಲಿ ಹೊರಚಿಮ್ಮುತ್ತದೆ. ಮನಸ್ಸಂಯಮವು ಆಗ ಲೀಲಾಮಾತ್ರವಾಗುತ್ತದೆ.

*****

## 40. ಭಜನ

ಭಜನವೆಂಬುದು ಅಧ್ಯಾತ್ಮಸಾಧನಗಳಲ್ಲಿ ಬಹುಮುಖ್ಯವಾದದ್ದು. ಭಜನೆ ಎಂದರೆ ಸೇವಿಸುವದೆಂದರ್ಥ. ಆದ್ದರಿಂದ ಭಗವಂತನಲ್ಲಿಯೇ ಪ್ರೇಮದಿಂದ ಮನಸ್ಸು ನಿಲ್ಲುವಂತೆ ಮಾಡುವ ಸಾಧನವೆಲ್ಲ ಒಂದರ್ಥದಲ್ಲಿ ಭಜನೆಯೇ ಆಗಿರುತ್ತದೆ. ಭಜನೆಯ ಸಂಪರ್ಕವಿಲ್ಲದ ಸಾಧನವು ಅಧ್ಯಾತ್ಮಸಾಧನವೇ ಆಗಲಾರದು.

ಆದರೆ ಭಗವಂತನು ಸರ್ವವ್ಯಾಪಿಯು, ಸರ್ವಶಕ್ತನು, ಸರ್ವಜ್ಞನು, ದಯಾಘನನು, ಭಕ್ತರನ್ನು ಉದ್ಧರಿಸುವದೇ ಆತನ ಬಿರುದು–ಎಂದು ನೆರೆನಂಬಿ ಭಗವಂತನಲ್ಲಿ ತನ್ನಸ್ಥಿತಿಯನ್ನು ಅರಿಕೆಮಾಡುವದು, ತನ್ನ ತಪ್ಪುಗಳಿಗೆ ಆತನ ಕ್ಷಮೆಯನ್ನೂ ತನ್ನ ಸತ್ಪ್ರಯತ್ನಗಳಿಗೆ ಆತನ ನೆರವನ್ನೂ ಬೇಡುವದು, ಆತನು ಇಲ್ಲಿಯೇ

ಈಗಲೇ ಸನ್ನಿಹಿತನಾಗಿ ತನ್ನ ಮೊರೆಯನ್ನು ಕೇಳಿ ತನ್ನನ್ನು ರಕ್ಷಿಸುವನೆಂದು ದೃಢವಾದ ವಿಶ್ವಾಸವಿಟ್ಟಿರುವದು- ಇವೆಲ್ಲ ವಿಶೇಷವಾದ ಅರ್ಥದಲ್ಲಿ ಭಜನೆಯೆನ್ನಿಸುವವು.

**ಪ್ರತಿದಿನವೂ** ಭಗವಂತನನ್ನು ಭಾವಭಕ್ತಿಯಿಂದ ಭಜಿಸಿರಿ. ಎಲ್ಲೆಲ್ಲಿಯೂ ಕಾಣುತ್ತಿರುವ ಜೀವರುಗಳೂ ಈಶ್ವರನ ಕಲೆಯೆಂದೇ ನಂಬಿ ಅವರನ್ನು ಸಂತೋಷ ಗೊಳಿಸುವದು ಈಶ್ವರನ ಭಜನೆಯೆಂದೇ ತಿಳಿದು ವ್ಯವಹರಿಸಿರಿ. **ಸಾಯಂಕಾಲ** ವಿಶೇಷರೀತಿಯಿಂದ ಭಗವಂತನನ್ನು ಮನಸ್ಸಿಗೆ ತಂದುಕೊಂಡು ಭಜಿಸಿರಿ. ಈ ಭಜನೆಯಿಂದ ಸರ್ವದಿಕ್ಕುಗಳೂ ಸುಖಮಯವಾಗುವವು.

ಭಗವಂತನಲ್ಲಿ ಏನನ್ನು ಬೇಡಬೇಕು? ಆತನನ್ನು ಹೇಗೆ ಸ್ತೋತ್ರಮಾಡಬೇಕು? ಆತನ ಉಪಕಾರವನ್ನು ಹೇಗೆ ನೆನೆಯಬೇಕು?- ಎಂಬ ಪ್ರಶ್ನೆಗಳು ನಿಮ್ಮನ್ನು ಪೀಡಿಸುತ್ತಿರಬಹುದು. ಭಕ್ತರಾದವರು ಆಗಲೆ ಮಾಡಿರುವ **ಸ್ತೋತ್ರ**ಗಳನ್ನು ಮೊದಲು ಕಂಠಪಾಠಮಾಡಿಕೊಳ್ಳಿರಿ; ಸಾಧುಗಳು ಹಾಡಿರುವ **ಕೀರ್ತನೆ**ಗಳನ್ನೂ **ಅಭಂಗ**ಗಳನ್ನೂ **ಸುಳಾದಿ**ಗಳನ್ನೂ ಅರ್ಥಸಹಿತವಾಗಿ ಅನುಸಂಧಾನ ಮಾಡಿರಿ. ಈ ಸ್ತೋತ್ರಗಳು, ಹಾಡುಗಳು, ಕೀರ್ತನೆಗಳು, ಅಭಂಗಗಳು, **ಪದಗಳು**, **ಪದ್ಯ**ಗಳು-ಇವುಗಳನ್ನು ನಿಮ್ಮ ವೆಂದೇ ಭಾವಿಸಿಕೊಂಡು ಭಗವಂತನನ್ನು ಪ್ರತಿದಿನವೂ ಸಾಯಂಕಾಲದಲ್ಲಿ ಕೊಂಡಾಡಿರಿ. ನಿಮ್ಮ ಹೃದಯದಲ್ಲಿ ಪ್ರೇಮರಸವು ಉಕ್ಕುವದು. ಪರಮೇಶ್ವರನ ಕರುಣದಿಂದ ಆತನನ್ನು ಹೊಗಳಿ ಸುಖಿಸುವ ಮಾರ್ಗವು ಮನಸ್ಸಿಗೆ ಗೋಚರವಾಗುವದು. ಭಜನೆಯ ಆನಂದವು ದಕ್ಕುವದು.

*****

## 41. ಆತ್ಮನಿವೇದನ

ಸ್ನಾನ, ಧ್ಯಾನ, ಪಾರಾಯಣ, ಸದ್ವ್ಯವಹಾರ, ತ್ರಿಕರಣ ಸಂಯಮ, ಭಜನ- ಈ ಸಾಧನಗಳಲ್ಲಿ ಜೀವಾಳವೇನು? ಇವುಗಳನ್ನು ಆಧ್ಯಾತ್ಮಸಾಧನವೆಂದು ಏಕೆ ಕರೆಯುತ್ತಾರೆ? ಈ ಪ್ರಶ್ನೆಗೆ ಸಂಕ್ಷೇಪವಾಗಿ ಉತ್ತರವನ್ನು ಹೇಳುವದಕ್ಕೆ ಯತ್ನಿಸುವೆನು.

ಮನುಷ್ಯನು ನಿತ್ಯ ಜೀವನದಲ್ಲಿ ಆನಂದವನ್ನು ಪಡೆಯುವುದಕ್ಕೆ ಒಂದೇ ಒಂದು ಅಡ್ಡಿಯಿದೆ. ಅದನ್ನು '**ನಾನು**' ಎಂದು ಕರೆಯುತ್ತಾರೆ. ಜೀವನಸಾಗರವು

ಆನಂದಮಯವಾಗಿದ್ದರೂ ಅವಿವೇಕಿಗಳು ಅದರಲ್ಲಿ ನಾನೆಂಬ ಒಂದು ಅಲೆಯನ್ನು ಎಬ್ಬಿಸಿಕೊಂಡು ಸಂಕಟಪಡುತ್ತಿದ್ದಾರೆ. ಅಧ್ಯಾತ್ಮ ಸಾಧನಗಳಲ್ಲಿ ಈ ಅಲೆಯನ್ನು ಮತ್ತೆ ಸಮುದ್ರದಲ್ಲಿ ಸೇರಿಸಿಬಿಡುವ ಉಪಾಯವನ್ನು ಹೇಳಿಕೊಟ್ಟಿರುತ್ತದೆ. ಪರಮಾತ್ಮನೇ ಆನಂದವು, ಅವನಿಗಿಂತ ಬೇರೆಯ ನಾನೆಂಬುದನ್ನಿಟ್ಟುಕೊಂಡಿರುವದೇ ದುಃಖವು. ಆದ್ದರಿಂದ **'ನಾನೆ'**ಂಬುದನ್ನು ಪರಮಾತ್ಮನಲ್ಲಿ ಐಕ್ಯಮಾಡಿಬಿಡುವ, ಪರಮಾತ್ಮ ನೊಬ್ಬನನ್ನೇ ಎಲ್ಲೆಲ್ಲಿಯೂ ಕಾಣುವ, ಸಾಧನವನ್ನು **'ಅಧ್ಯಾತ್ಮ ಸಾಧನ'** ಎಂದು ಕರೆಯುತ್ತಾರೆ. ಕಡಲಿಗಿಂತ ತೆರೆಯು ಬೇರೆ ಎಂಬ ಭ್ರಮೆಯನ್ನು ಬಿಟ್ಟು ಕಡಲಿನಲ್ಲಿ ತೆರೆಯನ್ನು ಮರೆಯುವಂತೆ, ಭಗವಂತನಿಗಿಂತ ನಾನು ಬೇರೆ ಎಂಬ ಭ್ರಮೆಯನ್ನು ಬಿಟ್ಟು ಭಗವಂತನಲ್ಲಿ ತನ್ನನ್ನೂ ಎಲ್ಲವನ್ನೂ ಮರೆಯುವದೇ ಎಲ್ಲ ಅಧ್ಯಾತ್ಮಸಾಧನಕ್ಕೂ ಹೆಗ್ಗುರಿಯಾಗಿರುತ್ತದೆ.

ನಾನೆಂಬ ಒಂದು ವ್ಯಕ್ತಿಯನ್ನು ಕಲ್ಪಿಸಿಕೊಂಡು ಅದನ್ನು ಬಿಡಲಾರದೆ ಜೀವನು ತೊಳಲುತ್ತಿರುತ್ತಾನೆ. ರಾಗ, ದ್ವೇಷ, ಲೋಭ, ಮೋಹ, ಮದ, ಮಾತ್ಸರ್ಯ- ಇವೆಲ್ಲ ಈ 'ನಾನು' ಎಂಬುದರ ಧರ್ಮಗಳಾಗಿರುತ್ತವೆ. 'ನಾನು' ಎಂಬುದು ಸ್ವತಂತ್ರವೆಂದು ಅರಿಯುವದೇ ಮೂರ್ಖತನವು, ನಾನು ನನ್ನದೆಂಬುದನ್ನು ಉಳಿಸಿಕೊಳ್ಳದಂತೆ ಎಲ್ಲವನ್ನೂ ಭಗವಂತನಿಗೆ ಅರ್ಪಿಸಿಬಿಡುವದೇ ಜಾಣತನವು.

ನನ್ನದೆಂಬುದನ್ನು ಮೊದಲು ಬಿಡಬೇಕು. ಕಟ್ಟಕಡೆಯಲ್ಲಿ ನಾನೆಂಬುದನ್ನೇ ಬಿಟ್ಟುಬಿಡಬೇಕು. ಭಗವಂತನೆ, ನಾನು ನಿನ್ನ ಕೈಯ ಸೂತ್ರದ ಗೊಂಬೆಯು. ನಾನು ಸ್ವತಂತ್ರವಾಗಿ ಏನನ್ನು ತಾನೆ ಮಾಡಲಾಪೆನು? ನೀನು ನನಗೆ ದಯಮಾಡಿಕೊಟ್ಟಿರುವ ಕರಣಕಳೇಬರಗಳಿಂದ ನಿನ್ನನ್ನು ನಾನು ಆರ್ಚಿಸಿದರೆ ಅದರಲ್ಲಿ ನನ್ನದೆಂಬುದೇನಿದೆ? - ಎಂದು ಚಿಂತಿಸಿಕೊಳ್ಳಿರಿ. ಇದೇ ಆತ್ಮನಿವೇದನೆಗೆ ಮೊದಲನೆಯ ಮೆಟ್ಟಿಲಾಗುವದು.

*****

# 42. ಮನಸ್ಸಿನ ಸಂಸ್ಕಾರ

ಮನಸ್ಸೆಂಬ ಶಬ್ದವನ್ನು ವೇದಾಂತಿಗಳು ಎರಡು ಅರ್ಥಗಳಲ್ಲಿ ಬಳಸುವರು. ಮನಸ್ಸೆಂದರೆ ಅಂತಃಕರಣವು, ಮನಸ್ಸೆಂದರೆ ಅದರ ವೃತ್ತಿಯೂ ಆಗುವದು. ಸಂದರ್ಭವನ್ನು ನೋಡಿ ಯಾವ ಅರ್ಥದಲ್ಲಿ ಈ ಮಾತನ್ನು ಉಪಯೋಗಿಸಿದೆ ಎಂಬುದನ್ನು ಗೊತ್ತುಮಾಡಬೇಕಾಗುತ್ತದೆ.

ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ- ಇವುಗಳಲ್ಲಿ ಕೆಲಸಮಾಡುವ ಇಂದ್ರಿಯಗಳು **ಬಹಿಃಕರಣಗಳು,** ಏಕೆಂದರೆ ಇವು ಹೊರಗಿನ ವಿಷಯಗಳನ್ನು ಎಂದರೆ ರೂಪ, ಶಬ್ದ, ವಾಸನೆ, ಸವಿ, ಸೋಂಕು- ಇವುಗಳನ್ನು ಮಾತ್ರ ಅರಿಯುವದಕ್ಕೆ ಸಾಧನವಾಗಿವೆ. ಆದರೆ ಇವುಗಳು ಹೊರಗಿನ ವಿಷಯಗಳನ್ನು ಅರಿಯಬೇಕಾದರೆ ವಿಷಯಕ್ಕೂ ಇವಕ್ಕೂ ಸಂಬಂಧವಾಗಬೇಕು; ಜೊತೆಗೆ ಒಳಗಿನ ಕರಣವಾದ ಮನಸ್ಸಿನ (ಅಂತಃಕರಣದ) ನೆರವೂ ಬೇಕು. ಮನಸ್ಸಿನ ಸಹಾಯವಿಲ್ಲದೆ ಅವು ವಿಷಯವನ್ನು ಅರಿಯಲೇ ಆರವು.

ಮನಸ್ಸಿಗೆ **ಅಂತಃಕರಣವೆಂಬ** ಹೆಸರು ಬಂದಿರುವದು ಅದು ನಮ್ಮ ಒಳಗೆ ಇದೆ- ಎಂಬ ಕಾರಣವೊಂದರಿಂದಲೇ ಅಲ್ಲ, ಒಳಗೆ ಇರುವ ತತ್ತ್ವಗಳನ್ನು ಅರಿಯುವದಕ್ಕೂ ಅದೇ ಬೇಕಾಗಿದೆ. ಉದಾಹರಣೆಗೆ ನಮಗೆ ಮನಸ್ಸು ಇದೆ; ಅದರಲ್ಲಿ ಆಸೆ, ಸಿಟ್ಟು ಮುಂತಾದವುಗಳು ಆಗುತ್ತಿರುತ್ತವೆ- ಎಂಬುದನ್ನು ತಿಳಿಯುವದೂ ಮನಸ್ಸೇ, ಬೇರೆ ಯಾವ ಕರಣವೂ ಅಲ್ಲ. ಆದ್ದರಿಂದಲೂ ಅದಕ್ಕೆ **ಅಂತಃಕರಣವೆಂಬ** ಹೆಸರು ಬಂದಿರುತ್ತದೆ.

ಯಾರು ಹೊರಗಿನ ವಿಷಯಗಳನ್ನು ನೋಡುವದರಲ್ಲಿಯೇ ತಮ್ಮ ಜೀವನ ವನ್ನೆಲ್ಲ ವಿನಿಯೋಗಿಸುತ್ತಿರುವರೋ ಅವರಿಗೆ **ಬಹಿರ್ಮುಖರು** ಎಂದು ಹೆಸರು. ಅಂಥವರಿಗೆ ಒಳಗಿನ ಮನಸ್ಸನ್ನು ಪರೀಕ್ಷಿಸುವದಕ್ಕಾಗಲಿ, ಅದನ್ನು ಸರಿಪಡಿಸಿ ಕೊಳ್ಳುವದಕ್ಕಾಗಲಿ ಬಿಡುವೇ ಇರುವದಿಲ್ಲ, ಯಾರು ತಮ್ಮ ಒಳಗೆ ಇರುವ ಮನಸ್ಸನ್ನೇ ಪರೀಕ್ಷಿಸುವದಕ್ಕೆ ಹೊರಟಿರುವರೋ ಅವರು **ಅಂತರ್ಮುಖಿಗಳು.**

ಅಂತಃಕರಣದಲ್ಲಿ ಮನಸ್ಸೆಂಬ ವೃತ್ತಿಯೊಂದು ಇರುವದು. ಮನಸ್ಸು ಯಾವಾಗಲೂ ಕೆಲಸಮಾಡುತ್ತಲೇ ಇರುವದು. ಅದರ ವ್ಯಾಪಾರವು ನಿಲ್ಲುವ

ಹಾಗೆಯೇ ಇಲ್ಲ, ಹೊರಗಿನ ವಿಷಯಗಳಿಂದ ಅದರಲ್ಲಿ ಯಾವದಾದರೊಂದು ಪ್ರತಿಕ್ರಿಯೆ ನಡೆಯುತ್ತಲೇ ಇರುತ್ತದೆ. ಇದರಿಂದ ಅಂತಃಕರಣದಲ್ಲಿ ಆಯಾ ವಿಷಯಗಳ ವಾಸನೆಯು ನಿಂತುಕೊಳ್ಳುತ್ತದೆ. ಇದಕ್ಕೆ **ಸಂಸ್ಕಾರ**ವೆಂದು ಹೆಸರು. ವಿವೇಕಿಯಾದವನು ಹಿಂದಿನ ಸಂಸ್ಕಾರವು ಕೆಟ್ಟದ್ದಾದರೆ ಅದನ್ನು ತೆಗೆದುಹಾಕಿ ಒಳ್ಳೆಯ ಸಂಸ್ಕಾರವನ್ನುಂಟು ಮಾಡುವದಕ್ಕೆ ಯತ್ನಿಸಬೇಕು. ಹೀಗೆ ಪ್ರಯತ್ನಮಾಡುವದನ್ನೇ **ಮನಸ್ಸಿನ ಸಂಸ್ಕಾರ**ವೆಂದು ನಾವು ಕರೆದಿರುವೆವು.

*****

# 43. ಮನಸ್ಸಿನಿಂದ ಹೆಚ್ಚಿನ ಲಾಭವನ್ನು ಪಡೆಯುವ ಉಪಾಯ[1]

"ಮನಸ್ಸೇ ಮನುಷ್ಯರ ಬಂಧಕ್ಕೂ ಮೋಕ್ಷಕ್ಕೂ ಕಾರಣವಾಗಿರುತ್ತದೆ" ಎಂದು ಶಾಸ್ತ್ರವು ಸಾರುತ್ತದೆ; ಆದ್ದರಿಂದ ವಿವೇಕಿಗಳಾದವರು ತಮ್ಮ ಮನಸ್ಸಿನ ಸಂಸ್ಕಾರವು ಹೇಗಿದೆ ಎಂಬುದನ್ನು ತಿಳಿದುಕೊಂಡು ಅದನ್ನು ಸರಿಯಾದ ಕ್ರಮದಿಂದ ತಿದ್ದಿಕೊಳ್ಳುವ ಪ್ರಯತ್ನವನ್ನು ಮಾಡಬೇಕು. ಮನಸ್ಸಿನ ಸ್ವಭಾವವನ್ನು ಅರಿತುಕೊಂಡು ಅದನ್ನು ಉತ್ತಮರೀತಿಯಿಂದ ಉಪಯೋಗಿಸಿದರೆ ಅದರಿಂದ ಆದಷ್ಟು ಹೆಚ್ಚಿನ ಲಾಭವನ್ನು ಪಡೆದುಕೊಳ್ಳಬಹುದು.

ಮನಸ್ಸು ಸಾಮಾನ್ಯವಾಗಿ ವ್ಯಷ್ಟಿಬುದ್ಧಿಯನ್ನೇ ಉಂಟುಮಾಡುತ್ತಿರುವದೆಂದೂ ಇದರಿಂದ ಅದರಲ್ಲಿ ಕಾಮಕ್ರೋಧಾದಿಗಳು ಬೆಳೆದುಕೊಳ್ಳುವವೆಂದೂ ನಮ್ಮೆಲ್ಲರ ಅನುಭವದಲ್ಲಿಯೇ ಇದೆ. ಆದರೆ ಮನಸ್ಸು ಯಾವಾಗಲೂ ಹೀಗೆಯೇ ಇರುವದಿಲ್ಲ, ಅದನ್ನು ಸಮಷ್ಟಿಬುದ್ಧಿಯನ್ನುಂಟುಮಾಡುವ ಕರಣವಾಗಿ ಮಾರ್ಪಡಿಸಿಕೊಳ್ಳುವದಕ್ಕೂ

1. ಶ್ರೀಶ್ರೀಗಳವರು ತಾ|| 24-10-43ರಲ್ಲಿ ಹೊಳೇನರಸೀಪುರದಲ್ಲಿರುವ ಪಟ್ಟಾಭಿ ರಾಮಸ್ವಾಮಿದೇವಸ್ಥಾನದಲ್ಲಿ ಮಾಡಿದ ಉಪನ್ಯಾಸದ ಸಾರ.

ಬರುತ್ತದೆ. ಆಗ ನಮಗೆ ಅದರಿಂದ ಹೆಚ್ಚಿನ ಲಾಭವೂ ಆಗುತ್ತದೆ. ಒಂದೇ ಕತ್ತಿಯನ್ನು ಹೇಗೆ ಶತ್ರುವನ್ನು ಸಂಹರಿಸುವದಕ್ಕೂ ಆತ್ಮಹತ್ಯೆಗೂ ಉಪಯೋಗಿಸಿಕೊಳ್ಳಬಹುದೋ, ಒಂದೇ ಬೆಂಕಿಯನ್ನು ಹೇಗೆ ಪಾಕಾದಿಗಳಿಗೆ ಉಪಯೋಗಿಸಿಕೊಂಡು ಲಾಭವನ್ನು ಪಡೆಯುವಂತೆ ನಮ್ಮ ಮನೆಗೆ ಬೆಂಕಿಹೊತ್ತಿಸಿಕೊಂಡು ನಷ್ಟವನ್ನೂ ಅನುಭವಿಸ ಬಹುದೋ ಹಾಗೆಯೇ ಮನಸ್ಸನ್ನೂ ನಮ್ಮ ಶ್ರೇಯಸ್ಸಿಗೂ ಉಪಯೋಗಿಸಿ ಕೊಳ್ಳಬಹುದು, ನಮ್ಮ ಅನರ್ಥಗಳಿಗೆಲ್ಲ ಕಾರಣವಾಗಿಯೂ ಮಾಡಿಕೊಳ್ಳಬಹುದು. ಆದ್ದರಿಂದ ಮನಸ್ಸು ತನ್ನಷ್ಟಕ್ಕೆ ತಾನು ಒಳ್ಳೆಯದೆಂದಾಗಲಿ, ಕೆಟ್ಟದೆಂದಾಗಲಿ ಹೇಳುವದಕ್ಕೆ ಬರುವದಿಲ್ಲ, ಅದನ್ನು ಒಳ್ಳೆಯ ಫಲವಾಗುವಂತೆ ಉಪಯೋಗಿಸಿ ಕೊಂಡರೆ ಒಳ್ಳೆಯ ಸಾಧನವಾಗುತ್ತದೆ. ಕೆಟ್ಟ ಫಲವಾಗುವಂತೆ ಉಪಯೋಗಿಸಿಕೊಂಡರೆ ಕೆಟ್ಟ ಸಾಧನವಾಗುತ್ತದೆ, ಅಷ್ಟೆ.

ಮನಸ್ಸು ಉತ್ತಮಫಲವನ್ನು ಕೊಡುವಂತೆ ಅದನ್ನು ಉಪಯೋಗಿಸುವದು ಹೇಗೆ?- ಎಂಬುದನ್ನು ಶಾಸ್ತ್ರದಲ್ಲಿ ಹೇಳಿರುತ್ತದೆ. ನಾವುಗಳು ಮನಸ್ಸನ್ನು ಶಾಸ್ತ್ರವಿಧಿಗೆ ಕಟ್ಟುಬೀಳುವಂತೆ ತಿದ್ದಿಕೊಳ್ಳುತ್ತಾಬಂದರೆ ನಾವು ಮಾಡುವ ಕರ್ಮವು **ಧರ್ಮ** ವೆನಿಸುತ್ತದೆ; ಶಾಸ್ತ್ರದಲ್ಲಿ ನಿಷೇಧಮಾಡಿರುವ ಕೆಲಸಗಳನ್ನು ಮಾಡುವದಕ್ಕೆ ಮನಸ್ಸನ್ನು ಬಿಟ್ಟರೆ ಆಗ ನಾವು ಮಾಡುವ ಕರ್ಮವು **ಅಧರ್ಮ**ವೆನಿಸುತ್ತದೆ. ಧರ್ಮದಿಂದ ಪುಣ್ಯವೂ ಅಧರ್ಮದಿಂದ ಪಾಪವೂ ಆಗುವವೆಂದು ಶಾಸ್ತ್ರವು ಹೇಳುತ್ತದೆಯಷ್ಟೆ. ಪುಣ್ಯಪಾಪಗಳು ಕಣ್ಣಿಗೆ ಕಾಣಿಸುವುದಿಲ್ಲವಾದರೂ ನಾವು ಮಾಡುವ ಧರ್ಮಾ ಧರ್ಮಗಳು ನಮಗೇ ತಿಳಿಯಬರುತ್ತವೆ. ಧರ್ಮ, ಅಧರ್ಮ- ಇವುಗಳೆರಡೂ ಕರ್ಮವೇ ಆಗಿರುತ್ತವೆ. ಅವು ಎರಡು ಬೇರೆ ಬೇರೆ ಪದಾರ್ಥಗಳಲ್ಲ; ಒಂದೇ ಕರ್ಮವೇ ಬೇರೆ ಬೇರೆಯ ದೃಷ್ಟಿಯಿಂದ ಧರ್ಮವೆಂದೂ ಅಧರ್ಮವೆಂದೂ ಹೆಸರುಗಳನ್ನು ಪಡೆಯುತ್ತದೆ. ಧ್ವನಿಯು ಬೇರೆ ಬೇರೆ ಅಂತಸ್ತಿನಲ್ಲಿ ಬೇರೆ ಬೇರೆಯ ಸ್ವರವೆನಿಸು ವಂತೆಯೂ, ಒಂದೇ ವಸ್ತುವು ಬೇರೆಬೇರೆಯ ಮಾರ್ಪಾಡುಗಳಿಂದ ಬೇರೆ ಬೇರೆ ರೂಪಗಳನ್ನರಿತು ಬೇರೆ ಬೇರೆಯ ಹೆಸರುಗಳನ್ನು ಪಡೆಯುವಂತೆಯೂ ನಮ್ಮ ಕರ್ಮವೇ ಧರ್ಮವೆಂದೂ ಅಧರ್ಮವೆಂದೂ ಭಿನ್ನರೂಪಗಳನ್ನು ಪಡೆಯುತ್ತಿರುತ್ತದೆ.

ಮನಸ್ಸಿಗೆ ಸಮಷ್ಟಿಬುದ್ಧಿಯಲ್ಲಿ ಸವಿ ಹತ್ತಬೇಕಾದರೆ, ಅದು ಶಾಸ್ತ್ರವಿಹಿತವಾದ

ಕರ್ಮಗಳನ್ನು ಮಾಡಿ ಧಾರ್ಮಿಕಮನಸ್ಸನ್ನಿಸಿಕೊಳ್ಳಬೇಕಾದರೆ, ನಾವು ಏನು ಮಾಡಬೇಕು? ಸಮಷ್ಟಿಬುದ್ಧಿಯ ಕಡೆಗೆ ಲಕ್ಷ್ಯಕೊಡಬೇಕೆಂಬುದೇನೋ ಸರಿ; ಆದರೆ ಆ ಬುದ್ಧಿಯನ್ನು ರಕ್ಷಿಸಿಕೊಳ್ಳುವದಕ್ಕೆ ಯಾವ ಯಾವ ಮೆಟ್ಟಿಲಿನ ಸಾಧನಗಳನ್ನು ಮಾಡಬೇಕು?-ಎಂಬ ವಿಷಯಕ್ಕೆ ಶಾಸ್ತ್ರದಲ್ಲಿ ಕೆಲವು ಉಪದೇಶಗಳಿರುತ್ತವೆ. ಮನಸ್ಸೆಂಬುದು ಒಂದು ಅಮೂಲ್ಯವಾದ ರತ್ನವಿದ್ದಂತೆ ಇದೆ. ರತ್ನವನ್ನು ಮೀನುಗಳನ್ನು ಹೊಡೆಯುವದಕ್ಕೆ ಉಪಯೋಗಿಸುವ ಗಾಂಪರಂತೆ, ನಾವು ಅದನ್ನು ವಿಷಯಗಳ ಕಡೆಗೇ ಬಿಡುತ್ತಿರುವೆವು. ಅದನ್ನು ಮೆಲ್ಲಮೆಲ್ಲಗೆ ವಿಷಯಗಳ ಸಂಗದಿಂದ ಹಿಂತಿರುಗಿಸಿ ಭಗವಂತನಲ್ಲಿಯೇ ರತವಾಗುವಂತೆ ಮಾಡಬೇಕು. ಆಗಲೇ ಅದರಿಂದ ನಮಗೆ ಆಗಬೇಕಾದ ಸುಖಶಾಂತಿಗಳು ದೊರಕುವವು- ಎಂದು ಶಾಸ್ತ್ರಕಾರರು ಹೇಳುತ್ತಾರೆ.

ಮನಸ್ಸು ಬಹು ಸೂಕ್ಷ್ಮವಾಗಿರುವದು. ಅದು ಅನೇಕರಿಗೆ ಹತೋಟಿಗೆ ಸಿಕ್ಕುವದೇ ಇಲ್ಲ. ಆದ್ದರಿಂದ ಮೊದಲು ಅದರ ತೀರ ಸ್ಥೂಲವಾದ ಕೊನೆಯನ್ನು ಹಿಡಿದುಕೊಳ್ಳಬೇಕು. ಮನಸ್ಸಿಗೆ ಇಂದ್ರಿಯಗಳೇ ಸ್ಥೂಲವಾದ ಕೊನೆಗಳು. ಈ ಇಂದ್ರಿಯಗಳನ್ನು ನಾವು ವಶಪಡಿಸಿಕೊಳ್ಳುವದಕ್ಕೆ ಮೊದಲುಮಾಡುವದರಿಂದ ಕ್ರಮ ಕ್ರಮವಾಗಿ ಮನಸ್ಸೂ ಪಳಗುವದು. ನಾವು ಹೇಳಿದಂತೆ ಧರ್ಮಮಾರ್ಗವನ್ನು ಅವಲಂಬಿಸುವದು, ಜೀವನವನ್ನು ಆನಂದಮಯವಾಗಿ ಮಾಡುವದು.

*****

## 44. ಇಂದ್ರಿಯಗಳ ಸ್ವಭಾವ [1]

ಮನಸ್ಸನ್ನು ತಿದ್ದಿಕೊಳ್ಳುವದಕ್ಕೆ ಇಂದ್ರಿಯಗಳಿಂದಲೇ ಮೊದಲುಮಾಡಬೇಕಷ್ಟೆ. ಆದರೆ ಇಂದ್ರಿಯಗಳನ್ನು ವಶಗೊಳಿಸಿಕೊಳ್ಳುವದು ಹೇಗೆ? ಇಂದ್ರಿಯಗಳು ಕೆಲವು ವೇಳೆ ಮಾಡಬಾರದ್ದನ್ನು ಮಾಡುವಂತೆ ನಮ್ಮನ್ನು ಎಳೆದುಕೊಂಡು ಹೋಗಿಬಿಡುತ್ತವೆ; ಮಾಡಬೇಕಾದದ್ದನ್ನು ಮಾಡದಂತೆ ಅಡ್ಡಿಹಾಕುತ್ತವೆ. ಒಂದೊಂದು ಇಂದ್ರಿಯಕ್ಕೂ ತನ್ನ ತನ್ನ ವಿಷಯಗಳಲ್ಲಿ ರಾಗವಾಗಲಿ ದ್ವೇಷವಾಗಲಿ ಆಗಿಯೇತೀರುವವು. ಆಗ ನಾವು

---

**1.** ತಾ|| 7-11-1943ರಲ್ಲಿ ಶ್ರೀಶ್ರೀಗಳವರು ಮಾಡಿದ ಉಪನ್ಯಾಸದ ಸಾರ.

ಅವುಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವದಕ್ಕೆ ಆದೀತೆ? ಚೆನ್ನಾಗಿ ಪಳಗದೆ ಇರುವ ತುಂಟ ಕುದುರೆಗಳನ್ನು ಗಾಡಿಗೆ ಕಟ್ಟಿದರೆ ಅವು ಅದನ್ನು ಕಂಡಕಡೆಗೆ ಎಳೆದುಕೊಂಡು ಹೋಗಿ ಕೊರಕಲಿಗೆ ಎಳೆಯದೆ ಇದ್ದಾವೆ? ಎಂಬ ಶಂಕೆಯೊಂದು ನಮ್ಮಲ್ಲಿ ತೋರಿ ಕೊಳ್ಳುವದು ಸಹಜವಾಗಿದೆ.

ಆದರೆ ಇಂದ್ರಿಯಗಳ ಸ್ವಭಾವವೇನು? ಅವು ಸ್ವಭಾವದಿಂದಲೇ ಕೆಟ್ಟವುಗಳೇ? ಅವುಗಳಲ್ಲಿ ವಿಷಯಗಳ ಕಾಮವೆಂಬುದು ಸ್ವಾಭಾವಿಕವಾಗಿರುವದೊ, ಕಾರಣಾಂತರ ದಿಂದ ಅವುಗಳಲ್ಲಿ ಅಂಟಿಕೊಳ್ಳುವದೊ?- ಇದನ್ನು ನಾವು ವಿಚಾರಮಾಡಬೇಕು. **ಸ್ವಭಾವ** ಎಂಬ ಮಾತಿಗೆ ಸ್ವರೂಪವೆಂದೂ ಸ್ವಧರ್ಮವೆಂದೂ ಅರ್ಥವಾಗುತ್ತದೆ. ಇಂದ್ರಿಯಗಳ ಸ್ವರೂಪವೇ ಕಾಮದಿಂದೊಡಗೂಡಿರುವದಾದರೆ ಅವುಗಳನ್ನು ನಾವು ಎಂದಿಗೂ ಗೆಲ್ಲುವದಕ್ಕೆ ಆಗಲಾರದು. ಕಲ್ಲಿನ ಸ್ವರೂಪವೇ ಗಟ್ಟಿಯಾಗಿರುತ್ತದೆ; ಗಟ್ಟಿ ಯಾದ ಕಲ್ಲಿನ ಸ್ವರೂಪವನ್ನು ಮೆದುವಾದ ಮೇಣದ ಸ್ವರೂಪವಾಗಿಸುವದಕ್ಕೆ ಎಂದಿಗೂ ಆಗಲಾರದು. ಸ್ವರೂಪವು ಹೋದರೆ ವಸ್ತುವಿನ ನಾಶವೇ ಆಗಿಬಿಡುತ್ತದೆ.

ಇಂದ್ರಿಯಗಳನ್ನು ನಿಗ್ರಹಿಸುವದು ಕಷ್ಟವೆಂಬುದನ್ನು ಎಲ್ಲರೂ ಒಪ್ಪಬೇಕು. ಕಾಡುಮೇಡಿನಲ್ಲಿ ಅಲೆಯುತ್ತಾ ನೀರು, ಗಾಳಿ, ತರಗೆಲೆ-ಮುಂತಾದವುಗಳನ್ನು ಮಾತ್ರ ಆಹಾರಕ್ಕೆ ಉಪಯೋಗಿಸುತ್ತಾ ಕಾಷ್ಠ ತಪಸ್ಸುಮಾಡುತ್ತಿದ್ದ ಮುನಿಗಳು ಕೂಡ ಮನಸ್ಸ ನ್ನೆಳೆಯುವ ವಿಷಯವು ಕಾಣಿಸಿಕೊಂಡಕೂಡಲೆ ಕಾಮಪರವಶರಾದರೆಂದು ಪುರಾಣ ಗಳಲ್ಲಿ ವರ್ಣಿಸಿರುತ್ತದೆ. ಆದರೆ ಅದೇ ಪುರಾಣಗಳಲ್ಲಿ ಅವರು ಕೊನೆಗೂ ಇಂದ್ರಿಯ ಗ್ರಾಮವನ್ನು ಉಪಾಯದಿಂದ ಗೆದ್ದುಕೊಂಡರೆಂದೇ ಹೇಳಿರುತ್ತದೆಯಲ್ಲವೆ? ಮನುಷ್ಯ ನಿಗಾಗಿಯೇ ಶಾಸ್ತ್ರವನ್ನು ಹೇಳಿರುತ್ತಾರೆಯೇ ಹೊರತು ಪಶುಗಳಿಗಾಗಲಿ ಮೃಗಪಕ್ಷಿ ಗಳಿಗಾಗಲಿ ಅಲ್ಲ. ಮನುಷ್ಯನು ಇಂದ್ರಿಯಗಳನ್ನು ಕಡೆಗೂ ತನ್ನ ಹಿಡಿತಕ್ಕೆ ತಂದು ಕೊಳ್ಳಲೇ ಆರನೆಂದರೆ ಆಗ ನಿಷೇಧಶಾಸ್ತ್ರಗಳಿಗೆ ಬೆಲೆ ಇಲ್ಲದೆ ಹೋಗುತ್ತದೆ. ಮನುಷ್ಯ ನಿಗೆ ಇಂದ್ರಿಯಗಳ ತೃಪ್ತಿಯನ್ನು ಮಾಡಿಕೊಳ್ಳುವದೇ ಸರಿಯೆಂದಾಗುತ್ತದೆ. ಸ್ವೇಚ್ಛಾ ವಿಹಾರವೇ ಯುಕ್ತವಾದದ್ದೆಂಬುದನ್ನು ಬಲ್ಲವರು ಯಾರೂ ಒಪ್ಪುವದಿಲ್ಲ. ಆದ್ದರಿಂದ ಇಂದ್ರಿಯ ಗಳಿಗೆ ರಾಗದ್ವೇಷಗಳಿಂದೊಡಗೂಡಿರುವದೇ ಸ್ವಭಾವ ಎನ್ನುವದು ಸರಿಯಾಗಲಾರದು.

ಇಂದ್ರಿಯಗಳು ಸಹಜ ಸ್ಥಿತಿಯಲ್ಲಿ ಹೇಗಿರುತ್ತವೆ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕಾದರೆ ಮಕ್ಕಳನ್ನೂ ನಾಗರಿಕತೆಯಿಲ್ಲದ ಸಾಮಾನ್ಯಜನರನ್ನೂ ನೋಡ ಬೇಕು. ಆಗ ಅವರ ಇಂದ್ರಿಯಗಳು ಅಷ್ಟು ಉಲ್ಬಣವಾಗಿರುವದಿಲ್ಲ, ಅವು ವಿಷಯ ಗಳಿಲ್ಲದಿದ್ದರೂ ಎದ್ದೆದ್ದು ಕುಣಿಯುತ್ತಿರುವದಿಲ್ಲ. ಪ್ರಾಣಿಗಳಿಗೆ ಹೇಗೆ ಸ್ವಾಭಾವಿಕವಾದ ಹಸಿವು ನೀರಡಿಕೆ ಮುಂತಾದ ಭಾವಗಳುಂಟಾಗುತ್ತಿರುವವೋ ಹಾಗೆಯೇ ಸಹಜ ಸ್ಥಿತಿಯಲ್ಲಿರುವ ಮನುಷ್ಯನಿಗೂ ಇಂದ್ರಿಯಗಳ ವ್ಯಾಪಾರವು ಮಿತವಾಗಿ ಕ್ಲಿಪ್ತಕಾಲದಲ್ಲಿ ತಮ್ಮ ತಮ್ಮ ವಿಷಯಗಳನ್ನು ಸ್ವೀಕರಿಸುವಷ್ಟು ಮಾತ್ರ ಇರುತ್ತದೆ. ''ಪ್ರತ್ಯಕ್ಷಜ್ಞಾನ'' ವೆಂದರೆ ತಮ್ಮ ತಮ್ಮ ವಿಷಯಗಳು ಎದುರಿಗೆ ಬಂದಾಗ ಅದಕ್ಕನುಗುಣವಾಗಿ ಇಂದ್ರಿಯ ಗಳಲ್ಲಿ ಆಗುವ 'ಸ್ಪಂದವಿಶೇಷ'ವು ಎಂದು ಒಬ್ಬ ಪಾಶ್ಚ್ಯಾತ್ಯ ತತ್ತ್ವವಿಚಾರಕನು ಹೇಳಿರುತ್ತಾನೆ. ಇದರಲ್ಲಿ ಒಂದು ಹೆಚ್ಚಿನ ನಿಜಾಂಶವಿದೆ. ನಮ್ಮ ಇಂದ್ರಿಯಗಳು ಹೊರಗಿನ ಪೃಥಿವಿ, ಅಪ್ಪು, ತೇಜಸ್ಸು, ವಾಯು, ಆಕಾಶ- ಎಂಬ ಐದು ಭೂತ ಗಳಿಂದ ಆಗಿರುವ ಪ್ರಪಂಚವನ್ನು ಗ್ರಹಿಸುವದಕ್ಕಾಗಿ ನಮ್ಮಲ್ಲಿ ಏರ್ಪಟ್ಟಿರುತ್ತವೆ. ಇವುಗಳೂ ಪೃಥಿವಿಯೇ ಮುಂತಾದ ಭೂತಗಳು ಸೂಕ್ಷ್ಮಾಂಶದಿಂದಲೇ ಆಗಿರುತ್ತವೆ. ಆದ್ದರಿಂದ ತಮ್ಮ ಸಜಾತಿಯವಾದ ವಿಷಯವು ಹೊರಗೆ ಇರುವಾಗ ವಸ್ತುವಿನ ಪಡಿನೆಳಲನ್ನು ಕೊಡುವ ಕನ್ನಡಿಯಂತೆ ಇವು ವರ್ತಿಸುತ್ತವೆ. ಕನ್ನಡಿಯ ದೃಷ್ಟಾಂತದಲ್ಲಿ ಕನ್ನಡಿಯು ತಾನು ಇದ್ದಂತೆಯೇ ಇದ್ದು ಪ್ರತಿಬಿಂಬವನ್ನು ಹೊಳೆಯಿಸುತ್ತದೆ; ಆದರೆ ಇಂದ್ರಿಯಗಳು ಜೀವಂತಕನ್ನಡಿಯಂತೆ ಇರುತ್ತವೆ. ವಿಷಯಗಳು ತಮ್ಮೆದುರಿಗೆ ಬರುತ್ತಲೂ ಅವುಗಳ ಒಳರಚನೆಯಲ್ಲಿರುವ ಜೀವಾಣುಗಳೆಲ್ಲವೂ ಸ್ಪಂದವಾಗಿ ಬಿಡುತ್ತವೆ!- ಇವೇ ಅವುಗಳ ಸಹಜವಾದ ಸ್ಥಿತಿ. ಅಗ್ನಿಯೇ ಮುಂತಾದ ದೇವತೆಗಳು ವಾಗಿಂದ್ರಿಯವೇ ಮುಂತಾದವುಗಳಾಗಿ ಮನುಷ್ಯರಲ್ಲಿ ಒಳಹೊಕ್ಕಿರುವರೆಂದು **ಉಪನಿಷತ್ತಿನಲ್ಲಿ** ಹೇಳಿರುವದಕ್ಕೆ ಇದೇ ಅಭಿಪ್ರಾಯ.

ಇಂದ್ರಿಯಗಳಿಗೆ ಹಸಿವಾದಾಗ ಅವುಗಳಿಗೆ ವಿಷಯವನ್ನು ಆಹಾರವಾಗಿ ಕೊಡುವದು ಸರಿಯೇ ಆಗಿರುತ್ತದೆ. ಆದರೆ ಮಕ್ಕಳಿಗೆ ತುಷ್ಟಿಯೂ ಪುಷ್ಟಿಯೂ ಆಗುವ ಆಹಾರವನ್ನು ಕೊಡುವದನ್ನು ಬಿಟ್ಟು ಸದ್ಯಕ್ಕೆ ಸರಿಯಾಗಿ ತೋರುವ ಮಿಠಾಯಿಯೇ ಮುಂತಾದವನ್ನು ಕೊಟ್ಟು ಅವುಗಳ ಆರೋಗ್ಯವನ್ನು ಕೆಡಿಸುವ ಹೆಡ್ಡತಾಯಿಯರಂತೆ ನಾವೂ ಇಂದ್ರಿಯಗಳಿಗೆ ಉತ್ತಮವಾದ ವಿಷಯಗಳನ್ನು ಕಾಲ

ಕಾಲಕ್ಕೆ ಕೊಡುವದನ್ನು ಬಿಟ್ಟು ಹಿತವಿಲ್ಲದ ಮಿತವಿಲ್ಲದ ಭೋಗ್ಯವಸ್ತುಗಳನ್ನು ಅವುಗಳಿಗೆ ಕೊಟ್ಟು ಕೆಡಿಸುತ್ತಿರುವೆವು. ಮಕ್ಕಳಿಗೆ ನಿದ್ರೆ ಬರುತ್ತಿದ್ದರೂ ತಟ್ಟಿ ಎಬ್ಬಿಸಿ ಅನಾರೋಗ್ಯವಾದ ಭಕ್ಷ್ಯವನ್ನು ಕೊಡುವ ಅವಿವೇಕಿ ತಾಯಿಯಂತೆ, ನಾವು ನಮ್ಮ ಇಂದ್ರಿಯಗಳಿಗೆ ವಿಶ್ರಾಂತಿ ಬೇಕಾಗಿರುವಾಗಲೂ ಅವು ಸವಿಯಬಾರದ ವಿಷಯಗಳನ್ನು ಅವಕ್ಕೆ ಕೊಟ್ಟು ಅವುಗಳ ಸಹಜಸ್ಥಿತಿಯನ್ನು ಮಾರ್ಪಡಿಸುವೆವು. ಇದರಿಂದಲೇ ಅರ್ಥಗಳು ತಮ್ಮ ಸ್ವಾಭಾವಿಕವಾದ ಸ್ಥಿತಿಯಿಂದ ಜಾರಿ ಕಾಮಕ್ರೋಧಾದಿಗಳಿಗೆಡೆಯನ್ನುಂಟು ಮಾಡುವ ವಿಷಯಗಳ ಕಡೆಗೇ ಜೋಲುಬೀಳುವ ಚಟವನ್ನು ಕಲಿತುಕೊಂಡು ಬಿಡುವವು.

ಇಂದ್ರಿಯಗಳನ್ನು ನಮಗೆ ಪರಮೇಶ್ವರನು ನಮ್ಮ ಶ್ರೇಯಸ್ಸಿಗೆಂದೇ ಕೊಟ್ಟಿರುತ್ತಾನೆ. ರಾಗದ್ವೇಷಗಳು ಹೆಚ್ಚಿಸದೆ ವಿಷಯಗಳನ್ನು ಸೇವಿಸುವಂತೆಯೂ ಅವುಗಳನ್ನು ಮಾಡುವದಕ್ಕೆ ಉಪಾಯವುಂಟು. ಆ ಮಾರ್ಗವನ್ನು ಶಾಸ್ತ್ರದಲ್ಲಿ ಹೇಳಿಯೂ ಇರುತ್ತದೆ. ಸರಿಯಾಗಿ ಕರ್ಮವನ್ನು ಮಾಡಿದವರಿಗೆ ಅವರ ಕರ್ಮಗಳು ಅದೃಷ್ಟ ರೂಪದಿಂದ ಅವರನ್ನು "ಬನ್ನಿರಿ ಬನ್ನಿರಿ!" ಎಂದು ಆದರದಿಂದ ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತವೆ- ಎಂದು ಶಾಸ್ತ್ರದಲ್ಲಿದೆ. ಸರಿಯಾಗಿ ನಡೆಯಿಸಿಕೊಂಡ ಇಂದ್ರಿಯಗಳೂ ಹಾಗೆಯೇ. ಅವು ನಮ್ಮ ಜೀವನಪಥವನ್ನು ಅತ್ಯಂತಸುಖವಾಗಿ ಮಾಡಿ ಇಹದಲ್ಲಿ ಸುಖವನ್ನೂ ಪರದಲ್ಲಿ ಗತಿಯನ್ನೂ ಕೊಡುತ್ತವೆ. ಆದರೆ ಅವುಗಳನ್ನು ಅಸ್ವಾಭಾವಿಕರೀತಿಯಿಂದ ಸಾಕಿದರೆ ಕುಲಕ್ಕೆ ಮೃತ್ಯುವಾಗುವ ಕೊಡಲಿಯ ಕಾವಿನಂತೆ ನಮ್ಮನ್ನು ಇಹಪರಗಳೆರಡರಿಂದಲೂ ವಂಚಿಸಿ ಮೃತ್ಯುವಿಗೆ ಸೆರೆಕೊಟ್ಟು ಬಿಡುವವು.

*****

# 45. ದೇವಸ್ಥಾನಗಳಲ್ಲಿ ಹೇಗೆ ನಡೆದುಕೊಳ್ಳಬೇಕು?[1]

**1.** ದೇವಸ್ಥಾನವು ಪವಿತ್ರಸ್ಥಾನವೆಂಬುದನ್ನು ಮನಸ್ಸಿನಲ್ಲಿಟ್ಟಿರಬೇಕು. ಸ್ಥಲ ಮಾಹಾತ್ಮ್ಯ, ಕ್ಷೇತ್ರದ ಜಾಗರೂಕತೆ, ಇವುಗಳೇ ಅಲ್ಲದೆ ಅರ್ಚಕರುಗಳ ತಪೋಬಲವೂ ಅದರ ಪಾವಿತ್ರ್ಯಕ್ಕೆ ಕಾರಣವಾಗಿರುತ್ತದೆ.

---

**1.** *Tirumalai Tirupathi Devasthanams* ಎಂಬ ಮಾಸಪತ್ರಿಕೆಯ ಆಧಾರದಿಂದ ಬರೆದದ್ದು.

**2.** ದೇವಸ್ಥಾನಗಳಲ್ಲಿರುವಾಗ ಪೂರ್ವಾಚಾರಗಳನ್ನೂ ಸ್ಥಲಸಂಪ್ರದಾಯಗಳನ್ನೂ ಗೌರವಿಸಬೇಕು. ಅಲ್ಲಿಗೆ ಹೋಗುವ ಮುಂಚೆ ಮಿಂದುಮಡಿಯುಟ್ಟುಕೊಂಡು ಹೋಗಬೇಕು. ಊಟಮಾಡಿಕೊಂಡು, ಮೈಲಿಗೆಯ ಬಟ್ಟೆಗಳನ್ನುಟ್ಟುಕೊಂಡು, ಅಥವಾ ಪಾದರಕ್ಷೆಗಳನ್ನು ಮೆಟ್ಟಿಕೊಂಡು ಹೋಗಬಾರದು. ಮಾಂಸಮದ್ಯಾದಿಗಳನ್ನು ಉಪಯೋಗಿಸಿರುವಾಗ ದೇವಸ್ಥಾನಪ್ರವೇಶವನ್ನು ಮಾಡಬಾರದು. ದೇವಸ್ಥಾನದ ಬಳಿಯಲ್ಲಿ ಉಗುಳಬಾರದು, ಹೊಗೆಬತ್ತಿಯನ್ನು ಸೇದಬಾರದು.

**3.** ಮನೋವಾಕ್ಕಾಯಗಳನ್ನು ಬಿಗಿಯಲ್ಲಿಟ್ಟುಕೊಂಡಿರಬೇಕು. ಮನಸ್ಸಿನಲ್ಲಿ ಭಗವಂತನ ಸ್ಮರಣೆಯಿರಬೇಕು. ನಾಲಗೆಯಲ್ಲಿ ಭಗವಂತನ ನಾಮಜಪವಿರಬೇಕು. ಶರೀರದಲ್ಲಿ ವೃಥಾಚಾಪಲ್ಯವಿಲ್ಲದಿರಬೇಕು. ಕೆಟ್ಟ ವಿಚಾರಗಳಿಂದ ತುಂಬಿರುವ ಮನಸ್ಸು ಗದ್ದಲವಾಗಿ ಬಿಡಿನುಡಿಗಳನ್ನು ಅಥವಾ ಬಿರುನುಡಿಗಳನ್ನು ಆಡುವ ವಾಕ್ಕು ಜನರನ್ನು ಲಕ್ಷ್ಯಮಾಡದೆ ಎಲ್ಲೆಂದರೆ ಅಲ್ಲಿ ನುಗ್ಗುವ ಕಾಯ- ಈ ತ್ರಿಕರಣಗಳ ದೋಷಗಳು ದೇವಸ್ಥಾನದ ಸತ್ಫಲವನ್ನು ದೂರವಾಗಿ ತೊಲಗಿಸುವವು.

**4.** ಈಶ್ವರನಿಗೆ ಹಣ್ಣು, ಹೂ, ಕಾಯಿ, ಧೂಪ, ದೀಪ, ನೈವೇದ್ಯಾದಿಗಳನ್ನು ಸಮರ್ಪಿಸುವಾಗ ಸ್ಥಳದ ಪದ್ಧತಿಯನ್ನು ತಿಳಿದುಕೊಂಡು ಅಲ್ಲಿರುವ ವ್ಯವಸ್ಥಾಪಕರ ಅಥವಾ ಅರ್ಚಕರ ಮೂಲಕವೇ ಅರ್ಪಣೆಮಾಡಬೇಕು. ಕೊಡುವ ಕಾಣಿಕೆಯ ಲೆಕ್ಕಾಚಾರವಿರುವ ಸ್ಥಲಗಳಲ್ಲಿ ತಕ್ಕ ರಸೀದಿಯನ್ನು ಪಡೆಯುವದರಿಂದ ಅದು ಸದ್ವಿನಿಯೋಗವಾಗುವದೆಂಬ ಭರವಸೆಯುಂಟಾಗುವದು.

**5.** ದೇವಸ್ಥಾನವು ನಿಜವಾಗಿ ದೇವಸ್ಥಾನವೇ ಆಗಬೇಕಾದರೆ ಅಲ್ಲಿ ಲೌಕಿಕ ವ್ಯವಹಾರಗಳ ಕಲಂಕವು ತಟ್ಟದಂತೆಯೂ ಭಗವದ್ಭಾವನೆಯು ಬೆಳೆಯುವಂತೆಯೂ ನೋಡಿಕೊಳ್ಳುವದು ಅತ್ಯವಶ್ಯ.

*****

## 46. ಸಾಧಕರಿಗೆ ಸೂಚನೆಗಳು

**1.** ಎಂಥ ಪಾಪಿಗೂ ಉದ್ಧಾರವಾಗುವದಕ್ಕೆ ಮಾರ್ಗವಿದೆ. ವಾಲ್ಮೀಕಿಯಂಥ ಋಷಿಯೂ ಒಂದು ಕಾಲದಲ್ಲಿ ಪರಮಪಾತಕಿಯಾಗಿದ್ದನು. ಆದ್ದರಿಂದ ನೀವು ಮಾಡಿರಬಹುದಾದ ಪಾಪಗಳ ನಿಮಿತ್ತದಿಂದ ನಿರಾಶರಾಗಬೇಡಿರಿ. ಆದರೆ ಇನ್ನು ಮುಂದೆ ಪಾಪವನ್ನು ಮಾಡುವುದಿಲ್ಲವೆಂದು ಮನಃಪೂರ್ವಕವಾಗಿ ಸಂಕಲ್ಪಮಾಡಿರಿ; ಸಾಧುಮಾರ್ಗಕ್ಕೆ ಕೊಂಡೊಯ್ಯಬೇಕೆಂದು ಭಗವಂತನಲ್ಲಿ ಮೊರೆಯಿಡಿರಿ. ಆಮೇಲೆ ಯಾವ ಅಂಜಿಕೆಯೂ ಇರುವದಿಲ್ಲ.

**2.** ಹೆರರ ಕುಂದುಕೊರತೆಗಳನ್ನು ಎಂದಿಗೂ ಎತ್ತೆಣಿಸಬಾರದು. ಮತ್ತೊಬ್ಬರಲ್ಲಿ ಕಾಣಬಹುದಾದ ದೋಷಗಳಿಗೆ ಕುರುಡರಾಗಿರಬೇಕು. ಮತ್ತೊಬ್ಬರ ತಪ್ಪನ್ನು ಬಣ್ಣಿಸುವ ಚಾಡಿಯ ಮಾತಿಗೆ ಕಿವುಡರಾಗಿರಬೇಕು. ಮತ್ತೊಬ್ಬರ ಹುಳುಕನ್ನು ಕುರಿತ ಮಾತಿಗೆ ಮೂಕನಾಗಿರಬೇಕು. ಮತ್ತೊಬ್ಬರ ಕಲಂಕವನ್ನು ಕುರಿತ ಯೋಚನೆಗೆ ಮಂಕ ರಾಗಿರಬೇಕು. ನಿಮ್ಮ ಮನೆಯು ಕುಸಿದುಬೀಳುತ್ತಿರುವಲ್ಲಿ ಮತ್ತೊಬ್ಬರ ಮನೆಯನ್ನು ಸರಿಪಡಿಸುವ ಗುತ್ತಿಗೆ ಹಿಡಿಯುವದು ಎಂದಿಗೂ ತರವಲ್ಲ.

**3.** ಒಬ್ಬರ ಬಡತನದ ಮುಂದೆ ತನ್ನ ಸಿರಿತನವನ್ನು ಮೆರೆಯಿಸಬಾರದು; ಬಡವರಿಗೆ ಬಂಧುವಾಗಬೇಕು. ಒಬ್ಬರು ಸಂಕಟದಲ್ಲಿರುವಾಗ ಸುಖಜೀವನದ ಸೊಂಪನ್ನು ತೋರಿಸಿಕೊಳ್ಳಬಾರದು; ಅವರ ಸಂಕಟದಲ್ಲಿ ಅನುತಾಪವಿರಬೇಕು. ತಿಟ್ಟಿನ ನೀರು ತಗ್ಗಿಗೆ ಹರಿಯುವದು ಸಹಜವಲ್ಲವೆ? ಮತ್ತೊಬ್ಬರ ಗುಣಗಳನ್ನು ಕಂಡು ಕರುಬಬಾರದು. ಅನುಕರಿಸಬೇಕು. ಮತ್ತೊಬ್ಬರ ಏಳಿಗೆಯನ್ನು ಕಂಡು ಹೊಟ್ಟೆಯನ್ನು ಕಿವಿಚಿಕೊಳ್ಳಬಾರದು; ಹಿಗ್ಗಬೇಕು. ಪಕ್ಕದಲ್ಲಿಯೇ ಅಮೃತದ ಝರಿಯಿರುವಾಗ ಬರಿಯ ಗಡಿಗೆಯನ್ನು ಕಂಕುಳದಲ್ಲಿ ಅವಿಚಿಕೊಂಡಿರುವದೆ?

**4.** ನಡೆದಷ್ಟೂ ದಾರಿ ಸಾಗುವದು; ಆದ್ದರಿಂದ ಸುಮ್ಮನೆ ಕೂರಬಾರದು. ಸೋಮಾರಿತನವೇ ಪಾಪಕ್ಕೆ ತವರುಮನೆ. ನಿಮಗೂ ಅನ್ಯರಿಗೂ ಉಪಯೋಗ ವಾಗುವ ಎಷ್ಟೋ ಕೆಲಸಗಳಿವೆ. ನಿಮ್ಮ ಮನಸ್ಸಿಗೆ ಒಗ್ಗುವ ಯಾವದಾದರೊಂದು ಕೆಲಸವನ್ನು ಕೂಡಲೆ ಕೈಕೊಳ್ಳಿರಿ. ಅದು ಸಲೀಸಾಗಿ ಸಾಗುವಂತೆಯೂ ಸಫಲವಾಗು ವಂತೆಯೂ ಅನುಗ್ರಹಿಸೆಂದು ಭಗವಂತನನ್ನು ಬೇಡಿಕೊಳ್ಳಿರಿ.

**5.** ಮೊದಮೊದಲು ಸಾಧುಸಂತರ ನಡೆನುಡಿಗಳೇ ನಿಮಗೆ ಮಾದರಿ ಯಾಗಿರಲಿ, ಅವರ ಸೇವೆಯನ್ನು ಭಕ್ತಿಯಿಂದ ಮಾಡುತ್ತಿದ್ದರೆ, ಅವರ ಉಪದೇಶ ವನ್ನು ಆದರದಿಂದ ಕೇಳುತ್ತಿದ್ದರೆ, ಕಾಲಕ್ರಮದಲ್ಲಿ ನಿಮ್ಮ ಸ್ವಂತ ಮಾರ್ಗವು ಯಾವದೆಂಬುದನ್ನು ಪರಮೇಶ್ವರನು ನಿಮಗೆ ತೋರಿಸಿಕೊಡುವನು.

**6.** ಪರಮಾತ್ಮನು ಸರ್ವಭೂತಗಳಿಗೂ ಆತ್ಮನು; ಆದ್ದರಿಂದ ಆತನು ನಿಮಗೂ ಆತ್ಮನಿಗಾಗಿರುತ್ತಾನೆಂಬುದನ್ನು ಮನಸ್ಸಿಗೆ ತಂದುಕೊಳ್ಳಿರಿ. ಪರಮಾತ್ಮನ ಧರ್ಮ ಗಳೆಲ್ಲವೂ ನಿಮ್ಮಲ್ಲಿ ಈಗಲೂ ಇವೆ. ಅವು ಅವ್ಯಕ್ತವಾಗಿರಬಹುದು; ಆದರೆ ತಕ್ಕ ಸಾಧನಗಳಿಂದ ಅವನ್ನು ಹೊರತೋರುವಂತೆ ಮಾಡಿಕೊಳ್ಳುವದು ಅಸಾಧ್ಯವಲ್ಲ. ಕೊಳೆತ ಚಂದನದ ಚಕ್ಕೆಯಾದರೇನು? ಸಾಣೆಯಕಲ್ಲಿನ ಮೇಲೆ ಅರೆದರೆ ಸುಗಂಧ ವನ್ನು ಬೀರದೆ ಇರುವದೆ?

**7.** ಧರ್ಮಬಾಹಿರನೆಂದು, ಅಥವಾ ಪರಧರ್ಮದವನೆಂದು, ಯಾರನ್ನೂ ಕಡೆಗಣಿಸಬೇಡಿ, ದೂರಬೇಡಿ . ವಾದದಲ್ಲಿ ಸೋಲಿಸುವದಕ್ಕೆ ಯತ್ನಿಸಬೇಡಿ, ಮನ ನೋಯಿಸುವದಕ್ಕಂತೂ ಹೋಗಲೇಬೇಡಿ. ದೇವರಿಗೆ ಎಲ್ಲರೂ ಮಕ್ಕಳೇ; ಅವನಿಗೆ ಯಾವ ಮಕ್ಕಳ ಮೇಲೆ ತಾನೆ ಪ್ರೀತಿಯಿಲ್ಲ? ಯಾರನ್ನು ಕಂಡರೂ ಸಂತೋಷವನ್ನುಂಟು ಮಾಡುವದಕ್ಕೆ ಹವಣಿಸಿರಿ; ಅದೇ ಈಶ್ವರಪೂಜೆಯು.

**8.** ಹರಿಯುವ ನೀರು ಪಾಚಿಗಟ್ಟುವದಿಲ್ಲ; ಸುತ್ತುಮುತ್ತಲಿನ ಜನರನ್ನು ಪ್ರೀತಿಸುತ್ತಿದ್ದರೆ ಅಂತಃಕರಣವು ಅಶುದ್ಧವಾಗುವದಿಲ್ಲ. ಎಲ್ಲರಲ್ಲಿಯೂ ಇರುವ ಪರಮಾತ್ಮನ ಪ್ರೇಮಕ್ಕೆ ಬೇಲಿ ಹಾಕಿಕೊಂಡು ನನ್ನ ಹೃದಯದ ಹೊಲದಲ್ಲಿಯೇ ಅದನ್ನು ಬೆಳೆಯಿಸಿಕೊಳ್ಳುವೆನೆನ್ನುವದು ಎಂಥ ತಿಳಿಗೇಡಿತನ!

**9.** ಯಾವಾಗಲೂ ಉಲ್ಲಾಸದಿಂದಿರಬೇಕು; ಎಂದಿಗೂ ಮುಖವನ್ನು ಜೋಲು ಹಾಕಿಕೊಳ್ಳಬಾರದು. ಸಿಂಡ್ರಿಸಿಕೊಳ್ಳಬಾರದು. ನಿಮ್ಮ ಮುಖದಲ್ಲಿ ಸೂಸುವ ಸುಮ್ಮಾನವೇ ಹತ್ತಿರಕ್ಕೆ ಬಂದವರಿಗೆಲ್ಲ ಸನ್ಮಾನವಾಗುವದು. ಮಲ್ಲಿಗೆಯು ಅರಳುವದಕ್ಕೆ ಮೊದಲಾದರೆ ಎತ್ತ ಕಡೆಗೆ ತಾನೆ ಅದರ ತನಿಗಂಪು ತಾಕದೆ ಇರುತ್ತದೆ?

**10.** ನೆಟ್ಟಗೆ ಹರಿಯಲಿ, ಡೊಂಕಾಗಿ ಹರಿಯಲಿ, ಪೂರ್ವಕ್ಕೆ, ಪಶ್ಚಿಮಕ್ಕೆ, ದಕ್ಷಿಣಕ್ಕೆ, ಉತ್ತರಕ್ಕೆ ಯಾವ ದಿಕ್ಕಿಗೆ ಹರಿದರೂ ಎಲ್ಲಾನದಿಗಳೂ ಒಂದಲ್ಲದಿದ್ದರೆ ಒಂದು ದಿನ ಸಮುದ್ರವನ್ನೇ ಸೇರುವವು. ಭಗವಂತನನ್ನು ಸೇರುವದಕ್ಕೆ ಈ ಮಾರ್ಗವನ್ನೇ ಅನುಸರಿಸಬೇಕೆಂದು ಯಾರೊಬ್ಬರನ್ನೂ ಬಲಾತ್ಕರಿಸುವದಕ್ಕೆ ಹೋಗಬೇಡಿರಿ. ನಿಮ್ಮ ಮಾರ್ಗದಲ್ಲಿ ನಿಮ್ಮ ಭಕ್ತಿಯು ಹರಿಯುತ್ತಿರಲಿ; ಅಷ್ಟರಿಂದಲೇ ಮಿಕ್ಕವರಿಗೂ ದಾರಿಯನ್ನು ತೋರಿಸಿದಂತೆ ಆಗುತ್ತದೆ.

**11.** ಅಧ್ಯಾತ್ಮ ಸಾಧನವು ಹೃದಯಕ್ಕೆ ಸಂಬಂಧಪಟ್ಟದ್ದು. ಹೃದಯವನ್ನು ಹರಿಗೊಪ್ಪಿಸುವದೇ ಸಾಧನದ ಮರ್ಮವು. ನೀವು ಮಾಡುವ ಕರ್ಮ, ಆಡುವ ಮಾತು, ಮನದಂದುಕೊಳ್ಳುವ ಭಾವನೆ- ಎಲ್ಲವೂ ಹೃತ್ಪೂರ್ವಕವಾಗಿ ಭಗವಂತನಿಗೆ ಅರ್ಪಿತವಾಗಿದ್ದರೆ, ನಿಮ್ಮ ಹೃದಯದಲ್ಲಿ ಭಗವಂತನಿಗೆ ಹೊರತು ಮತ್ತೆ ಏತಕ್ಕೂ ಎಡೆಯಿಲ್ಲದೆ ಇದ್ದರೆ ನಿಮ್ಮ ಸಾಧನವು ಪೂರ್ಣವಾಯಿತು; ನೀವು ಸಿದ್ಧರಾದಿರಿ.

*****

## 4.7 ಸಾಧನ ವಿಚಾರ

**''ತನ್ನ ತಿಳಿದೊಡವ ಯೋಗಿ । ತಾನೇ ತನ್ನ ಮೂಲವ ಕಾಣದವ ಜನ್ಮ ರೋಗಿ''** ಎಂದು ಒಬ್ಬ ಅನುಭವಿಗಳು ತತ್ತ್ವವನ್ನು ಹಾಡಿದ್ದಾರೆ. ಪ್ರತಿಯೊಬ್ಬರ ಹೃದಯದಲ್ಲಿಯೂ ಪರಮಾತ್ಮನು ಗೂಢನಾಗಿರುತ್ತಾನೆ. ಪ್ರತಿಯೊಬ್ಬರೂ ಗಾಢನಿದ್ರೆಯಲ್ಲಿ ಆ ಹೃದಯದೊಳಕ್ಕೇ ಹೋಗುತ್ತಾರೆ. ಆದರೂ ಅಲ್ಲಿರುವ ಬ್ರಹ್ಮದ ವಿಷಯವನ್ನು ಅರಿಯದ್ದರಿಂದ, ಜೀವರಾಗಿ ಹೊರಬೀಳುವರು.

ವೇದಾಂತವನ್ನು ಎಷ್ಟು ಓದಿದ್ದರೂ ದೇಹವೇ ನಾನೆಂಬ ಭ್ರಾಂತಿಯು ಹೋಗದಿರುವದರಿಂದ ದುಃಖನಿವೃತ್ತಿಯಾಗುವದಿಲ್ಲ. ಶಾಸ್ತ್ರಪಾಂಡಿತ್ಯಕ್ಕೆ ಹೆಚ್ಚಿನ ಬೆಲೆಯನ್ನು ಕೊಟ್ಟವರು ತಾವು ಪಂಡಿತರೆಂಬ ಅಹಂಕಾರದಲ್ಲಿ ಮುಳುಗಿರುವದು; ಅಥವಾ ಎಲ್ಲರೊಡನೆಯೂ ವಾದಕ್ಕೆ ಕಾಲುಕೆರೆಯುತ್ತಿರುವರು. ಇನ್ನು ಕೆಲವರು ಶಾಸ್ತ್ರಬಾಹುಳ್ಯದಿಂದ ಸಂಶಯಗಳಿಗೆ ತುತ್ತಾಗುವರು. **''ಶಬ್ದಜಾಲಂ ಮಹಾರಣ್ಯಂ**

**ಚಿತ್ತಭ್ರಮಣಕಾರಣಮ್।"** ಎಂದಂತೆ ಅನುಭವವಿಲ್ಲದ ಶಾಸ್ತ್ರಪಾಂಡಿತ್ಯವು ಚಿತ್ತ ಭ್ರಮಣೆಗೆ ಕಾರಣವಾಗುವದು. ಆದ್ದರಿಂದ ಅಡಿಗೆಯಾದ ಮೇಲೆ ಕೊಳ್ಳಿಗಳನ್ನು ಬಿಸಾಡುವಂತೆಯೂ, ಕಾಳನ್ನು ಬಯಸುವವರು ಹೊಟ್ಟನ್ನೂ ಕಡ್ಡಿಯನ್ನೂ ಆಚೆಗೆ ಒಗೆಯುವಂತೆಯೂ ಆತ್ಮಾನುಭವವನ್ನು ಬಯಸುವವರು ಶಾಸ್ತ್ರಗಳ ಸಹಾಯವನ್ನು ಕೋರಿದರೂ ಅನುಭವಕ್ಕೇ ಹೆಚ್ಚು ಪ್ರಾಶಸ್ತ್ಯವನ್ನು ಕೊಡಬೇಕು.

ಉತ್ತಮಸಾಧಕರ ಮನಸ್ಸು ಕೂಡ ಒಂದೊಂದು ವೇಳೆ ಕಳವಳಗೊಂಡು ಹಿಮ್ಮುಖವಾಗುವದು. ಇವರು ಕೂಡ ಸಕಾರಣವಾಗಿಯೋ ನಿಷ್ಕಾರಣವಾಗಿಯೋ ಅಶಾಂತತೆಯನ್ನು ಪಡೆಯುವರು. ಇದನ್ನು ನಿವಾರಣೆ ಮಾಡಿಕೊಳ್ಳಲು ಪಂಚದಶಿ ಯಲ್ಲಿ ಒಂದು ಉಪಾಯವನ್ನು ಸೂಚಿಸಿರುತ್ತದೆ. "ಶಾಂತಿಯು ನೆಲೆಯಾಗಿ ನಿಲ್ಲಬೇಕಾದರೆ ವೈರಾಗ್ಯ, ಜ್ಞಾನ, ಉಪರತಿ- ಇವು ಮೂರೂ ಕೂಡಿಯೇ ಇರಬೇಕು" - ಎಲ್ಲಾ ಲೋಕಗಳಿಗಿಂತಲೂ ಹೆಚ್ಚಿನ ಬ್ರಹ್ಮಲೋಕದ ಸುಖವನ್ನು ಕೂಡ ಕಸಕ್ಕಿಂತಲೂ ಕಡಿಮೆಯಾಗಿ ನೋಡುವದು **ವೈರಾಗ್ಯವು**; ಪರಮಾತ್ಮನೇ ತಾನೆಂಬ ಅನುಭವರೂಪ ವಾದ ಜ್ಞಾನವೇ ನಿಜವಾದ **ಜ್ಞಾನ** ; ನಿದ್ರೆಯೊಳಗೆ ವ್ಯವಹಾರವನ್ನೆಲ್ಲ ಮರೆತಿರುವಂತೆ ಧ್ಯಾನದಲ್ಲಿ ದೇಹವನ್ನೂ ದೇಹೇಂದ್ರಿಯಗಳಿಗೆ ಸಂಬಂಧಪಟ್ಟ ಕಾರ್ಯಗಳನ್ನು ಮರೆತಿರುವದು **ಉಪರತಿ.** ಈ ಮೂರರಲ್ಲಿ ಯಾವದು ಕಡಿಮೆಯಾದರೂ ದೃಷ್ಟ ದುಃಖವು ನಾಶವಾಗಲಾರದು.

ಇನ್ನೊಂದು ವಿಷಯ. ಸಮಾಧಿಯಲ್ಲಿ ಕುಳಿತು ಬ್ರಹ್ಮಾನಂದದಲ್ಲಿ ಮುಳುಗಿರು ವಂತೆಯೇ ಜ್ಞಾನಿಯು ಒಂದು ವೇಳೆ ಪ್ರಾರಬ್ಧಬಲದಿಂದ ವ್ಯವಹಾರದಲ್ಲಿದ್ದರೂ ಆತ್ಮ ನಿಷ್ಠೆಯನ್ನು ಬಿಡದೆ ವ್ಯವಹಾರವನ್ನು ನಡೆಯಿಸುತ್ತಿರಬೇಕು. ದೇಹೇಂದ್ರಿಯಗಳಿಂದ ಆಗುವ ಕಾರ್ಯಗಳಿಗೂ ಆತ್ಮನಿಗೂ ಸಂಬಂಧವಿಲ್ಲವೆಂಬ ದೃಢವಾದ ತಿಳಿವಳಿಕೆ ಯಿದ್ದರೆ ಕರ್ಮವನ್ನು ಮಾಡುವದರಿಂದಾಗಲಿ ಬಿಡುವದರಿಂದಾಗಲಿ ಯಾವ ಹಾನಿಯೂ ಆಗಲಾರದು. ಕಮಲವು ನೀರಿನಲ್ಲಿ ಹುಟ್ಟಿ ನೀರಿನಲ್ಲಿಯೇ ಇದ್ದರೂ ನೀರನ್ನು ಸೋಂಕದೆ ಇರುವಂತೆಯೂ ಕುಂಬಾರನ ಹುಳುವು ಕೆಸರಿನಲ್ಲಿಯೇ ಇದ್ದು ಕೆಸರಿನ ಉಂಡೆಗಳನ್ನು ಮಾಡುತ್ತಿದ್ದರೂ ಕೆಸರನ್ನು ಅಂಟಿಸಿಕೊಳ್ಳದೆ ಇರುವಂತೆಯೂ ಜ್ಞಾನಿಯು ವ್ಯವಹಾರವನ್ನು ಮಾಡುತ್ತಿದ್ದರೂ ನಿರ್ಲಿಪ್ತನಾಗಿರುವನು. ಅವನಲ್ಲಿಯೂ

ವೈರಾಗ್ಯಧ್ಯಾನಗಳು ಇದ್ದೇ ಇರುವವು. ಇವು ಒಂದಕ್ಕೊಂದು ಸಹಾಯಮಾಡುವವು. ವೈರಾಗ್ಯವು ಹೆಚ್ಚಿದಂತೆಲ್ಲ ಧ್ಯಾನಕ್ಕೆ ಮನಸ್ಸು ಹೆಚ್ಚುಹೆಚ್ಚು ಒಲಿಯುವದು. ಧ್ಯಾನವು ಮೈಗೂಡಿದಂತೆಲ್ಲ ಆನಂದವು ಹೆಚ್ಚು ಹೆಚ್ಚಾಗಿ ಅನುಭವಕ್ಕೆ ಬರುವದು. ಹಣ್ಣಾದ ಎಲೆಗಳು ಗಿಡಗಳಿಂದ ತಾವಾಗಿ ಉದುರಿಬೀಳುವಂತೆ ಆತ್ಮಾನುಭವವನ್ನು ಪಡೆದವರಿಂದ ವಿಷಯೇಚ್ಛೆಯು ತಾನಾಗಿಯೇ ಕಳಚಿಹೋಗುವದು.

ಸರ್ವಸಾಧನದ ಧ್ಯೇಯವು ಅಪರೋಕ್ಷಾನುಭವವೆಂಬುದನ್ನು ಸಾಧಕರಾದವರು ಎಂದಿಗೂ ಮರೆಯಲಾರರು.

*****

# 48. ಉಪಾಸನಾ ಮಾರ್ಗ[1]

ಉಪನಿಷತ್ತಿನಲ್ಲಿ ಪರಮಾತ್ಮನು ಆಕಾಶ, ವಾಯು, ಅಗ್ನಿ, ಅಪ್ಪು, ಪೃಥಿವಿ – ಇವುಗಳನ್ನು ಸೃಷ್ಟಿಮಾಡಿದನೆಂದೂ ಪೃಥಿವಿಯಿಂದ ಸಸ್ಯಗಳೂ ಸಸ್ಯಗಳಿಂದ ಅನ್ನವೂ ಅನ್ನದಿಂದ ಮನುಷ್ಯನೂ ಉಂಟಾಗಿರುವರೆಂದೂ ವರ್ಣಿಸಿದೆ. ಎಲ್ಲಾ ಪ್ರಾಣಿಗಳೂ ಅನ್ನರಸದಿಂದಲೇ ಹುಟ್ಟಿರುವಲ್ಲಿ ಶ್ರುತಿಯು ಮನುಷ್ಯನನ್ನೇ ಏಕೆ ಎತ್ತಿ ಹೇಳಿರುತ್ತದೆ? – ಎಂಬ ಪ್ರಶ್ನೆಯನ್ನು ತೆಗೆದು ಶ್ರೀಶಂಕರಭಗವತ್ಪಾದರವರು ಹೇಳಿರುವದೇನೆಂದರೆ ಎಲ್ಲಾ ಪ್ರಾಣಿಗಳೂ ಪರಮಾತ್ಮನ ವಂಶದವೇ ಆಗಿದ್ದರೂ ಮನುಷ್ಯನಿಗೆ ಮಾತ್ರವೇ ಶಾಸ್ತ್ರೋಕ್ತವಾದ ಕರ್ಮಜ್ಞಾನಗಳಲ್ಲಿ ಅಧಿಕಾರವಿರುತ್ತದೆ ಎಂದು ಹೇಳಿರುತ್ತಾರೆ.

ಮನುಷ್ಯನಿಗೂ ಪಶ್ವಾದಿಗಳಿಗೂ ಇರುವ ಹೆಚ್ಚು ಕಡಿಮೆಯೇನು? ಮನುಷ್ಯನ ಅಸಾಧಾರಣ ಲಕ್ಷಣವೇನು?– ಎಂಬ ವಿಷಯಕ್ಕೆ ಅನೇಕರು ಅನೇಕ ಬಗೆಯಾಗಿ ಉತ್ತರವನ್ನು ಕೊಟ್ಟಿರುತ್ತಾರೆ. ಮನುಷ್ಯನು ನೆಟ್ಟಗೆ ನಿಲ್ಲುವ ಪ್ರಾಣಿಯು, ಮನುಷ್ಯನು ನಗುವ ಪ್ರಾಣಿಯು, ಮನುಷ್ಯನು ಪ್ರಕೃತಿಯನ್ನು ಜಯಿಸಿ ತನ್ನ ಪ್ರಯೋಜನಕ್ಕೆ ಖನಿಜ ಸಸ್ಯಪ್ರಾಣಿವರ್ಗವನ್ನೆಲ್ಲ ಉಪಯೋಗಿಸಿಕೊಳ್ಳಬಲ್ಲ ಪ್ರಾಣಿಯು. ಮನುಷ್ಯನು

---

**1.** ಹಾವೇರಿಯ ಜ್ಞಾನೋಪಾಸನಾಮಂಡಲಿಯಲ್ಲಿ ಶ್ರೀಗಳವರು ದಿಗಂಬರ ಸಪ್ತಾಹದ ಸಂದರ್ಭದಲ್ಲಿ ಮಾಡಿದ ಉಪದೇಶದ ಸಾರವಿದು.

ಸಮಾಜವನ್ನು ರಚಿಸಿಕೊಂಡು ಬಾಳುವ ಪ್ರಾಣಿ -ಎಂದು ಮುಂತಾಗಿ ಹಲವರು ಹಲವು ರೀತಿಗಳಿಂದ ಮನುಷ್ಯನ ವೈಶಿಷ್ಟ್ಯವನ್ನು ವರ್ಣಿಸಿರುತ್ತಾರೆ. ಆದರೆ ನಮ್ಮ ದೇಶದಲ್ಲಿ ಅಧ್ಯಾತ್ಮಸಂಪತ್ತಿಗೇ ಹೆಚ್ಚಿನ ಬೆಲೆಯನ್ನು ಕೊಟ್ಟಿರುತ್ತಾರಾದ್ದರಿಂದ ನಮ್ಮ ದೇಶದ ವಿಚಾರಕರಿಗೆ ಮಾತ್ರ ಮಾನವನ ಅಸಾಧಾರಣಲಕ್ಷಣದ ಮರ್ಮವು ಹೊಳೆದಿದೆ ಯೆನ್ನಬಹುದು. ಕರ್ಮಜ್ಞಾನಗಳಿಂದ ಸಂಸ್ಕೃತನಾಗಿ ಉನ್ನತಿಗೇರುವ ಯೋಗ್ಯತೆಯನ್ನು ಪಡೆದುಕೊಂಡಿರುವ ಪ್ರಾಣಿ ಎಂದರೆ ಮನುಷ್ಯನೇ- ಎಂದು ಕರ್ಮಮೀಮಾಂಸಾ ಸೂತ್ರಕಾರರಾದ ಜೈಮಿನಿಗಳೂ ಬ್ರಹ್ಮಮೀಮಾಂಸಾಕಾರರಾದ ಬಾದರಾಯಣರೂ ಹೇಳಿರುವದನ್ನು ನೋಡಿದರೆ ಮನುಷ್ಯನಿಗೆ ನಮ್ಮ ದೇಶದಲ್ಲಿ ಕೊಟ್ಟಿರುವ ಹೆಚ್ಚಿನ ಸ್ಥಾನದ ಬೆಲೆಯನ್ನು ಕಾಣಬಹುದಾಗಿದೆ.

ಶ್ರುತಿಯಲ್ಲಿ ಮನುಷ್ಯನ ಹೆಚ್ಚುಗಾರಿಕೆಯನ್ನು ಹೀಗೆಂದು ವರ್ಣಿಸಿದೆ : ಗಿಡಮರಗಳಲ್ಲಿ ರಸವಿರುವದರಿಂದ ಕಲ್ಲುಮಣ್ಣುಗಳಿಗಿಂತ ಅವುಗಳಲ್ಲಿ ಚೇತನಧರ್ಮವು ಹೆಚ್ಚು ವ್ಯಕ್ತವಾಗುತ್ತದೆ. ಆದರೆ ಜಂಗಮಪ್ರಾಣಿಗಳಲ್ಲಿ ರಸವೇ ಅಲ್ಲದೆ ಚಿತ್ತವೂ ಇರುತ್ತದೆ. "ಆದರೆ ಮನುಷ್ಯನಲ್ಲಿಯೇ ಆತ್ಮನು ಹೆಚ್ಚು ವ್ಯಕ್ತವಾಗಿರುತ್ತಾನೆ, ಏಕೆಂದರೆ ಅವನಲ್ಲಿ ಪ್ರಜ್ಞಾನವು ಎಲ್ಲಕ್ಕಿಂತಲೂ ಹೆಚ್ಚಾಗಿರುತ್ತದೆ, ಅವನು ಅರಿತು ಮಾತನಾಡುತ್ತಾನೆ. ಅರಿತು ಕಾಣುತ್ತಾನೆ, ನಾಳೆಗೇನೆನ್ನುವದನ್ನು ಬಲ್ಲನು, ಲೋಕಾಲೋಕಗಳನ್ನು ಬಲ್ಲನು, ಮರ್ತ್ಯಸಾಧನಗಳಿಂದ ಅಮೃತವನ್ನು ಪಡೆಯಲೆಳಸುವವನಾಗಿರುತ್ತಾನೆ. ಆದರೆ ಉಳಿದ ಪಶ್ವಾದಿಗಳಿಗೊ, ಎಂದರೆ ಹಸಿವು ಬಾಯಾರಿಕೆಗಳೇ ಅರಿವು; ಅರಿತು ಮಾತನಾಡಲಾರವು, ಅರಿತುನೋಡಲಾರವು. ನಾಳೆಗೇನೆಂಬುದನ್ನು ಕಾಣಲರಿಯವು, ಲೋಕಾಲೋಕಗಳನ್ನು ಅರಿಯವು."

ಮನುಷ್ಯರಲ್ಲಿ ಅಂತಃಕರಣವೆಂಬ ಸಾಧನವಿರುವದೇ ಅವನ ಹೆಚ್ಚುಗಾರಿಕೆ ಯೆನ್ನಬೇಕು. ಅಂತಃಕರಣದಲ್ಲಿ ಜ್ಞಾನಶಕ್ತಿ, ಕ್ರಿಯಾಶಕ್ತಿ, ಇಚ್ಛಾಶಕ್ತಿ- ಇವೆಲ್ಲವೂ ಇರುತ್ತವೆ. ಮನುಷ್ಯನಿಗೆ ಜ್ಞಾನೇಂದ್ರಿಯಗಳೂ ಕರ್ಮೇಂದ್ರಿಯಗಳೂ ಇವೆ; ಅಂತಃಕರಣದ ಸಹಾಯದಿಂದ ಅವನು ಹೊರಗಿನ ಪ್ರಪಂಚದ ವಿಷಯಗಳ ಸ್ವರೂಪ, ಸ್ವಭಾವ, ಪ್ರಯೋಜನ - ಮುಂತಾದವನ್ನು ಅರಿತುಕೊಳ್ಳಬಹುದು; ಅವುಗಳಲ್ಲಿ ತನಗೆ ಬೇಕಾದವನ್ನು ಕೂಡಿಹಾಕಿಕೊಳ್ಳಬಹುದು, ಬೇಡವಾದವನ್ನು ದೂರ ಸರಿಯಿಸಿಕೊಳ್ಳಬಹುದು.

ಈ ಕೆಲಸಕ್ಕೆ ಅಂತಃಕರಣವನ್ನು ಎಷ್ಟರವಟ್ಟಿಗೆ ಕೌಶಲದಿಂದ ಮನುಷ್ಯನು ಉಪಯೋಗಿಸಿಕೊಳ್ಳುವನೋ ಅಷ್ಟರವಟ್ಟಿಗೆ ಅವನು ವ್ಯವಹಾರದಲ್ಲಿ ಚತುರನೆನಿಸಿ ಕೊಳ್ಳುತ್ತಾನೆ. ಈಗ್ಗೆ ನಾವು ಒಬ್ಬ ಮನುಷ್ಯನ ಅಂತಸ್ತನ್ನು ಗೊತ್ತುಪಡಿಸುತ್ತಿರುವದು ಹೇಗೆ? ಅವನ 'ಶರೀರಾರೋಗ್ಯ, ವಿಷಯಸಂಗ್ರಹ, ಮನೆ, ಹೊಲಗದ್ದೆ, ಹಣಕಾಸು, ಆಳುಕಾಳು, ಹಣ, ಸಂಚಾರಕ್ಕೆ ಬೇಕಾಗುವ ಸೌಕರ್ಯಗಳು, ವಿನೋದಕಾಲಕ್ಷೇಪಕ್ಕೆ ಬೇಕಾದ ಸಾಮಗ್ರಿಗಳು, ಜನರಲ್ಲಿ ಪ್ರಭಾವ, ಅಧಿಕಾರ, ಕೀರ್ತಿ– ಇವನ್ನೆಲ್ಲ ಸಂಪಾದಿಸಿ ಕೊಳ್ಳಬೇಕಾದ ತಿಳಿವಳಿಕೆಯೆಂಬ ವಿದ್ಯೆ; ಇವೇ ಅಲ್ಲವೆ, ಅವನನ್ನು ಸಮಾಜದಲ್ಲಿ ಮೇಲುತರದಲ್ಲಿರುವವನೆಂದು ಮಾಡಿಸುವವು? **''ಸರ್ವೇ ಗುಣಾಃ ಕಾಂಚನಮಾ ಶ್ರಯನ್ತೇ''** ಎಂಬಂತೆ ನಗದು ಹಣವೋ ಆಸ್ತಿಯೋ ಇದ್ದರೆ ಆಯಿತು, ಮಿಕ್ಕದ್ದೆಲ್ಲವೂ ಇದ್ದಂತೆ ಎಂದೇ ನಾವು ಭಾವಿಸುತ್ತಿರುವೆವು!

ಆದರೆ ಮನುಷ್ಯನು ನಿಜವಾಗಿಯೂ ಮೇಲಿನ ಭೂಮಿಕೆಗೆ ಏರಿರಬೇಕಾದರೆ, ನಿಜವಾಗಿಯೂ ಮನುಷ್ಯನು ಮನುಷ್ಯನೆಂದೆನಿಸಿಕೊಳ್ಳಬೇಕಾದರೆ, ಕರ್ಮಜ್ಞಾನದಲ್ಲಿ ಅಧಿಕಾರವುಳ್ಳವನಾಗಿರಬೇಕು. ಅವನ ಅಂತಃಕರಣವು ನಿಜವಾದ ಅರ್ಥದಲ್ಲಿ ಅಂತಃಕರಣವೆನ್ನಿಸಿಕೊಂಡಿರಬೇಕು. ಆಧಿಭೌತಿಕಪ್ರಪಂಚದ ಸಾಮಗ್ರಿಗಳನ್ನು ಕೂಡಿಹಾಕಿ ಅವುಗಳ ಭೋಗವನ್ನು ತನಗೂ ತನ್ನವರಿಗೂ ಒದಗಿಸಿಕೊಂಡಿರುವದು ಹೆಚ್ಚಿನದೇ ಸರಿ. ಆದರೆ **'ಸ ಜಾತೋ ಯೇನ ಜಾತೇನ ಯಾತಿ ವಂಶಃ ಸಮುನ್ನತಿಮ್'** ಎಂದು ಸುಭಾಷಿತಕಾರನೆಂದಿರುವಂತೆ ಯಾವನು ಹುಟ್ಟಿದ್ದರಿಂದ ಅವನ ವಂಶವೇ ಉನ್ನತಿಗೇರು ವದೋ ಅವನೇ ನಿಜವಾಗಿ ಹುಟ್ಟಿದವನು; ಯಾವನಿಗೆ 'ನಾನು ಬ್ರಹ್ಮವಂಶದವನು, ಪರಮಾತ್ಮನಿಂದ ಬಂದಿರುವವನು, ಆತನನ್ನೇ ನಾನುಹೋಗಿ ಮುಟ್ಟುವೆನು' ಎಂಬ ಹಿರಿಯಾಸೆಯೂ ಅದಕ್ಕೆ ತಕ್ಕ ಸಾಮರ್ಥ್ಯವೂ ತಿಳಿವಳಿಕೆಯೂ ಇರುವವೋ ಅವನೇ ನಿಜವಾಗಿ ಹುಟ್ಟಿದವನು. ಇಲ್ಲದಿದ್ದರೆ **'ಪರಿವರ್ತಿನಿ ಸಂಸಾರೇ ಮೃತಃ ಕೋ ವಾ ನ ಜಾಯತೇ?'** ಈ ಸಂಸಾರ ಚಕ್ರವು ಸುತ್ತುತ್ತಲೇ ಇರುವದರಿಂದ ಇಲ್ಲಿ ಹುಟ್ಟಿದವನು ಹೇಗೆ ಸಾಯುವನೋ ಹಾಗೇ ಸತ್ತವನೂ ಹುಟ್ಟಲೇಬೇಕು; ಹಾಗೆ ಹುಟ್ಟುವದು ಎಲ್ಲಾ ಪ್ರಾಣಿಗಳಿಗೂ ಇರುವದರಿಂದ ಮನುಷ್ಯರಲ್ಲಿ ಯಾವ ವಿಶೇಷವೂ ಇದ್ದಂತಾಗಲಿಲ್ಲ. ಈ ದೃಷ್ಟಿಯಿಂದಲೇ ಜ್ಞಾನಕ್ಕೂ ಧರ್ಮಕ್ಕೂ ಮನುಷ್ಯನಿಗೆ ಮಾತ್ರ ಅಧಿಕಾರವಿದೆಯೆಂದೂ

ಅದೇ ಅವನಿಗೆ ಅಸಾಧಾರಣಧರ್ಮವೆಂದೂ ಬಲ್ಲವರು ಹೇಳಿರುತ್ತಾರೆ. ಅದಕ್ಕೆ ಕರಣವಾದಾಗಲೇ ಅಂತಃಕರಣವು ನಿಜವಾಗಿ ಅಂತಃಕರಣವು- ಒಳಗಿನ ಕರಣವು- ಎಂಬ ಹೆಸರಿಗೆ ತಕ್ಕದ್ದಾಗುತ್ತದೆ.

ಅಂತೂ ಸದ್ಗುರುಗಳೂ ಸಚ್ಛಾಸ್ತ್ರವೂ ಹೇಳಿಕೊಡುವ ಮಾರ್ಗದಿಂದ ಪರಮಾತ್ಮನನ್ನು ಸೇರುವ ಅಧಿಕಾರವು ಪುರುಷನಿಗೆ- ಹೆಂಗಸರಾಗಲಿ ಗಂಡಸರಾಗಲಿ ಮನುಷ್ಯಮಾತ್ರಕ್ಕೆ- ಇದೆ. ಅದನ್ನು ಉಪಯೋಗಿಸಿಕೊಂಡವನೇ ನಿಜವಾದ ಅರ್ಥದಲ್ಲಿ ಪುರುಷನು, ಮನುಷ್ಯನು. ಪರಮಾತ್ಮನ ಸ್ವರೂಪವನ್ನೂ ಮಹಿಮೆಯನ್ನೂ ಅರಿತುಕೊಳ್ಳುವದೂ, ಅವನ ಚಿಂತನೆಯಿಂದ ಆನಂದದ ಜೀವನವನ್ನು ಸಾಗಿಸುವದೂ ಮನುಷ್ಯಜೀವನದ ಒಂದು ವಿಶೇಷವಾಗಿರುತ್ತದೆ. ಆದ್ದರಿಂದ ಮನುಷ್ಯನನ್ನು 'ಪರಮಾತ್ಮೋಪಾಸನೆಯ ಪ್ರಾಣಿ'- ಎಂದು ಕರೆಯುವದು ಯುಕ್ತವಾಗಿರುತ್ತದೆ. ಮನುಷ್ಯನಿಗೆ ಬಾಹ್ಯ ಜೀವನದ ಭೋಗಸಾಮಗ್ರಿಗಳನ್ನು ಕೂಡಿಹಾಕಿಕೊಳ್ಳುವ ತಿಳಿವಳಿಕೆಯೂ ಇದೆ, ನಿಜ; ಆದರೆ ಅದು ಪಶ್ವಾದಿಗಳಲ್ಲಿಯೂ ಸ್ವಲ್ಪಮಟ್ಟಿಗೆ ಕಂಡುಬರುವ ಸ್ವಾಭಾವಿಕೇಚ್ಛೆಯ ಅತಿದೇಶವೇ ಆಗಿರುತ್ತದೆ. ಅದರಲ್ಲೇನೂ ಮನುಷ್ಯನ ಹೆಚ್ಚುಗಾರಿಕೆಯಿಲ್ಲ. ಪ್ರಾಣಿಗಳು, ತಮಗೆ ಇಷ್ಟವಾದ ಶಬ್ದಸ್ಪರ್ಶಾದಿಗಳನ್ನು ಬಯಸಿ ಅವುಗಳಲ್ಲಿ ಪ್ರವರ್ತಿಸುತ್ತವೆ; ಅನಿಷ್ಟವಾದವುಗಳನ್ನು ದ್ವೇಷಿಸಿ ಅವುಗಳಿಂದ ಹಿಮ್ಮೆಟ್ಟುತ್ತವೆ. ಮನುಷ್ಯನು ಇದೇ ಪ್ರವೃತ್ತಿನಿವೃತ್ತಿಗಳನ್ನು ಸುಧಾರಿಸಿದ ಕ್ರಮದಿಂದ ಮಾಡಿಕೊಂಡರೆ ಅವನನ್ನು "ಉಬ್ಬಿದ ಪ್ರಾಣಿ" ಎಂದು ಕರೆಯಬಹುದಾಗುವದು ಅಷ್ಟೆ. ಆದರೆ ಸ್ಥಾವರ ಜಂಗಮಪ್ರಾಣಿಗಳು ಎಲ್ಲಿಯಾದರೂ ಧರ್ಮಾನುಷ್ಠಾನಕ್ಕಾಗಲಿ ನೀತಿಯ ಬೆಳವಣಿಗೆಗಾಗಲಿ ಜ್ಞಾನಾಭಿವೃದ್ಧಿಗಾಗಲಿ ಪ್ರಯತ್ನ ಪಟ್ಟದ್ದೂ ಸಂಘವನ್ನೇರ್ಪಡಿಸಿಕೊಂಡದ್ದೂ ಶಾಸ್ತ್ರವನ್ನು ವಿಚಾರಮಾಡಿದ್ದೂ ಉಂಟೇನು? ಎಂದಿಗೂ ಇಲ್ಲ. ಅತೀಂದ್ರಿಯವಾದ ಧರ್ಮಫಲವನ್ನೂ ಉಪಾಸನಾಫಲವನ್ನೂ ತತ್ತ್ವವಿಚಾರಫಲವನ್ನೂ ಮನುಷ್ಯನು ಮಾತ್ರ ಅನುಭವಿಸುವದಕ್ಕೆ ತಕ್ಕವನಾಗಿರುತ್ತಾನೆ. ಅವನಿಗಾಗಿಯೇ ಧರ್ಮಜ್ಞಾನವಿಷಯಕವಾದ ಶಾಸ್ತ್ರಗಳು ಹುಟ್ಟಿರುತ್ತವೆ.

ಉಪನಿಷತ್ತಿನಲ್ಲಿಯೂ ಪುರಾಣೇತಿಹಾಸಗಳಲ್ಲಿಯೂ ಜ್ಞಾನವಿಚಾರವನ್ನು ಬಹಳವಾಗಿ ಹೇಳಿರುತ್ತದೆ. ಜ್ಞಾನವು ವಸ್ತುತಂತ್ರವಾದ ತಿಳಿವಳಿಕೆಯೆಂದೂ ಕರ್ತೃತಂತ್ರ

ಧ್ಯಾನರೂಪವಾದ ವೃತ್ತಿವಿಶೇಷವೆಂದೂ ಎರಡು ಬಗೆಯಾಗಿದೆ. ಈ ಎರಡನ್ನೂ ಉಪಾಸನೆಯೆಂದೇ ಕರೆಯುವದುಂಟು. ಉಪನಿಷತ್ತಿನಲ್ಲಿ ಬಗೆಬಗೆಯ ಉಪಾಸನೆಗಳಿರುತ್ತವೆ. ಅವುಗಳಲ್ಲೆಲ್ಲ ಭಗವಂತನ ಸಂಬಂಧವಾದ ಉಪಾಸನೆಗಳನ್ನೇ ಇಲ್ಲಿ ನಾವು ಮುಖ್ಯವಾಗಿ ವಿಚಾರಮಾಡತಕ್ಕದ್ದಿದೆ. ಎಲ್ಲಾ ಉಪಾಸನೆಗಳೂ ಕರ್ಮಗಳೂ ತಪಸ್ಸುಗಳೂ ಪರಂಪರೆಯಿಂದಾದರೂ ಭಗವಂತನನ್ನು ಸೇರುವದಕ್ಕೇ ಆಗಿರುತ್ತವೆ. ಆದ್ದರಿಂದಲೇ ಶ್ರೀಕೃಷ್ಣಭಗವಂತನು ಭಗವದ್ಗೀತೆಯಲ್ಲಿ "**ಮಮ ವರ್ತ್ಮಾನುವರ್ತನ್ತೇ ಮನುಷ್ಯಾಃ ಪಾರ್ಥ ಸರ್ವಶಃ**" ಎಲ್ಲಾ ಬಗೆಯಿಂದಲೂ ಮನುಷ್ಯರು ನನ್ನ ಹಾದಿಯನ್ನೇ ಅನುಸರಿಸುತ್ತಿರುವರು ಎಂದಿರುತ್ತಾನೆ.

ಉಪಾಸನೆ ಎಂದರೇನು? ಶಾಸ್ತ್ರದಲ್ಲಿ ಹೇಳಿರುವ ಯಾವದಾದರೊಂದು ಆಲಂಬನವನ್ನು ಇಟ್ಟುಕೊಂಡು, ಅದರಲ್ಲಿ ಶಾಸ್ತ್ರದಲ್ಲಿ ವಿಧಿಸಿರುವಂತೆ ಅದೇ ಪ್ರತ್ಯಯದ ಸಂತತಿಯನ್ನು ಹರಿಸುವದು, ಅದಕ್ಕೆ ವಿಲಕ್ಷಣವಾದ ಪ್ರತ್ಯಯವನ್ನು ನಡುವೆ ಬರಗೊಡದಿರುವದು; ಇದನ್ನು ಧ್ಯಾನ, ಚಿಂತನ- ಮುಂತಾದ ಹೆಸರುಗಳಿಂದೂ ಕರೆಯುತ್ತಾರೆ. ಉಪ-ಧ್ಯಾನಮಾಡುವ ವಸ್ತುವನ್ನು ಸಮೀಪಿಸಿ ಆಸನವ್- ಅದರಲ್ಲಿಯೇ ಪ್ರತ್ಯಯದ ಮೂಲಕವಾಗಿ ಕುಳ್ಳಿರುವದು ಎಂಬುದು ಈ ಶಬ್ದದ ಅಕ್ಷರಾರ್ಥವು. ಪರಮಾತ್ಮನ ಸಮೀಪದಲ್ಲಿಯೇ, ಆತನಲ್ಲಿಯೇ, ನಾವೆಲ್ಲರೂ ಇರುತ್ತಿದ್ದರೂ ಈಗ್ಗೆ ನಾವು ಆತನನ್ನು ಬಿಟ್ಟು ಬಹುದೂರ ಬಂದಂತೆ ಆಗಿಬಿಟ್ಟಿರುತ್ತದೆ. ನಮ್ಮ ಇಂದ್ರಿಯಗಳು ವಿಷಯಗಳ ಬೆನ್ನಟ್ಟಿಕೊಂಡು ಬಲುದೂರ ನಮ್ಮನ್ನು ಕರೆದುಕೊಂಡುಬಿಟ್ಟಿವೆ. ಇಂದ್ರಿಯಗಳ ಮೂಲಕವೇ ನಾವು ನೋಡುತ್ತಿರುವದರಿಂದ ನಮಗೆ ಪರಮಾತ್ಮನ ಆನಂದದ ಪ್ರಕಾಶವು ಕಂಗೊಳಿಸದೆ ಇದೆ. ಹುಳುಕುಜೋಳದ ಕಾಳನ್ನು ಕಂಡು ಅನರ್ಘವಾದ ಮುತ್ತಿನ ರಾಶಿಯನ್ನು ಬಿಡುವ ಮೂರ್ಖರಂತೆ ನಾವು ನಮ್ಮಲ್ಲಿಯೇ, ನಮಗೆ ಅತಿಸಮೀಪವಾಗಿರುವ ಆತ್ಮಾನಂದವನ್ನು ಕಂಡುಕೊಳ್ಳದೆ, ಇಂದ್ರಿಯಸುಖಕ್ಕೆ ಮರುಳಾಗಿ ಅಡ್ಡಾಡುತ್ತಿರುವೆವು. ಈ ಆತ್ಮಾನಂದವನ್ನು ಪಡೆದುಕೊಳ್ಳುವದಕ್ಕೆ ಅಂತಃಕರಣವನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕು. ಇದಕ್ಕೆ ತಕ್ಕ ಸಾಧನಗಳನ್ನು ಉಪಯೋಗಿಸುವದೇ ಭಗವತ್ಪ್ರಾಪ್ತಿಗೆ ಮಾರ್ಗವು. ಇದನ್ನೇ **ಉಪಾಸನಾ ಮಾರ್ಗ**ವೆಂದು ದೊಡ್ಡವರು ಕರೆಯುತ್ತಾರೆ.

*****

# 49. ಭಗವದರ್ಚನ [1]

ಅಂತಃಕರಣವನ್ನು ಎಡೆಬಿಡದೆ ಪರಮಾತ್ಮನ ಚಿಂತನೆಯಲ್ಲಿಯೇ ವ್ಯಾಪೃತವಾಗಿ ಮಾಡಿಕೊಳ್ಳುವದೇ **ಉಪಾಸನೆ** ಎನಿಸುವದು. ಪರಮಾತ್ಮನನ್ನು ಗೌರವಪೂರ್ವಕವಾಗಿ ಮನಸ್ಸಿನಿಂದ ಸಮೀಪಿಸಿ ಆತ್ಮನಲ್ಲಿಯೇ ಚಿಂತನೆಯ ಪ್ರವಾಹವು ಎಡೆಬಿಡದೆ ನಿಲ್ಲುವಂತೆ ಮಾಡಿಕೊಳ್ಳಬೇಕಾದರೆ ಮೊದಲು ಕೆಲವು ಸಿದ್ಧತೆಗಳು ಅವಶ್ಯವಾಗುವವು. ನಮ್ಮ ಕಾರ್ಯಕರಣಸಂಘಾತವು ಸಾಮಾನ್ಯವಾಗಿ ನಮ್ಮ ವಶದಲ್ಲಿರುವದಿಲ್ಲ, ಆದ್ದರಿಂದ ಶರೀರ, ಇಂದ್ರಿಯಗಳು, ಮನಸ್ಸು- ಇವೆಲ್ಲವೂ ಕ್ರಮಕ್ರಮವಾಗಿ ಪರಮೇಶ್ವರನ ಆರಾಧನೆಗೆ ಅಣಿಯಾಗಬೇಕಾಗಿದೆ. ಕೊನೆಗೆ ಇವು ಒಂದಕ್ಕೊಂದು ಹೊಂದುಗೆಯಾಗಿ ಮನಃಪ್ರಧಾನವಾಗಿ ಉಪಾಸನೆಯನ್ನು ಮಾಡಬೇಕಾಗುವದು.

ಶರೀರಪ್ರಧಾನವಾದ ಸಾಧನದಿಂದ ಮೊದಲುಮಾಡಿದರೆ **'ಅರ್ಚನೆ'** ಎಂಬುದು ತೀರ ಹೊರಗಿನ ಸಾಧನವಾಗಿದೆ ಎನ್ನಬಹುದು. ಸ್ಮೃತಿಗಳಲ್ಲಿಯೂ ಪುರಾಣ ಗಳಲ್ಲಿಯೂ ಈ ಪದ್ಧತಿಯನ್ನು ವಿವರವಾಗಿ ತಿಳಿಸಿರುತ್ತದೆ; **'ಧ್ಯಾಯನ್ ಕೃತೇ ಯಜನ್ ಯಜ್ಞೈಸ್ತ್ರೇತಾಯಾಂ ದ್ವಾಪರೇಽರ್ಚಯನ್'** ಎಂಬ ಶ್ಲೋಕಾರ್ಧದಲ್ಲಿ ಧ್ಯಾನ, ಯಾಗ, ಅರ್ಚನೆ- ಇವುಗಳು ಒಂದಕ್ಕಿಂತ ಒಂದು ಬಾಹ್ಯತರವಾದ ಪರಮೇಶ್ವರಾ ರಾಧನೆ ಎಂಬುದನ್ನು ತಿಳಿಸಿದೆ. ನಿಯಮದಿಂದ ಮಾಡುವ ಮಂತ್ರೋಚ್ಚಾರಣ, ಪೂಜೆ, ಸ್ತೋತ್ರ, ನಮಸ್ಕಾರ-ಮುಂತಾದ ಅಂಗಗಳಿಂದೊಡಗೂಡಿದ ಅರ್ಚನೆಯನ್ನು ವೇದಮಂತ್ರಗಳು, ಪುರಾಣದ ಶ್ಲೋಕಗಳು- ಇವುಗಳನ್ನುಪಯೋಗಿಸಿಕೊಂಡು ಮಾಡುವ ವಿಧಾನವು ಬಹಳಕಾಲದಿಂದ ನಮ್ಮ ದೇಶದಲ್ಲಿ ರೂಢಿಯಲ್ಲಿರುತ್ತದೆ. ಈಚೆಗೆ ಸಾಧುಸಂತರು ದೇಶಭಾಷೆಯ ಪದಪದ್ಯಗಳನ್ನೂ ಇದಕ್ಕೆ ಜೋಡಿಸಿರುವದು ಕಾಲಾನುಗುಣವಾಗಿ ಮಾಡಿಕೊಂಡಿರುವ ಮಾರ್ಪಾಡಾಗಿದೆ.

---

**1.** ಹಾವೇರಿಯ ಜ್ಞಾನೋಪಾಸನಾಮಂಡಳಿಯಲ್ಲಿ ಶ್ರೀಗಳು ದಿಗಂಬರಸಪ್ತಾಹ ಸಂದರ್ಭದಲ್ಲಿ ತಾ||6-6-1954ರಲ್ಲಿ ಮಾಡಿದ ಉಪದೇಶದ ಸಾರವಿದು.

ಉಪಾಸನೆಯು ಮುಖ್ಯವಾಗಿ ಅಂತಃಕರಣಕ್ಕೆ ಸಂಬಂಧಪಟ್ಟದ್ದಾಗಿರುವಾಗ ಶರೀರಪ್ರಧಾನವಾದ ಸಾಧನಗಳನ್ನು ಏತಕ್ಕೆ ಏರ್ಪಡಿಸಿರುತ್ತಾರೆ?- ಎಂಬ ಪ್ರಶ್ನೆಯು ಕೆಲವರ ಮನಸ್ಸಿನಲ್ಲಿ ಏಳಬಹುದು. ಇದಕ್ಕೆ ಉತ್ತರವನ್ನು ಕೊಡುವದು ಲೌಕಿಕರು ತಮ್ಮ ಕಾರ್ಯಸಾಧನೆಗೆ ಮಾಡುವ ಏರ್ಪಾಡುಗಳ ಉದಾಹರಣೆಗಳಿಂದ ಕಂಡು ಕೊಳ್ಳಬಹುದಾಗಿದೆ. ರಾಜಕೀಯಕಾರಣದಲ್ಲಿ ಈ ದೇಶದ ಪ್ರಜೆಗಳು ಬ್ರಿಟಿಷ್ ಸರಕಾರಕ್ಕೆ ಎದುರು ಬಿದ್ದು ತಮ್ಮ ಅಸಹಕಾರವನ್ನು ಪ್ರದರ್ಶನಮಾಡುವದಕ್ಕೆ ಮೊದಲು ಮಾಡಿದ ದೃಶ್ಯವು ಈಗಲೂ ನಮ್ಮಗಳಲ್ಲಿ ಅನೇಕರ ಬಗೆಗಣ್ಣಿನ ಎದುರಿಗಿರುವ ಚಿತ್ರವಾಗಿದೆ. ಆಗ್ಗೆ ಅಲ್ಲಲ್ಲಿ ಕಾಲೇಜು ಹುಡುಗರುಗಳು ಗುಂಪು ಕಟ್ಟಿಕೊಂಡು ಕವಾಯಿತು *(Drill)* ಮಾಡುತ್ತಿದ್ದರು. ಈ ಪ್ರಯತ್ನವೇಕೆ? ಎಂದು ಕೇಳಿದರೆ ಇದು ಸ್ವರಾಜ್ಯಪ್ರಾಪ್ತಿಗೆ ಎಂದು ಉತ್ತರ ಹೇಳುತ್ತಿದ್ದರು. ಶಿಸ್ತಿನಿಂದ ಸಾಲಾಗಿ ನಿಲ್ಲುವದು, ಕ್ರಮಬದ್ಧವಾಗಿ ಹೆಜ್ಜೆಯಿಟ್ಟು ನಡೆಯುವದು, ಕೈಯಲ್ಲಿ ಕೋಲನ್ನು ಹಿಡಿಯುವದು, ಗುರಿಯಿಟ್ಟು ಹೊಡೆಯುವದು, ಓಡುವದು- ಮುಂತಾದ ಕಸರತ್ತು ಗಳು ಹೊರಗಿನ ಅಭಿನಯಗಳಾದರೂ ಒಳಗಿನ ಹೃದಯದಲ್ಲಿದ್ದ ಭಾವವಿಶೇಷದ ಪ್ರದರ್ಶನಗಳವು. ಅಲ್ಲವೆ? ಅದರಂತೆಯೇ ಇಲ್ಲಿಯೂ ಪರಮಾತ್ಮನ ಉಪಾಸನೆಗೆ ಶರೀರವನ್ನು ಹಿಡಿತದಲ್ಲಿಟ್ಟುಕೊಂಡು ಆತನ ಕೈಂಕರ್ಯಕ್ಕೆ ಸಿದ್ಧಪಡಿಸಿಕೊಳ್ಳುವ ಕ್ರಮಗಳನ್ನು ಅರಿಯಬೇಕು.

ಅರ್ಚನೆಯಲ್ಲಿ ಮನ ಇಂದ್ರಿಯಗಳ ಸಹಕಾರವೂ ಬೇಕಾಗಿರುತ್ತದೆಯಾದರೂ ಶರೀರವೇ ಮುಖ್ಯಸಾಧನವಾಗಿರುತ್ತದೆ. ಮಿಂದು, ಮಡಿಯುಟ್ಟು, ಅರ್ಚನೆಗೆ ಬೇಕಾದ ಮಂದಿರವನ್ನು ಗೊತ್ತುಮಾಡಿಕೊಂಡು ಸ್ಥಲಶುದ್ಧಿಯನ್ನು ಮಾಡಿಕೊಂಡು, ಬೇಕಾದ ಪೂಜಾಸಾಮಾಗ್ರಿಗಳನ್ನು ಜೋಡಿಸಿಕೊಂಡು ಅದಕ್ಕಾಗಿ ಒಂದು ಕಡೆ ಕೂರ ಬೇಕಾಗುತ್ತದೆ. ಆಮೇಲೆ ಧ್ಯಾನಾವಾಹನಾದಿಷೋಡಶೋಪಚಾರಗಳಿಂದ ಅರ್ಚಿಸ ಬೇಕಾಗುತ್ತದೆ. ಹೀಗೆ ಕ್ರಮವರಿತು ಮಾಡುವ ಅರ್ಚನೆಯು ನಮ್ಮ ದೇಶದಲ್ಲಿರು ವಷ್ಟು ವ್ಯವಸ್ಥಿತವಾಗಿ ಮತ್ತೆಲ್ಲಿಯೂ ಇಲ್ಲವೆಂದರೆ ತಪ್ಪಾಗಲಾರದು. ಉಪಾಸನೆ ಯೆಂಬುದೊಂದು ವಿದ್ಯೆ ಎಂದು ಹಿಡಿದರೆ ಆ ವಿದ್ಯೆಯಲ್ಲಿ ಪರಿಣತರಾದ ಮಹಾತ್ಮರು ಈ ಶಾಸ್ತ್ರೀಯ ಪದ್ಧತಿಯ ಅರ್ಚನೆಯನ್ನು ಏರ್ಪಡಿಸಿದ್ದು ಸಹಜವಾಗಿಯೇ ನಿರೀಕ್ಷಿಸತಕ್ಕದ್ದಾಗಿದೆ.

ಅರ್ಚನೆಗೆ ಮೊದಲು ಪದ್ಮಾಸನದಲ್ಲಿ ಕುಳಿತು ಪ್ರಾಣಾಯಾಮವನ್ನು ಮಾಡಿ ಸಂಕಲ್ಪಮಾಡುತ್ತಾರೆ. ಉಸಿರು ವ್ಯವಸ್ಥೆಯಲ್ಲಿದ್ದರೆ ಮನಸ್ಸೂ ವ್ಯವಸ್ಥಿತವಾಗಿರುತ್ತದೆ ಎಂಬುದೊಂದು ಅನುಭವ; ಸಂಕಲ್ಪಪೂರ್ವಕವಾಗಿ ಮಾಡುವ ಕಾರ್ಯದಲ್ಲಿ ನಮ್ಮ ಮನಸ್ಸು ದೀರ್ಘಕಾಲ ನಿಲ್ಲುವದೆಂಬುದೂ ಒಂದು ಅನುಭವ. ಈ ಎರಡನ್ನೂ ತಿಳಿದ ದೊಡ್ಡವರು ಇವನ್ನು ಇಲ್ಲಿ ಉಪಯೋಗಿಸಿಕೊಂಡಿರುತ್ತಾರೆ.

ಆ ಬಳಿಕ ಇಷ್ಟದೇವತೆಯನ್ನು ಧ್ಯಾನಮಾಡುವದು, ಆವಾಹನಮಾಡುವದು- ಇವು ಆಗಬೇಕು. ಪರಮೇಶ್ವರನು ಒಬ್ಬನೇ ಆದರೂ ಅವನಿಗೆ ಬಗೆಬಗೆಯ ನಾಮ ರೂಪಗಳಿರುವವು. ಪರಮೇಶ್ವರನು ಸರ್ವವ್ಯಾಪಕನಾದರೂ ಅಲ್ಪ ಬುದ್ಧಿಯ ಸಾಮಾನ್ಯರಿಗೆ ಆ ರೂಪದಿಂದ ಅವನನ್ನು ಚಿಂತಿಸುವದು ಒಮ್ಮೆಗೇ ದಕ್ಕಲಾರದು. ಇದಕ್ಕಾಗಿ ಪ್ರತಿಮೆಗಳಲ್ಲಿಯೂ ಸಾಲಗ್ರಾಮ, ಲಿಂಗ, ಕಲಶ- ಮುಂತಾದ ಪ್ರತೀಕ ಗಳಲ್ಲಿಯೂ ಈಶ್ವರನನ್ನು ಸಂನಿಹಿತನಾಗಿರೆಂದು ಬೇಡಿಕೊಳ್ಳುವದು, ಅಲ್ಲಿಂದ ತನಗೆ ಇಷ್ಟವಾದ ಆ ಪರಮೇಶ್ವರನ ನಾಮರೂಪಗಳನ್ನು ಭಾವಿಸಿ ಮನಸ್ಸಿಗೆ ತಂದು ಕೊಳ್ಳುವದು- ಎಂಬ ಧ್ಯಾನಾವಾಹನಗಳನ್ನು ಮಾಡುವ ಪದ್ಧತಿಯು ಆಚರಣೆಗೆ ಬಂದಿದೆ. “**ಅಗ್ನಿರ್ದೇವೋ ದ್ವಿಜಾತೀನಾಂ ಮುನೀನಾಂ ಹೃದಿ ದೈವತಮ್ । ಪ್ರತಿಮಾಸ್ವಲ್ಪಬುದ್ಧೀನಾಂ ಸರ್ವತ್ರ ಸಮದರ್ಶಿನಾಮ್।**” ಎಂಬ ಶ್ಲೋಕವನ್ನು ನೀವು ಕೇಳಿರಬಹುದು. ಜ್ಞಾನಿಗಳು ಸಮದರ್ಶಿಗಳಾದ್ದರಿಂದ ಅವರಿಗೆ ಎಲ್ಲೆಲ್ಲಿಯೂ ಪರಮಾತ್ಮನೇ ಕಾಣುವನು; ಮುನಿಗಳು ತಮ್ಮ ಹೃದಯದಲ್ಲಿಯೇ ಆತನನ್ನು ಚಿಂತಿಸುವರು. ವೈದಿಕರು ದೇವರನ್ನು ಅಗ್ನಿಯಲ್ಲಿ ಆರಾಧಿಸುವರು; ಪರಿಚ್ಛಿನ್ನ ಬುದ್ಧಿಯುಳ್ಳ ಸಾಮಾನ್ಯರು ಪ್ರತಿಮಾದಿಗಳಲ್ಲಿ ಆ ಪರಮೇಶ್ವರನನ್ನು ಆರಾಧಿಸುವರು- ಎಂದು ಶ್ಲೋಕದ ಅಭಿಪ್ರಾಯ. ಇಲ್ಲಿ ವಿಗ್ರಹವಾಗಲಿ, ಪ್ರತೀಕವಾಗಲಿ- ಯಾವ ದೆಂಬುದು ಮುಖ್ಯವಲ್ಲ; ಅದನ್ನು ನೆಪಮಾಡಿಕೊಂಡು ಈಶ್ವರನ ಸಾಂನಿಧ್ಯವನ್ನು ಮನಸ್ಸಿಗೆ ತಂದುಕೊಳ್ಳುವದೇ ಮುಖ್ಯವಾಗಿರುತ್ತದೆ. ಪರಮೇಶ್ವರನು ಭಕ್ತರಿಗಾಗಿ ಎಲ್ಲೆಂದರೆ ಅಲ್ಲಿ ಸಂನಿಹಿತನಾಗಿ ಆರಾಧನೆಯನ್ನು ಸ್ವೀಕರಿಸುತ್ತಾನೆ. ಅರ್ಜುನನು ಮಳಲಲಿಂಗದಲ್ಲಿ ಪೂಜೆ ಮಾಡಿದನೆಂಬ ಕಥೆಯನ್ನು ನೀವು ಕೇಳಿರಬಹುದು. ಇಲ್ಲಿ ಭಕ್ತಿಯೇ ಮುಖ್ಯ.

ಅರ್ಚನೆಗೆ ಪಾದ್ಯ, ಅರ್ಘ್ಯ, ಆಚಮನ- ಇವುಗಳಿಗೂ ಅಭಿಷೇಕಕ್ಕೂ ಬೇರೆ ಬೇರೆಯ ಕಲಶಗಳಲ್ಲಿ ನೀರು ಇಟ್ಟುಕೊಂಡು ಆಯಾ ಉಪಚಾರಕ್ಕೆ ಉಪಯೋಗಿಸುತ್ತಾರೆ. ಆ ನೀರನ್ನು ಶುದ್ಧ ಮನಸ್ಸಿನಿಂದಲೂ ಮಡಿಯಿಂದಲೂ ತಂದುಕೊಂಡಿರುತ್ತಾರೆಂಬುದನ್ನು ಹೇಳಬೇಕಾಗಿಲ್ಲ. ಅವೆಲ್ಲ ಮನಸ್ಸಿನ ಪರಿಶುದ್ಧಿಗೆ ಕಾರಣವಾಗುತ್ತವೆ.

ಪ್ರತಿಯೊಂದು ಉಪಚಾರವನ್ನು ಅರ್ಪಿಸುವಾಗಲೂ ಇಷ್ಟದೇವತೆಯ ಹೆಸರನ್ನು **ಶ್ರೀರಾಮಾಯ ನಮಃ, ಶ್ರೀ ಉಮಾಮಹೇಶ್ವರಾಭ್ಯಾಂ ನಮಃ, ಶ್ರೀಸತ್ಯನಾರಾಣಾಯ ನಮಃ** - ಎಂದು ಮುಂತಾಗಿ ಉಚ್ಚರಿಸುವರು. ನಾನು ಪರಮಾತ್ಮನ ಅರ್ಚನೆಯಲ್ಲಿ ನಿರತನಾಗಿದ್ದೇನೆ, ಆತನು ನನ್ನ ಸನಿಹದಲ್ಲಿಯೇ ಇದ್ದುಕೊಂಡು ನನ್ನ ಸೇವೆಯನ್ನು ಸ್ವೀಕರಿಸುತ್ತಿದ್ದಾನೆ ಎಂದು ಮನಸ್ಸಿಗೆ ಮತ್ತೆ ಮತ್ತೆ ನೆನಪಿಗೆ ಕೊಡುವದೇ ಈ ನಾಮೋಚ್ಚಾರಣೆಯ ಉದ್ದೇಶ. ಈ ಜಗತ್ತು ದುಃಖಮಯವಾಗಿ ನಮಗೆ ಕಾಣುತ್ತಿದ್ದರೂ ಇದು ಪರಮಾತ್ಮಮಯವಾಗಿರುತ್ತದೆ. **'ಸರ್ವಂ ಖಲ್ವಿದಂ ಬ್ರಹ್ಮ'** ಈ ಜಗತ್ತೆಲ್ಲವೂ ಬ್ರಹ್ಮವೇ, ಆದ್ದರಿಂದ ಶಾಂತನಾಗಿ ಉಪಾಸನೆಮಾಡಬೇಕು- ಎಂದು ಶ್ರುತಿ ಹೇಳುವಂತೆ ನಾವು ಪರಮಾತ್ಮನನ್ನು ಇಲ್ಲಿ ಕಾಣುವದೇ ಉಪಾಸನೆಯ ಗುರಿ.

ಎಚ್ಚರಿಕೆಯಿಂದ ಶ್ರದ್ಧಾಭಕ್ತಿಪೂರ್ವಕವಾಗಿ ಮಾಡಿದ ಪೂಜೆಯು ವೀರ್ಯವತ್ತರವಾಗುವದು. ಪರಮಾತ್ಮನು ಕೊಟ್ಟದ್ದನ್ನು ಪರಮಾತ್ಮನಿಗೆ ಸಲ್ಲಿಸುವದೇ ಪೂಜೆಯ ಮರ್ಮ. ನಾಮೋಚ್ಚಾರಣಾಪೂರ್ವಕವಾಗಿ ಪುಷ್ಪಾರ್ಚನೆ, ಧೂಪ, ದೀಪ, ನೈವೇದ್ಯ- ಇವೆಲ್ಲವುಗಳನ್ನೂ ಪರಮೇಶ್ವರನಿಗೆ ಅರ್ಪಿಸಿ ಎಲ್ಲವನ್ನೂ ಆತನ ಪ್ರಸಾದ , ಆತನ ಅನುಗ್ರಹ- ಎಂದು ತಿಳಿಯುವದಕ್ಕೆ ಸಿದ್ಧನಾಗಬೇಕು. ಇಂಥ ಅರ್ಚಕನಿಗೆ ಈ ಜಗತ್ತೆಲ್ಲವೂ ಪರಮೇಶ್ವರನನ್ನು ನೆನಪಿಗೆ ತರುವ ಸಾಧನವಾಗುವದು.

ವ್ರತಾದಿಗಳಲ್ಲಿ ಅರ್ಚನೆಯ ಮುಗಿದಬಳಿಕ ಉಪಾಯನದಾನ- ಕಾಣಿಕೆಯನ್ನರ್ಪಿಸುವದು-ಎಂಬುದೊಂದು ಅಂಶವಿದೆ. ಅದಕ್ಕೆ ಹೇಳುವ ಮಂತ್ರದಲ್ಲಿ ಈಶ್ವರನೆ ಕೊಡುವವನು, ಈಶ್ವರನೇ ಪ್ರತಿಗ್ರಹಮಾಡುವವನು; ನಮ್ಮಿಬ್ಬರನ್ನೂ ದಾಟಿಸುವವನು ಪರಮೇಶ್ವರನೇ, ನಿನಗೆ ನಮಸ್ಕಾರ!-ಎಂಬರ್ಥವು ಅಡಗಿರುತ್ತದೆ. ಮೊದಲು ಪ್ರತಿಮೆಯ ನೆಪದಲ್ಲಿ ಪ್ರಾರಂಭವಾದ ಪರಮೇಶ್ವರಭಾವನೆಯು ಪೂಜೆಮಾಡಿಸುವವನು,

ನೋಡುವದಕ್ಕೆ ಬಂದವರು- ಮುಂತಾದವರೆಲ್ಲರಲ್ಲಿಯೂ ಬೆಳೆದು ಸರ್ವವೂ ತಾನೂ ವಾಸುದೇವನೇ-ಎಂಬ ಭಾವನೆಯಲ್ಲಿ ಕೊನೆಗಂಡರೆ ಅರ್ಚನೆಯು ಪರಿಪೂರ್ಣವಾದಂತೆ ಆಯಿತು.

ನನಗಾಗಿ ನನ್ನ ಜೀವನ ಎಂಬ ಬುದ್ಧಿಯು ಹೋಗಿ ದೇವ, ನಿನಗಾಗಿ ನನ್ನ ಜೀವನ- ಎಂಬ ಬುದ್ಧಿಯುಂಟಾಗುವವರೆಗೂ ಈ ಅರ್ಚನಪದ್ಧತಿಯನ್ನು ಬೆಳೆಯಿಸಿಕೊಳ್ಳಬೇಕು. ದೇಶಸೇವೆಗಾಗಿ ತನ್ನ ಜೀವನವನ್ನು ಮೀಸಲಾಗಿಟ್ಟಿದ್ದೇನೆ ಎಂಬ ಧ್ಯೇಯವನ್ನು ಅನೇಕ ರಾಜಕಾರಣಿಗಳು ನಮ್ಮಮುಂದೆ ಇಟ್ಟಿರುತ್ತಾರೆ; ಅದು ದೊಡ್ಡ ಭಾವನೆಯೇ ಸರಿ; ಆದರೆ ಈಶಸೇವೆಗಾಗಿ ನನ್ನ ಜೀವನವನ್ನು ಮೀಸಲಾಗಿಟ್ಟಿದ್ದೇನೆ ಎಂಬ ಭಾವನೆಯೇ ಉಪಾಸನೆಯ ಪ್ರಾರಂಭವಾಗಿರುತ್ತದೆ. ಅದರಲ್ಲಿ ದೇಶಾದಿಗಳೂ ಅಂತರ್ಗತವೆನ್ನುವದನ್ನು ಹೇಳಬೇಕಾಗಿಯೇ ಇಲ್ಲ.

ಅರ್ಜುನನು ಶಿವನನ್ನು ಲಿಂಗದಲ್ಲಿ ಪೂಜೆ ಮಾಡಿ ನೋಡಲು ಕಿರಾತ ವೇಶದಲ್ಲಿ ಅವನನ್ನು ಪರೀಕ್ಷಿಸುವದಕ್ಕೆ ಬಂದಿದ್ದ ಶಿವನು ಶಿವನ ರೂಪದಲ್ಲಿಯೇ ಅವನಿಗೆ ದರ್ಶನಕೊಟ್ಟನಲ್ಲವೆ? ನಿಜವಾದ ಭಾವನೆಯಿಂದ ಅರ್ಚನೆಮಾಡಿದರೆ ಪ್ರತಿಮೆ, ಪ್ರತೀಕ, ನಮ್ಮ ಸುತ್ತುವಳೆಯ- ಎಲ್ಲೆಲ್ಲಿಯೂ ಪರಮೇಶ್ವರ ಸಂನಿಧಿಯ ಭಾವನೆಯು ನಮಗೆ ಬರುವದು. ಅರ್ಚನೆಗೆ ಸ್ತೋತ್ರನಮಸ್ಕಾರಾದಿಗಳೂ ಅಂಗವಾಗಿರುತ್ತವೆ. ಅವುಗಳಿಗೂ 'ನಾನು ಈಶ್ವರನ ಅಡಿಯಾಳು, ಅವನ ಅಧೀನದಲ್ಲಿರುವವನು'- ಎಂಬ ಆತ್ಮನಿವೇದನೆಯಲ್ಲಿಯೇ ತಾತ್ಪರ್ಯವಿದೆ.

*****

## 50. ಉಪಾಸನೆಯ ವಿಕಾಸಕ್ರಮ[1]

ಉಪಾಸನೆಯು ಮನಃಪ್ರಧಾನವಾದದ್ದು. ಅದಕ್ಕೆ ಅಂಗವಾಗಿ ಶರೀರವೂ ಇಂದ್ರಿಯಗಳೂ ಬೇಕಾಗುವದು. ಕೊನೆಗಂತೂ ಅದು ಅಂತಃಕರಣದಲ್ಲಿಯೇ ನಡೆಯಬೇಕಾದ ಸಾಧನವಾಗಿ ನಿಲ್ಲಬೇಕಾಗಿರುತ್ತದೆ. ಆದರೂ ನಾನು ಶರೀರ ಪ್ರಧಾನವಾಗಿರುವ ಅರ್ಚನಕ್ರಮವನ್ನು ಕುರಿತು ಹಿಂದಿನ ದಿನ ಮಾತನಾಡಿರುತ್ತೇನೆ. ಈ

---

**1.** ಹಾವೇರಿಯ 'ಜ್ಞಾನೋಪಾಸನಾಮಂದಿರ'ದಲ್ಲಿ ಶ್ರೀಶ್ರೀಗಳವರು ತಾರೀಖು 8-6-1954ರಲ್ಲಿ ಮಾಡಿದ ಒಂದು ಉಪದೇಶದ ಸಾರವಿದು.

ಅರ್ಚನಕ್ರಮವು ನಮ್ಮ ದೇಶದಲ್ಲಿಯೇ ಹೆಚ್ಚು ರೂಢವಾಗಿರುತ್ತದೆ. ಇದೊಂದು ನಮ್ಮ ಸೌಭಾಗ್ಯವೆನ್ನಬೇಕು. ಏಕೆಂದರೆ ಮಿಕ್ಕ ದೇಶಗಳಲ್ಲಿ ಇದು ಇಲ್ಲದ್ದರಿಂದಾಗಿರುವ ಕೊರತೆಯು ಉಪಾಸನೆಯು ಮುಂದುವರಿಯುವದಕ್ಕೆ ಬಹಳ ಅಡಚಣೆಯನ್ನುಂಟು ಮಾಡಿರುವದು ಕಂಡುಬರುತ್ತದೆ.

ಮನುಷ್ಯನ ಜ್ಞಾನದ ವಿಕಾಸವು ಸ್ಥೂಲದಿಂದ ಸೂಕ್ಷ್ಮಕ್ಕೂ ಸೂಕ್ಷ್ಮದಿಂದ ಸೂಕ್ಷ್ಮತರಕ್ಕೂ ಹೋಗುವದರಿಂದ ಸುಲಭವಾಗಿ ಆಗುತ್ತದೆ. ವಿದ್ಯಾಶಾಲೆಗಳಲ್ಲಿ ಗಣಿತವನ್ನು ಬೋಧಿಸುವವರು ಹುಡುಗರಿಗೆ ಗುಂಡುಗಳ ಚೌಕಟ್ಟನ್ನು ಉಪಯೋಗಿಸಿ ಕೊಂಡು ಸಂಖ್ಯೆಯನ್ನು ಮೊದಲು ಹೇಳಿಕೊಡುತ್ತಾರೆ. ಆಮೇಲೆ ಸ್ವತಂತ್ರವಾಗಿ ಸಂಖ್ಯೆಗಳ ಜ್ಞಾನವನ್ನು ಮಾಡಿಕೊಡುತ್ತಾರೆ; ವಸ್ತುಪ್ರದರ್ಶಕವಾದ ಸಂಖ್ಯೆಗಳನ್ನು- ಮೂರು ಹುಡುಗರು, ನಾಲ್ಕು ಕುರ್ಚಿಗಳು, ಎರಡು ರೂಪಾಯಿಗಳು- ಹೀಗೆ ಮೊದಲು ತಿಳಿಸಿಕೊಟ್ಟೇ ಆಮೇಲೆ ಶುದ್ಧಸಂಖ್ಯೆಗಳನ್ನು ಹೇಳಿಕೊಡುತ್ತಾರೆ, ಆಮೇಲೆ ಕ್ರಮಕ್ರಮವಾಗಿ ಭಿನ್ನರಾಶಿಗಳು, ದಶಮಾಂಶಗಳು- ಮುಂತಾದ ಸೂಕ್ಷ್ಮಾಂಶಗಳ ವಿಚಾರಕ್ಕೆ ಕೈಹಾಕುತ್ತಾರೆ. ಇದರಂತೆ ಪರಮೇಶ್ವರನು ಸರ್ವತ್ರ ವ್ಯಾಪಕನಾಗಿರುವ ನಾದರೂ ಅವನನ್ನು ಸ್ಥೂಲವಾದ ಯಾವದಾದರೊಂದು ದೃಶ್ಯವಸ್ತುವಿನಲ್ಲಿ ಆವಾಹನೆ ಮಾಡಿ ಅರ್ಚನೆ ಮಾಡುವ ಪದ್ಧತಿಯಿಂದ ಆರಂಭಿಸಿ ಆಮೇಲೆ ಕ್ರಮ ಕ್ರಮವಾಗಿ ಈ ಈಶ್ವರಭಾವನೆಯನ್ನು ಹಿಗ್ಗಿಸಿಕೊಳ್ಳುತ್ತಾ ಹೋಗುವದೆಂಬುದೇ ಶಾಸ್ತ್ರೀಯಕ್ರಮ ವೆಂಬುದನ್ನು ನಮ್ಮ ದೇಶದ ಅನುಭವಿಗಳು ಕಂಡುಕೊಂಡು ಜನರಿಗೆ ಬೋಧಿಸುತ್ತಾ ಬಂದಿರುತ್ತಾರೆ.

ಗೊತ್ತಾದ ಒಂದು ವಸ್ತುವಿನಲ್ಲಿ ಭಗವಂತನ ಸಂನಿಧಿಯನ್ನು ನೆನಪಿಗೆ ತಂದು ಕೊಂಡು ಅರ್ಚನೆಮಾಡುತ್ತಾ ಕೊನೆಯಲ್ಲಿ ಸ್ತೋತ್ರಾದಿಗಳಿಂದ ಭಗವಂತನ ಭಾವನೆ ಯನ್ನು ಮೂಡಿಸಿಕೊಳ್ಳುತ್ತಾ ಹೋಗುವದು ಉಪಾಸನೆಯ ಬೆಳವಣಿಗೆಗೆ ಕಾರಣ ವಾಗುತ್ತದೆ. ಉಪಾಸ್ಯವಾದ ಒಂದು ವಸ್ತುವಿನಲ್ಲಿ- ಕಲಶದಲ್ಲಿ, ಮೂರ್ತಿಯಲ್ಲಿ, ಅಥವಾ ಶಾಲಗ್ರಾಮದಲ್ಲಿ- ಕಂಡ ಭಗವಂತನ ಬುದ್ಧಿಯನ್ನು ನಮ್ಮ ಸುತ್ತಮುತ್ತಲಿನ ಜನರಲ್ಲಿಯೂ ಮಾಡುತ್ತಾ ಕೊನೆಗೆ ಎಲ್ಲಾ ದೃಶ್ಯಗಳಲ್ಲಿಯೂ ಭಗವಂತನನ್ನೇ ಕಾಣುವಂತೆ ಮಾಡಿಕೊಳ್ಳುವದು ಇನ್ನೊಂದು ಬಗೆಯ ಉಪಾಸನಾ ವಿಕಾಸವು. ಇದಕ್ಕೆ **ವಿಭೂತಿದರ್ಶನ**ವೆಂದು ಹೆಸರು.

ಭಗವಂತನು ತನ್ನ ಸಾಮಾನ್ಯರೂಪದಿಂದ ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುವ ದಲ್ಲದೆ, ತನ್ನ ವಿಶೇಷರೂಪಗಳಿಂದ ಒಂದೊಂದು ದೃಶ್ಯದಲ್ಲಿ ಒಂದೊಂದು ಬಗೆಯಾಗಿ ಸಂನಿಹಿತನಾಗಿ ಪ್ರಕಟವಾಗಿರುತ್ತಾನೆ. ಉಪಾಸಕನ ಚಿತ್ತವು ಶುದ್ಧವಾದಂತೆಲ್ಲ ಈ ಸಾಂನಿಧ್ಯವು ಅವನ ಮೇಲೆ ಹೆಚ್ಚುಹೆಚ್ಚಾಗಿ ತನ್ನ ಪ್ರಭಾವವನ್ನು ಬೀರುತ್ತದೆ. ಪರಮಾತ್ಮನ ಗುಣಗಳೂ ಬೇರೆಬೇರೆಯ ದೃಶ್ಯಗಳಲ್ಲಿ ಬೇರೆಬೇರೆಯ ರೀತಿಯಿಂದ ಒಡೆದುಕಾಣುವ ಈ ಬಗೆಗೆ ವಿಭೂತಿ- **ವಿಶೇಷೇಣ ಭೂತಿಃ, ವಿವಿಧಾ ಭೂತಿಃ-** ಎಂಬ ಹೆಸರನ್ನು ಅನುಭವಿಗಳು ಕೊಟ್ಟಿರುತ್ತಾರೆ. **"ಯದ್ಯದ್ವಿಭೂತಿಮತ್ಸತ್ತ್ವಂ ಶ್ರೀಮದೂರ್ಜಿತಮೇವ ವಾ । ತತ್ತದೇವಾವಗಚ್ಛ ತ್ವಂ ಮಮ ತೇಜೋಽಂಶ ಸಂಭವಮ್॥"** ಯಾವಯಾವದು ವಿಸ್ತಾರದಿಂದಲೂ ಕಾಂತಿಯಿಂದಲೂ ಉತ್ಸಾಹಾ ತಿಶಯದಿಂದಲೂ ಕೂಡಿರುವದೋ ಅದೆಲ್ಲವೂ ನನ್ನ ತೇಜಸ್ಸಿನ ಒಂದಂಶದಿಂದ ಆದದ್ದು ಎಂದು ತಿಳಿ-ಎಂದು ಭಗವಂತನು ಅಪ್ಪಣೆಕೊಡಿಸಿರುತ್ತಾನೆ. ಈ ದೃಷ್ಟಿಯಿಂದ ನೋಡಿದಾಗ ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ- ಎಂದು ವಿಂಗಡಿಸಿಕೊಂಡಿರುವ ಪ್ರಪಂಚದಲ್ಲೆಲ್ಲ ಇಂಥ ವಿಭೂತಿಗಳು ಸಾಧಕನ ದೃಷ್ಟಿಗೆ ಬೀಳುವದಕ್ಕೆ ಮೊದಲಾಗುವವು. ಭಗವದ್ಗೀತೆಯ ಹತ್ತನೆಯ ಅಧ್ಯಾಯದಲ್ಲಿ ಹೇಳಿರುವ ವಿಭೂತಿಗಳನ್ನು ಈ ದೃಷ್ಟಿ ಯಿಂದ ಉಪಾಸಕನು ಮನನಮಾಡಬೇಕು. ಭಗವಂತನ ವಿಭೂತಿಗಳು ಎಲ್ಲೆಲ್ಲಿಯೂ ಹೇಗೆ ವ್ಯಾಪ್ತವಾಗಿರುವವೆಂಬುದು ಅದರಿಂದ ಮನಸ್ಸಿಗೆ ಚೆನ್ನಾಗಿ ತಟ್ಟುವದು.

ಅರ್ಚನೆಯು ಗೊತ್ತಾದ ಸ್ಥಳ, ಗೊತ್ತಾದ ಪೂಜ್ಯವಸ್ತು, ಗೊತ್ತಾದ ಅರ್ಚನ ಸಾಮಗ್ರಿ, ಗೊತ್ತಾದ ಮಂತ್ರಗಳು, ಗೊತ್ತಾದ ಕ್ರಮಗಳು- ಹೀಗೆ ಪರಿಚ್ಛಿನ್ನ ಬುದ್ಧಿ ಯಿಂದ ಕೂಡಿಯೇ ಪ್ರಾರಂಭಿಸುವದು. ಆಗ ಭಗವದ್ಬುದ್ಧಿಯು ಅಂಕುರಿಸು ವದೇ ಸಾಧನೆಯ ಗುರಿಯಾಗಿರುತ್ತದೆ. ಆದರೆ ಅರ್ಚನೆಯಲ್ಲಿ ಶ್ರದ್ಧಾಭಕ್ತಿಗಳು ಕುದುರಿ ಕೊಂಡಂತೆಲ್ಲ ಪೂಜೆಗೆ ವಿಷಯವಾಗಿಟ್ಟಿರುವ ಪ್ರತಿಮೆಯೇ ಮುಂತಾದ ವಸ್ತುವಿನಲ್ಲಿ ಮಾತ್ರವಲ್ಲದೆ, ಮೂರ್ತಿಯ ಆಭರಣಾದಿಗಳು, ಪೂಜಾಮಂಡಪ ಪೂಜಾ ಸಾಮಾಗ್ರಿ ಯಾದ ಹೂ, ಪತ್ರೆ, ಹಣ್ಣು ನೀರು, ಕಲಶ, ಮಂತ್ರ, ಕರ್ಮ- ಇವುಗಳಲ್ಲಿಯೂ ಭಗವಂತನ ಸಾಂನಿಧ್ಯವನ್ನು ಕಾಣುವದು ಶಕ್ಯವಾಗುವದು. ಪೂಜೆಗೆಂದು ಗೊತ್ತು ಮಾಡಿರುವ ಕೋಣೆಯೇ ದೇವರ ಮನೆಯಾಗುವದು. ಅಲ್ಲಿರುವ ಪ್ರತಿಯೊಂದು

ವಸ್ತುವೂ ಪೂಜ್ಯವಾಗುವದು. ಆಮೇಲೆ ತನ್ನ ಸುತ್ತಲಿರುವ ಜನರಲ್ಲಿಯೂ ಪೂಜ್ಯ ಬುದ್ಧಿಯು ಬೆಳೆಯುವದು, ಬಳಿಕ ಸುತ್ತ ಮುತ್ತಲಿನ ಗಿಡಮರಬಳ್ಳಿಗಳು, ಪಶುಪಕ್ಷಾದಿ ಪ್ರಾಣಿಗಳು, ಎಲ್ಲೆಲ್ಲಿಯೂ ಕಾಣುತ್ತಿರುವ ಪ್ರಕೃತಿಯ ಸುಂದರದೃಶ್ಯಗಳು- ಇವುಗಳಲ್ಲೆಲ್ಲ ಭಗವಂತನ ವಿಭೂತಿಯು ಕಾಣಿಸುವದಕ್ಕೆ ಮೊದಲಾಗುವದು. ಶ್ರೀಕೃಷ್ಣಭಗವಂತನನ್ನು ಕಾಣುವದಕ್ಕೆಂದು ಹೊರಟ ಕುಚೇಲನ ಕಣ್ಣಿಗೆ ದಾರಿಯಲ್ಲಿ ಕಾಣುವ ಗಿಡಮರಗಳೂ ಅವುಗಳಲ್ಲಿರುವ ಹೂ ಹಣ್ಣುಗಳೂ ತನ್ನ ಎದುರಿಗೆ ಬರುವ ಪ್ರಾಣಿಗಳೂ, ಜನಗಳೂ, ಕೊನೆಗೆ ದ್ವಾರಕೆಯ ಕಡೆಯಿಂದ ಬೀಸುತ್ತಿರುವ ಗಾಳಿಯುಕೂಡ, ಶ್ರೀಕೃಷ್ಣಭಗವಂತನ ನೆನಪನ್ನೇ ತಂದುಕೊಟ್ಟಂತೆ, ಉಪಾಸಕನಿಗೆ ಎಲ್ಲೆಲ್ಲಿಯೂ, ತನಗೆ ಉಪಾಸ್ಯನಾದ ಭಗವಂತನ ಭಾವನೆಯೇ ಬೆಳೆದುಕೊಳ್ಳುವದು. '**ಭೂತೇಷು ಭೂತೇಷು ವಿಚಿತ್ಯ ಧೀರಾಃ ।**'ಎಂದು ಶ್ರುತಿಯು ಹೇಳಿರುವಂತೆ ಸಮಸ್ತಭೂತಗಳಲ್ಲಿಯೂ ಭಗವಂತನನ್ನು ಕಾಣುವದೇ ಅರ್ಚನೆಯು ವಿಭೂತಿಯೋಗವಾಗಿ ಅರಳಿಕೊಂಡದ್ದಕ್ಕೆ ಗುರುತಾಗಿರುವದು.

ಅರ್ಚನೆಯು ಮೊದಲು ತನಗೆ ಬೇಕಾದ ಇಷ್ಟಾರ್ಥವನ್ನು ಪಡೆದುಕೊಳ್ಳು ವದಕ್ಕೆಂದು ಮಾಡುವ ಭಗವತ್ಪೂಜೆಯಾಗಿರುವದು. ಆಮೇಲೆ ''**ಅಸ್ಮಾಕಂ ಸಹ ಕುಟುಂಬಾನಾಂ ಕ್ಷೇಮಸ್ಥೈರ್ಯವಿಜಯಾಯುರಾರೋಗ್ಯೈಶ್ವರ್ಯಾಭಿವೃದ್ಧ್ಯರ್ಥಮ್**'' ಎಂಬಂತೆ ತನ್ನ ಕುಟುಂಬಕ್ಕೆಲ್ಲ ಅಭ್ಯುದಯವನ್ನು ಕೋರುವ ಸಂಕಲ್ಪ ವನ್ನು ಮುಂದುಮಾಡಿಕೊಳ್ಳುವದು. ಇನ್ನೂ ಮುಂದುವರಿದರೆ ''**ಮಹಾಜನಾನಾಂ ಕ್ಷೇಮಸ್ಥೈರ್ಯಾದಿಸಿದ್ಧ್ಯರ್ಥಮ್**'' ಎಂಬ ಸಂಕಲ್ಪದಿಂದ ಹೊರಡುವದು. ಹೀಗೆ ಬಹು ಜನರ ಹಿತವನ್ನೂ ಕಲ್ಯಾಣವನ್ನೂ ಕೋರಿ ಮಾಡುವ ಉಪಾಸನೆಯು ಪ್ರಾರಂಭ ವಾಗುವ ಹೊತ್ತಿಗೆ ಕೇವಲಾರ್ಚನೆಯು ವಿಭೂತಿಯೋಗದ ಮಟ್ಟಕ್ಕೆ ಏರಿರುವದು. ಆಗ ಉಪಾಸಕನಿಗೆ ಎಲ್ಲವೂ ಭಗವಂತನ ನೆನಪನ್ನು ತಂದುಕೊಡ ತಕ್ಕದ್ದಾಗಿರುತ್ತದೆ. ಬೆಳಗ್ಗೆ ಪಕ್ಷಿಗಳು ಕೂಗಿದರೆ 'ಏಳಿರಿ, ಭಗವಂತನ ಉದಯರಾಗವನ್ನು ಹಾಡಿರಿ, ಭಗವಂತನ ವೈಭವವನ್ನು ನೋಡಿರಿ'- ಎಂಬ ಸಂದೇಶವನ್ನು ತಂದಿರುವಂತೆ ಭಾಸ ವಾಗುವದು. ಬಯಲಿನಲ್ಲಿ ಅಡ್ಡಾಡುತ್ತಿದ್ದರೆ ಎಲ್ಲೆಲ್ಲಿಯೂ ಭಗವಂತನ ಮಹಿಮೆ ಯನ್ನು ಕಂಡಂತೆ ತೋರುವದು. ಬೆಳಗ್ಗೆ ಸಾಯಂಕಾಲ ದನಗಳು ಗುಂಪಾಗಿ ಹೋಗಿ ಬರುತ್ತಿರುವದನ್ನು ಕಂಡರೆ ಶ್ರೀಗೋಪಾಲಕೃಷ್ಣನ ನೆನಪು ಆಗುವದು. ಸಾಯಂಕಾಲ

ನಕ್ಷತ್ರಗಳು ಮಿಣುಕುವಾಗಲೂ ಚಂದ್ರನು ತನ್ನ ಬೆಳದಿಂಗಳನ್ನು ಎಲ್ಲೆಲ್ಲಿಯೂ ಹರಡುತ್ತಿರುವಾಗಲೂ ಭಗವಂತನ ತೇಜೋಂಶದ ವ್ಯಾಪ್ತಿಯ ನೆನಪಾಗುವದು. ತಾನು ಮಾಡುವ ಕೆಲಸವೆಲ್ಲವೂ ಭಗವಂತನ ಅರ್ಚನೆಯೇ ಎಂದಾಗುವದು, ಅವನಲ್ಲಿರುವ ವಸ್ತುಗಳೆಲ್ಲವೂ ಭಗವಂತನ ಪೂಜೆಯ ಸಾಮುಗ್ರಿಗಳಾಗುವವು.

**'ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿನ್ದತಿ ಮಾನವಃ'** ಎಂಬ ಗೀತೋಕ್ತಿಯು ಇಂಥ ಸಾಧಕನ ವಿಷಯಕ್ಕೆ ಸಾರ್ಥಕವಾಗುವದು. ನಾವು ಯಾವ ಕೆಲಸವನ್ನು ಮಾಡಿದರೂ ಅದನ್ನು ಭಗವಂತನಿಗೆ ಸಂಬಂಧಿಸಿಕೊಂಡರೆ ಆಯಿತು, ಅದೇ ಭಗವಂತನ ಅರ್ಚನೆಯಾಗಬಹುದಾಗಿರುತ್ತದೆ. ಟ್ರಜರಿಯನ್ನು ಕಾಯುವವನು 'ಭಗವಂತನ ನಿಧಿಗಳನ್ನು ಕಾಯುವ ಯಕ್ಷನು ನಾನು' ಎಂದು ಭಾವಿಸಿಕೊಳ್ಳಬಹುದು. ಅಂಚೆಯ ಕಾಗದಗಳನ್ನು ಹಳ್ಳಿಗೆ ಮುಟ್ಟಿಸುವದಕ್ಕೆ ಓಡುತ್ತಿರುವವನು ''ಭಗವಂತನ ಸಂದೇಶವನ್ನು ತೆಗೆದುಕೊಂಡು ಜನರಿಗೆ ಮುಟ್ಟಿಸುತ್ತಿರುವ ದೂತನು ನಾನು'' ಎಂದು ಭಾವಿಸಿಕೊಳ್ಳಬಹುದು. ಕೃಷಿಕಾರನು 'ಭಗವಂತನ ನೈವೇದ್ಯಕ್ಕೆ ಆಹಾರವಸ್ತುಗಳನ್ನು ಬೆಳೆಯುತ್ತಿರುವೆನು' ಎಂದೂ, ವ್ಯಾಪಾರಗಾರನು 'ಭಗವದರ್ಚನೆಯ ಸಾಮುಗ್ರಿಗಳನ್ನು ಒದಗಿಸುವವನು ನಾನು' ಎಂದೂ, ವಕೀಲನು 'ಭಗವಂತನ ಧರ್ಮಸ್ಥಾಪನೆಗೆ ಬೇಕಾದ ಸೇವೆಯನ್ನು ಮಾಡುವವನು ನಾನು' ಎಂದೂ, ಸಿಪಾಯಿಯು 'ಭಗವಂತನ ಧರ್ಮರಕ್ಷಣಾಕಾರ್ಯದಲ್ಲಿ ನಿಯುಕ್ತನಾದವನು' ಎಂದೂ ಭಾವಿಸಿಕೊಳ್ಳಬಹುದು. ಆಗ ವ್ಯವಹಾರದ ಕಾರ್ಯವು ಕೂಡ ಭಗವಂತನ ಅರ್ಚನೆಯಾಗುವದು. ಆ ಕಾರ್ಯದಿಂದ ಸ್ವಪರಕಲ್ಯಾಣವಾಗುವದು; ಅದಕ್ಕೆ ಭಗವಂತನ ಶುಭಾಶೀರ್ವಾದವೂ ದೊರಕುವದು.

ಉಪಾಸನೆಯನ್ನು ಮಾಡುವದಕ್ಕೆ ಆರಂಭಿಸುವ ಸಾಧಕನಿಗೆ ಮೊದಮೊದಲು ತನಗೂ ಪರಮೇಶ್ವರನಿಗೂ ಇರುವ ಸಂಬಂಧವು ಸ್ಪಷ್ಟವಾಗಿ ತಿಳಿದಿರುವದಿಲ್ಲ. ಶ್ರೀಮಂತನೊಬ್ಬನ ಏಕೈಕಪುತ್ರನಾದ ಹುಡುಗನು 'ಅಪ್ಪ, ನನಗೆ ಇದನ್ನು ತೆಗೆದು ಕೊಂಡು, ಅದನ್ನು ತೆಗೆದುಕೊಡು' ಎಂದು ಕೇಳುತ್ತಿರುತ್ತಾನೆ. ಆದರೆ ಮುಂದೆ ಆ ಸಾಹುಕಾರನ ಆಸ್ತಿಗೆಲ್ಲ ತಾನೇ ಒಡೆಯನೆಂಬುದರ ಅರಿವು ಅವನಿಗೆ ಆಗುತ್ತದೆ. ಇದರಂತೆ, ಅಮೃತಸ್ವರೂಪನಾದ ಪರಮೇಶ್ವರನ ಪುತ್ರರೇ ಆಗಿರುವ ನಾವೂ ಆತನ ಆರಾಧನೆಯಿಂದ ಈ ಫಲವು ಬೇಕು, ಆ ಫಲವು ಬೇಕು ಎಂದು ಪರಿಚ್ಛಿನ್ನಬುದ್ಧಿ

ಯಿಂದ ಆರಾಧನೆಮಾಡುತ್ತಿರುತ್ತೇವೆ. ಪರಮೇಶ್ವರನು ನಮಗಿಂತ ಭಿನ್ನವಾಗಿರುವ ಪೂಜ್ಯ ದೇವನೆಂದು ನಮ್ಮ ಭಾವನೆಯಿರುತ್ತದೆ. ಆದರೆ ನಿಜವಾಗಿ ನೋಡಿದರೆ ಆತನು ನಮ್ಮವನೇ ಆಗಿರುತ್ತಾನೆ. ಉಪಾಸನೆಯಿಂದ ಈ ತತ್ತ್ವವನ್ನು ಮನಗಂಡು ಕೊಳ್ಳಬೇಕಾಗಿರುತ್ತದೆ. ಯಾರು ಉಪಾಸನೆಯಿಂದ ಆತನನ್ನು ಒಲಿಸಿಕೊಳ್ಳುವರೋ ಅವರಿಗೆ ಆ ಭಗವಂತನು ಸೇರಿರುತ್ತಾನೆ. ಆದರೆ ನಾವು ಈಗ ಬಡಿದಾಟದಿಂದ 'ನಮ್ಮದೇವರು' ಎಂಬುದನ್ನು ಸಿದ್ಧಪಡಿಸುವುದಕ್ಕೆ ಹೊರಟಿರುತ್ತೇವೆ. ಹರಿಜನರು "ದೇವಾಲಯಕ್ಕೆ ನಮ್ಮನ್ನು ಬಿಡಬೇಕು" ಎಂದು ಆ ಹಕ್ಕಿಗಾಗಿ ಹೊಡೆದಾಡುತ್ತಿರುವರು; ಇತರರು ನಿಮಗೆ ಈ "ನಮ್ಮ ದೇವಾಲಯದೊಳಕ್ಕೆ ಬರಲು ಅರ್ಹತೆಯಿಲ್ಲ!" ಎಂದು ಅವರನ್ನು ಹೊರದೂಡುವದಕ್ಕೆ ಪ್ರಯತ್ನಿಸುತ್ತಿರುವರು. ಆದರೆ ಆಕಾಶದಂತೆ ಸರ್ವಗತವಾದ ಈಶ್ವರನನ್ನು ಯಾವದಾದರೊಂದು ಕಟ್ಟಡದೊಳಗೆ ಪರಿಚ್ಛೇದಗೊಳಿಸಿ ಇರಿಸುವ ಹಕ್ಕು ನಿಜವಾಗಿ ಯಾರಿಗೆ ತಾನೇ ಇರುತ್ತದೆ? ಮಕ್ಕಳು 'ಇದು ನನ್ನದು' 'ಇದು ನನ್ನದು' ಎನ್ನುತ್ತಿರುತ್ತಾರೆ; ಆಮೇಲೆ ಮನೆಯೆಲ್ಲ ತಮ್ಮದೇ ಎಂಬುದನ್ನು ಅರಿತುಕೊಳ್ಳುತ್ತಾರೆ. ಇದರಂತೆ ನಾವು 'ಇದು ನಾನು' 'ಇದು ನನ್ನದು' – ಎಂಬ ಪರಿಚ್ಛಿನ್ನಬುದ್ಧಿಯಿಂದ ಹೊಡೆದಾಡುತ್ತಾ ದುಃಖಪಡುತ್ತಿರುತ್ತೇವೆ. ಆದರೆ ಉಪಾಸನೆಯಿಂದ ಪರಮೇಶ್ವರನ ಅನುಗ್ರಹವನ್ನು ಪಡೆದುಕೊಂಡಾಗ ಶರೀರೇಂದ್ರಿಯಗಳ ಅಭಿಮಾನವನ್ನು ಕಳೆದುಕೊಂಡು ವಿಶಾಲ ಬುದ್ಧಿಯನ್ನು ಪಡೆದು ಎಲ್ಲೆಲ್ಲಿಯೂ ಆನಂದಸಾಗರನಾದ ಪರಮೇಶ್ವರನೇ ಇರುತ್ತಾನೆಂಬು ದನ್ನೂ ಆತನ ಅಲೆಗಳೇ ನಾವೆಲ್ಲರೂ ಎಂಬುದನ್ನೂ ಮನಸ್ಸಿಗೆ ಹತ್ತಿಸಿಕೊಳ್ಳುತ್ತೇವೆ.

ಉಪಾಸನೆಯು ಮುಖ್ಯವಾಗಿ ಮನಸ್ಸಿಗೆ ಸಂಬಂಧಪಟ್ಟದ್ದೆಂಬುದನ್ನು ಆಗಲೆ ಹೇಳಿಟ್ಟಿದೆ. ಆದರೂ ಮನಸ್ಸಿಗೆ ಸಂಬಂಧಪಟ್ಟ ಶರೀರ, ಇಂದ್ರಿಯಗಳು– ಇವುಗಳ ಮೂಲಕವಾಗಿ ಪರಮೇಶ್ವರನನ್ನು ಮುಟ್ಟುವದಕ್ಕೆ ನಾವು ಮೊದಮೊದಲು ಪ್ರಯತ್ನಿಸಬೇಕಾಗುತ್ತದೆ. ಶರೀರಕ್ಕಿಂತ ಇಂದ್ರಿಯಗಳು ಪರಮಾತ್ಮನಿಗೆ ಹತ್ತಿರ; ಅವುಗಳೊಳಗೆ ವಾಕ್ಕಿಗೆ ಹೆಚ್ಚಿನ ಪ್ರಾಧಾನ್ಯವಾಗಿದೆ. ಏಕೆಂದರೆ ವಾಕ್ಕಿನಿಂದ ಮನಸ್ಸಿನ ಮೇಲೆ ಹೆಚ್ಚಿನ ಪರಿಣಾಮವಾಗುತ್ತದೆ. ನಾವು ಆಡುವ ಪ್ರತಿಯೊಂದು ಮಾತಿನಿಂದಲೂ ಮನಸ್ಸಿನಿಂದಲೂ ಒಂದೊಂದು ಅಲೆ ಏಳುತ್ತಿರುವದು. ಹೊರನೋಟದವರಾದ ನಮ್ಮಗಳಿಗೆ ಇದರ ನಿಜವು ಅಷ್ಟಾಗಿ ತಿಳಿದಿರುವದಿಲ್ಲ, ಆದ್ದರಿಂದ ವಾಗಿಂದ್ರಿಯದ ಸಹಾಯದಿಂದ

ಪರಮಾತ್ಮನ ಸಮೀಪಕ್ಕೆ ಹೋಗುವ ಪ್ರಕಾರಗಳನ್ನು ದೊಡ್ಡವರು ವಿಂಗಡಿಸಿಕೊಟ್ಟು ಜನರಿಗೆ ಬೋಧಿಸಿರುತ್ತಾರೆ. ಸ್ತೋತ್ರ, ಭಜನ, ಕೀರ್ತನ, ಜಪ-ಇವೆಲ್ಲಕ್ಕೂ ವಾಗಿಂದ್ರಿಯವು ಸಹಾಯವಾಗಿರುತ್ತದೆ; ಈ ಒಂದೊಂದು ಉಪಾಸನಾಪ್ರಕಾರವೂ ನಮ್ಮ ಮನಸ್ಸನ್ನು ಪರಮೇಶ್ವರನ ಬಳಿಗೆ ಹೋಗುವದಕ್ಕೆ ಸಜ್ಜುಗೊಳಿಸುತ್ತದೆ.

ಸ್ತೋತ್ರವೆಂದರೆ ಪರಮಾತ್ಮನಲ್ಲಿರುವ ಗುಣಗಳನ್ನು ಹೊಗಳಿ ಆತನ ಸ್ವಭಾವವನ್ನು ಮನಸ್ಸಿಗೆ ತಂದುಕೊಳ್ಳುವದು. ಅನಂತಕಲ್ಯಾಣಗುಣಗಳಿಂದೊಡಗೂಡಿದ ಆ ಭಗವಂತನನ್ನು ಎಷ್ಟು ಹೊಗಳಿದರೆ ತಾನೆ ಅವುಗಳ ಪಾರವನ್ನು ಕಂಡು ಕೊಳ್ಳಲಾದೀತು? ಆಕಾಶವು ಎಷ್ಟು ಉನ್ನತವಾಗಿದ್ದರೂ ಬೇರೆಬೇರೆಯ ಹಕ್ಕಿಗಳು ತಮ್ಮ ಶಕ್ತಿಯಿದ್ದಷ್ಟು ಮೇಲಕ್ಕೆ ಹಾರುತ್ತಿರುವಂತೆ ನಾವೂ ನಮ್ಮ ನಮ್ಮ ಶಕ್ತಿಯಿದ್ದಷ್ಟು ಪರಮೇಶ್ವರನ ಗುಣಗಳನ್ನು ಗಾನಮಾಡಬೇಕು. ಇದರಿಂದ ನಮ್ಮ ಅಂತಃಕರಣವು ಶುದ್ಧವಾಗುವದು, ಪರಮೇಶ್ವರ ಸ್ವರೂಪಕ್ಕೆ ಹತ್ತಿರವಾಗುವದು. ಆದಿಕಾವ್ಯವಾದ ಶ್ರೀಮದ್ರಾಮಾಯಣವು 'ಕಾವ್ಯ'ವೆನಿಸಿಕೊಂಡಿರುವದಕ್ಕೆ ಅದರಲ್ಲಿ ಶ್ರೀರಾಮರೂಪನಾದ - ರಮಣೀಯಸ್ವರೂಪನಾದ, ಆನಂದರೂಪನಾದ ಪರಮಾತ್ಮನ - ಗುಣಗಳನ್ನು ವರ್ಣಿಸಿರುವದೇ ಕಾರಣ. ಇಂದ್ರಿಯ ಪ್ರಪಂಚವನ್ನು ಮೀರಿರುವ ಪರಮಾತ್ಮನ ಸ್ವರೂಪವನ್ನೂ ಗುಣಗಳನ್ನೂ ಕಂಡವನೇ ನಿಜವಾದ ಕವಿ. ಪರಮಾತ್ಮನ ಸ್ವರೂಪವನ್ನೂ ಗುಣಗಳನ್ನೂ ಭಾವಿಸಿಕೊಂಡು ಸ್ತೋತ್ರಮಾಡಿದಂತೆಲ್ಲ ನಮ್ಮ ಹೃದಯವು ವಿಶಾಲ ವಾಗುತ್ತದೆ; ಅದರಿಂದ ಮನಸ್ಸೆಂಬ ಹೊಲವು ಹುಲುಸಾಗುವದು. ಅದರಲ್ಲಿರುವ ಕಳೆಗಳು ಹೋಗಿ ಉತ್ತಮವಾದ ಭಾವನೆಗಳ ಪೈರು ಬೆಳೆಯುವದು.

ಪರಮಾತ್ಮನ ನಾಮಗಳನ್ನು ಉಚ್ಚರಿಸುತ್ತಾ ಅವುಗಳಲ್ಲಿ ಗರ್ಭಿತವಾಗಿರುವ ಗುಣವನ್ನು ಮನದಂದುಕೊಳ್ಳುವದು ಒಂದುವಿಶೇಷರೂಪದ ಸ್ತೋತ್ರವು. ವಿಷ್ಣುಸಹಸ್ರ ನಾಮವೇ ಮುಂತಾದ ಸ್ತೋತ್ರಗಳ ಪಾಠವು ಈ ಪ್ರಕಾರಕ್ಕೆ ಸೇರಿದ್ದು. ವಿಷ್ಣುಸಹಸ್ರ ನಾಮದಲ್ಲಿ ಮೊಟ್ಟಮೊದಲಿರುವ 'ವಿಶ್ವಮ್' ಎಂಬ ನಾಮದ ಅರ್ಥವನ್ನು ಮನದಂದುಕೊಂಡವರಿಗೆ ಎಂಥ ಲಾಭವಿರುವದು ನೋಡಿ! ವಿಶ್ವವೆಂದರೆ ಎಲ್ಲವೂ; ಈ ಎಲ್ಲ ಎಂಬ ಮಾತಿಗೆ ನಮ್ಮನಮ್ಮ ಯೋಗ್ಯತೆಗೆ ತಕ್ಕಂತೆ ಅರ್ಥವಾಗುವದು. ಒಂದು ಸಮುದ್ರದ ಮೇಲಿರುವ ಒಂದು ಮಂಜಿನ ದೋಣಿಯಲ್ಲಿರುವ ಮಂಜಿನ ಮನುಷ್ಯನು, ಮಂಜಿನ ಹುಟ್ಟು- ಎಲ್ಲವೂ ನೀರೇ ಆಗಿರುವಂತೆ ನಾವು ವಿಚಾರ

ಮಾಡುತ್ತಾ ಹೋದಂತೆಲ್ಲ ನಾವು ಕಾಣುವ, ಕಲ್ಪಿಸುವ, ಶಾಸ್ತ್ರಗಳಿಂದ ತಿಳಿಯ ಬಹುದಾದದ್ದೆಲ್ಲವೂ ಈ 'ವಿಶ್ವ' ಎಂಬ ಮಾತಿನ ಅರ್ಥದಲ್ಲಿಯೇ ಅಡಕವಾಗಿ ಬಿಡುವದು. ಈ ನಾಮದ ಅರ್ಥವನ್ನು ತಿಳಿದಷ್ಟೂ ನಾವು ಆ ಭಗವಂತನ ಸಮೀಪಕ್ಕೆ ಹೋಗುವೆವೆಂಬುದನ್ನು ಹೇಳಬೇಕಾದದ್ದಿಲ್ಲ.

ಪರಮಾತ್ಮನು ನಮ್ಮ ಎದುರಿಗೆ ಇರುವಂತೆ ಭಾವಿಸಿಕೊಂಡು ಪರಮಾತ್ಮನ ಸ್ವರೂಪವನ್ನು ಭಾವನೆ ಮಾಡುತ್ತಾ ಆತನನ್ನು ಹೊಗಳುವದೂ ಮತ್ತೊಂದು ಬಗೆಯ ಸ್ತೋತ್ರವು. ಇದರಲ್ಲಿ ಪರಮೇಶ್ವರನ ಸಾಂನಿಧ್ಯಭಾವನೆಗೆ ಹೆಚ್ಚು ಅವಕಾಶವಿರುತ್ತದೆ. 'ದೇವ, ನಾನು ದಾನಕ್ಕೆ ಪಾತ್ರನು, ನೀನು ದಾತೃಗಳಲ್ಲೆಲ್ಲ ಶ್ರೇಷ್ಠನು; ಇದೇ ದಾನಕ್ಕೆ ಕಾಲವು. ನಿನ್ನ ಸ್ಥಿರಭಕ್ತಿಯನ್ನೇ ನನಗೆ ಕೊಡು!' ಎಂದು ಒಬ್ಬ ಭಕ್ತನು ಪ್ರಾರ್ಥಿಸಿ ಕೊಂಡಿದಾನೆ. ಪರಮಾತ್ಮನ ಮಹಿಮೆಯನ್ನೂ ತನ್ನ ಅಲ್ಪತ್ವವನ್ನೂ ಮನದಂದು ಕೊಂಡು ಭಕ್ತಿಯಿಂದ ತನ್ನನ್ನು ಕರಗಿಸಿ ಪರಮಾತ್ಮನಲ್ಲಿ ಒಂದಾಗಿಸಿಬಿಡುವದು ಈ ಉಪಾಸನೆಯ ಗುಟ್ಟು. "ಶ್ರೀರಾಮನೆ, ತುಳಸೀದಾಸನು ನನ್ನವನು ಎಂದು ಒಂದು ಸಲ ಬಾಯಿಬಿಟ್ಟು ಅನ್ನು!" ಎಂದು ಭಕ್ತನು ಬೇಡಿಕೊಂಡಿರುವದರಲ್ಲಿ ಎಂಥ ಭಕ್ತಿ ಭರವು ತುಂಬಿದೆ? – ಈ ರೀತಿಯಲ್ಲಿ ಸ್ತುತಿಯಲ್ಲಿ ಮಗ್ನನಾಗಿ ನಾನು, ಭಗವಂತ, ಸ್ತೋತ್ರ- ಎಂಬ ಭೇದವನ್ನು ಕಳಚಿಕೊಂಡು ಎಲ್ಲೆಲ್ಲಿಯೂ ಪರಮೇಶ್ವರನನ್ನೇ ಕಂಡುಕೊಂಡವರೇ ಉಪಾಸಕರಲ್ಲಿ ಶ್ರೇಷ್ಠರು.

*****

# 51. ಜಪ

ಪರಮಾತ್ಮನ ಉಪಾಸನೆಗೆ ನಾನು, ನನ್ನದು- ಎಂಬ ಭಾವನೆಗಳೇ ಅಡ್ಡಿ. ಆದ್ದರಿಂದ ಉಪಾಸನೆಯ ಉಪದೇಶಗಳಲ್ಲಿ ಈ ಭಾವನೆಗಳು ಹೇಗೆ ಕಡಿಮೆಯಾಗ ಬೇಕೆಂಬುದನ್ನು ಮೊದಲು ತಿಳಿಸುತ್ತಾರೆ. ವೈದಿಕಕಾಲದಲ್ಲಿ ಶಾಸ್ತ್ರೀಯಕರ್ಮವನ್ನು ಮಾಡುವದರಿಂದಲೇ ಲೌಕಿಕಜ್ಞಾನಕರ್ಮಗಳ ಅಡಚಣೆಯು ತಪ್ಪುತ್ತಿತ್ತು. ಏಕೆಂದರೆ ಆ ಕರ್ಮಗಳಿಗೆ ಅಂಗವಾಗಿ ಉಪನಿಷತ್ತುಗಳಲ್ಲಿ ಕೆಲವು ಉಪಾಸನೆಗಳನ್ನು ಹತ್ತಿಸಿ ಕ್ರಮಕ್ರಮವಾಗಿ ಪ್ರತೀಕೋಪಾಸನೆಗಳನ್ನು ಕೇವಲೋಪಾಸನೆಗಳನ್ನೂ ತಿಳಿಸಿತ್ತು. ಆದರೆ

ಅವುಗಳು ವೇದದಲ್ಲಿ ಅಧಿಕಾರವುಳ್ಳವರಿಗೆ ಮಾತ್ರ ಪ್ರಯೋಜನಕರವಾಗಿದ್ದವು. ಪುರಾಣೇತಿಹಾಸಗಳಲ್ಲಿ ಭಗವಂತನ ಅವತಾರಗಳನ್ನೂ ಅವುಗಳಲ್ಲಿ ಆತನು ಪ್ರಕಟಪಡಿಸಿದ ಗುಣಕರ್ಮಲೀಲೆಗಳನ್ನೂ ವರ್ಣಿಸಿರುತ್ತದೆ. ಅವುಗಳ ಉಪಾಸನೆಯು ಎಲ್ಲಾ ವರ್ಣದವರಿಗೂ ಸುಲಭವಾಗಿ ಅಭ್ಯಾಸಮಾಡುವದಕ್ಕೆ ಬರುವಂತೆ ಇರುತ್ತದೆ.

ಈಗ್ಗೆ ನಮ್ಮಗಳಿಗೆ ವೇದಾಭ್ಯಾಸವೂ ವೇದೋಕ್ತವಾದ ಕರ್ಮೋಪಾಸನೆಗಳ ಪರಿಚಯವೂ ಇಲ್ಲದಂತೆ ಆಗಿಬಿಟ್ಟಿದೆ. ಪುರಾಣಗಳಲ್ಲಿ ಹೇಳಿರುವಸಾಧನಗಳನ್ನು ಕೂಡ ಮಾಡುವದಕ್ಕೆ ಅನೇಕ ಅಡಚಣೆಗಳಿವೆ. ಅನೇಕರಿಗೆ ಪುರಾಣ ಶ್ರವಣಕ್ಕೇ ಅವಕಾಶವಿರುವದಿಲ್ಲ, ಅವಕಾಶವಿದ್ದವರು ಕೂಡ ಪುರಾಣದಲ್ಲಿ ವರ್ಣಿಸಿರುವ ಕಥೆಗಳಲ್ಲಿ ಭಗವಂತನ ಮತ್ತು ಭಗವದ್ಭಕ್ತರ ಸದ್ಗುಣಗಳು, ಸದಾಚರಣೆಗಳು -ಮುಂತಾದವುಗಳ ಕಡೆಗೆ ಮುಖ್ಯವಾಗಿ ಚಿತ್ತವನ್ನು ಹೊರಳಿಸದೆ, ಯುದ್ಧವರ್ತನೆ, ದುಷ್ಟರವರ್ತನೆ- ಇವುಗಳನ್ನೇ ಹೆಚ್ಚಾಗಿ ನೆನಪಿನಲ್ಲಿಡುತ್ತಾರೆ. ರಾಮಾಯಣವನ್ನು ಶ್ರವಣಮಾಡಿದವರಿಗೆ ರಾಮನು ಪ್ರದರ್ಶನ ಮಾಡಿದ ಸತ್ಯಧರ್ಮಗಳ ಆದರ್ಶವು ಮನಸ್ಸಿನಲ್ಲಿ ನಿಲ್ಲಬೇಕು; ಶ್ರೀರಾಮನ ಏಕಪತ್ನೀವ್ರತ, ಭೋಗದಲ್ಲಿ ಅನಾಸಕ್ತಿ, ಪಿತೃವಾಕ್ಯಪರಿಪಾಲನೆ, ಭ್ರಾತೃವಾತ್ಸಲ್ಯ, ಋಷಿಗಳಲ್ಲಿ ಪೂಜ್ಯಭಾವ, ಅಧರ್ಮದ ನಿಗ್ರಹಕ್ಕಾಗಿ ತೋರಿಸಿದ ಸ್ವಾರ್ಥತ್ಯಾಗ- ಮುಂತಾದ ಸದ್ಗುಣಪರಂಪರೆಗಳು ಕಣ್ಣಿಗೆಕಟ್ಟಿದಂತೆ ಆಗಬೇಕು. ಅದಕ್ಕೆ ಬದಲು ಮಾರೀಚನ ಮಾಯೆ, ರಾವಣನ ಕಾಮುಕತನ, ರಾಕ್ಷಸರ ವಂಚಕತನ- ಇವೇ ಮುಂತಾದವುಗಳು ಆಗಾಗ್ಗೆ ಶ್ರೋತೃಗಳ ಚಿತ್ತದಲ್ಲಿ ಹೆಚ್ಚು ಓಡಾಡುವವು. ಇದಕ್ಕೆ ಚಿತ್ತದ ಕೆಟ್ಟವಾಸನೆಗಳೇ ಕಾರಣ. ಪುರಾತನಕಾಲದವರ ಪಾಪಭೀತಿ, ಧರ್ಮದಲ್ಲಿ ಶ್ರದ್ಧೆ, ಗುರುಹಿರಿಯರಲ್ಲಿ ಭಕ್ತಿ, ಪರಿಶುದ್ಧ ಜೀವನ, ಅತಿಥಿಅಭ್ಯಾಗತರ ಸೇವೆಯಲ್ಲಿ ಆದರ, ಅಧ್ಯಾತ್ಮಸಾಧನದಲ್ಲಿ ಆಸಕ್ತಿ, ದೊಡ್ಡವರಿಂದ ಅವರು ಸಾಧನಗಳನ್ನು ಕಲಿತುಕೊಂಡ ಬಗೆ, ಭಗವಂತನನ್ನು ಸ್ತೋತ್ರ ಮಾಡಿರುವ ಪ್ರಕಾರ-ಇವುಗಳನ್ನು ನಾವು ಮನಸ್ಸಿಗೆ ತಂದುಕೊಂಡಷ್ಟೂ ನಮ್ಮಲ್ಲಿರುವ ಅಹಂಕಾರ ಮಮಕಾರಗಳು ಹಿಮ್ಮೆಟ್ಟುವವು. ಉಪಾಸನಾಮಾರ್ಗದಲ್ಲಿ ಮುಂದುವರಿಯುವದಕ್ಕೆ ಅನುಕೂಲವಾಗುವದು.

ಕಲಿಮಹಿಮೆಯಿಂದ ಪುರಾಣಶ್ರವಣದಲ್ಲಿ ಕೂಡ ಶ್ರದ್ಧೆಯು ಕಡಿಮೆಯಾಗುತ್ತಿರುವ ಈ ಕಾಲಕ್ಕೆ, ಶ್ರದ್ಧೆಯಿರುವವರಿಗೂ ಸರಿಯಾದ ಉಪದೇಶವನ್ನು ಪುರಾಣಗಳ ಮೂಲಕವೂ ಉಪದೇಶಿಸುವ ಮಹಾತ್ಮರು ದುರ್ಲಭವಾಗುತ್ತಿರುವ ಈ ಕಾಲಕ್ಕೆ ನಮ್ಮ

ಯೋಗ್ಯತೆಗೆ ತಕ್ಕಂತೆ ಸುಲಭಸಾಧ್ಯವಾದ ಸಾಧನಗಳನ್ನು ಒದಗಿಸಿಕೊಟ್ಟು ದೇಶ ಭಾಷೆಗಳಲ್ಲಿಯೇ ಉಪದೇಶಮಾಡಿರುವ ಸಾಧುಸಂತರ ಮಹೋಪಕಾರವು ಎಂದಿಗೂ ಮರೆಯತಕ್ಕದ್ದಾಗಿಲ್ಲ.

ಉಪಾಸನೆಯೆಂದರೆ ಎಡೆಬಿಡದೆ ಉಪಾಸ್ಯದ ಚಿಂತನೆಯೇ ನಡೆಯುತ್ತಿರುವದು, ಅದಕ್ಕಿಂತ ಬೇರೆಯಾದ ಮತ್ತೊಂದರ ಪ್ರತ್ಯಯವು ಮನಸ್ಸಿನಲ್ಲಿ ಅಡ್ಡ ಸುಳಿಯದಿರುವದು ಎಂದು ಹೇಳಿರುತ್ತೇನೆ. ಶರೀರಪ್ರಧಾನವಾದ ಕರ್ಮಗಳಿಂದ ಪರಮಾತ್ಮನ ಚಿಂತೆಯನ್ನು ಹತ್ತಿಸಿಕೊಂಡು ಲೌಕಿಕವಿಷಯಗಳ ಕೋಟಲೆಯಿಂದ ದೂರವಾಗುವದಕ್ಕೆ **'ಅರ್ಚನ'** ಕ್ರಮವು ಸಹಾಯಕವಾಗಿರುತ್ತದೆ. ವಾಕ್ಪ್ರಧಾನವಾದ ಸಾಧನದಿಂದ ಈ ಮಾರ್ಗದಲ್ಲಿಯೇ ಮುಂದುವರಿಯುವದಕ್ಕೆ **'ಸ್ತೋತ್ರ'**ಗಳ ಅಭ್ಯಾಸವು ಪ್ರಯೋಜನಕಾರಿಯಾಗುತ್ತದೆ. ಈ ಎರಡು ಮಾರ್ಗಗಳನ್ನೂ ಸ್ವಲ್ಪ ಮಟ್ಟಿಗೆ ಹಿಂದಿನ ದಿನಗಳಲ್ಲಿ ಪರಾಮರ್ಶಿಸಿರುತ್ತೇನೆ. ಇನ್ನು ವಾಕ್ಕಿನಿಂದ ಮೊದಲಾಗಿ ಮನಸ್ಸಿನವರೆಗೂ ತಲುಪುವದಕ್ಕೆ ಸಹಾಯಕವಾಗುವ ಜಪದ ಪದ್ಧತಿಯನ್ನು ಕುರಿತು ಕೆಲವು ಮಾತುಗಳನ್ನು ಆಡಬೇಕೆಂದಿರುತ್ತೇನೆ. ಈ ಜಪದ ಅನುಷ್ಠಾನವು ಬಹುಪುರಾತನಕಾಲದಿಂದ ನಮ್ಮ ಕಾಲದವರೆಗೂ ನಡೆದುಕೊಂಡು ಬಂದಿದೆ. ಇದರ ಅನುಷ್ಠಾನದಿಂದ ಆಗುವ ಲಾಭವನ್ನು ಅನುಭವಕ್ಕೆ ತೆಗೆದುಕೊಂಡಿರುವ ಮಹಾತ್ಮರು ನಮ್ಮ ಅದೃಷ್ಟಕ್ಕೆ ಈಗಲೂ ಸಿಕ್ಕುತ್ತಿದ್ದಾರೆ. ಈ ಕಾಲಕ್ಕೆ ಇದು ಸುಲಭಸಾಧ್ಯವಾದ ಸಾಧನವೂ ಆಗಿದೆ. ಆದ್ದರಿಂದ ಇದನ್ನು ಕುರಿತು ನಾವು ಆದರದಿಂದ ವಿಚಾರಮಾಡಬೇಕು.

ಶರೀರಪ್ರಧಾನವಾದ ಮತ್ತು ವಾಕ್ಪ್ರಧಾನವಾದ ಸಾಧನಗಳು ಫಲಕಾರಿಯಾಗುವದಕ್ಕೆ ಒಂದು ಪ್ರಬಲವಾದ ಅಡ್ಡಿ ಎಂದರೆ ಪರಮಾತ್ಮನ ಸಂನಿಧಿಯ ಅರಿವು ನಮಗೆ ಇಲ್ಲದಿರುವದೇ. ನಮ್ಮ ಮಾತಾಗಲಿ ಕಾರ್ಯವಾಗಲಿ ಮನಸ್ಸಿನ ಸಂಸ್ಕಾರಕ್ಕೆ ಅನುಗುಣವಾಗಿ ಉಂಟಾಗುತ್ತವೆ. ಈಗ ನಮಗೆ ಪದಾರ್ಥಗಳನ್ನು ಅವುಗಳಿದ್ದಂತೆಯೇ ನೋಡಿ ಮೆಚ್ಚುವ, ಅವುಗಳ ಸ್ವಭಾವಕ್ಕೆ ತಕ್ಕಷ್ಟೇ ಬೆಲೆಯನ್ನು ಕೊಡುವ, ಯೋಗ್ಯತೆಯಿಲ್ಲವಾಗಿಬಿಟ್ಟಿದೆ. ಇದಕ್ಕೆ ಕಾರಣವೇನೆಂದರೆ ಪ್ರತಿಯೊಂದನ್ನೂ ನಾನು ಎಂಬ ಕೇಂದ್ರಕ್ಕೆ ಸಂಬಂಧಿಸಿಕೊಂಡೇ ನೋಡುವ ಸಂಸ್ಕಾರವು ನಮ್ಮ ಮನಸ್ಸಿಗೆ ಇದ್ದುಬಿಟ್ಟಿದೆ. ಹೊರಗೆ ಒಂದು ತೋಟ, ಒಂದು ಪ್ರಾಣಿ, ಒಂದು ಚಿತ್ರ- ಮುಂತಾದವುಗಳನ್ನು ಅವುಗಳಿದ್ದಂತೆಯೇ ಮನಸ್ಸಿಗೆ ತೆಗೆದುಕೊಳ್ಳುವದು ನಮ್ಮಿಂದ ಆಗದೆ

ಇರುತ್ತದೆ. ಇದು ನನ್ನ ತೋಟ, ಈಕೆ ನನ್ನ ಹೆಂಡತಿ, ಇವನು ನನ್ನ ಮಗ, ಇದು ನನ್ನ ವಿದ್ಯೆ, ನನ್ನ ಪದವಿ – ಎಂದು ಮಾಡಿಕೊಂಡೇ ಅದಕ್ಕೆ ಬೆಲೆಕೊಡುತ್ತೇವೆ- 'ನಾನು' ಎಂಬ ಕೇಂದ್ರಕ್ಕೆ ಸಂಬಂಧಿಸದಿದ್ದರೆ ಅದಕ್ಕೆ ಬೆಲೆಯನ್ನು ಕೊಡುವ ಯೋಗ್ಯತೆ ನಮಗೆ ಇಲ್ಲ. ನನಗೆ ಬೇಕಾದದ್ದು ಒಳ್ಳೆಯದು, ನನಗೆ ಬೇಡವಾದದ್ದು ಕೆಟ್ಟದ್ದು- ಹೀಗೆ ನನಗೆ ಸಂಬಂಧಿಸಿಕೊಂಡೇ ವಸ್ತುಗಳನ್ನು ನೋಡಬೇಕಾಗಿರುವದರಿಂದ ವಸ್ತುಗಳಲ್ಲಿರುವ ಗುಣಗಳನ್ನು ನಾವು ನೋಡಿ ನಲಿಯಲಾರದವರಾಗಿದೇವೆ. ನಿಜವಾಗಿ ಪರಮಾತ್ಮನೇ ಎಲ್ಲಕ್ಕೂ ಕೇಂದ್ರವು; ಅವನಿಗೆ ಸಂಬಂಧಿಸಿಯೇ ಯಾವದಕ್ಕಾದರೂ ಬೆಲೆಯಿದೆ, ಇಲ್ಲದಿದ್ದರೆ ಅದರ ಬೆಲೆ ಸೊನ್ನೆ; ಈ ತಿಳಿವಳಿಕೆಯು ಮೊದಲು ನಮಗೆ ಬರಬೇಕು. ಇದಕ್ಕೆ ಈಶ್ವರನ ಸರ್ವವ್ಯಾಪಕತ್ವ ಸರ್ವಶಕ್ತಿತ್ವ ಸರ್ವಜ್ಞತ್ವ- ಮುಂತಾದ ಘನತೆಯು ನಮ್ಮ ಅರಿವಿಗೆ ಹತ್ತಬೇಕು. ನಾನು ಎಂಬುದರ ಅಲ್ಪತ್ವವೂ ಮನಗಾಣಬೇಕು. ನನ್ನ ಶರೀರಕ್ಕೂ ವಾಕ್ಕಿಗೂ ಮಿಕ್ಕ ಇಂದ್ರಿಯಗಳಿಗೂ ಮನಸ್ಸಿಗೂ ಒಂದಾನೊಂದು ಮೂಲ ದಿಂದ ಶಕ್ತಿಯು ಹರಿದುಬರುತ್ತಿದೆ, ಅದರ ಬಲದಿಂದಲೇ ಈ ನನ್ನ ಕಾರ್ಯ ಕರಣಸಂಘಾತವು ತನ್ನ ವ್ಯಾಪಾರವನ್ನು ಮಾಡುತ್ತಿದೆ ಎಂಬ ಅರಿವು ಮನಸ್ಸಿನಲ್ಲಿ ಎದ್ದುಕೊಳ್ಳಬೇಕು. ಸಾಧುಸತ್ಪುರುಷರ ಸಂಗವಾಗಿ ಅವರ ಅನುಗ್ರಹವಾದರೆ ಈ ಅರಿವು ಮೆಲ್ಲಮೆಲ್ಲಗೆ ನಮ್ಮ ಮನದಲ್ಲಿ ಮೂಡುವದು. ಆಗ ನಮ್ಮ ಅಹಂ ಕಡಿಮೆ ಯಾಗುವದು. ಆಗಲೇ ನಿಜವಾಗಿ ನಾವು ಮಾಡುವ ಅರ್ಚನೆ, ಸ್ತೋತ್ರ ಮುಂತಾದ ಸಾಧನೆಗಳು ವೀರ್ಯವತ್ತಾಗಿ ಕಳೆಗೂಡಿಕೊಳ್ಳುವವು. ಅರ್ಜುನನು ತನ್ನ ಎದುರಿಗೆ ಪರಮೇಶ್ವರನೇ ಬಂದಿದ್ದರೂ ಇವನು ಕಿರಾತನು ಎಂದು ಭಾವನೆಯಿರುವವರೆಗೂ ಅವನಲ್ಲಿ ಅನಾದರವುಳ್ಳವನಾಗಿದ್ದನು. ಆದರೆ ಮುಂದೆ ತನ್ನ ಹಮ್ಮೆಲ್ಲ ಅಡಗಿ ಪರಮೇಶ್ವರನೇ ಇವನೆಂಬ ಭಾವವು ಯಾವಾಗ ಮೊಳೆಯಿತೋ ಆಗ 'ಅಯ್ಯೋ! ಜಗತ್ತಿಗೆಲ್ಲ ಆಧಾರನಾಗಿರುವ ಈ ಮಹಾದೇವನನ್ನು ನಾನು ಅರಿಯದಾದೆನಲ್ಲ!' – ಎಂದು ಪಶ್ಚಾತ್ತಾಪದಿಂದ ಪರಿತಪಿಸಿದನು. ಹೀಗೆಯೇ ಪರಮಾತ್ಮನ ಮಹಿಮೆಯ ಅರಿವು ನಮ್ಮ ಅಹಂಕಾರವು ಮಟ್ಟಾದ ಪ್ರಮಾಣದಿಂದ ನಮಗೆ ಮನವರಿಕೆ ಯಾಗುವದು.

ಆದ್ದರಿಂದ ಹೊರಗಿನ ಸಾಧನಕ್ಕಾದರೂ ಮನಸ್ಸಿನ ಸಹಾಯದಿಂದಲೇ ಬೆಲೆ ಬರಬೇಕಾಗಿರುತ್ತದೆ. ಶರೀರದಿಂದ ಮಾಡಿದ್ದು ಮಾಡಿದ್ದೇ ಅಲ್ಲ, ಮನಸ್ಸಿನಿಂದ

ಮಾಡಿದ್ದೇ ಮಾಡಿದ್ದು. ಇಲ್ಲಿ ಒಂದು ಸಪ್ತಾಹವು ನಡೆದಿರುತ್ತದೆ. ಇಲ್ಲಿಗೆ ಬಂದಿರುವವರೆಲ್ಲರೂ ಒಬ್ಬ ಭಗವಂತನ ಸೇವೆಗೆಂದೇ ಸೇರಿರುತ್ತಾರೆ. ಅವರಲ್ಲೆಲ್ಲ ಒಬ್ಬ ಭಗವಂತನ ಮಹಿಮೆಯೇ ಹೊರಸೂಸುತ್ತಿದೆ. ಇದೆಲ್ಲ ಆ ಪರಮೇಶ್ವರನ ಮಹಿಮೆಯೇ, ಆತನ ವೈಭವವೇ- ಎಂಬ ಅರಿವು ನನ್ನ ಮನಸ್ಸಿನಲ್ಲಿ ಮೂಡಿದರೆ ನಾನು ಧನ್ಯನಾಗುವೆನು. ಆದರೆ ಅಂಥ ಭಾವನೆಯು ಬಯಸಿಕೊಂಡ ಮಾತ್ರದಿಂದ ದೊರೆಯಲಾರದು. ಅದಕ್ಕೆ ಅಭ್ಯಾಸವು ಬೇಕು. ವಾಙ್ಮಯವಾದ ಇಂಥ ಅಭ್ಯಾಸವು ಜಪವೆನಿಸುವದು.

ವಾಙ್ಮಯಸಾಧನಕ್ಕೂ ಮನಸ್ಸಿನ ಒತ್ತಾಸೆ ಇದ್ದೇ ಇರಬೇಕೆಂದು ಆಗಲೆ ಹೇಳಿರುತ್ತೇನೆ. ಈಗ್ಗೆ ಕೆಲವರು ಗಿಳಿಯಂತೆ ನಾಮವನ್ನು ಮತ್ತೆ ಮತ್ತೆ ಉಚ್ಚರಿಸುವದೂ ಜಪವಾಗುವದೆಂದು ಅಭಿಪ್ರಾಯಪಡುತ್ತಿದಾರೆ. ಪರಮಾತ್ಮನ ಪವಿತ್ರ ನಾಮೋಚ್ಚಾರಣೆಯು ಹೆಚ್ಚುಹೆಚ್ಚು ನಡೆದಷ್ಟೂ ಹೆಚ್ಚುಹೆಚ್ಚಿನ ಫಲವಾದೀತೆಂಬುದಕ್ಕೆ ಯಾವ ಸಂಶಯವೂ ಇಲ್ಲ. ಆದರೆ ಬರಿಯ ಉಚ್ಚಾರಣೆಯು **'ಜಪ'** ಎಂಬ ಗೌರವದ ಅಭಿಧಾನಕ್ಕೆ ಅರ್ಹವಾಗಲಾರದು. ಆದ್ದರಿಂದಲೇ ಪಾತಂಜಲಯೋಗ ಸೂತ್ರದಲ್ಲಿ **'ತಜ್ಜಪಸ್ತದರ್ಥಭಾವನಮ್'** ಎಂದು ಹೇಳಿರುತ್ತದೆ. ಭಾವನೆಯು ಮನಸ್ಸಿನ ಕ್ರಿಯೆ ಎಂದು ಹೇಳಬೇಕಾದದ್ದೇ ಇಲ್ಲವಷ್ಟೆ?

ಈ ಜಪವು ಉಚ್ಚೈರುಪಾಂಶುಮಾನಸಗಳೆಂಬ ಮೂರು ಪ್ರಕಾರದ್ದಾಗಿರುತ್ತದೆ. ಗಟ್ಟಿಯಾಗಿ ಉಚ್ಚರಿಸುವದು **ಉಚ್ಚೈರ್ಜಪವು.** ಈ ಜಪವು ವಿಕ್ಷೇಪಕ್ಕೆ ಅವಕಾಶವನ್ನು ಕೊಡುವದರಿಂದ ತೀರ ಕೀಳುತರದ್ದಾಗಿರುತ್ತದೆ. **ಉಪಾಂಶು** ಜಪದಲ್ಲಿ ತುಟಿಗಳನ್ನು ಅಲುಗಾಡಿಸುತ್ತಾ ತನಗೆ ಮಾತ್ರ ಕೇಳಿಸುವಷ್ಟು ಪಿಸುಮಾತಿನಿಂದ ಹೇಳಿ ಕೊಳ್ಳುವದು. ಈ ಎರಡರಲ್ಲಿಯೂ ಜಪಕ್ಕೆ ಭಾವನೆಯ ನೆರವು ಬೇಕೇ ಬೇಕು; ಆದರೆ **ಉಪಾಂಶು** ಜಪಕ್ಕೆ ಹೆಚ್ಚಿನ ಅವಧಾನವು ಬೇಕಾಗುತ್ತದೆ. ಜಪದ ಸಾಧನವು ಬಲಿತುಕೊಂಡಂತೆಲ್ಲ ಅದು ತನ್ನ ಮುದ್ರೆಯನ್ನು ಮನಸ್ಸಿನ ಮೇಲೆ ಒತ್ತುವದು. ದೀರ್ಘಕಾಲದವರೆಗೆ ಅಭ್ಯಾಸಮಾಡಿದವರಿಗೆ ಉಚ್ಚಾರಣೆಯ ಹಂಗಿಲ್ಲದೆಯೇ ಮನಸ್ಸಿನಲ್ಲಿ ಮತ್ತೆಮತ್ತೆ ವೃತ್ತಿಗಳು ಎದ್ದುಕೊಳ್ಳುವವು. ಈ ವೃತ್ತಿಗಳು ಎದ್ದುಕೊಂಡಂತೆಲ್ಲ ಪರಮಾತ್ಮನ ಭಾವನೆಯೂ ಸಂಗಡಲೇ ಆಗುತ್ತಿರುವದರಿಂದ ಮನಸ್ಸಿನಲ್ಲಿ ಹೆಚ್ಚಿನ ಸಂಸ್ಕಾರವು ಉಂಟಾಗುತ್ತಿರುವದು. ಆದ್ದರಿಂದ ಈ **ಮಾನಸಜಪವು** ಎಲ್ಲಕ್ಕಿಂತಲೂ ಶ್ರೇಷ್ಠವಾದದ್ದೆಂದು ಬಲ್ಲವರು ಹೇಳುತ್ತಾರೆ.

ಜಪವು ಬಲಿತುಕೊಂಡರೆ ಭಾವನೆಯೇ ಮುಖ್ಯವಾಗುವದು. ಆಗ ಭಗವಂತನು ಭಕ್ತನ ಹೃದಯದಲ್ಲಿ ನೆಲಸುವನು. ಆತನ ಸಂನಿಧಿಯಿಂದ ಅಂತಃಕರಣವು ಪವಿತ್ರವಾಗುವದು, ಆತನ ಅಭಿವ್ಯಕ್ತಿಯು ಅಂತಃಕರಣದಲ್ಲಿ ಆದಂತೆ ಅದರ ಫಲವು ಹೊರಗಿನ ವಾಕ್ಕಿನಮೇಲೂ ಶರೀರದಮೇಲೂ ತೋರಿಕೊಳ್ಳುವದಕ್ಕೆ ಮೊದಲಾಗುವದು. ರುಚಿಯಾದ ಭಕ್ಷ್ಯಭೋಜ್ಯಾದಿಗಳನ್ನು ತಿಂದವರು ಬಾಯಿಚಪ್ಪರಿಸಿಕೊಳ್ಳುತ್ತಾ ಆ ರುಚಿಯನ್ನು ಮತ್ತೆಮತ್ತೆ ನೆನೆನೆನೆದು ನಲಿಯುತ್ತಿರುವಂತೆ ಭಾವನೆಯ ಆನಂದದಿಂದ ಭಕ್ತರೂ ನಲಿಯುತ್ತಿರುವರು. **''ಖೇಲತಿ ಮಮ ಹೃದಯೇ ರಾಮಃ''** ಎಂದು ಪರಮಹಂಸ ಶ್ರೀಸದಾಶಿವೇಂದ್ರರು ಹಾಡಿರುವಂತೆ ಭಾವನಾಪರವಶನಾದ ಭಕ್ತನ ಹೃದಯದಲ್ಲಿ ಭಗವಂತನು ಆಟವಾಡುತ್ತಿರುವನು. ಈ ಆಟದಲ್ಲಿ ತನ್ನ ಹೃದಯದಲ್ಲಿ ಕಂಡುಕೊಂಡು ಭಕ್ತನು ಮೆಲ್ಲಮೆಲ್ಲಗೆ ಎಲ್ಲರ ಹೃದಯದಲ್ಲಿಯೂ ಅದೇ ಭಗವಂತನನ್ನು ಕಾಣುವದಕ್ಕೆ ಮೊದಲುಮಾಡುವನು. ಅವನ ಪ್ರಭಾವದಿಂದ ಅವನ ಸುತ್ತಲಿರುವ ವರಿಗೂ ದುಃಸಂಕಲ್ಪಗಳು ಹಿಮ್ಮೆಟ್ಟುವವು.

ಭಗವಂತನ ನಾಮಜಪವು ಹೇಗೆ ಮಾಡಿದರೂ ಪ್ರಭಾವಶಾಲಿಯೇ ಆಗಿರುತ್ತದೆಯಾದರೂ ಅದನ್ನು ಪುರಶ್ಚರಣಮಾಡಿ ಸಿದ್ಧರಾಗಿರುವ ಭಕ್ತಾಗ್ರೇಸರರ ಉಪದೇಶವನ್ನು ಸ್ವೀಕರಿಸುವದರಿಂದ ಅದಕ್ಕೊಂದು ವೀರ್ಯವು ಬರುವದು. ನಾಮಜಪದಿಂದ ಸಿದ್ಧರಾಗಿರುವ ಮಹಾತ್ಮರು ನಾಮವನ್ನೂ ನಾಮಿಯಾದ ಭಗವಂತನನ್ನೂ ಬೇರ್ಪಡಿಸದೆ ಚಿದಾನಂದಘನನಾದ ಪರಮಾತ್ಮನೇ ನಾಮರೂಪದಿಂದ ತಮ್ಮ ನಾಲಗೆಯ ಮೇಲೆ ನಲಿದಾಡುತ್ತಿರುವನೆಂಬುದನ್ನು ತಿಳಿದಿರುವರು. ಅಂಥ ಮಹಾತ್ಮರ ಪವಿತ್ರೋಪದೇಶವು ಕಿವಿಗೆ ಬಿದ್ದರೆ ಆ ದ್ವಾರದಿಂದ ಶಿಷ್ಯನ ಹೃದಯದಲ್ಲಿಯೂ ಆ ಭಗವಂತನ ಸಂನಿಧಿಯು ಅಭಿವ್ಯಕ್ತವಾಗಿ ನಾಮೋಚ್ಚಾರಣೆಗೆ ಒಂದು ಕಳೆಯು ದೊರಕುವದು. ನಿಜವಾಗಿ ನೋಡಿದರೆ ಪ್ರಪಂಚದಲ್ಲಿರುವ ವಸ್ತುಗಳೆಲ್ಲಕ್ಕೂ ಮೂಲವು ಭಗವಂತನೇ ಆಗಿರುವಂತೆ ಅವುಗಳ ಹೆಸರುಗಳೆಲ್ಲಕ್ಕೂ ಭಗವಂತನ ನಾಮವೇ ಮೂಲವಾಗಿರುತ್ತದೆ. ಆದರೆ ವಸ್ತುಗಳ ದರ್ಶನಸ್ಪರ್ಶನಾದಿಗಳೂ ಅವುಗಳ ಹೆಸರುಗಳ ವ್ಯವಹಾರವೂ ನಮ್ಮನ್ನು ಹುಸಿತೋರಿಕೆಯ ಜಗತ್ತಿಗೇ ಕಟ್ಟಿಹಾಕಿ ಸಂಸಾರದಲ್ಲಿ ತೊಳಲಿಸುವವು. ಭಗವಂತನ ರೂಪ ಅರ್ಚನಧ್ಯಾನಾದಿಗಳೂ ಆತನ ಗುಣ ಕರ್ಮಗಳನ್ನು ನೆನಪಿಗೆ ತರುವ ನಾಮದ ಜಪವೂ ಇಡಿಯ ಪ್ರಪಂಚದ ಸಾರವಾದ

ಅಮೃತತತ್ತ್ವಕ್ಕೆ ನಮ್ಮನ್ನು ಒಯ್ದುಮುಟ್ಟಿಸುವವು. ಈ ಮರ್ಮವನ್ನು ತಿಳಿದು ಜಪದ ಆನಂದವನ್ನು ಅನುಭವಿಸುತ್ತಿರುವ ಮಹಾತ್ಮರೇ ಜಪಸಿದ್ಧರು. ಇಂಥ ಜಪಸಿದ್ಧರೇ ಈ ಲೋಕದಲ್ಲಿ ಸಂಚರಿಸುವ ಭಗವಂತನ ಮೂರ್ತಿಗಳೆಂದು ತಿಳಿಯಬೇಕು.

*****

# 52. ಭಜನೆ [1]

ಪರಮಾತ್ಮ, ಭಗವಂತ, ಈಶ್ವರ- ಎಂಬ ಹೆಸರುಗಳಿಂದ ಆಸ್ತಿಕರು ಕರೆಯುತ್ತಿರುವ ಒಂದಾನೊಂದು ಮಹಾಶಕ್ತಿಯು ನಮ್ಮ ಒಳಗೆ, ಹೊರಗೆ, ಹಿಂದೆ, ಮುಂದೆ, ಎಡಕ್ಕೆ, ಬಲಕ್ಕೆ- ಎಲ್ಲೆಲ್ಲಿಯೂ ವ್ಯಾಪ್ತವಾಗಿರುತ್ತದೆ ಎಂಬುದು ಮಹಾತ್ಮರ ಉಪದೇಶವು. ಹೀಗೆ ಈ ಶಕ್ತಿಯು ಸರ್ವವ್ಯಾಪಕವಾಗಿದ್ದರೂ ದೂರವಾಗಿರುವಂತೆ ಲೌಕಿಕರಿಗೆ ಭಾವನೆಯಾಗಿರುವದು ಅವರ ದೌರ್ಭಾಗ್ಯವೆನ್ನಬೇಕು. ಒಂದಾನೊಂದು ಅಮೃತದ ಸಮುದ್ರದಲ್ಲಿ ಮುಳುಗಿದವನು ತನ್ನಮೇಲೆ, ಕೆಳಗೆ, ಸುತ್ತಮುತ್ತ- ಎಲ್ಲೆಲ್ಲಿಯೂ ಅಮೃತವೇ ಇದ್ದರೂ ಅಮೃತವೆಂಬುದು ಎಲ್ಲಿದೆ?- ಎಂದು ಕೇಳುವಂತೆ ನಾವು ಪರಮಾತ್ಮನಿಂದಲೇ ಬಂದಿದ್ದು ಪರಮಾತ್ಮನಲ್ಲಿಯೇ ಇದ್ದು ಕೊಂಡಿದ್ದರೂ 'ಪರಮಾತ್ಮನಿರುವನೆಲ್ಲಿ?' ಎನ್ನುತ್ತಿರುವೆವು. ಅಂತಃಕರಣದ ಸ್ಥಿತಿಯಿಂದ ಬಲು ದೂರವಿರುವ ವಸ್ತುವೂ ತೀರಹತ್ತಿರವಾಗಬಹುದು; ತೀರಹತ್ತಿರವಿರುವದೂ ದೂರವಾಗಿ ತೋರಬಹುದು. ಪತಿವ್ರತೆಯಾದ ಸ್ತ್ರೀಯು ತನ್ನ ಪತಿಯು ಎಷ್ಟೋ ಸಾವಿರ ಮೈಲಿಗಳ ದೂರದಲ್ಲಿದ್ದರೂ ಆತನಿಗೆ ಸಂಬಂಧಪಟ್ಟಿರುವ ಒಂದು ವಸ್ತ್ರ ಒಂದು ಪುಸ್ತಕ, ಒಂದು ಕೈಚೀಲ, ಅಥವಾ ಒಂದು ಚಿತ್ರ- ಇಂಥ ಸಣ್ಣ ಸಣ್ಣ ಪದಾರ್ಥಗಳ ದರ್ಶನಮಾತ್ರದಿಂದ ಆತನನ್ನು ಸ್ಮರಿಸಿಕೊಂಡು ಭಾವನಾವಶದಿಂದ ಆತನು ತನ್ನ ಬಳಿಯಲ್ಲಿಯೇ ಇದ್ದಂತೆ ಮಾಡಿಕೊಳ್ಳಬಲ್ಲಳು. ತನಗೆ ಆಗದಿರುವ ಒಬ್ಬ ಹಗೆಯು ಎಷ್ಟು ಹತ್ತಿರವಿದ್ದರೂ ಅವನಲ್ಲಿರುವ ದ್ವೇಷಬುದ್ಧಿಯಿಂದ ಮನುಷ್ಯನು ಅವನು ಎಷ್ಟೋ ದೂರವಿದ್ದಂತೆ ಮಾಡಿಕೊಳ್ಳಬಲ್ಲನು. ಇದರಂತೆ ಈಗ ನಮಗೆ

---

**1.** ಹಾವೇರಿಯ ಜ್ಞಾನೋಪದೇಶಮಂಡಲಿಯಲ್ಲಿ ಶ್ರೀಶ್ರೀಗಳವರು ತಾ|| 11-6-1954ರಲ್ಲಿ ಮಾಡಿದ ಉಪದೇಶದ ಸಾರವಿದು.

ದೂರವಾಗಿರುವ ಪರಮಾತ್ಮನನ್ನು ಅಂತಃಕರಣಸಂಸ್ಕಾರದಿಂದ ನಾವು ಇಲ್ಲಿಯೇ ಕಂಡುಕೊಳ್ಳಬಹುದಾಗಿರುತ್ತದೆ. ಹೀಗೆ ಪರಮಾತ್ಮನು ನಮಗೆ ಹತ್ತಿರವಾಗುವದಕ್ಕೆ ಮಾಡುವ ಉಪಾಯಗಳೆಲ್ಲ ಉಪಾಸನೆಯ ಮಾರ್ಗದ ಸಾಧನೆಗಳೆನಿಸುವವು.

ಸರ್ವವ್ಯಾಪಕವಾದ ಪರಮಾತ್ಮನಿಗೆ ನಾವು ಈಗ ದೂರವಾಗಿರುವದಕ್ಕೆ ಯಾವದು ಕಾರಣವಾಗಿದೆ? ಪರಮಾತ್ಮನು ನಿಜವಾಗಿ ನಮ್ಮೆಲ್ಲರ ಹೃದಯದಲ್ಲಿಯೂ ಇದ್ದುಕೊಂಡೇ ಇರುತ್ತಾನೆ. ಅಲ್ಲಿ ನಾವು ಕೂಡಿಹಾಕಿಕೊಂಡಿರುವ ರಾಗದ್ವೇಷ ಭಯಾದಿಗಳು ಅಷ್ಟು ಹತ್ತಿರವಿರುವ ಪರಮಾತ್ಮನ ದರ್ಶನಕ್ಕೆ ಮರೆಯಾಗಿರುತ್ತವೆ. ಆಸುರೀಸಂಪತ್ತಿನ ವೃತ್ತಿಗಳೆಲ್ಲವೂ ಪರಮಾತ್ಮನಿಗೂ ನಮಗೂ ಬಹಳ ದೂರವಾದ ಅಂತರವಿರುವಂತೆ ಮಾಡಿರುತ್ತವೆ. ಶಾಸ್ತ್ರೋಕ್ತವಾದ ಕರ್ಮಗಳಿಂದ ಮೃತ್ಯುವಿನಂತಿರುವ ಈ ಅಡಚಣೆಗಳನ್ನು ತಪ್ಪಿಸಿಕೊಂಡು ಉಪಾಸನೆಯಿಂದ ನಾವು ಪರಮೇಶ್ವರನಿಗೆ ಹತ್ತಿರವಾಗಬೇಕು– **'ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಽಮೃತಮಶ್ನುತೇ'** ಎಂಬ ಶ್ರುತಿಯ ಅಭಿಪ್ರಾಯವೇ ಇದು. ಶರೀರ, ವಾಕ್ಕು, ಮನಸ್ಸು– ಇವುಗಳನ್ನು ಕ್ರಮಕ್ರಮವಾಗಿ ಉಪಾಸನೆಗೆ ಅಂಗವಾಗಿ ಮಾಡಿಕೊಳ್ಳಬೇಕು; ಅರ್ಚನೆ, ವಿಭೂತಿದರ್ಶನ, ಸ್ತೋತ್ರ, ಜಪ– ಇವು ಸಾಧಕರಾದವರು ಉಪಾಸನಾ ಮಾರ್ಗದಲ್ಲಿಡುವ ಕೆಲವು ಹೆಜ್ಜೆಗಳು. ಸಾಧಕರು ಈ ಹೆಜ್ಜೆಗಳನ್ನು ಮುಂದೆ ಮುಂದೆ ಇಡುತ್ತಾ ಹೋದಂತೆಲ್ಲ ಪರಮೇಶ್ವರನು ಅವರಿಗೆ ಹತ್ತಿರಹತ್ತಿರವಾಗುತ್ತಾನೆ.

ಅಥವಾ ಪರಮೇಶ್ವರನು ಹತ್ತಿರವಾಗುತ್ತಾನೆನ್ನುವದಕ್ಕಿಂತಲೂ ಹತ್ತಿರದಲ್ಲಿರುವ ಪರಮಾತ್ಮನನ್ನು ಹತ್ತಿರದಲ್ಲಿರುವನೆಂದೇ ಸಾಧಕರು ಕಂಡುಕೊಳ್ಳುತ್ತಾರೆ – ಎಂದು ಹೇಳುವದು ಹೆಚ್ಚು ತಾತ್ತ್ವಿಕವಾಗಿರುತ್ತದೆಯೆನ್ನಬಹುದು. ಏಕೆಂದರೆ ಅರ್ಚನೆ, ಸ್ತುತಿ, ಜಪ– ಎಂಬಿವು ಪರಮೇಶ್ವರನ ಸಾಂನಿಧ್ಯವನ್ನು ಮನದಂದುಕೊಳ್ಳುವದಕ್ಕೆ ನೆಪವಾಗಿರುತ್ತವೆ. ನಿಜವಾಗಿ ನೋಡಿದರೆ ಭಗವಂತನು ಅರ್ಚನೆಯಿಂದ ಒಲಿಯುವನು ಎನ್ನುವದಕ್ಕಿಂತ ಅರ್ಚನೆಯೆಂಬ ಕ್ರಿಯೆಯಲ್ಲಿಯೂ ಅದರ ಸಾಮಗ್ರಿಗಳಲ್ಲಿಯೂ ಆತನ ವಿಭೂತಿಗಳೇ ಇದ್ದು ಕ್ರಮಕ್ರಮವಾಗಿ ನಮಗೆ ಗೋಚರಿಸುವವು ಎನ್ನುವದು ಹೆಚ್ಚು ಸತ್ಯವಾಗಿರುತ್ತದೆ. ಪರಮಾತ್ಮನನ್ನು ಸ್ತೋತ್ರದಿಂದ ಹತ್ತಿರವಾಗಿರಿಸಿಕೊಳ್ಳುವೆವೆನ್ನುವದಕ್ಕಿಂತ ಸ್ತೋತ್ರಾದಿಗಳಲ್ಲಿ ಆತನೇ ಇದ್ದು ಸಾಧಕನ ಚಿತ್ತೈಕಾಗ್ರ್ಯದಿಂದಲೂ ಭಾವನೆಯಿಂದಲೂ ಅವುಗಳಲ್ಲಿಯೇ ಪ್ರಕಟವಾಗುವನು ಎಂಬುದು ಹೆಚ್ಚು ಯುಕ್ತವಾಗಿರುತ್ತದೆ. ವಿಷ್ಣುಸಹಸ್ರನಾಮ ಸ್ತೋತ್ರದಲ್ಲಿ **'ಸ್ತವ್ಯಃ ಸ್ತವಪ್ರಿಯಃ ಸ್ತೋತ್ರಂ ಸ್ತುತಿಃ**

**ಸ್ತೋತಾ**' ಎಂದು ಹೇಳಿರುವದನ್ನು ನೆನಪಿಸಿಕೊಳ್ಳಿರಿ. ಸ್ತೋತ್ರಮಾಡುವವನು, ಸ್ತೋತ್ರ, ಸ್ತುತಿಕ್ರಿಯೆ, ಸ್ತುತ್ಯನಾದ ದೇವ- ಎಲ್ಲವೂ ಆ ಪರಮಾತ್ಮನೇ ಎಂಬುದು ಮನ ದಟ್ಟಾಗುವದು. ಇದನ್ನು ಜಪಕ್ಕೂ ಅನ್ವಯಿಸಿಕೊಳ್ಳಬೇಕು. ಮೊದಲು ಜಪವನ್ನು ಮಾಡುವವನು, ಜಪಕ್ರಿಯೆ, ಜಪಮಂತ್ರ, ದೇವತೆ- ಇವುಗಳು ಬೇರೆಬೇರೆಯಾಗಿದ್ದರೂ ಇವೆಲ್ಲದರಲ್ಲಿಯೂ ಆ ಪರಮೇಶ್ವರನೊಬ್ಬನನ್ನೇ ಕಾಣುವದೇ ಹೆಗ್ಗುರಿಯಾಗಿರುತ್ತದೆ.

ಹೀಗೆ ನೋಡಿದರೆ ಉಪಾಸನೆಯೆಂಬುದು ಒಂದು **'ಈಶ್ವರೀಕರಣವಿದ್ಯೆ'** ಎನ್ನಬಹುದಾಗುತ್ತದೆ. ಈಗ ನಮಗೆ ಅನೀಶ್ವರವಾಗಿ ಕಾಣುವದನ್ನು ಭಾವನೆಯ ಬಲದಿಂದ ಈಶ್ವರನನ್ನಾಗಿ ಮಾಡಿಕೊಳ್ಳುವದೇ ಈಶ್ವರೀಕರಣವು. ನಿಜವಾಗಿ ಎಲ್ಲವೂ ಈಶ್ವರನೇ ಆಗಿದ್ದರೂ ಇಂದ್ರಿಯಗಳ ಬೆನ್ನುಹತ್ತಿರುವ ಮನಸ್ಸು ಅವನಲ್ಲಿಲ್ಲದ ಪರಿಚ್ಛೇದಗಳನ್ನು ಕಲ್ಪಿಸಿ ಬೇರೆಬೇರೆಯಾಗಿ ತಿಳಿದು ತಾರತಮ್ಯವನ್ನು ಮಾಡಿಕೊಂಡು ಬಿಟ್ಟಿರುತ್ತದೆ. ಈ ಪರಿಚ್ಛೇದವನ್ನು ಶಾಸ್ತ್ರೀಯಭಾವನೆಯಿಂದ ತೊಡೆದುಹಾಕಿ ಅಪರಿಚ್ಛಿನ್ನನಾದ ಈಶ್ವರನನ್ನು ಕಂಡುಕೊಳ್ಳುವ ಕೌಶಲವೇ ಈಶ್ವರೀಕರಣವು. ಇದೇ ಉಪಾಸನೆಯ ಧ್ಯೇಯವು. ಪರಮೇಶ್ವರನೇ ಎಲ್ಲವೂ ಆಗಿರುತ್ತಾನಾದರೂ ಅವಿದ್ಯೆಯಿಂದ ಅವನು ಜಗತ್ತಾಗಿ ತೋರುತ್ತಿರುತ್ತಾನೆ; ಜ್ಞಾನವೈರಾಗ್ಯಗಳ ಬಲದಿಂದ ಪರಮಾರ್ಥತತ್ತ್ವವನ್ನು ಕಂಡುಕೊಂಡರೆ ಎಲ್ಲವೂ ಈಶ್ವರನೇ ಎಂಬ ತಿಳಿವುಗಣ್ಣು ತೆರೆದುಕೊಳ್ಳುವದು ಎಂದು ಉಪನಿಷತ್ತಿನಲ್ಲಿ ಸಾರಿರುತ್ತದೆ. ಜ್ಞಾನಕ್ಕೆ ಬೇಕಾದ ಉತ್ತಮಾಧಿಕಾರಿಗುಣಗಳಿಲ್ಲದವರು ಅದನ್ನು ಕ್ರಮಕ್ರಮವಾಗಿ ಮುಟ್ಟಲಿ ಎಂದು ಶಾಸ್ತ್ರದಲ್ಲಿ ಈ ಉಪಾಸನೆಯನ್ನು ಉಪದೇಶಿಸಿರುತ್ತದೆ. ಮಂತ್ರಗಾರನು ಮಂತ್ರೋಚ್ಚಾರಣೆ ಮಾಡಲು ಭೂತೋಚ್ಚಾಟನೆಯಾಗುವಂತೆ ಉಪಾಸನೆಯ ಪ್ರಭಾವದಿಂದ ಜಗದ್ಭಾವನೆಯು ಮಾಯವಾಗಿ ಎಲ್ಲೆಲ್ಲಿಯೂ ಆ ಭಗವಂತನೇ ಕಾಣಬೇಕು, ಇದೇ ಉಪಾಸನೆಗೆ ಪರಮಫಲ.

ಇದೇ ಉಪಾಸನೆಯ ಉದ್ದೇಶವೆಂಬುದನ್ನು ಮನದಟ್ಟುಮಾಡಿಕೊಳ್ಳುವದಕ್ಕೆ ನಾವು ವಿಷ್ಣುಸಹಸ್ರನಾಮಸ್ತೋತ್ರದ ಫಲಶ್ರುತಿಯ ಶ್ಲೋಕಗಳನ್ನು ಲಕ್ಷಿಸೋಣ. ಆ ಸ್ತೋತ್ರಶ್ರವಣದಿಂದಲೂ ಕೀರ್ತನದಿಂದಲೂ ಇಲ್ಲಿ ಅಥವಾ ಪರಲೋಕದಲ್ಲಿ ಎಲ್ಲಿಯೂ ಅಶುಭವಾಗುವದಿಲ್ಲ, ಭಯ, ರೋಗ, ಬಂಧ, ದುರ್ಗಗಳು- ಇವುಗಳೆಲ್ಲವೂ ಮಾಯವಾಗುವವು. ಇವುಗಳೆಲ್ಲ ಏಕೆ ಬರುತ್ತವೆ? ಈಶ್ವರ ಭಾವನೆಯಿಲ್ಲದ್ದರಿಂದ,

ಅನೀಶ್ವರಚಿಂತನೆಯಿಂದ- **'ನ ವಾಸುದೇವಭಕ್ತಾನಾಮಶುಭಂ ವಿದ್ಯತೇ ಕ್ವಚಿತ್'**- ವಾಸುದೇವನೇ ಸರ್ವವು ಎಂಬ ಈಶ್ವರೀಕರಣದಿಂದ ಅವಾಸುದೇವತ್ವವು ಹೋಗಿ ಬಿಡುವದು; ಅಶುಭವೆಲ್ಲಿಂದ ಬರಬೇಕು? ಅಂಥವರಿಗೆ ಸಾಮಾನ್ಯಭಯವು, ಎಂದರೆ ಎಲ್ಲಾ ಬಗೆಯ ಭಯಕ್ಕೂ ಕಾರಣವಾಗಿರುವ ಅವಿದ್ಯೆಯೇ ಹೋಗಿಬಿಡುತ್ತದೆ. **'ಜನ್ಮಮೃತ್ಯುಜರಾವ್ಯಾಧಿಭಯಂ ನೈವೋಪಜಾಯತೇ॥''** ಹುಟ್ಟು, ಸಾವು, ಮುಪ್ಪು, ರೋಗ- ಇವುಗಳ ಭಯವು ಶರೀರಭಾವನೆಯಿಂದ ಬರಬೇಕು; ವಾಸುದೇವ ಭಾವನೆಯಿಂದ ಹೇಗೆ ಬಂದಾವು? **'ಇನ್ದ್ರಿಯಾಣಿ ಮನೋಬುದ್ಧಿಃ ಸತ್ತ್ವಂ ತೇಜೋಬಲಂ ಧೃತಿಃ । ವಾಸುದೇವಾತ್ಮಕಾನ್ಯಾಹುಃ ಕ್ಷೇತ್ರಂ ಕ್ಷೇತ್ರಜ್ಞ ಏವ ಚ ॥''** ಶರೀರ ಮಾತ್ರವೇಕೆ, ಇಂದ್ರಿಯ, ಮನಸ್ಸು ಬುದ್ಧಿ ಸತ್ತ್ವ ತೇಜಸ್ಸು ಧೃತಿ- ಎಲ್ಲವೂ ವಾಸುದೇವಾತ್ಮಕವಾಗಿವೆ. ನಮ್ಮ ಸ್ವರೂಪವಾಗಿರುವ ಕ್ಷೇತ್ರಜ್ಞನೂ ಆತನೇ.

ಪರಮಾತ್ಮಭಾವನೆಗೆ ಆಚಾರವು, ಸ್ನಾನಾಚಮನಾದಿಯಾದ ಶಿಷ್ಟರ ವರ್ತನೆಯ ರೂಪದ ಧರ್ಮಕಾರಣವು ಬೇಕು; ಎಲ್ಲಾ ಧರ್ಮಕ್ಕೂ ಭಗವಂತನೇ ಒಡೆಯ ನಾಗಿರುತ್ತಾನೆಂಬ ಭಾವನೆ ಬೇಕು. ಋಷಿಗಳು, ಪಿತೃಗಳು, ದೇವತೆಗಳು- ಇವರು ಗಳಲ್ಲಿ ಭಕ್ತಿಶ್ರದ್ಧೆಗಳಿರಬೇಕು. ಇವೆಲ್ಲವೂ ನಾರಾಯಣಾತ್ಮಕವೇ ಎಂಬ ತಿಳಿವಳಿಕೆಯೂ ಬೇಕು. ಶುದ್ಧಾಚಾರ, ಧರ್ಮ, ನಾರಾಯಣ ಅಥವಾ ವಾಸುದೇವ ಭಗವಂತನ ಭಕ್ತಿ – ಇವುಗಳನ್ನೇ ವ್ಯಾಸರು ಭಾರತದಲ್ಲಿ ತುಂಬಿಸಿರುತ್ತಾರೆ. ಇವುಗಳನ್ನೇ ನಾವು ಉಪಾಸನೆಯ ಮೆಟ್ಟಿಲುಗಳು ಎಂದು ವ್ಯವಹರಿಸುತ್ತಿರುವದು. ಒಂದು ಕಲ್ಲಿನ ದೇವಾಲಯಕ್ಕೆ ಕಲ್ಲಿನ ಮೆಟ್ಟಿಲುಗಳನ್ನು ಹಾಕಿರುತ್ತಾರೆ; ಅವುಗಳನ್ನೇರಿ ಒಳಕ್ಕೆ ಹೋಗಿ ಕಲ್ಲಿನ ಗರ್ಭಗುಡಿಯೊಳಗೆ ಕಾಣುವ ಕಲ್ಲಿನ ದೇವರ ವಿಗ್ರಹದಲ್ಲಿ ಪರಮೇಶ್ವರನನ್ನು ಮೊದಲು ಕಾಣುತ್ತೇವೆ. ವಿಚಾರಮಾಡಿನೋಡಿದರೆ ಎಲ್ಲವೂ ಕಲ್ಲೇ, ಎಲ್ಲಕ್ಕೂ ಆ ಪರಮಾತ್ಮನೇ ಆಧಾರನಾಗಿರುತ್ತಾನೆ- ಎಂಬ ಕಾರಣದಿಂದ ಅಲ್ಲಿ ಎಲ್ಲೆಲ್ಲಿಯೂ ಭಗವದ್ಭಾವನೆಯು ಬರುವದಕ್ಕೆ ತಕ್ಕ ಮನೋವೃತ್ತಿಯನ್ನು ಸಂಪಾದಿಸಿಕೊಂಡವರು, ದೂರದಿಂದ ದೇವಾಲಯವನ್ನು ಕಂಡರೆ ಸಾಕು, ಅಷ್ಟರಿಂದಲೇ ಆ ದೇವರ ಸ್ಮರಣೆ ಬಂದು ಬಿಡುತ್ತದೆ. ಅಲ್ಲವೆ? ಹೀಗೆಯೇ ಶರೀರ, ಇಂದ್ರಿಯ, ಮನಸ್ಸು ಬುದ್ಧಿ- ಮುಂತಾದದ್ದೆಲ್ಲವೂ ಈಗ ನಮಗೆ ಅಚೈತನ್ಯವಾಗಿ ಕಾಣಬಹುದಾದರೂ ಈಶ್ವರೀಕರಣ ವನ್ನು ಮಾಡಿ ಇವೆಲ್ಲವೂ ಚೈತನ್ಯಸ್ವರೂಪನಾದ ವಾಸುದೇವನೇ ಎಂಬುದನ್ನು ಮನಗಾಣುವತನಕ ಸಾಧನೆಮಾಡಬೇಕಾಗಿದೆ.

ಇದುವರೆಗೆ ನಾನು ಹೇಳಿರುವದು ಉಪಾಸನಾಸಾಮಾನ್ಯದ ತತ್ತ್ವವಾಗಿರುತ್ತದೆ. ಸಾಧನಗಳೆಲ್ಲವೂ ಉಪಾಯ ಮಾತ್ರ. ಇಲ್ಲಿ ಉಪೇಯನಾದ ಭಗವಂತನ ಸಾಕ್ಷಾತ್ಕಾರವು ಮುಖ್ಯವೇ ಹೊರತು ಉಪಾಯಗಳು ಮುಖ್ಯವಲ್ಲ. ನಮಗೆ ಸುಕರವಾಗಿರುವ ಯಾವದಾದರೊಂದು ಸಾಧನವನ್ನು ಸ್ವೀಕರಿಸಿ ಶ್ರದ್ಧಾದರಗಳಿಂದ ಅನುಷ್ಠಾನಮಾಡಿ ಗುರಿಯನ್ನು ಮುಟ್ಟಬೇಕು. ನಾವು ಪರಮಾತ್ಮನಿಂದ ಎಷ್ಟೇ ಚ್ಯುತರಾಗಿದ್ದರೂ ಆತನ ಕೃಪೆಯೇನೂ ನಮ್ಮ ಮೇಲೆ ಕಡಿಮೆಯಾಗಿರುವದಿಲ್ಲ. ಆತನು ಋಷಿಗಳ ಮೂಲಕವಾಗಿ ನಮಗೆ ವೇದಮಂತ್ರಗಳನ್ನೂ ಉಪನಿಷತ್ತುಗಳನ್ನೂ ಅನುಗ್ರಹಿಸಿರುತ್ತಾನೆ; ಪುರಾಣೇತಿಹಾಸಗಳೂ ಆತನ ಅನುಗ್ರಹವೇ. ಋಷಿಗಳೆಂದರೆ ತತ್ತ್ವವನ್ನು ಕಂಡು ಕೊಂಡಿರುವವರು. ಋಷಿಗಳಿಗೆ ತಪಸ್ಸಿನ ಬಲದಿಂದಲೂ ಈಶ್ವರನ ಅನುಗ್ರಹದಿಂದಲೂ ಆಯಾ ಮಂತ್ರಾದಿಗಳು ಕಾಣಿಸಿಕೊಂಡಂತೆ ನಮಗೂ ಆ ಮಹಾತ್ಮರ ಸ್ಮರಣೆಯಿಂದ ಸಾಧನಗಳು ಒಲಿಯುವವು. ಯಾರು ಹೇಗೆ ತತ್ತ್ವವನ್ನು ಕಂಡುಕೊಂಡಿದ್ದರೂ ಅವರೂ ಆಯಾ ವಿಷಯಕ್ಕೆ ಋಷಿಗಳಾಗಿರುತ್ತಾರೆ. ದೇಶ ಭಾಷೆಗಳಲ್ಲಿ ಪದಗಳು, ಅಭಂಗಗಳು, ಕೀರ್ತನೆಗಳು- ಇವುಗಳ ಮೂಲಕ ನಮಗೆ ಭಕ್ತಿಜ್ಞಾನಾದಿಗಳ ತತ್ತ್ವವನ್ನು ತಿಳಿಸಿರುವವರೂ ಋಷಿಗಳೇ. ಯಾರುಯಾರು ಪರಮಾತ್ಮನ ಭಕ್ತಿಯಲ್ಲಿ ಮುಳುಗಿದ್ದಾಗ ಹೃದಯದೊಳಗೆ ತುಂಬಿಕೊಂಡ ಭಾವವು ಉಕ್ಕಿ ಬಾಯಿಯ ಮೂಲಕ ಈ ಪದಗಳ ರೂಪದಲ್ಲಿ ಹೊರಕ್ಕೆ ಬಂದಿತೋ ಅವರೆಲ್ಲರೂ, ಋಷಿಗಳು ಮಂತ್ರಗಳಿಗೆ ಹೇಗೆ ದ್ವಾರಮಾತ್ರವೋ ಹಾಗೆಯೇ, ಈ ಭಾವಗಳಿಗೆ ದ್ವಾರಮಾತ್ರವಾದ ಅರ್ವಾಚೀನ ಋಷಿಗಳಾಗಿರುತ್ತಾರೆ. ಪುರಾಣಾದಿಗಳಲ್ಲಿ ವ್ಯಾಕರಣದೋಷಗಳಿದ್ದರೂ ಆರ್ಷಪ್ರಯೋಗವೆಂದು ಪೂಜ್ಯಬುದ್ಧಿಯಿಂದ ಕಾಣುವಂತೆ ಆಸ್ತಿಕರು ಈ ಪದ ಗಳಲ್ಲಿಯೂ ಅಭಂಗಗಳಲ್ಲಿಯೂ ಯಾವದಾದರೂ ವ್ಯಾಕರಣದ ಲೋಪದೋಷ ಗಳಿದ್ದರೆ ಅತ್ತಕಡೆಗೆ ಮನಸ್ಸು ಹಾಕದೆ ಎಲ್ಲವನ್ನೂ ಪೂಜ್ಯಬುದ್ಧಿಯಿಂದಲೇ ಕಾಣುತ್ತಾರೆ. ಏಕೆಂದರೆ ಅವುಗಳು ವ್ಯಾಕರಣಶುದ್ಧವಾಗಿರಲಿ ಇಲ್ಲದಿರಲಿ, ಹೃದಯ ಶುದ್ಧಿಯಿಂದ ಹೊರಹೊಮ್ಮಿರುತ್ತವೆ; ಕೇಳಿದವರ ಮತ್ತು ಕಲಿತು ಹಾಡಿದವರ ಹೃದಯಶುದ್ಧಿಗೆ ಕಾರಣವೂ ಆಗುತ್ತವೆ. ಭಕ್ತಿಯ ಪ್ರವಾಹವನ್ನು ಹರಿಯಿಸುತ್ತವೆ. ಆದ್ದರಿಂದಲೇ ಹೀಗಿರುವ ಪದಪದ್ಯಗಳನ್ನು ಹಾಡಿಕೊಂಡು ನಲಿಯುವ ಸಾಧನಕ್ಕೆ 'ಭಜನ' ಎಂಬ ಅನ್ವರ್ಥನಾಮವು ಬಂದಿರುತ್ತದೆ.

ಇಂಥ ಭಕ್ತರ ಪದಗಳನ್ನು ಉಪಯೋಗಿಸಿಕೊಂಡು ಪರಮಾತ್ಮನನ್ನು ಕಾಣುವದಕ್ಕೆ ಮಾಡುವ ಪ್ರಯತ್ನವು ಬಾವಿಯ ನೀರನ್ನು ಹಗ್ಗದ ಮೂಲಕ ತಂಬಿಗೆಯಲ್ಲಿ ಸೇದಿ ಕೊಂಡು ನೀರಡಿಕೆಯನ್ನು ಹಿಂಗಿಸಿಕೊಳ್ಳುವ ಉಪಾಯವನ್ನು ಹೋಲುತ್ತದೆ. ನಮಗೆ ಸ್ವಂತವಾಗಿ ಪದಗಳನ್ನು ಮಾಡುವದಕ್ಕೆ ಬರಬಹುದು; ಅವುಗಳಿಗೆ ಪ್ರಾಸ, ಅಲಂಕಾರ-ಮುಂತಾದವುಗಳಿರಬಹುದು. ಆದರೆ ಅವುಗಳು ಸುಂದರವಾದ ಪಾವಟಿಗೆ ಗಳಿದ್ದರೂ ನೀರಿಲ್ಲದ ಪುಷ್ಕರಣಿಯಂತೆ, ನಮ್ಮ ಆಧ್ಯಾತ್ಮಿಕದ ಬಾಯಾರಿಕೆಯನ್ನು ಹಿಂಗಿಸಲಾರವು; ಆದ್ದರಿಂದ ದೊಡ್ಡವರ ಈ ಪ್ರಾಸಾದಿಕವಾಣಿಯ ಪದಪದ್ಯಗಳನ್ನು ಹಾಡಿಕೊಂಡು ಒಳಗೆ ಹುದುಗಿರುವ ಭಕ್ತಿರಸದ ಚಿಲುಮೆಯು ಚಿಮ್ಮುವಂತೆ ಮಾಡಿಕೊಳ್ಳಬೇಕು. ನಾವು 'ಪ್ರಪಂಚವು ಬದಲಾಯಿಸಿದೆ' ಎಂದು ಆಗಾಗ್ಗೆ ಅಂದುಕೊಳ್ಳುವದುಂಟು; ನಿಜವಾಗಿ ಪ್ರಪಂಚವಲ್ಲ ಬದಲಾಯಿಸಿರುವದು, ನಾವೇ. ಪ್ರಪಂಚದಲ್ಲಿ ಈಗಲೂ ಈಶ್ವರನು ತನ್ನ ಭಕ್ತರು ಗಾನಮಾಡುತ್ತಿರುವೆಡೆಗಳಲ್ಲಿ ಸಂನಿಹಿತನಾಗಿರುತ್ತಾನೆ. ಈಗಲೂ ಆತನು ತನ್ನ ತಾಂಡವನೃತ್ಯಗಳನ್ನು ತಾಳಮೇಳ ಗಳೊಡನೆ ಪ್ರದರ್ಶಿಸುತ್ತಿರುತ್ತಾನೆ. ನಾವು ಆ ಸಂಗೀತಕ್ಕೆ ಹೊರಬ್ಬಾಗಿದ್ದೇವೆ. ನಮ್ಮ ವಾದ್ಯಗಳೂ ಸಂಗೀತಗಳೂ ಮಾಡುವ ಧ್ವನಿಗಳು ಆ ಮಧುರಗಾನವನ್ನೂ ನರ್ತನ ವನ್ನೂ ಮರೆಮಾಡಿವೆ. ಯಾರು ಸಾಧಕರಾಗಿ ಭಜನೆ ಮಾಡುವರೋ ಅವರಿಗೆ ಈ ಪರಮೇಶ್ವರನ ಸಂಗೀತ ಕಚೇರಿಯ ದರ್ಶನವಾಗುವದು; ಅವರು ಆ ಸಂಗೀತದಲ್ಲಿ ತಲ್ಲೀನರಾಗುವರು. ಅವರಿಗೂ ಎಲ್ಲವೂ ನಾದಬ್ರಹ್ಮವಾಗಿ ಕಾಣುವದು. ಸಮರ್ಥ ರಾಮದಾಸರು ಹೇಳಿರುವಂತೆ 'ಶ್ರೀ ಸೀತಾಪತಿರಾಮನೇ ದಾಸರ ಸಂಪತ್ತಿಯು' ಎಂಬುದು ಆಗ ಅವರಿಗೆ ಮನದಟ್ಟಾಗುವದು. ಅವರು ಪರಮಾತ್ಮನಲ್ಲಿ ಒಂದಾಗುವರು, ಭಜನೆಯ ಪರಮಫಲವನ್ನು ಕಂಡುಕೊಳ್ಳುವರು.

ಹೊರಗಿನ ತಾಳ, ಮದ್ದಳೆ, ರಾಗ, ಹಾಡು- ಇವೆಲ್ಲ ಭಜನೆಗೆ ಅವಶ್ಯವಾಗಿ ಬೇಕು; ಆದರೆ ಹೃದಯದಲ್ಲಿ ತಾಳಮೇಳಗಳು ಕೂಡುವದು ಅತ್ಯವಶ್ಯವಾಗಿರುತ್ತದೆ. ಹೃದಯದಲ್ಲಿ ದೇವತೆಗಳು ವೀಣೆ, ವೇಣು, ತಾಲ, ಮೃದಂಗ- ಮುಂತಾದವುಗಳನ್ನು ಬಾರಿಸುತ್ತಿರುವದನ್ನೂ ಪರಮೇಶ್ವರನು ತನ್ನ ಹೃದಯವೆಂಬ ರಂಗಮಂಟಪದಲ್ಲಿ ಲೀಲಾನರ್ತನವನ್ನು ಮಾಡುತ್ತಿರುವದನ್ನೂ ಕಂಡುಕೊಂಡು ಸರ್ವಸಂಸಾರ ದುಃಖವನ್ನೂ ಮರೆತು ಆ ಆನಂದದಲ್ಲಿ ಮುಳುಗಿರುವವನೇ ಭಜನೆಯ ಮರ್ಮ

ವನ್ನು ಬಲ್ಲವನು, ಭಜನೆಯ ಆನಂದವನ್ನು ಕಂಡುಕೊಂಡಿರುವವನು. ನಿಜವಾದ ಭಜನೆಯಲ್ಲಿ ಚಿತ್ತವನ್ನು ಕರಗಿಸಿರಿ; ಎಲ್ಲಿ ನೋಡಿದರೂ ಪರಮಾತ್ಮನ ಭಜನ ಮಂದಿರವೇ ಕಾಣಲಿ, ನಿಮ್ಮ ಜೀವನವು ಸಂಗೀತಮಯವಾಗಲಿ; ಪರಮಾತ್ಮನ ಗಾನವೇ ನಿಮ್ಮ ಬಾಯಿಂದ ಅನವರತವಾಗಿ ಹೊರಡುತ್ತಿರಲಿ. ನಿಮ್ಮ ಸುಮ್ಮಾನದ ಮುಖವು ಹೃದಯದಲ್ಲಿರುವ ಪರಮಾತ್ಮಭಾವನೆಯನ್ನು ತೋರಿಸುವ ನಿಲುಗನ್ನಡಿ ಯಾಗಲಿ ! ಸರ್ವವೂ ಭಗವನ್ಮಯವಾಗಲಿ!

*****

# 53. ಸಾಮೂಹಿಕ ಭಜನೆ [1]

ನಿನ್ನೆಯ ದಿನ ಭಜನೆಯ ವಿಷಯವಾಗಿ ಮಾತಾಡಿರುತ್ತೇನೆ. ಪುರಂದರ ದಾಸರು, ಕನಕದಾಸರು, ಕಬೀರದಾಸರು, ಸಮರ್ಥ ರಾಮದಾಸರು, ತುಕಾರಾಮರು – ಮುಂತಾದ ಅನುಭವಿಗಳಾದ ಭಗವದ್ಭಕ್ತರು ಮಾಡಿರುವ ಪದಗಳನ್ನು – ಪದ್ಯಗಳು, ಅಭಂಗಗಳು, ದೇವರನಾಮಗಳು– ಮುಂತಾದವನ್ನು ಭಾವಪೂರಿತವಾಗಿ ಹಾಡುತ್ತಾ ಪರಮಾತ್ಮನಲ್ಲಿ ಐಕ್ಯವನ್ನು ಹೊಂದುವ ಭಾವಪೂರಿತವಾದ ಮಾರ್ಗವೇ ಭಜನೆಯ ಮಾರ್ಗವು. ಮಂತ್ರಗಳಿಗೆ ಪ್ರಾಚೀನಕಾಲದ ಋಷಿಗಳಿದ್ದಂತೆ ಈ ಭಜನೆಯ ಪದಗಳಿಗೂ ದೇವರನಾಮಗಳಿಗೂ ಈಗಿನ ಕಾಲದ ಸಾಧುಸಂತರೇ ಋಷಿಗಳು ಎಂದು ತಿಳಿಸಿದ್ದೇನೆ. ಭಗವಂತನ ಚಿಂತನೆಯಲ್ಲಿ ಮುಳುಗಿದ್ದರೇ ಭಜನೆಯ ಆನಂದವು ಸಿಕ್ಕಿದಂತೆ ಎಂದು ಹೇಳಿದ್ದೇನೆ.

ಭಜನೆಯೆಂದರೆ ಭಗವಂತನ ಸೇವೆಯಾದ್ದರಿಂದ ಜೀವನದ ಕಾರ್ಯವೆಲ್ಲ ಭಜನೆಯಾಗಬೇಕು. ಭಜನೆಯನ್ನು ಇಂಥವಾರ, ಇಂಥಹೊತ್ತಿಗೆ ಮಾಡೋಣವೆಂದು ಗೊತ್ತು ಮಾಡಿಕೊಳ್ಳುವದು, ಭಜನೆಯ ಮಂದಿರದ ಆವರಣವನ್ನು ಪ್ರವೇಶಿಸಿದಂತೆ. ಆದರೆ ಭಗವಂತನ ಗರ್ಭಗುಡಿಯ ಮುಂದೆ ನಿಂತು ಆತನ ಶ್ರೀಮೂರ್ತಿಯ

---

**1.** ಹಾವೇರಿಯ ಜ್ಞಾನೋಪದೇಶಮಂಡಳಿಯಲ್ಲಿ ಶ್ರೀಶ್ರೀಗಳವರು ತಾ।। 9-6-1954ರಲ್ಲಿ ಮಾಡಿದ ಉಪದೇಶದ ಸಾರವಿದು.

ದರ್ಶನವಾದ ಮೇಲೆ, ನಮಗೆ ಹೊರಗಿನದೆಲ್ಲ ಮರೆತುಹೋಗಬೇಕು. ಪ್ರಪಂಚ ವೆಲ್ಲವೂ ಆ ಭಗವಂತನ ಭಜನೆಯ ಮಂದಿರವಾಗಬೇಕು, ನಮ್ಮ ಜೀವನದ ವ್ಯವಹಾರವೆಲ್ಲವೂ ಭಜನೆಯೇ ಆಗಿ ಪರಿಣಮಿಸಬೇಕು. ಇದು ಹೇಳುವಷ್ಟು ಸುಲಭ ವಾಗಿ ದಕ್ಕುವ ಮಾತಲ್ಲ; ಎಲ್ಲರ ಗಂಟಲಲ್ಲಿಯೂ ಈ ತುತ್ತು ಅಷ್ಟು ಸಲೀಸಾಗಿ ಇಳಿಯಲಾರದು. ಇದಕ್ಕೆ ದೊಡ್ಡವರ ಉದಾಹರಣೆ ಬೇಕು; ನಮ್ಮ ಹೃದಯದಲ್ಲಿ ಶುದ್ಧಿಯಿರಬೇಕು, ಎಡೆಬಿಡದೆ ಪ್ರಯತ್ನವು ಬೇಕು, ಶ್ರದ್ಧೆಯಿರಬೇಕು. ಉತ್ಸಾಹವಿರ ಬೇಕು. ಭಗವಂತನ ಅನುಗ್ರಹವಿರಬೇಕು. ಹಾಗಾದರೆ ಈ ಕಾರ್ಯವು ಸಫಲ ವಾಗುತ್ತದೆ. ಪ್ರಪಂಚದಲ್ಲಿರುವ ಮಮತೆಯನ್ನು ಭಗವಂತನ ವಿಚಾರಕ್ಕೂ, ಭಗವದರ್ಥಕರ್ಮಕ್ಕೂ, ಭಗವಚ್ಚಿಂತನೆಗೂ ಮೀಸಲಾಗಿರಿಸಬಲ್ಲ ಪೂರ್ಣವಿರಕ್ತರೇ ನಿಜವಾದ ಭಜನೆಯನ್ನು ಮಾಡಬಲ್ಲರು. ನಮ್ಮ ದೇಶದಲ್ಲಿ ಸಾಧುಗಳೂ ಸಂನ್ಯಾಸಿ ಗಳೂ ಏರ್ಪಟ್ಟಿರುವದು ಈ ಗುರಿಯನ್ನಿಟ್ಟುಕೊಂಡೇ ಆಗಿದೆ.

ನನ್ನ ವಿಷಯದಲ್ಲಿಯೂ ಅಧ್ಯಾತ್ಮಪ್ರಕಾಶಕಾರ್ಯಾಲಯದ ವಿಷಯ ದಲ್ಲಿಯೂ ನೀವು ಕೆಲವು ವಿಷಯಗಳನ್ನು ಕೇಳಿರುತ್ತೀರಿ. ನಾನು ಕಾರ್ಯಾಯಲದ ಪ್ರಚಾರಕ್ಕೆ ಬದ್ಧಾದರನೆಂದು ಎಂದಿಗೂ ತಿಳಿಯಬಾರದು. ಆದರೆ ಜನರಲ್ಲಿ ಆ ವಿಷಯಕ್ಕೆ ಉಂಟಾಗಬಹುದಾದ ತಪ್ಪುತಿಳಿವಳಿಕೆಯನ್ನು ಕಳೆಯುವದಕ್ಕೆಂದು ಈಗ ಕೆಲವು ಮಾತುಗಳನ್ನು ಆಡುತ್ತಿದ್ದೇನೆ. ಮೊದಲನೆಯದಾಗಿ **ಅಧ್ಯಾತ್ಮಪ್ರಕಾಶ ಕಾರ್ಯಾಲಯ ಎಂದರೆ ಯಾವದೋ ಒಂದು 'ಕಾರ್ಯ' (ಉದ್ಯೋಗವನ್ನು) ಸಾಗಿಸುವ ಕಂಪನಿ ಯೆಂದು ಕೆಲವರು ಭಾವಿಸಿರುವಂತಿದೆ. ನಿಜವು ಹಾಗಿಲ್ಲ, ಅಧ್ಯಾತ್ಮ ವಿಚಾರದಲ್ಲಿ ಮನಸ್ಸಿಟ್ಟುಕೊಂಡಿರುವದು; ಅದೇ ಮಾರ್ಗದಲ್ಲಿ ನಡೆಯಬೇಕೆನ್ನುವವರ ಪರಿಚಯ ಮಾಡಿಕೊಳ್ಳುವದು; ಅಂಥವರಲ್ಲಿ ಒಬ್ಬರಿಗೊಬ್ಬರ ಪರಿಚಯವನ್ನು ಮಾಡಿಕೊಡುವದು; ಅಧ್ಯಾತ್ಮಗ್ರಂಥಾವಲೋಕನ, ಪುರಾಣಶ್ರವಣ, ಅರ್ಚನ, ಜಪ- ಮುಂತಾದ ಅನುಷ್ಠಾನ ಗಳನ್ನು ಮಾಡುವದು, ಮಾಡುವವರಿಗೆ ಅವಕಾಶವನ್ನು ಕಲ್ಪಿಸುವದು, ತಮಗೆ ತಿಳಿದಿರುವ ವಿಷಯಗಳನ್ನು ಅನುಭವಕ್ಕೆ ಗೋಚರವಾದ ವಿಷಯಗಳನ್ನು ಮತ್ತೊಬ್ಬರಿಗೆ ತಿಳಿಯಪಡಿಸುವದು, ಮತ್ತೊಬ್ಬರ ಅನುಭವದ ವಿಷಯವಾಗಿ ಕೇಳಿ ಲಾಭವನ್ನು ಪಡೆಯುವದು- ಇಂಥ ಕಾರ್ಯಗಳಲ್ಲಿ ನಿರತವಾಗಿರುವದರಿಂದ ಮಾತ್ರ ಅದು 'ಅಧ್ಯಾತ್ಮಪ್ರಕಾಶಕಾರ್ಯಾಲಯ'**ವೆನಿಸಿದೆ. ನಾನು ಈಗ ವಿವರಿಸುತ್ತಿರುವ ವಿಶಾಲವಾದ

ಅರ್ಥದಲ್ಲಿ ಅದನ್ನೊಂದು ಭಜನಮಂದಿರ- ಎಂದು ಕರೆಯಬಹುದು. ಎರಡನೆಯ ದಾಗಿ ನಾನು ಅಧ್ಯಾತ್ಮಪ್ರಕಾಶ ಕಾರ್ಯಾಲಯವನ್ನು ಇಟ್ಟುಕೊಂಡಿದೇನೆಂದು ಕೆಲವರು ಭಾವಿಸಿರುವದು ನನ್ನ ಲಕ್ಷ್ಯಕ್ಕೆ ಬಂದಿದೆ, ನಿಜವು ಹೀಗಿಲ್ಲ, ಕಾರ್ಯಾಲಯವೇ ನನ್ನನ್ನು ಇಟ್ಟುಕೊಂಡಿದೆ. ನಾನು ಆಶ್ರಮ ಸ್ವೀಕಾರಮಾಡಿದಾಗ ಒಂದು ಕಾರ್ಯಕಾರಿ ಸಮಿತಿಗೆ ಅದನ್ನು ಒಪ್ಪಿಸಿಬಿಟ್ಟೆ. ಈಗ ಅಲ್ಲಿ ಆಗುವ ಅಧ್ಯಾತ್ಮಪ್ರಚಾರಕಾರ್ಯಕ್ಕೆ ನಾನು ಕೈಯಲ್ಲಾದಮಟ್ಟಿಗೆ ನನ್ನ ಅಭಿಪ್ರಾಯಗಳನ್ನು ಬರೆವಣಿಗೆ, ಭಾಷಣ- ಮುಂತಾದವು ಗಳಿಂದ ಒದಗಿಸಿಕೊಟ್ಟು ನೆರವಾಗುತ್ತಿದೇನೆ. ಆದರೆ ಅದರ ಲೌಕಿಕಕಾರ್ಯದಲ್ಲಿ ನನಗೆ ಯಾವ ಭಾಗವೂ ಎಳ್ಳಷ್ಟೂ ಇರುವದಿಲ್ಲ; ಕಾರ್ಯಾಯಲದ ಯಾವ ಲಾಭವಾಗಲಿ ನಷ್ಟವಾಗಲಿ ನನಗೆ ಸಂಬಂಧಪಟ್ಟಿರುವದಿಲ್ಲ. ಜನಕನು ಒಂದು ಸಂದರ್ಭದಲ್ಲಿ 'ಮಿಥಿಲಾಯಾಂ ಪ್ರದೀಪ್ತಾಯಾಂ ನ ಮೇ ದಹತಿ ಕಿಂಚನ' ಮಿಥಿಲಾನಗರಿ ಯೆಲ್ಲವೂ ಸುಟ್ಟುಹೋದರೂ 'ನನ್ನದೇನೂ ಸುಟ್ಟು ಹೋಗುವದಿಲ್ಲ' ಎಂಬುದು ಅವನ ಮಾತು. ಕಾರ್ಯಾಲಯದ ವಿಷಯಕ್ಕೆ ನನಗೆ ಇದೇ ಅಭಿಪ್ರಾಯವಿದೆ. ಆದರೆ ಮತ್ತೊಂದು ದೃಷ್ಟಿಯಿಂದ ನನಗೂ ಕಾರ್ಯಾಲಯಕ್ಕೂ ಬಹಳ ನಿಕಟ ಸಂಬಂಧವಿರುತ್ತದೆ. ಅಧ್ಯಾತ್ಮಚಿಂತನೆಗಾಗಿಯೇ ನಾನು ಮಿಕ್ಕೆಲ್ಲವನ್ನೂ ಸಂನ್ಯಾಸ ಮಾಡಿರುತ್ತೇನಾದ್ದರಿಂದ ಕಾರ್ಯಾಲಯದ ಅಧ್ಯಾತ್ಮದ ಚಟುವಟಿಕೆಗಳು ನನಗೆ ಬಹಳ ಪ್ರಿಯವಾಗಿವೆ. ಆ ಅರ್ಥದಲ್ಲಿ ನಿಮ್ಮ ಮಂಡಳಿಯ ಕಾರ್ಯಗಳೂ ನನಗೆ ಬಹಳ ಪ್ರಿಯವಾಗಿವೆ. ಇಂಥ ಕಾರ್ಯಗಳಲ್ಲಿ ಭಾಗಿಯಾಗಿ ನನ್ನ ಜೀವಿತಶೇಷವನ್ನೂ ಭಗವಂತನ ಭಜನೆಯನ್ನಾಗಿ ಮಾರ್ಪಡಿಸಿಕೊಳ್ಳಬೇಕೆಂಬ ಕುತೂಹಲವು ನನಗೆ ಬಹಳ ಇರುತ್ತದೆ. ಈ ದೃಷ್ಟಿಯಿಂದ ಕಾರ್ಯಾಲಯವು ನಿಮ್ಮೆಲ್ಲರದೂ ಆಗಿದೆ. ಆ ಭಜನ ಮಂದಿರದಲ್ಲಿ ನೀವೂ ಭಾಗವನ್ನು ವಹಿಸಬೇಕು; ನಿಮ್ಮ ಅನುಭವದ ಲಾಭವನ್ನು ಮಿಕ್ಕವರಿಗೆ ನೀಡಬೇಕು; ಮಿಕ್ಕವರ ಅನುಭವದ ಲಾಭವನ್ನು ನೀವೂ ಪಡೆಯಬೇಕು. ಏಕೆಂದರೆ ಭಜನೆಯು ಒಬ್ಬನ ಸಾಧನವಾಗಿರುವದಕ್ಕಿಂತಲೂ ಸಾಮೂಹಿಕವಾಗಿ ರುವಾಗ ಅದರ ಫಲವು ಬೇಗ ಬರುತ್ತದೆ, ಆನಂದವು ಬೇಗ ಸಿಕ್ಕುತ್ತದೆ.

ಉತ್ತರಕರ್ಣಾಟಕದವರಿಗೆ ಮಹಾರಾಷ್ಟ್ರದವರ ಪ್ರಭಾವದಿಂದ ಉಪಾಸನಾ ಮಾರ್ಗದಲ್ಲಿ ಸ್ವಾಭಾವಿಕವಾದ ಪ್ರವೃತ್ತಿಯಿರುತ್ತದೆ. ನಿಮ್ಮಲ್ಲಿ ಈ 'ಜ್ಞಾನೋಪಾಸನಾ ಮಂಡಲಿಯು' ಜನ್ಮವೆತ್ತಿರುವದಕ್ಕೆ ಆ ನೈಸರ್ಗಿಕ ಪ್ರವೃತ್ತಿಯೇ ಕಾರಣವಾಗಿದೆಯೆನ್ನ ಬಹುದು. ಹೀಗಿರುವದರಿಂದ ನಿಮಗೆ ಸಾಮೂಹಿಕಭಜನೆಯಲ್ಲಿ ಹೊಸದಾಗಿ ಪ್ರವೃತ್ತಿ

ಯನ್ನುಂಟುಮಾಡಬೇಕಾದ ಆವಶ್ಯಕತೆಯೇನೂ ಇಲ್ಲ; ಅದು ನಮ್ಮ ಕಡೆಯವರಿಗೆ ಬೇಕಾಗಿರುತ್ತದೆ. ಆದರೆ ಬಹು ಜನರು ಭಜನೆಯಲ್ಲಿ ತೊಡಗಿರುತ್ತಾರೆಂಬ ಕಾರಣ ದಿಂದ ಭಜನೆಯನ್ನು ನಾವೂ ಮಾಡಬೇಕೆನ್ನುವದಕ್ಕೂ ಭಜನೆಯ ತತ್ತ್ವವನ್ನು ಅರಿತು ಅದರಲ್ಲಿ ತೊಡಗುವದಕ್ಕೂ ಬಹಳ ಹೆಚ್ಚುಕಡಿಮೆಯಿದೆ. ಆದ್ದರಿಂದ ನಾನು ಈ ಸಾಮೂಹಿಕ ಭಜನೆಯಲ್ಲಡಗಿರುವ ಮೂಲತತ್ತ್ವಗಳನ್ನು ಸ್ವಲ್ಪ ನಿಮ್ಮ ಮುಂದೆ ಇಡಬೇಕೆಂದಿರುವೆನು. ಅವುಗಳನ್ನು ಅರಿತು ಅನುಷ್ಠಾನಮಾಡುವದರಿಂದ ಅದು ಫಲಪರ್ಯಂತವಾಗುವದು, ಎಲ್ಲರಿಗೂ ಕಲ್ಯಾಣವಾಗುವದು.

ಮೊಟ್ಟಮೊದಲನೆಯದಾಗಿ ಸದಾಚಾರಪ್ರೀತಿ, ಶಾಸ್ತ್ರೀಯ ಕರ್ಮಶ್ರದ್ಧೆ- ಇವುಗಳು ಭಜನೆಯನ್ನು ಮಾಡುವವರಿಗೆ ಅವಶ್ಯ. ಆಚಾರವು ಮೊದಲನೆಯ ಧರ್ಮ. ಭಜನೆಯಿಂದ ಆಗಬೇಕಾದ ಮೊಟ್ಟಮೊದಲನೆಯ ಫಲವು ಚಿತ್ತಶುದ್ಧಿ. ದೇಹಶುದ್ಧಿಗೆ ಕಾರಣವಾಗಿ ಮಡಿಮೈಲಿಗೆಗಳ ಭಾವನೆಯನ್ನು- ಮಡಿ ಎಂದು ಹಾರಾಡುವ ತೋರಿಕೆಯ ಆಟದ ಭಾವನೆಯನ್ನಲ್ಲ, ಶರೀರವನ್ನು ಸ್ನಾನಾದಿಗಳಿಂದ ಶುದ್ಧವಾಗಿಟ್ಟುಕೊಳ್ಳುವ ವಾಞ್ಛೆಯನ್ನು, ಆಹಾರನಿಯಮ- ಇವೇ ಮುಂತಾದವು ಗಳಲ್ಲಿ ಪರಿಶುದ್ಧವಾಗಿರುವ ಭಾವನೆಗಳನ್ನು- ನಾವು ಮೈಗೂಡಿಸಿಕೊಂಡಷ್ಟೂ ನಮ್ಮ ಚಿತ್ತದಮೇಲೆ ಒಳ್ಳೆಯ ಪರಿಣಾಮವಾಗುತ್ತದೆಯೆಂಬುದು ಸಾಧಕರಿಗೆಲ್ಲ ತಿಳಿದಿರುವ ವಿಷಯವಾಗಿದೆ. ದ್ವಿಜರಾದವರು ತಮಗೆ ಶಾಸ್ತ್ರದಲ್ಲಿ ವಿಹಿತವಾಗಿರುವ ಸಂಧ್ಯಾದಿ ಕರ್ಮಗಳನ್ನು ಯಥಾಶಕ್ತಿಯಿಂದ ಸಾಂಗವಾಗಿ ಮಾಡುವದು ಪರಮೇಶ್ವರಭಾವನೆಗೆ ಸಹಕಾರಿಯೆಂಬುದನ್ನು ಹೇಳಬೇಕಾದದ್ದೇ ಇಲ್ಲ, ಕರ್ಮಗಳನ್ನು ವಿಧಿಸಿರುವದು ಮನೋವಾಕ್ಕಾಯಗಳನ್ನು ಹೊಂದುಗೆಯಾಗಿ ಮಾಡಿಕೊಂಡು ಪರಮೇಶ್ವರನ ಭಾವನೆಗೆ ಅಣಿಮಾಡುವದಕ್ಕೆಂದೇ ಆಗಿರುತ್ತದೆ. ಆದ್ದರಿಂದ ನಿಷಿದ್ಧಕರ್ಮಗಳನ್ನು ಬಿಡುವದು, ವಿಹಿತಕರ್ಮಗಳನ್ನು ಮಾಡುವದು- ಇದು ಭಜನೆಗೆ ಅಂತಃಕರಣವನ್ನು ಸಿದ್ಧಗೊಳಿಸುವ ಒಂದು ಉತ್ತಮವಾದ ಅಂಗವಾಗಿರುತ್ತದೆ. ಹೀಗಿರುವದರಿಂದ ಕರ್ಮವನ್ನು ದ್ವೇಷಿಸುವವರು ಯಾರೂ ಭಜನೆಗೆ ಮುಖ್ಯಾಧಿಕಾರಿಗಳಾಗಲಾರರು. ಕರ್ಮಕ್ಕೂ ಭಜನೆಗೂ ಇರುವ ನಿಕಟಸಂಬಂಧವನ್ನು ಅರಿಯದೆ ಕೆಲವರು ಕರ್ಮ ಜಡರು ಭಜನೆಯನ್ನು ನಾಮಸ್ಮರಣೆಯನ್ನು ಹಳಿಯುವದೂ ಭಜನೆಯ ಹೆಸರಿನಲ್ಲಿ ಸ್ವೇಚ್ಛಾಚಾರವನ್ನು ಪ್ರೋತ್ಸಾಹಿಸುವ ಕೆಲವರು ಕರ್ಮವನ್ನು ತಿರಸ್ಕರಿಸುವದೂ ಕಂಡುಬಂದಿದೆ. ಇದು ತಪ್ಪು ತಿಳಿವಳಿಕೆಯ ಫಲವೆಂಬುದನ್ನು ಹೇಳಬೇಕಾದದ್ದೇ ಇಲ್ಲ,

ಎರಡನೆಯದಾಗಿ ಭಜನೆಯನ್ನು ಮಾಡಲಿಚ್ಛಿಸುವವರಿಗೆ ತಾವು ಮಾಡುತ್ತಿರುವದು ಭಗವತ್ಕರ್ಮವೆಂಬ ಅರಿಕೆಯು ಸ್ಪಷ್ಟವಾಗಿರಬೇಕು. ಹಾಗಿಲ್ಲದಿದ್ದರೆ ಅಳಿಯನನ್ನು ಬಿಟ್ಟು ದಿಬ್ಬಣ ತುಳಿದಂತೆ ಆಗುವದು. ಸಾಮೂಹಿಕಭಜನೆಗೆ ಜನಸಮೂಹವು ಬೇಕೆಂಬುದು ನಿಜ. ಆದರೆ ಭಗವದ್ಭಾವನೆಗೆ ಪ್ರಾಧಾನ್ಯವನ್ನು ಕೊಟ್ಟು ಲೌಕಿಕ ವಿಚಾರಗಳನ್ನು ಬದಿಗೊತ್ತುವದಕ್ಕೆ ಸಿದ್ಧವಾಗಿರುವ ಜನರ ಸಮೂಹವೇ ಅಲ್ಲಿರಬೇಕು. ಸುಮ್ಮನೆ ನಾಟಕ, ಸಿನೆಮಾ- ಮುಂತಾದ ದೃಶ್ಯಗಳನ್ನು ನೋಡಿ ಕಣ್ಕಿವಿಗಳಿಗೆ ಹಬ್ಬವನ್ನು ಮಾಡಿಕೊಳ್ಳಬೇಕೆಂಬ ಕುತೂಹಲವುಳ್ಳವರ ಗುಂಪನ್ನು ಸೇರಿಸಿದರೆ ಯಾವ ಪ್ರಯೋಜನವೂ ಇಲ್ಲ. ಈ ಸ್ಥಲವು ಪವಿತ್ರಭಾವನೆಯ ಉದ್ಬೋಧಕ್ಕಾಗಿ ನೆರೆದಿರುವ ಭಾವುಕರ ಸ್ಥಾನ ಎಂಬ ಅರಿವು ಇಲ್ಲದ ಭಜನೆಯ ಮಂಡಲಿಯವರು ತಮ್ಮ ಸಂಗೀತಕೌಶಲವೇ ಮುಂತಾದ ಪ್ರದರ್ಶನವನ್ನು ಮಾಡಿ ಜನರ ಮೆಚ್ಚಿಕೆಯನ್ನು ಸಂಪಾದಿಸುವದಕ್ಕೆ ಪ್ರಯತ್ನ ಮಾಡುವ ಸಂಭವವಿದೆ. ಆ ಅರಿವು ಇಲ್ಲದ ಪ್ರಾಕೃತರು, ನಾಸ್ತಿಕಬುದ್ಧಿಯ ಅಥವಾ ಯಾವ ವಿವೇಚನೆಯೂ ಇಲ್ಲದ ಹುಡುಗರು, ಹೆಂಗಸರು ಮುಂತಾದವರ ಗುಂಪನ್ನು ಕುರಿಯ ಮಂದೆಯಂತೆ ಬಿಟ್ಟುಕೊಂಡಿರುವದು ಈ ಭಜನೆಗೆ ಎಂದಿಗೂ ಹಿತಕರವಾಗಲಾರದು. ಆ ಗುಂಪು, ಜನರ ಮಾತು, ಲೌಕಿಕ ವ್ಯಾಪಾರ- ಇವುಗಳ ಸಂತೆಯಾಗಿ ಪರಿಣಮಿಸುವ ಅಂಜಿಕೆಯೂ ಇರುತ್ತದೆ.

ಮೂರನೆಯದಾಗಿ ಭಜನೆಗೆ ಸೇರಿದವರು ಬರಿಯ ಭಜನಮಂಡಲಿಯವರಾಗಬಾರದು; ಭಜನಸಂಘದವರಾಗಿರಬೇಕು. ಮಂಡಲಿ ಎಂದರೆ ಸ್ವತಂತ್ರವಾದ ಬೇರೆಬೇರೆ ಭಾವನೆಯ ಕೆಲವರು ಸೇರಿರುವ ಗುಂಪು; ಸಂಘವೆಂದರೆ ಒಂದೇ ಒಂದು ಉದ್ದೇಶದಿಂದ ಸೇರಿ ತಮ್ಮ ತಮ್ಮ ಭಾಗದ ಕಾರ್ಯಭಾಗವನ್ನು ಮಿಕ್ಕೆಲ್ಲರ ಕಾರ್ಯಭಾಗಗಳಿಗೆ ಹೊಂದಿಕೆಯಾಗಿ ಮಾಡಿಕೊಳ್ಳುವ ಜನರ ಸಮಾಜ. ಶರೀರದಲ್ಲಿ ಕರಣಗಳೆಲ್ಲವೂ ತಮ್ಮ ಸ್ವಾಮಿಯಾದ ಒಬ್ಬ ಜೀವನ ಪ್ರಯೋಜನವನ್ನೇ ಗುರಿಯಾಗಿಟ್ಟುಕೊಂಡು, ಒಂದಕ್ಕೊಂದು ಹೊಂದಿಕೊಂಡಿರುವದರಿಂದ ಶರೀರೇಂದ್ರಿಯಗಳ ಗುಂಪನ್ನು ಕಾರ್ಯಕರಣಸಂಘಾತವೆನ್ನುವರು. ಇದರಂತೆ ಭಜನೆಯ ಸಂಘವು ಭಗವದ್ಭಾವನೆಯನ್ನು ಮನದಲ್ಲಿ ಮೂಡಿಸಿಕೊಂಡು ಬೆಳೆಯಿಸಿಕೊಳ್ಳುವ ಸದುದ್ದೇಶದಿಂದಲೇ ಕೂಡಿ ಈ ಫಲವು ಕೈಗೂಡುವಂತೆ ಒಬ್ಬರಿಗೊಬ್ಬರು ಹೊಂದಿಕೊಂಡಿರುವವರ ಗುಂಪಾಗಿರಬೇಕು. ನೆರೆದಿರುವ ಇತರರೂ ಈ ಭಾವನೆಯಿಂದ ತಾವೂ ಉಚ್ಚಭಾವನೆಯನ್ನು ಪಡೆದುಕೊಂಡು ಸಾಧ್ಯವಾದಾಗ ಸಂಘಕ್ಕೆ ಸೇರುವ ಕುತೂಹಲವುಳ್ಳವರಾಗಿರ

ಬೇಕು. ಹೀಗಾದರೆ ಅಲ್ಲಿ ಭಗವಂತನ ಸಾಂನಿಧ್ಯವು ಬೇಗನೆ ಮನದಲ್ಲಿ ಮಿಂಚುವದು. ಭಜನೆಯೆಂದರೇ ಭಗವಂತನ ದೃಷ್ಟಿಯಿಂದ ಲೋಕದಲ್ಲಿ ಯಾವಾಗಲೂ ಇದ್ದುಕೊಂಡಿರುವ ತಾಳಮೇಳಕ್ಕೆ ಹೊಂದುಗೆಯಾಗುವ ಮನೋಭಾವವೆಂದು ಆಗಲೆ ತಿಳಿಸಿದ್ದೇನೆ. ಭಜನೆ ಮಾಡುವವರು ಈ ಭಾವದ ಸಾಧನೆಗೆ ಆಶ್ರಯರು, ಭಗವಂತನು ವಿಷಯ, ಅದಕ್ಕೆ ಶಾಂತಿಸುಖಗಳೇ ಫಲ.

ಭಜನೆಯನ್ನು ಮಾಡುತ್ತಿದೇವೆಂಬ ಅರಿವಾಗಲೀ, ಇದರ ಫಲವು ಇಂಥದ್ದಾಗುವದೆಂಬ ಹಂಬಲಾಗಲಿ, ಇರುವವರಿಗೆ ಭಜನವು ಅಷ್ಟು ಚಿತ್ತಸಮರ್ಪಕವಾಗಿರುವದಿಲ್ಲ, ಇವೆಲ್ಲವೂ ಮನಸ್ಸಿಗೆ ಮರೆಯಾಗಿ ಭಗವಂತನ ಭಾವನೆಯಲ್ಲಿಯೇ ಮುಳುಗಿದರೆ ನಿಜವಾದ ಭಾವನೆಯಾಯಿತು. ನಾನು ಭಜನೆಯನ್ನು ಮಾಡುತ್ತಿದೇನೆ ಎಂಬ ಅರಿವು ಅಳಿಸಿಹೋಗಬೇಕು. ಇದಕ್ಕೆ ಬೇಕಾದ ಸಾಧನವೆಂದರೆ ಅಹಂಕಾರವನ್ನು ಒರಸಿಹಾಕಿ ಕೊಂಡಿರುವ, ಭಗವಂತನ ಭಕ್ತಿಯಲ್ಲಿ ತಮ್ಮನ್ನು ಅದ್ದಿಕೊಂಡುಬಿಟ್ಟಿರುವ, ತಮ್ಮ ಆನಂದವನ್ನು ತಮ್ಮ ನೋಟ, ಮುಖಭಾವ, ಮಾತು, ಕೀರ್ತನ-ಮುಂತಾದವುಗಳಿಂದ ಹೊರಸೂಸಿ ಎತ್ತೆತ್ತಲೂ ಚಿಮ್ಮುತ್ತಿರುವ ಭಗವದ್ಭಕ್ತರ ಮುಂದಾಳು. ಸಾಮೂಹಿಕಭಜನೆಗಳಿಗೆ ಮುಂದಾಳೆಂದರೆ ಸಂಗೀತಪ್ರಿಯನಲ್ಲ, ಮತ್ತೇನೆಂದರೆ ಭಗವಂತನಿಗೆ ಪ್ರಿಯನಾಗಿ ಭಗವಂತನನ್ನೇ ಪ್ರಿಯನನ್ನಾಗಿಟ್ಟುಕೊಂಡಿರುವ ಭಾವ ಸಮಾಧಿಯನ್ನನುಭವಿಸಬಲ್ಲ ಮಹಾತ್ಮನು. ಭಗವದ್ಭಾವವು ಮುಳುಗಿದ್ದವರಿಗೆ ಬಾಹ್ಯ ಜಗತ್ತು ಎದುರ್ದ್ದಾಣುತ್ತಿರುವದು; ಭಜನೆಯಲ್ಲಿ ಬಾಹ್ಯಜಗತ್ತು ಮುಳುಗಿಹೋಗಬೇಕು. ಭಕ್ತನು ಎದ್ದುಕೊಳ್ಳಬೇಕು. ಆದಷ್ಟು ಮಟ್ಟಿಗೂ ಭಾವನಾರಸವನ್ನು ಸವಿದಿರುವ ಒಬ್ಬ ಮುಂದಾಳನ್ನು ಭಜನೆಗೆ ನಿಲ್ಲಿಸಿಕೊಳ್ಳಿರಿ. ಭಜನೆಯು ಉತ್ತಮವಾಗುವದು. ನಿಮಗೆ ಭಜನೆಯ ಸಮಾಧಿಯು ಬರುವದು, ಆ ಕಣ್ಣಿನಿಂದ ನೋಡಿದಾಗ ಜಗತ್ತೆಲ್ಲವೂ ನಾರಾಯಣಮಯವಾಗುವದು! ನಾರದರು ವೀಣೆಯನ್ನು ಬಾರಿಸಿ ನಾರಾಯಣ ನಾಮವನ್ನು ಗಾನಮಾಡುವದಕ್ಕೆ ಹೊರಟು 'ನಾ' ಎಂದರೆ ಸಾಕು, ಇಡಿಯ ಜಗತ್ತೇ 'ನಾರಾಯಣ!' ಎಂದು ನಾಮಗಾನವನ್ನು ಮಾಡುತ್ತಿತ್ತು! ನಾರದಾಂಶವುಳ್ಳ ಭಕ್ತರೊಬ್ಬರನ್ನು ಆರಿಸಿಕೊಂಡು ಸಾಮೂಹಿಕ ಭಜನೆಯನ್ನು ಪ್ರಾರಂಭಿಸಿರಿ; ಅವರನ್ನು ಅನುಕರಿಸಿ ನಾಮಗಾನವನ್ನು ಮಾಡಿರಿ. ಭಕ್ತರ ಮೂಲಕ ನಿಮಗೂ ಭಗವಂತನಿಗೂ ಅಭೇದವುಂಟಾಗುವದು. ಭಜನಮಂಡಲಿಯೆಂದರೆ ಭಗವಂತನ ತನುವೇ ಎಂದು ಎಲ್ಲರಿಗೂ ಭಾಸವಾಗುವದು!

ಇಡಿಯ ಜಗತ್ತೇ ಒಂದಾನೊಂದು ಗೀತಕ್ಕೆ ಮರುಳಾಗಿರುತ್ತದೆ. ತಿಳಿದೋ ತಿಳಿಯದೆಯೋ ನಾವೆಲ್ಲರೂ ಆ ಗಾನದ ಇಂಪಿಗೆ ಸೋತು ಭಜನಮಂಡಲದವರಾಗಿರುತ್ತೇವೆ. ಆದರೆ ಆ ಮೃದುಮಧುರಗೀತವನ್ನು ಇಂಥದ್ದೆಂದು ನಾವಿನ್ನೂ ಗುರುತಿಸಿಲ್ಲ; ಅದನ್ನು ಕಂಡು ಗುರುತಿಸುವವರೆಗೂ ನಮ್ಮ ಮನಸ್ಸಿಗೆ ಶಾಂತಿಯಿಲ್ಲ. ಆ ಆನಂದವು ದೊರಕುವವರೆಗೂ ನಾವು ನಿಂತಲ್ಲಿ ನಿಲ್ಲುವುದಿಲ್ಲ, ನಮ್ಮ ವ್ಯವಹಾರವೆಲ್ಲವೂ ಅದರ ಅನ್ವೇಷಣೆಯೇ ಆಗಿರುತ್ತದೆ. ರಾಗತಾಳಗಳ ಹೊಂದಿಕೆಯಿಲ್ಲದೆ ಹಾಡುವ ಭಜನಮಂಡಲಿಯವರ ಗುಂಪಿನಂತೆ ಕಾಣುತ್ತಿದೆ, ಈ ಜಗತ್ತು. ಆದರೆ ಯಾರು ಮನಃಪೂರ್ವಕವಾಗಿ ಆ ಭಗವಂತನ ಲೀಲೆಗೆ ಉಪಕರಣವಾಗು ವರೋ, ಅವರಿಗೆ ಆ ಗಾನವು ಸ್ವಲ್ಪಸ್ವಲ್ಪವಾಗಿ ಕೇಳಿಸಹತ್ತುವದು. ಆಗ ಅವರು ಭಗವನ್ಮಯರಾಗುವರು. ಅವರನ್ನು ಹಿಂಬಾಲಿಸುವವರೂ ಭಗವನ್ಮಯರಾಗುವರು. ಇಂಥವರ ಸಮೂಹವೇ ಭಜನೆಯ ಸಂಘ. ಅವರು ಭಗವಂತನ ಭಜನೆಯ ಆನಂದದಿಂದ ಹುಚ್ಚರಂತೆ ಆಗಿಬಿಟ್ಟಿರುತ್ತಾರೆ; ಇತರರಿಗೂ ಆ ಹುಚ್ಚನ್ನು ಹಿಡಿಸ ಬಲ್ಲವರಾಗಿರುತ್ತಾರೆ. **(ಉಪನ್ಯಾಸ ಕಾಲದಲ್ಲಿ ಕೂಡ ಇಂಥ ಭಾವಾವೇಶವುಳ್ಳವರೊಬ್ಬರನ್ನು ಮುಂದು ಮಾಡಿಕೊಂಡು ಎಲ್ಲರೂ ಒಟ್ಟಿಗೆ ಸ್ವಲ್ಪಹೊತ್ತು ಭಜನೆಮಾಡಿ ಉಪನ್ಯಾಸವನ್ನು ಆರಂಭಿಸಿದರೆ ಒಳ್ಳೆಯದೆಂದು ನನ್ನ ನಮ್ರ ಸೂಚನೆ. ನಮ್ಮ ಕಾರ್ಯಾಲಯದಲ್ಲಿ ಈ ಪದ್ಧತಿಯಿದೆ.)**

ಭಗವಂತನು ನಮ್ಮಲ್ಲಿರುತ್ತಾನೆ. ತನ್ನಿಷ್ಠರಾದ ಭಕ್ತರನ್ನು ಹಿಂಬಾಲಿಸಿಯೇ ಭಜನೆ ಮಾಡಿದರೆ ಇದರ ಅರಿವು ಆಗುತ್ತದೆ. ನಾವು ಭಗವಂತನ ಕೈಗೂಸಾಗೋಣ. ಆತನೇ ನಮ್ಮನ್ನು ಎತ್ತಿಕೊಂಡು ಮುದ್ದಾಡಿ ತನ್ನ ಭಜನೆಯ ಆನಂದವನ್ನು ಕೊಡುತ್ತಾನೆ. ಭಜನೆಯ ಹುಚ್ಚು ನಮ್ಮೆಲ್ಲರಿಗೂ ಹಿಡಿಯಬೇಕು. ಬೆಳೆಯಬೇಕು. ನಿಲ್ಲಬಾರದು. ನಮ್ಮ ಶರೀರ, ಇಂದ್ರಿಯ- ಎಲ್ಲವೂ ಭಕ್ತಿಮಯವಾದ ಮನಸ್ಸಿಗೆ ಅಡಿಯಾಳಾಗಲಿ! ಎಲ್ಲವೂ ಭಗವನ್ಮಯವಾಗಲಿ! ನಾನು ನೀವು, ಹಾಡುವ ಪದಪದ್ಯ, ನಾಮಕೀರ್ತನೆ- ಎಲ್ಲವೂ ಭಗವನ್ಮಯವಾಗಲಿ ! ಇದೇ ಸಾಮೂಹಿಕ ಭಜನೆಯೆಂಬ ಹಿಮಾಲಯಪರ್ವತದ ಗೌರೀಶಂಕರಶಿಖರ.

*****

# 54. ಗುರುಪೂರ್ಣಿಮೆ

ಆಷಾಢ ಶುದ್ಧ ಪೂರ್ಣಿಮೆಯ ದಿನ ಯತಿಗಳು ವ್ಯಾಸಪೂಜೆಯನ್ನು ಮಾಡುವ ಪದ್ಧತಿಯಿದೆ; ಆದ್ದರಿಂದ ಅದನ್ನು **ವ್ಯಾಸಪೂರ್ಣಿಮೆ**ಯೆನ್ನುವರು. ಆದರೆ ಆ ದಿವಸ ಅಧ್ಯಾತ್ಮಚಿಂತಕರು ತಮ್ಮ ತಮ್ಮ ಗುರುಗಳನ್ನು ಪೂಜಿಸುವರಾದ್ದರಿಂದ ಅದನ್ನು **ಗುರುಪೂರ್ಣಿಮೆ**ಯೆಂದೂ ಕರೆಯುತ್ತಾರೆ.

ಮನುಷ್ಯನು ಅನೇಕ ವಿಷಯಗಳಲ್ಲಿ ಸಂಘದಲ್ಲಿ ಜೀವಿಸುವ ಪ್ರಾಣಿಯಾಗಿರುತ್ತಾನೆ. ಸಂಘವಿಲ್ಲದಿದ್ದರೆ ಮನುಷ್ಯನ ಏಳಿಗೆಯಾಗಲಾರದೆಂದೇ ಹಲವರ ನಂಬಿಕೆಯಿದೆ. ಆದರೆ ಕೆಲವು ವಿಷಯಗಳಲ್ಲಿ ಸಹಕಾರಜೀವನವು ಸಾಧ್ಯವಿಲ್ಲ. ಉದಾಹರಣೆಗೆ ಊಟ, ನಿದ್ರೆ, ಸುಖದುಃಖಗಳ ಅನುಭವ, ಮನಸ್ಸಿನ ವಿಚಾರ- ಇಂಥವುಗಳ ವಿಷಯಕ್ಕೆ ಮತ್ತೊಬ್ಬರ ಸಹಕಾರವು ಪ್ರಯೋಜನಕರನಾಗುವದಿಲ್ಲ. ಪ್ರತಿಯೊಬ್ಬನೂ ತನ್ನ ಆಹಾರವನ್ನು ತಾನೇ ಜೀರ್ಣಿಸಿಕೊಳ್ಳಬೇಕು, ತನ್ನ ಸುಖನಿದ್ರೆಯನ್ನು ತಾನೇ ಸಂಪಾದಿಸಿಕೊಳ್ಳಬೇಕು, ಅಂತಃಕರಣದಲ್ಲಾಗುವ ವೇದನೆಗಳೂ ಅವುಗಳಿಂದಾಗುವ ಸುಖದುಃಖಗಳೂ ನಮ್ಮಲ್ಲಿ ಪ್ರತಿಯೊಬ್ಬರಿಗೂ ಬೇರೆಬೇರೆಯಾಗಿರುತ್ತವೆ. ಅವುಗಳನ್ನು ಪಾಲುದಾರಿಕೆಯಿಂದ ಮಾಡುವದಕ್ಕಾಗಲಿ ಅನುಭವಿಸುವದಕ್ಕಾಗಲಿ ಆಗುವದಿಲ್ಲ.

ಕೆಲವು ಕರ್ಮಾನುಷ್ಠಾನಗಳು, ಉದಾಹರಣೆಗೆ ಯಜ್ಞವೇ ಮುಂತಾದವುಗಳು, ಮತ್ತೊಬ್ಬರ ಸಹಾಯವನ್ನು ಕೋರುವವು; ಅವಕ್ಕೆ ಸಹಾಯಕರಿಲ್ಲದಿದ್ದರೆ ಮುಂದುವರಿಯುವದೇ ಆಗಲಾರದು. ಕುಟುಂಬಿಗಳು ಮಾಡುವ ವ್ರತ, ಹಬ್ಬ, ಹುಣ್ಣಿಮೆ, ವಿವಾಹಾದಿ ಕರ್ಮಗಳು- ಇವೆಲ್ಲ ಈ ಗುಂಪಿಗೆ ಸೇರಿರುತ್ತವೆ. ಆದರೆ ಅಂತಃಕರಣಕ್ಕೆ ಸಂಬಂಧಪಟ್ಟ ಉಪಾಸನೆಗಳೂ ತತ್ತ್ವವಿಚಾರವೂ ತಾನುತಾನೇ ಮಾಡಿಕೊಳ್ಳತಕ್ಕವುಗಳಾಗಿವೆ. ಈ ಬಗೆಯ ಸಾಧನೆಗಳಿಗೆ ತಾನು, ಪರಮೇಶ್ವರ- ಇಬ್ಬರೇ ಸೇರಿರಬೇಕಾಗುವದು.

ಇಂಥ ಏಕಾಂತಸಾಧನದಲ್ಲಿಯೂ ಕೂಡ ಸದ್ಗುರುವಿನ ಸಹಾಯವೊಂದು ಪರಮೋಪಕಾರಿಯಾಗಿರುತ್ತದೆ. ಏಕೆಂದರೆ ಸಾಮಾನ್ಯಸಾಧಕರಿಗೆ ಈಶ್ವರನ ಸ್ವರೂಪವು ತಿಳಿದಿರುವದಿಲ್ಲ; ಆತನನ್ನು ಹೇಗೆ ಎಲ್ಲಿ ಉಪಾಸನೆಮಾಡಬೇಕೆಂಬುದು ಹೊಳೆ

ದಿರುವದಿಲ್ಲ; ಆತನ ಪರಮತತ್ತ್ವವನ್ನು ಹೇಗೆ ಅನುಭವದಲ್ಲಿ ಕಂಡುಕೊಳ್ಳಬಹುದೆಂಬ ಮಾರ್ಗವು ಗೊತ್ತಾಗಿರುವದಿಲ್ಲ. ಈ ಸಂದರ್ಭಕ್ಕೆ ಅವರು ಸದ್ಗುರುವನ್ನೇ ಪರಮೇಶ್ವರನ ಪ್ರತಿನಿಧಿಯಾಗಿ ಭಾವಿಸಬೇಕಾಗುತ್ತದೆ. ಏಕೆಂದರೆ ಆತನ ಮೂಲಕವೇ ಅವರಿಗೆ ಸಾಧನಮಾರ್ಗದ ಉಪದೇಶವು ದೊರೆಯಬೇಕಾಗಿರುತ್ತದೆ.

**ಸದ್ಗುರುವೆಂದರೆ ಯಾರು? ಯಾವನು ಸದ್ರೂಪನಾದ ಪರಮಾತ್ಮನ ತತ್ತ್ವವನ್ನು ಶ್ರುತ್ಯಾದಿಗಳ ಮೂಲಕ ತಿಳಿದು ನೇರವಾಗಿ ಕಂಡುಕೊಂಡು ಆ ಪರಮಾತ್ಮನಲ್ಲಿಯೇ ನಿಷ್ಠನಾಗಿರುವನೋ, ಯಾವನಲ್ಲಿ ಆ ಪರಮಾತ್ಮನ ವಿಭೂತಿಗಳು ಕಾಣಿಸುತ್ತಿರುವವೋ, ಆತನೇ ಸದ್ಗುರು. ಶ್ರುತಿಯಲ್ಲಿ ಹೇಳಿರುವ ಶಾಂತ್ಯಾದಿಗಳೂ ಗೀತೆಯಲ್ಲಿ ಹೇಳಿರುವ ಅಮಾನಿತ್ವಾದಿಗಳೂ ಯಾವಾತನಲ್ಲಿ ಕಾಣಿಸುತ್ತಿರುವವೋ, ಯಾವಾತನು ಪಾಪವಾಸನೆಯಿಲ್ಲದೆ ಎಲ್ಲರಲ್ಲಿಯೂ ಸಮಭಾವನೆಯಿಂದ ವರ್ತಿಸುತ್ತಿರುವನೋ, ಯಾವನು ಜ್ಞಾನವೈರಾಗ್ಯಗಳಿಂದೊಡಗೂಡಿ ಅದರ ಲಾಭವನ್ನು ತನ್ನನ್ನು ಶರಣುಹೊಕ್ಕವರಿಗೆಲ್ಲ ಕೊಡಬಲ್ಲನೋ ಅವನೇ ಸದ್ಗುರು.**

ವೇದವ್ಯಾಸರು ವೇದ, ಉಪನಿಷತ್ತುಗಳು, ಗೀತೆ, ಬ್ರಹ್ಮಸೂತ್ರ, ಪುರಾಣೇತಿಹಾಸಗಳು– ಇವನ್ನೆಲ್ಲ ಈ ಲೋಕಕ್ಕೆ ಅನುಗ್ರಹಿಸಿರುವ ಮಹಾತ್ಮರು. ನಾಲ್ಕು ಮುಖವಿಲ್ಲದಿದ್ದರೂ ಬ್ರಹ್ಮನ ಸ್ವರೂಪರು, ನಾಲ್ಕು ಕೈಗಳಿಲ್ಲದಿದ್ದರೂ ವಿಷ್ಣುಸ್ವರೂಪರು, ಹಣೆಗಣ್ಣಿಲ್ಲದವರಾದರೂ ಶಂಭುಸ್ವರೂಪರು– ಎಂದು ಅವರನ್ನು ಬಲ್ಲವರು ಕೊಂಡಾಡಿರುತ್ತಾರೆ. ಅವರ ಆಶಯವನ್ನು ಕಲಿಯುಗದಲ್ಲಿ ತಮ್ಮ ಅಮರವಾಣಿಯ ಭಾಷ್ಯಗಳಿಂದ ಹೊರಪಡಿಸಿರುವ ಶ್ರೀಶಂಕರಾಚಾರ್ಯರಂಥ ಜಗದ್ಗುರುಗಳೂ ಸದ್ಗುರುಗಳೇ. ವ್ಯಾಸಪೂರ್ಣಿಮೆಯ ದಿನ ವ್ಯಾಸಮಹರ್ಷಿಗಳನ್ನೂ ಶ್ರೀಶಂಕರಾಚಾರ್ಯರನ್ನೂ ಪೂಜಿಸಿ ಅವರು ಅನುಗ್ರಹಿಸಿರುವ ಸದ್ಗ್ರಂಥಗಳನ್ನು ಶ್ರದ್ಧಾಭಕ್ತಿಗಳಿಂದ ಅವಲೋಕಿಸಬೇಕು. ಅವರ ಪ್ರತಿನಿಧಿಗಳಾಗಿ ಅಧ್ಯಾತ್ಮತತ್ತ್ವಗಳನ್ನು ಹೃದಯಂಗಮವಾಗಿ ತಿಳಿಸಿಕೊಡಬಲ್ಲ ಸಾಧುಸಂನ್ಯಾಸಿಗಳನ್ನೂ ಅವಶ್ಯವಾಗಿ ಪೂಜಿಸಿ ಅವರ ಪ್ರಸಾದವನ್ನು ಪಡೆಯಬೇಕು.

ಸದ್ಗುರುವಿನ ಹೃದಯದಲ್ಲಿ ಪರಮಾತ್ಮನೇ ನೆಲಸಿರುತ್ತಾನೆ. ಅವನಿಗೂ ಅವರಿಗೂ ಭೇದವಿಲ್ಲ. ತಾನು ಪರಮಾತ್ಮನಲ್ಲಿ ಒಂದಾಗಿ ತನ್ನ ಶಿಷ್ಯರಿಗೂ ಆ ಆನಂದವನ್ನು ಹಂಚಿಕೊಡಬಲ್ಲ ಸದ್ಗುರುವಿನ ಪೂಜೆಯನ್ನು ಮಾಡಿ, ಅಧ್ಯಾತ್ಮ

ಸಾಧನೆಯು ಈ ವರ್ಷವೆಲ್ಲ ಸುಪಥವಾಗುವಂತೆ ಆಶೀರ್ವದಿಸಬೇಕೆಂದು ಪ್ರಾರ್ಥಿಸಿ ಕೊಳ್ಳಿರಿ. ಸದ್ಗುರುವಿನಲ್ಲಿ ಪರಮೇಶ್ವರನಲ್ಲಿಡುವಂಥ ಪರಭಕ್ತಿಯನ್ನು ಇಟ್ಟವರಿಗೇ ಪರತತ್ತ್ವದ ಸಾಕ್ಷಾದನುಭವವು ಆತನ ಅನುಗ್ರಹದಿಂದ ಮನದಲ್ಲಿ ಮಿಂಚುವದು.

*****

# 55. ಧ್ಯಾನ [1]

ಪರಮಾತ್ಮನ ಉಪಾಸನೆಯಲ್ಲಿ ನಾನು ಕರ್ತೃ, ನನಗೆ ಈ ಸಾಧನೆಯ ಫಲವು ಆಗಬೇಕು, ಆ ಫಲವು ನನ್ನ ಕ್ರಿಯೆಗೆ ಅನುಗುಣವಾಗಿ ಆಗುವದು ಎಂದು ಕ್ರಿಯಾ ಕಾರಕಫಲಗಳ ಸಂಬಂಧವು ಮೊದಲು ಕಾಣಬರುವದು. ಈ ದೃಷ್ಟಿಯು ಇರುವ ವರೆಗೂ 'ನಾನು' ಎಂಬುದಕ್ಕೇ ಹೆಚ್ಚಿನ ಸ್ಥಾನವಿರುತ್ತದೆ. ಆದರೆ ಉಪಾಸನೆಯು ಬಲಿತಂತೆಲ್ಲ ಪರಮೇಶ್ವರನ ಧ್ಯಾನಕ್ಕೆ ತಕ್ಕ ಯೋಗ್ಯತೆಯು ನಮಗೆ ಹೆಚ್ಚಿದಂತೆಲ್ಲ ಉಪಾಸನೆಗೆ ಈಶ್ವರನು ಕೇವಲ ಕರ್ಮವಾಗಿರುತ್ತಾನೆಂಬ ಬುದ್ಧಿಯು ಹೋಗಿ ಪರಮಾತ್ಮನೇ ಕ್ರಿಯಾಕಾರಕಫಲರೂಪನಾಗಿ ಇರುತ್ತಾನೆಂಬ ಹೊಸಕಣ್ಣು ತೆರೆದು ಕೊಳ್ಳುವದು. 'ನಾನು' ಎಂಬುದು ಧ್ಯೇಯನಾದ ಪರಮಾತ್ಮನಲ್ಲಿ ಮುಳುಗಿ ಹೋಗುವದು. ಈ ಸ್ಥಿತಿಯು ಬರುವ ಹೊತ್ತಿಗೆ ತಾನು ಎಲ್ಲಾ ವಿಷಯದಲ್ಲಿಯೂ ಪರಮೇಶ್ವರನ ಅಧೀನನಾಗಿರುವೆನೆಂಬುದು ಮನಸ್ಸಿಗೆ ತಟ್ಟಿರುವದು. ಹೀಗೆ ಪರಮೇಶ್ವರನ ಅಧೀನ ವಾಗಿರುವದೆಂಬುದು ಸ್ವಾತಂತ್ರ್ಯವನ್ನು ಕಳೆದುಕೊಳ್ಳುವ ಸ್ಥಿತಿಯಾದ್ದರಿಂದ ಈಗಿಗಿಂತ ಕಡಿಮೆಯ ಸ್ಥಿತಿಯದೆಂದು ನಮಗೆ ಈಗ ತೋರಬಹುದು. ಆದರೆ ನಿಜವಾಗಿ ಅದು ನಮ್ಮನ್ನು ಮೇಲಿನ ಮಟ್ಟಕ್ಕೆ ಏರಿಸುವ ಸ್ಥಿತಿಯಾಗಿರುತ್ತದೆ.

ಧ್ಯಾನಕ್ಕೆ ಬೇಕಾದ ಸಂನಿವೇಶಕ್ಕೂ ನಮ್ಮ ಈಗಿನ ಸ್ಥಿತಿಗೂ ಬಹಳ ಹೆಚ್ಚು ಕಡಿಮೆಯಿರುತ್ತದೆ. ಅದಕ್ಕೆ ಏಕಾಂತವಾಸವು ಬೇಕು, ಮನಸ್ಸಿನಲ್ಲಿ ವಿಕ್ಷೇಪರಾಹಿತ್ಯವೂ ಪ್ರಸನ್ನತೆಯೂ ಇರಬೇಕು. ಆದ್ದರಿಂದ ಸಂತೆಯಲ್ಲಿ ನಿಂತು ಧ್ಯಾನದ ವಿಷಯವನ್ನು ಮಾತನಾಡುವದು ಆಗಲಾರದು. ಆದ್ದರಿಂದ ಇಲ್ಲಿ ನಾನು ಧ್ಯಾನದ ವಿಷಯವಾಗಿ

---

**1.** ಹಾವೇರಿಯ ಜ್ಞಾನೋಪದೇಶಮಂಡಲಿಯಲ್ಲಿ ಶ್ರೀಶ್ರೀಗಳವರು ತಾ।। 11- 6- 1954 ರಲ್ಲಿ ಮಾಡಿದ ಉಪದೇಶದ ಸಾರವಿದು.

ಹೆಚ್ಚು ಹೇಳುವದಿಲ್ಲ; ಪಕ್ವಾನ್ನವನ್ನು ರುಚಿನೋಡುವದಕ್ಕೆ ಸ್ವಲ್ಪವನ್ನು ಕೊಡುವಂತೆ ಅದರ ರೂಪರೇಖೆಯ ಚಿತ್ರವನ್ನು ಮಾತ್ರ ನಿಮ್ಮ ಮುಂದೆ ಇಡುವೆನು.

ಧ್ಯಾನಕ್ಕೆ ಬೇಕಾದ ಬುದ್ಧಿಯ ವಿಚಾರವಾಗಿ ಮೊದಲು ಮಾತನಾಡೋಣ. ಬುದ್ಧಿಗೆ ಅಂತಃಕರಣವೆಂಬ ಹೆಸರೂ ಇದೆ. ಆದರೂ ಅದು ಅನೇಕರಲ್ಲಿ ನಿಜವಾದ ಅರ್ಥದಲ್ಲಿ ಅಂತಃಕರಣವಾಗಿರುವದಿಲ್ಲ, ಹೊರಗಿನ ವಿಚಾರವೇ ಅದಕ್ಕೆ ಬೇಕಾಗಿರುತ್ತದೆ. ಇಂದ್ರಿಯಗಳು ಅದಕ್ಕೆ ಒಪ್ಪಿಸುವ ವರದಿಗಳನ್ನು ಕುರಿತು ವಿಚಾರಮಾಡುವದೇ ಬಹಳವುಟ್ಟಿಗೆ ಅದರ ಕೆಲಸವಾಗಿರುತ್ತದೆ. ಈ ಬುದ್ಧಿಯನ್ನು ಉಪಯೋಗಿಸಿ ಕೊಳ್ಳುವದು ಪರಮಾತ್ಮನ ಸ್ವರೂಪವನ್ನು ತಿಳಿದುಕೊಳ್ಳುವದಕ್ಕಾಗಲಿ ಧ್ಯಾನಿಸುವದಕ್ಕಾಗಲಿ ಸಾಧನವಾಗಲಾರದು. ಉದಾಹರಣೆಗೆ ಪರಮಾತ್ಮನು ಅನಂತನಾಗಿರುತ್ತಾನೆ ಎಂಬ ಶಾಸ್ತ್ರೋಪದೇಶವನ್ನು ಈ ಬುದ್ಧಿಯಿಂದ ತಿಳಿದುಕೊಳ್ಳುವದಕ್ಕೆ ಹೋದರೆ ಅಳತೆಯು ಇಷ್ಟೆಂದು ಗೊತ್ತಾಗದೆ ಇರುವದೇ ಅನಂತವು ಎಂಬ ತಪ್ಪು ಕಲ್ಪನೆಯುಂಟಾಗುವ ಸಂಭವವಿದೆ. ಪರಿಮಾಣ, ತೂಕ, ಸಂಖ್ಯೆ-ಮುಂತಾದವುಗಳು ಇಲ್ಲಿಗೆ ಮುಗಿಯುತ್ತವೆ ಎಂಬುದಿಲ್ಲ; ಆದ್ದರಿಂದ ಅವೂ ಒಂದರ್ಥದಲ್ಲಿ ಅನಂತವೇ ಆಗಬಹುದು. ಕಾಲ, ಆಕಾಶ- ಇವೂ ಅನಂತಗಳೇ; ಆದರೆ ಪರಮಾತ್ಮನು ಅನಂತವೆಂದರೆ ಹೀಗಲ್ಲ, ಆದ್ದರಿಂದ ಈ ಬಹಿರ್ಮುಖವಾದ ಬುದ್ಧಿಯಿಂದ ತಿಳಿದ ಪರಮಾತ್ಮಸ್ವರೂಪವು ಧ್ಯಾನಕ್ಕೆ ಉಪಯುಕ್ತವಾಗಲಾರದು.

ಪರಮಾತ್ಮನ ಧ್ಯಾನಕ್ಕೆ ಈ ಬುದ್ಧಿ, ಮನಸ್ಸು, ಇಂದ್ರಿಯಗಳು- ಇವುಗಳ ಪರಿಚ್ಛಿನ್ನತ್ವವನ್ನು ತಿಳಿಯುವದರಿಂದ ಪ್ರಯೋಜನವುಂಟು. ಏಕೆಂದರೆ ಇವುಗಳೇ ಮನುಷ್ಯನನ್ನು ಬಹಿರ್ಮುಖನನ್ನಾಗಿ ಮಾಡಿರುತ್ತವೆ. ಇಂದ್ರಿಯಗಳನ್ನು ಬ್ರಹ್ಮನು ಹೊರಮುಖವಾಗಿಯೇ ಸೃಷ್ಟಿಸಿರುತ್ತಾನೆ; ಆದ್ದರಿಂದ ಮನುಷ್ಯನು ಹೊರಕ್ಕೇ ನೋಡುತ್ತಿರುತ್ತಾನೆ, ತನ್ನ ಒಳಗೆ ನೋಡುವದಿಲ್ಲ- ಎಂದು ಮನುಷ್ಯನ ಸ್ವಭಾವವನ್ನು ಅನುವಾದಮಾಡಿಕೊಂಡು ಶ್ರುತಿಯು ಹೇಳುವದೇನೆಂದರೆ : **"ಕಶ್ಚಿದ್ಧೀರಃ ಪ್ರತ್ಯಗಾತ್ಮಾನಮೈಕ್ಷದಾವೃತ್ತಚಕ್ಷುರಮೃತತ್ವಮಿಚ್ಛನ್"** ಯಾವನೋ ಒಬ್ಬ ಧೀರನು ಇಂದ್ರಿಯಗಳನ್ನು ಹಿಂತಿರುಗಿಸಿಕೊಂಡು ತನ್ನೊಳಗೆ ನೋಡುತ್ತಾನೆ, ಏಕೆಂದರೆ ಅವನಿಗೆ ಅಮೃತತತ್ವವು ಬೇಕಾಗಿರುತ್ತದೆ. ಇಂದ್ರಿಯಗಳಿಂದ ವಿಷಯಗಳನ್ನು ಕಾಮಿಸುವದು ಮರ್ತ್ಯತ್ವಕ್ಕೆ ಕಾರಣವಾಗಿರುತ್ತದೆ; ಆದರೆ ತನ್ನೊಳಗೆ ಇರುವ ಸರ್ವರ ಪ್ರತ್ಯಗಾತ್ಮನಾದ

ಪರಮಾತ್ಮನನ್ನು ಕಾಣುವದಕ್ಕೆ ಪ್ರಯತ್ನಿಸುವದು ಅಮೃತತ್ವಕ್ಕೆ ಕಾರಣವಾಗಿರುತ್ತದೆ ಎಂಬುದು ಶ್ರುತಿಯ ಅರ್ಥ. ಹೀಗೆ ಒಳಮುಖವಾಗಿ ಬುದ್ಧಿಯನ್ನು ಮಾಡಿಕೊಂಡು ಹೊರಟರೆ ಧ್ಯಾನಕ್ಕೆ ಅನುವಾದಂತೆ ಆಯಿತು. ಆದ್ದರಿಂದಲೇ ಭಗವದ್ಗೀತೆಯ "**ಶನೈಃ ಶನೈರುಪರಮೇದ್ಬುದ್ಧ್ಯಾ ಧೃತಿಗೃಹೀತಯಾ । ಆತ್ಮಸ್ಥಂ ಮನಃ ಕೃತ್ವಾ ನ ಕಿಂಚಿದಪಿ ಚಿನ್ತಯೇತ್ ॥**" ಎಂದು ಹೇಳಿರುತ್ತದೆ.

ಧ್ಯಾನದ ಆವಶ್ಯಕತೆಯೇನು ಎಂಬುದನ್ನು ನಾವು ಮೊದಲು ಮನಸ್ಸಿಗೆ ತಂದುಕೊಳ್ಳುವದು ಅವಶ್ಯವಾಗಿರುತ್ತದೆ. ನಿಜವಾಗಿ ನೋಡಿದರೆ ಈ ಇಡಿಯ ಪ್ರಪಂಚವೇ ಭಗವನ್ಮಯವಾಗಿರುತ್ತದೆ. ಆದ್ದರಿಂದ ಈ ದೃಷ್ಟಿಯಿಂದ ನೋಡಿದಾಗ ಮತ್ತೇನೂ ಮಾಡತಕ್ಕ ಸಾಧನವೇ ಉಳಿದಿರುವದಿಲ್ಲ. ಆದರೂ ಮನುಷ್ಯನ ಸದ್ಯಃ ಸ್ಥಿತಿಯಲ್ಲಿ ಅವನು ತನ್ನ ಎದುರಿಗೆ ಕಾಣುತ್ತಿರುವ ಭಗವಂತನ ವಿಭೂತಿಯನ್ನೇ ಭೋಗರಾಶಿ ಎಂದು ಭಾವಿಸಿರುತ್ತಾನೆ. ಅವನ ಅಂತಃಕರಣದಲ್ಲಿ ಭೋಗದ ಸಂಸ್ಕಾರವೇ ತುಂಬಿರುತ್ತದೆ; ಆದ್ದರಿಂದ ಅವನ ಇಂದ್ರಿಯಗಳೂ ಕಾಮದೂಷಿತವಾಗಿರುತ್ತವೆ. ಈ ಕಾರಣದಿಂದ ನಮ್ಮ ಅಂತಃಕರಣಕ್ಕೆ ಯಾವದೋ ಒಂದು ಸಂಸ್ಕಾರವು ಬೇಕಾಗಿರುತ್ತದೆ. ಆ ಸಂಸ್ಕಾರವು ಆದ ಕೂಡಲೆ- ಕಣ್ಣುಪರೆಯನ್ನು ತೆಗೆಯಿಸಿಕೊಂಡವರಿಗೆ ವಸ್ತುಗಳೆಲ್ಲವೂ ತಮ್ಮ ನಿಜವಾದ ಸ್ವರೂಪದಿಂದ ಕಾಣಿಸಿಕೊಳ್ಳುವಂತೆ. ಜಗತ್ತೆಲ್ಲವೂ ಭಗವಂತನ ಮಹಿಮೆಯೆಂದು ಕಾಣುವದು. ಆದ್ದರಿಂದ ಪರಮಾತ್ಮಸ್ವರೂಪವನ್ನು ನಮ್ಮ ನಮ್ಮೊಳಗೆ ಕಂಡುಕೊಂಡಮೇಲೆ ಎಲ್ಲೆಲ್ಲಿಯೂ ಅದೇ ಆತ್ಮನನ್ನು ಕಾಣುವದು ಆಗುತ್ತದೆ. "**ಯಸ್ತು ಸರ್ವಾಣಿ ಭೂತಾನ್ಯಾತ್ಮ ನ್ಯೇವಾನುಪಶ್ಯತಿ । ಸರ್ವಭೂತೇಷು ಚಾऽऽತ್ಮಾನಂ ತತೋ ನ ವಿಜುಗುಪ್ಸತೇ ॥**" ಎಂಬ ಉಪನಿಷತ್ತಿನ ಮಂತ್ರಕ್ಕೆ ಇದೇ ಅರ್ಥ.

ಪರಮಾತ್ಮನೊಬ್ಬನೇ ಎಲ್ಲಾ ಸ್ಥಾವರಜಂಗಮಪ್ರಾಣಿಗಳಲ್ಲಿಯೂ ಇರುತ್ತಾನೆ; ಆದರೂ ಚಿತ್ತೋಪಾಧಿಗಳ ತಾರತಮ್ಯದಿಂದ ಅದೇ ಪರಮಾತ್ಮನೇ ಒಂದಕ್ಕಿಂತ ಒಂದು ಕಡೆಯಲ್ಲಿ ಹೆಚ್ಚಾಗಿ ಹೊರತೋರಿಕೊಳ್ಳುತ್ತಿರುತ್ತಾನೆ. ಅಲ್ಲಲ್ಲಿ ಪರಮಾತ್ಮನ ಐಶ್ವರ್ಯಾದಿ ಗುಣಗಳು ಅಷ್ಟಷ್ಟು ಹೆಚ್ಚಾಗಿರುತ್ತವೆ. ಅಲ್ಲಲ್ಲಿ ಪರಮಾತ್ಮನ ವಿಭೂತಿಯನ್ನು ಕಂಡುಕೊಳ್ಳಬೇಕಾದರೆ ತಾನು ಹೆಚ್ಚು ಹೆಚ್ಚು ತನ್ನೊಳಗೆ ಪ್ರವೇಶಿಸಿ ಆ ಪರಮಾತ್ಮನನ್ನು ತನ್ನಲ್ಲಿ ಕಾಣುವದಕ್ಕೆ ಪ್ರಯತ್ನಿಸಬೇಕು. ಯಾವನು ಶರೀರ ಪ್ರಧಾನವಾದ ಚಿತ್ತ

ವುಳ್ಳವನೋ ಅವನಿಗೆ ತಾನು ಶರೀರರೂಪನಾಗಿರುವಂತೆ ಪ್ರಪಂಚದಲ್ಲಿ ತನ್ನ ಸುತ್ತಲೂ ಇರುವ ಪ್ರಾಣಿಗಳೆಲ್ಲ ಶರೀರಾತ್ಮರಾಗಿಯೇ ಕಾಣಿಸುವವು; ಹೀಗೆ ಇಂದ್ರಿಯಾಭಿಮಾನವುಳ್ಳವನಿಗೆ ಅವು ಇಂದ್ರಿಯಾತ್ಮರಾಗಿಯೇ ಕಾಣುವವು. ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ- ಇವುಗಳಲ್ಲಿ ಯಾವ ಯಾವದರಲ್ಲಿ ತಾನು ಆತ್ಮಭಾವವನ್ನಿಟ್ಟುಕೊಂಡಿರುವನೋ ಆಯಾ ಚಿತ್ತದ ಭೂಮಿಕೆಗೆ ತಕ್ಕಂತೆ ಹೊರಗಿನವರೂ ಆಯಾರೂಪರಾಗಿ ಕಾಣಿಸುವರು. ಆದ್ದರಿಂದ ಸರ್ವಾತ್ಮನಾಗಿರುವ ಸಚ್ಚಿದಾನಂದಸ್ವರೂಪದಲ್ಲಿ ಆತ್ಮಭಾವವನ್ನು ಪಡೆಯುವದಕ್ಕಾಗಿ ಸಾಧಕನು ಧ್ಯಾನಯೋಗವನ್ನು ಅಳವಡಿಸಿಕೊಳ್ಳಬೇಕು.

ಈ ಧ್ಯಾನಯೋಗವು ಕಾಲಾಂತರದಲ್ಲಿ ಪುರುಷಾರ್ಥವನ್ನು ಕೊಡುವ ಉಪಾಸನೆಯಲ್ಲ, ಇಲ್ಲಿಯೇ ತನ್ನ ಸ್ವರೂಪದಲ್ಲಿ ತಾನು ನೆಲೆನಿಲ್ಲುವದಕ್ಕೆ ಮಾಡತಕ್ಕದ್ದು. ಇದನ್ನು ಹೇಗೆ ಮಾಡಬೇಕೆಂಬುದನ್ನು ಉಪನಿಷತ್ತಿನಲ್ಲಿಯೂ ಗೀತೆಯಲ್ಲಿಯೂ ವಿವರಿಸಿದೆ. **''ಯಚ್ಛೇದ್ವಾಙ್ಮನಸೀ ಪ್ರಾಜ್ಞಸ್ತದ್ಯಚ್ಛೇಜ್ಜ್ಞಾನ ಆತ್ಮನಿ । ಜ್ಞಾನಮಾತ್ಮನಿ ಮಹತಿ ನಿಯಚ್ಛೇತ್ ತದ್ಯಚ್ಛೇಚ್ಛಾನ್ತ ಆತ್ಮನಿ ॥'' (ಕಾ. 1-3-13)** ಇಲ್ಲಿ ವಾಕ್ಕೆಂಬುದನ್ನು ಉಪಲಕ್ಷಣವಾಗಿ ಹೇಳಿರುತ್ತದೆ. ಇಂದ್ರಿಯಗಳನ್ನು ಮನಸ್ಸಿನಲ್ಲಿ ಹಿಡಿದು ನಿಲ್ಲಿಸಬೇಕು; ಅವುಗಳ ವ್ಯಾಪಾರವನ್ನೆಲ್ಲ ನಿಲ್ಲಿಸಿ ಬರಿಯ ಮನಸ್ಸಾಗಿಮಾಡಿ ನಿಲ್ಲಿಸಬೇಕು. ಆ ಮನಸ್ಸು ವಿಷಯಗಳನ್ನು ವಿಕಲ್ಪಿಸುವದಕ್ಕೆ ಹೊರಟರೆ, ವಿಷಯ ವಿಕಲ್ಪವನ್ನು ಮಾಡುವದರಲ್ಲಿ ದೋಷವನ್ನು ಮನದಂದುಕೊಂಡು ನಿಶ್ಚಯಾತ್ಮಕವಾದ ಬುದ್ಧಿಯಲ್ಲಿ ನಿಲ್ಲಿಸಬೇಕು. ಆಮೇಲೆ ಆ ಬುದ್ಧಿಯನ್ನು ಭೋಕ್ತೃರೂಪನಾದ ಆತ್ಮನಲ್ಲಿ ನಿಲ್ಲಿಸಬೇಕು. ನಿಜವಾಗಿ ನೋಡಿದರೆ ಆತ್ಮನಿಗಿಂತ ವ್ಯತಿರಿಕ್ತವಾಗಿ ಆ ಬುದ್ಧಿಯು ಇಲ್ಲವೆಂಬುದನ್ನು ಮನಗಂಡು ಆತ್ಮನಲ್ಲಿ ಅದನ್ನು ಲಯಗೊಳಿಸಿಕೊಳ್ಳಬೇಕು. ಹೀಗೆ ಬುದ್ಧಿಯನ್ನು ಲಯಗೊಳಿಸಿದ ಬಳಿಕ ಆತ್ಮನಿಗೆ ಯಾವ ಉಪಾಧಿಯೂ ಇಲ್ಲದ್ದರಿಂದ ಪರಮಪುರುಷನಾದ, ಎಲ್ಲಕ್ಕೂ ಪರಗತಿಯಾಗಿರುವ ಪರಮಾತ್ಮನಿಗಿಂತ ವ್ಯತಿರಿಕ್ತನಾಗಿ ಅವನಿಗೆ ಇರವೇ ಇಲ್ಲವೆಂಬುದನ್ನು ಅನುಭವಕ್ಕೆ ತಂದುಕೊಂಡು ಆತ್ಮನಲ್ಲಿ ನೆಲೆನಿಲ್ಲಬೇಕು. **'ಆತ್ಮಸ್ಥಂ ಮನಃ ಕೃತ್ವಾ ನ ಕಿಂಚಿದಪಿ ಚಿನ್ತಯೇತ್'** ಎಂಬ ಗೀತಾವಾಕ್ಯಕ್ಕೂ ಇದೇ ಅರ್ಥ.

ಈ ಯೋಗದ ಮಹಿಮೆಯಿಂದ ಪ್ರಪಂಚವೂ ಇಂದ್ರಿಯ ಮನಸ್ಸುಗಳೂ ಪರಮಾತ್ಮನಲ್ಲಿ ಮುಳುಗಿಹೋಗುವವು. ಶ್ರೀಸದಾಶಿವಬ್ರಹ್ಮೇಂದ್ರರು **"ಅದ್ವೈತ ತಾರಾವಳಿ"**ಯಲ್ಲಿ ಎಂದಿರುವಂತೆ **"ದಂತಿನಿ ದಾರುವಿಕಾರೇ ದಾರು ತಿರೋಭವತಿ ಸೋಽಪಿ ತತ್ರೈವ। ಜಗತಿ ತಥಾ ಪರಮಾತ್ಮಾ ಪರಮಾತ್ಮನ್ಯಪಿಜಗತ್ತಿರೋಧತ್ತೇ ॥"** ಮರದಿಂದ ಮಾಡಿದ ಆನೆಯನ್ನು ಆನೆ ಎಂಬ ಬುದ್ಧಿಯಿಂದ ನೋಡುತ್ತಿರುವವರೆಗೆ ಮರವು ಕಾಣದಂತಾಗಿರುವದು; ಆದರೆ ಅದು ಮರವು ಎಂಬ ಬುದ್ಧಿಯು ಬಂದಿತೆಂದರೆ ಆನೆಯು ಅದರಲ್ಲಿ ಲಯವಾಗಿಬಿಡುತ್ತದೆ! ಪದಾರ್ಥವು ಒಂದೇ, ಬುದ್ಧಿವಿಶೇಷದಿಂದ ಅದು ಬೇರೆಬೇರೆಯಾಗಿ ಕಾಣುತ್ತಿರುತ್ತದೆ, ಅಷ್ಟೆ. ಇದರಂತೆ ನಮಗೆ ಪ್ರಪಂಚವೆಂಬ ಬುದ್ಧಿಯು ಇರುವವರೆಗೂ ಪರಮಾತ್ಮನು ಕಾಣುವದಿಲ್ಲ; ಪ್ರಪಂಚಬುದ್ಧಿಗೆ ಇಂದ್ರಿಯಗಳೇ ಹೊಣೆಗಾರರು. ಆದರೆ ಈ ಇಂದ್ರಿಯಗಳನ್ನು ಹಿಂದಕ್ಕೆ ಸರಿಯಿಸಿ ಧ್ಯಾನಯೋಗದಿಂದ ಮನಸ್ಸನ್ನು ಆತ್ಮನಲ್ಲಿ ಕರಗಿಸಿಕೊಂಡುಬಿಟ್ಟರೆ ಪ್ರಪಂಚವೇ ಆತ್ಮನಲ್ಲಿ ಲಯವಾಗಿಬಿಡುವದು.

ಧ್ಯಾನಯೋಗಕ್ಕೆ ಅಂತಃಕರಣವು ಒಳಮುಖವಾಗುವದು ಅತ್ಯವಶ್ಯಕ. ಮನಸ್ಸು ನನ್ನಲ್ಲಿ, ನಾನು ಪರಮಾತ್ಮನಲ್ಲಿ- ಹೀಗೆ ಸೂಕ್ಷ್ಮದೃಷ್ಟಿಯಿಂದ, ಆನೆಯು ಮರದಲ್ಲಿ ಲಯವಾದಂತೆ, ಲಯವಾಗಬೇಕು. ಆಗ ನಾನು, ನೀನು, ಅವನು, ಎಲ್ಲಾ ಪ್ರಪಂಚವೂ ಆ ಸರ್ವಪ್ರತ್ಯಗಾತ್ಮನಲ್ಲಿ ಲಯವಾಗಿಬಿಡುವದು. ಪರಮಾತ್ಮದೃಷ್ಟಿಯು ಎದ್ದುಕೊಳ್ಳುವದು. ಆ ಬಳಿಕ ನೀವು ಪ್ರಪಂಚವನ್ನು ನೋಡಿದರೂ ಅದು ಪರಮಾತ್ಮನಾಗಿಯೇ ಕಾಣುವದು.

ಪರಮಾತ್ಮನಲ್ಲಿ ನಿಲ್ಲುವದಕ್ಕೆ ಎರಡು ಬಗೆಯ ಸಾಧನಗಳುಂಟು. ಒಂದರಲ್ಲಿ ನಾವೇ ಸ್ವಪ್ರಯತ್ನದಿಂದ ಇಂದ್ರಿಯಾದಿಗಳನ್ನು ಹಿಂಜಗ್ಗಿ ಆತನನ್ನು ಕಂಡುಕೊಳ್ಳುವದಕ್ಕೆ ಪ್ರಯತ್ನಿಸುವದು ಒಂದು ಮಾರ್ಗ. ಆತನೇ ನಮ್ಮನ್ನು ತನ್ನ ಕಡೆಗೆ ಎಳೆದುಕೊಂಡು ತನ್ನಲ್ಲಿ ಒಂದುಮಾಡಿಕೊಂಡುಬಿಡುವದು ಇನ್ನೊಂದು ಮಾರ್ಗ. ವಸ್ತುಗಳು ಮೇಲಿಂದ ಕೆಳಕ್ಕೆ ಬೀಳುವಾಗ ಭೂಮಿಯ ಆಕರ್ಷಣಶಕ್ತಿಗೆ ಒಳಪಟ್ಟಿರುವವೆಂದು ಭೌತಿಕಜ್ಞರು ಹೇಳುವದುಂಟು. ಇದರಂತೆ ನಾವು ಪರಮಾತ್ಮನ ಆಕರ್ಷಣಶಕ್ತಿಗೆ ಒಳಪಡುವಷ್ಟು ಆತನ ಸಮೀಪಕ್ಕೆ ಹೋದರೆ ಮುಂದೆ ಯಾವ ಪ್ರಯತ್ನವೂ ಇಲ್ಲದೆ ನಾವು ಅತ್ತಲೇ

ಧಾವಿಸಿ ಅವನಲ್ಲಿ ಒಂದಾಗಿಬಿಡುವೆವು. ಆತನ ಸೆಳೆತಕ್ಕೆ ಸಿಕ್ಕುವದಕ್ಕೆ ಮುಂಚೆ ಆತನ ಸ್ಮರಣೆಯನ್ನು ತಂದುಕೊಳ್ಳುವದಕ್ಕೆ ನಾವೇ ಯತ್ನಿಸಬೇಕು. "**ಮತ್ಕರ್ಮಕೃನ್ಮತ್ಪರಮೋ ಮದ್ಭಕ್ತಃ ಸಂಗವರ್ಜಿತಃ । ನಿರ್ವೈರಃ ಸರ್ವಭೂತೇಷು ಯಃ ಸ ಮಾಮೇತಿ ಪಾಣ್ಡವ ॥**" ಎಂಬ ಭಗವಂತನ ಬುದ್ಧಿವಾದವನ್ನು ಕೇಳಿ ಭಗವತ್ಕರ್ಮವೇ ಮುಂತಾದ ಸಾಧನಗಳಲ್ಲಿ ನಿರತರಾಗಬೇಕು. ಇದೇ ಉಪಾಸನಾನುಷ್ಠಾನದ ಮರ್ಮವು.

ಈವರೆಗೆ ನಾನು ಸಂಗ್ರಹವಾಗಿ ತಿಳಿಸಿರುವದು ಇಲ್ಲಿಯೇ ಪರಮಾತ್ಮನ ಪರಮಾರ್ಥಸ್ವರೂಪವನ್ನು ಕಂಡುಕೊಂಡು ಅದರಲ್ಲಿ ಒಂದಾಗುವದಕ್ಕೆ ಬೇಕಾದ ಧ್ಯಾನವು. ಇದನ್ನು ನಿದಿಧ್ಯಾಸನವೆಂದು ವೇದಾಂತಿಗಳು ಕರೆಯುತ್ತಾರೆ. ಇದು ಬರಿಯ ಭಾವನಾಮಯವಾದ ಉಪಾಸನೆಯಲ್ಲವಾದರೂ ಭಾವನಾರೂಪವಾದ ಉಪಾಸನೆಯೂ ಇದಕ್ಕೆ ಅಂಗವಾಗಬಹುದಾಗಿದೆ. ಈಗಿನ ಕಾಲಕ್ಕೆ ವೇದಾಂತದ ಶ್ರವಣಮನನಗಳನ್ನು ಮಾಡುವದಕ್ಕೆ ತಕ್ಕ ಅರ್ಹತೆಯನ್ನು ಪಡೆದಿರುವ ಉತ್ತಮಾಧಿಕಾರಿಗಳು ಬಹು ವಿರಳರಾಗಿರುತ್ತಾರೆ. ಆದ್ದರಿಂದ ಈ ಧ್ಯಾನಮಾರ್ಗವು ಎಲ್ಲರಿಗೂ ಬೇಗನೆ ಸಿಕ್ಕಲಾರದು. ಇದಕ್ಕೆ ಬಹಿರಂಗವೆಂದು ಗೀತೆಯಲ್ಲಿ ವರ್ಣಿಸಿರುವ ಕರ್ಮಯೋಗವು ಕೂಡ ಈ ಕಲಿಗಾಲದಲ್ಲಿ ದುರನುಷ್ಠೇಯವಾಗಿರುತ್ತದೆ. ಆದರೂ ನಿಜವಾಗಿ ಭಗವಂತನಲ್ಲಿ ಭಕ್ತಿಯುಳ್ಳ ಸಾಧಕರು ಅಂಜಬೇಕಾಗಿಲ್ಲ. ಸಾಧುಸಂಗದಿಂದ ಪರಮಾತ್ಮನ ನಾಮಸ್ಮರಣೆ, ಕೀರ್ತನ, ಸ್ತೋತ್ರ- ಮುಂತಾದ ಮಾರ್ಗಗಳಿಂದ ಚಿತ್ತಶುದ್ಧಿಯನ್ನು ಪಡೆದುಕೊಳ್ಳಬಹುದು. ಅಂತರ್ಮುಖರೂ ಆಗಬಹುದು. ಆ ಭಗವಂತನ ಅನುಗ್ರಹದಿಂದ ಆತನಲ್ಲಿ ನಿಷ್ಠೆಯನ್ನೂ ಪಡೆದುಕೊಳ್ಳಬಹುದು. ನಾವೆಲ್ಲರೂ ಅದನ್ನು ಗುರಿಯಾಗಿಟ್ಟುಕೊಳ್ಳೋಣ.

*****

# 56. ಸಮಾಧಿ

**ಸಮಾಧಿ**ಯೆಂಬ ಮಾತಿಗೆ "ಚೆನ್ನಾಗಿ ಇಟ್ಟುಕೊಳ್ಳುವದು" ಎಂದು ಅಕ್ಷರಾರ್ಥವಾಗುತ್ತದೆ. ಮನಸ್ಸು ಎಲ್ಲಿದ್ದರೆ ಅದನ್ನು ಸರಿಯಾಗಿ ಅಲುಗಾಡದಂತೆ, ಇಟ್ಟುಕೊಂಡಂತೆ ಆದೀತು? -ಎಂದು ಸಾಧಕರು ಕೇಳುವದು ಒಂದು ಹೆಚ್ಚಿನ ಪ್ರಶ್ನೆಯಾಗಿದೆ. ಮನಸ್ಸನ್ನು ಹೇಗೆ ಹಿಡಿದು ನಿಲ್ಲಿಸಬೇಕು?- ಎಂಬ ಪ್ರಶ್ನೆಗಿಂತಲೂ ಇದು ಮೇಲ್ತರದ್ದಾಗಿರುತ್ತದೆ. ಏಕೆಂದರೆ ಮನಸ್ಸೆಂಬುದು ಹಿಡಿತಕ್ಕೇ ಸಿಕ್ಕುವ ವಸ್ತುವಲ್ಲ; ಗಾಳಿಯನ್ನು ಮೂಟೆ ಕಟ್ಟಬಹುದು, ಆದರೆ ಮನಸ್ಸನ್ನು ಹಿಡಿದು ನಿಲ್ಲಿಸುವದೆಂಬುದು ಆಗದಮಾತು. ಮನಸ್ಸೆಂದರೆ ಯಾವಾಗಲೂ ಮನನ ಮಾಡುತ್ತಿರುವದು, ಬಗೆಬಗೆಯ ವಿಕಲ್ಪಗಳನ್ನು ಮಾಡುತ್ತಿರುವದು; ಹಾಗೆ ಮಾಡದೆ ಇದ್ದರೆ ಅದು ಮನಸ್ಸೇ ಅಲ್ಲ.

ಆದರೆ ತತ್ತ್ವವನ್ನು ವಿಚಾರಮಾಡುವದಕ್ಕೆ ಹೊರಟವರು ಶಾಸ್ತ್ರವನ್ನೂ ಗುರು ಬೋಧೆಯನ್ನೂ ಅನುಸರಿಸಿ ಇಂಥ ಸ್ವಭಾವದ ಮನಸ್ಸನ್ನು ಕೂಡ ಅಮನಸ್ಸಾಗಿ ಮಾಡಿಕೊಳ್ಳುವದಕ್ಕೆ ಬರುತ್ತದೆ. ಶಾಸ್ತ್ರದಲ್ಲಿ **ಆತ್ಮತತ್ತ್ವ**ವೊಂದೇ ಪರಮಾರ್ಥಸತ್ಯವೆಂಬುದು ಹೇಗೆಂಬುದನ್ನು ತಿಳಿಸಿಕೊಟ್ಟಿರುತ್ತದೆ; ಅನುಭವಿಗಳಾದ ಆಚಾರ್ಯರೂ ಇದು ಹೇಗೆಂಬುದನ್ನು ಅರಿತು ಉಪದೇಶಮಾಡುತ್ತಿರುವರು. ಈ ಶಾಸ್ತ್ರಾಚಾರ್ಯರುಗಳ ಬೋಧೆಯನ್ನು ಅನುಸರಿಸಿ ಮನಸ್ಸನ್ನು ಆತ್ಮತತ್ತ್ವದ ಪರಿಶೀಲನೆಯಲ್ಲಿ ತೊಡಗಿಸಿದರೆ ಪರಮೇಶ್ವರನ ಅನುಗ್ರಹದಿಂದ ಅದು ಆತ್ಮತತ್ತ್ವದಲ್ಲಿಯೇ ಒಂದಾಗಿಬಿಡುತ್ತದೆ. ಅಂದಿನಿಂದ ಸಾಧಕನ ಮನಸ್ಸು "ಸಮಾಹಿತ"ವಾಯಿತು ಎನ್ನಬಹುದು.

ಕೂಟಸ್ಥ ನಿತ್ಯನಾದ ಪರಮಾತ್ಮನಲ್ಲಿ ಹೀಗೆ ಒಂದಾದ ಮನಸ್ಸು ಮತ್ತೂ ವ್ಯವಹಾರದೃಷ್ಟಿಯಿಂದ ಬೇರೆಯಾಗಿ ತೋರುತ್ತಿರಬಹುದು. ಹಗ್ಗದಲ್ಲಿ ಭ್ರಾಂತಿಯಿಂದ ತೋರುತ್ತಿದ್ದ ಹಾವು ಹಗ್ಗದಲ್ಲಿಯೇ ಒಂದಾಗಿ ಬಿಟ್ಟಮೇಲೂ ಹಗ್ಗವು ಹಾವೆಂದು ಅಕಸ್ಮಾತ್ತಾಗಿ ತೋರಬಹುದು; ಆದರೆ ಅದು ಹಗ್ಗವೆಂಬ ನಿಶ್ಚಯವು ಆಗಿಬಿಟ್ಟಿರುವವನಿಗೆ ಆ ಹಾವಿನ ಪ್ರತೀತಿಯೇನೂ ಅನರ್ಥವನ್ನುಂಟುಮಾಡಲಾರದಲ್ಲವೆ? ಹಾಗೆಯೇ ಯಾವನಿಗೆ ಮನಸ್ಸು ಅಮನಸ್ಸಾಗಿ ಆತ್ಮನಲ್ಲಿ ಒಂದಾಗಿಬಿಟ್ಟಿರುವದೋ ಅವನ ಮನಸ್ಸು ಇನ್ನು ಮುಂದೆ ಎಂದೆಂದಿಗೂ ಸಮಾಧಿಯಲ್ಲಿರುವದು; ಎಂದರೆ ಅದು ಮುನ್ನಿನಂತೆ ವಿಷಯವಿಕಲ್ಪವನ್ನು ಮಾಡಲಾರದು. ಕಟ್ಟಿಗೆಯನ್ನು ಸುಟ್ಟ ಬೆಂಕಿಯಂತೆ ಅದು ಆತ್ಮನಲ್ಲಿಯೇ ಶಾಂತವಾಗಿ ನಿಂತಿರುತ್ತದೆ. ಇಂಥ ಸ್ಥಿತಿಯು ನಿತ್ಯಸಿದ್ಧವಾದ

ಸಹಜ ಸಮಾಧಿಯೆನಿಸುವದು. ಆತ್ಮನಲ್ಲಿ ನೆಲೆನಿಂತಾಗ ಮಾತ್ರ ಈ ಸಮಾಧಿಯುಂಟಾಗು ವದು ಎಂದು ತಿಳಿಸುವದಕ್ಕೆ ಆತ್ಮನನ್ನೂ '**ಸಮಾಧಿ**' ಎಂಬ ಹೆಸರಿನಿಂದಲೇ ಬಲ್ಲವರು ಕರೆಯುವರು.

*****

## 57. ಉಪಾಸನೆಗೆ ವೇದಾಂತದ ಆಧಾರವಿರುವದರ ಆವಶ್ಯಕತೆ [1]

'**ಉಪಾಸನೆ**' ಎಂಬ ಶಬ್ದಕ್ಕೆ '**ಹತ್ತಿರ ಕೂತುಕೊಳ್ಳುವದು**' ಎಂದು ಅಕ್ಷರಾರ್ಥ ವಾಗುತ್ತದೆ. ಪರಮಾತ್ಮನು ನಮಗೆ ಈಗ ಅಜ್ಞಾನದಿಂದ ಬಲುದೂರವಾಗಿರುತ್ತಾನೆ; ಜ್ಞಾನವನ್ನು ಪಡೆದುಕೊಂಡು ಆತನನ್ನು ಹತ್ತಿರಮಾಡಿಕೊಂಡು ಅವನ ಬಳಿಯಲ್ಲಿಯೇ ನಮ್ಮ ಚಿತ್ತವು ಕುಳಿತುಕೊಂಡಿರುವಂತೆ ಮಾಡಿಕೊಳ್ಳಬೇಕಾಗಿರುತ್ತದೆ. ಸತತವಾದ ಪರಮಾತ್ಮನ ಧ್ಯಾನ (ಅಥವಾ ಚಿಂತನೆಯಿಂದ) ಮತ್ತೊಂದರ ಚಿಂತೆಯು ಅಡ್ಡಿಯಾಗ ದಂತೆ, ಆತನ ಕಡೆಗೆ ಚಿತ್ತವು ಧಾವಿಸುವಂತೆ ಮಾಡುವ ಪ್ರಯತ್ನವೇ ಉಪಾಸನೆಯು.

ಮತ್ತೊಬ್ಬರು ಹೇಳಿದಂತೆ ಕೇಳಿ ಉಪಾಸನೆಮಾಡಿದರೂ ಆಗುತ್ತದೆ; ಹಾಗೆಂದು ಗೀತೆಯಲ್ಲಿ (13-25) ಹೇಳಿಯೂ ಇದೆ. ಆದರೆ ವೇದಾಂತದ ಆಧಾರವನ್ನಿಟ್ಟು ಕೊಂಡು ಉಪಾಸನೆಗೆ ಹೊರಡುವದರಿಂದ ಹೆಚ್ಚಿನ ಫಲವಾಗುತ್ತದೆ. ತಪ್ಪುದಾರಿಯಿಂದ ಸುತ್ತಿಸುತ್ತಿಕೊಂಡು ಪರಮಾತ್ಮನ ಬಳಿಗೆ ಹೋಗುವ ಆಯಾಸವನ್ನು ವೇದಾಂತದ ತಿಳಿವಳಿಕೆಯು ತಪ್ಪಿಸುತ್ತದೆ; ನೇರಾಗಿ ಪರಮಾತ್ಮನನ್ನು ಮುಟ್ಟುವ ಮಾರ್ಗವನ್ನು ಅದು ನಿಃಸಂದಿಗ್ಧವಾಗಿ ಹೇಳಿಕೊಡುತ್ತದೆ.

ವೇದಾಂತವೆಂದರೇನು? ಈ ಪ್ರಶ್ನೆಗೆ ಜನರ ಉತ್ತರವು ಬಗೆಬಗೆಯಾಗಿರುತ್ತದೆ. ಕೆಲವರಿಗಂತೂ ಅದರ ವಿಷಯದಲ್ಲಿ ಅತ್ಯಂತ ವಿಚಿತ್ರವಾದ ಅಭಿಪ್ರಾಯಗಳು ಈಗ ಹರಡಿರುತ್ತವೆ. ಅದರ ಸಾರವನ್ನು ಸ್ವಲ್ಪದರಲ್ಲಿ ಹೇಳಿದರೆ ಇಷ್ಟರಲ್ಲಿ ಅಡಕವಾಗುತ್ತದೆ; '**ಏಕೋ ದೇವಃ ಸರ್ವಭೂತೇಷು ಗೂಢಃ ಸರ್ವವ್ಯಾಪೀ ಸರ್ವಭೂತಾನ್ತರಾತ್ಮಾ**'' ಲೋಕವ್ಯವಹಾರದಲ್ಲಿ ಆತ್ಮನೆಂದರೆ ದೇಹ, ಇಂದ್ರಿಯಗಳು, ಮನಸ್ಸು ಅಹಂಕಾರ-

---

**1.** ತಾ|| 16-10-1955ನೆಯ ಆಶ್ವಯುಜ ಶುದ್ಧ ಪ್ರತಿಪತ್ ಭಾನುವಾರ ಶ್ರೀಗಳು ಮಾಡಿದ ಉಪದೇಶದ ಸಾರವಿದು.

ಇವುಗಳನ್ನು ಒಟ್ಟುಗೂಡಿಸಿಕೊಂಡಿರುವ ಜೀವನು. ನಾನು ಎಂದರೆ ಈ ಕಾರ್ಯ ಕರಣ ಸಂಘಾತದ ಅಭಿಮಾನಿಯು; ಇದಕ್ಕೆ ಸಂಬಂಧಪಟ್ಟದ್ದೆಲ್ಲ ನನ್ನದು. ನಾನು ನನ್ನ ಮತ್ತು ನನಗೆ ಸಂಬಂಧಪಟ್ಟದ್ದರ ಪೋಷಣೆಯನ್ನು ಮಾಡಿಕೊಂಡಿರಬೇಕು; ಇದಕ್ಕೆ ತೊಂದರೆ ಮಾಡುವದನ್ನೆಲ್ಲ ಅಥವಾ ಇದರ ಮೇಲ್ಮೆಗೆ ಅಡ್ಡಿಯೆಂದು ನಾವು ಭಾವಿಸುವದನ್ನೆಲ್ಲ ತೊಲಗಿಸಿಕೊಳ್ಳಬೇಕು. ಈ ಕಾರ್ಯದಲ್ಲಿ ಜಾಣರಾದವರೇ ವ್ಯವಹಾರಚತುರರು, ಜ್ಞಾನಿಗಳು; ಮಿಕ್ಕವರೆಲ್ಲರೂ ಅಜ್ಞಾನಿಗಳು. ಆದರೆ ವೇದಾಂತದ ದೃಷ್ಟಿಯಿಂದ ನೋಡಿದರೆ ಈ ಜ್ಞಾನವೂ ಅಜ್ಞಾನವೇ. ವ್ಯವಹಾರದ ಜ್ಞಾನವು ರೋಗಿಗಳಿಗಿರುವ ಅರೋಚಕದಂತೆ ಇರುತ್ತದೆ. ರೋಗಿಗೆ ಪಥ್ಯದಲ್ಲಿಟ್ಟು ಔಷಧಿಯನ್ನು ಕೊಟ್ಟಮೇಲೆ ನಿಜವಾದ ಹಸಿವೂ ನಾಲಗೆಗೆ ರುಚಿಯು ತೋರುವದೂ ಕಾಣಿಸಿ ಕೊಳ್ಳುವಂತೆ ವೇದಾಂತದ ಉಪದೇಶದಿಂದ ಸರಿಯಾದ ಸಾಧನವೆಂಬ ಪಥ್ಯವನ್ನು ಮಾಡಿ ನಿಜವಾದ ಆತ್ಮಜ್ಞಾನದ ಹಸಿವನ್ನು ಸಂಪಾದಿಸಿಕೊಳ್ಳಬೇಕಾಗಿರುತ್ತದೆ. ಈಗ ನಾವು ತಿಳಿದುಕೊಂಡಿರುವಂತೆ ಒಂದೊಂದು ದೇಹೇಂದ್ರಿಯಸಂಘಾತಕ್ಕೆ ಒಬ್ಬೊಬ್ಬ ಆತ್ಮನು ಬೇರೆಯಾಗಿರುವದಿಲ್ಲ, ಇದು ಅಜ್ಞಾನದ, ತಪ್ಪುತಿಳಿವಳಿಕೆಯ ಫಲವು. ಆದರೆ ವೇದಾಂತದ ಉಪದೇಶಕ್ಕೆ ಕಿವಿಗೊಡುವ ಅಧಿಕಾರವನ್ನು ಸಂಪಾದಿಸಿಕೊಂಡರೆ ಆಗ ನಮಗೆ ನಿಜವಾದ ಆತ್ಮನ ಅರಿವು ಆಗುವದು. ಬ್ರಹ್ಮಾದಿಸ್ತಂಬಪರ್ಯಂತವಾಗಿ ಎಲ್ಲಾ ಪ್ರಾಣಿಗಳಿಗೂ ಒಬ್ಬನೇ ಆತ್ಮನಿದ್ದಾನೆಂಬ ತಿಳಿವಳಿಕೆಯು ಕಾಣಿಸಿಕೊಳ್ಳುವದು. ಈ ವೇದಾಂತೋಪದೇಶವನ್ನು ಕೇಳುವದರಿಂದ ಎಲ್ಲರಿಗೂ ಪ್ರಯೋಜನವುಂಟು. ಆದರೆ ಕಣ್ಣುಳ್ಳವರಾಗಿ ಓದಬಲ್ಲವರಿಗೆ ಮಾತ್ರ ಕನ್ನಡಕದ ಸಹಾಯವಾಗುವಂತೆ ಅಧಿಕಾರಿ ಗಳಾದವರಿಗೆ ಮಾತ್ರ ಅದರಿಂದ ಆಗಬೇಕಾದ ಪರಮಪ್ರಯೋಜನವಾಗುವದು.

ಈಗ ನಮಗೆ ಒಂದೊಂದು ಕಾರ್ಯಕರಣಸಂಘಾತಕ್ಕೆ ಒಬ್ಬೊಬ್ಬ ಆತ್ಮನು ಇರುತ್ತಾನೆಂಬ ತಪ್ಪು ತಿಳಿವಳಿಕೆ ಮಾತ್ರವಿರುವದಿಲ್ಲ, ಸ್ವಪ್ನದಲ್ಲಿರುವವನ 'ನಾನು' ಎಚ್ಚರದ 'ನಾನು' ಎಂಬುದಕ್ಕಿಂತ ಬೇರೆಯಾಗಿರುತ್ತದೆ. ಶರೀರಾರೋಗ್ಯವಿರುವ ವನಿಗಿಂತಲೂ ಸನ್ನಿಹಿಡಿದಿರುವವನಿಗೆ ಬೇರೆಯಾಗಿರುವ ವಿಲಕ್ಷಣವಾದ ನಾನು ಇರುತ್ತದೆ. ಇದು ಎಲ್ಲರಿಗೂ ಗೊತ್ತೇ ಇದೆ. ಹೀಗೆಯೇ ನಮಗೆ ಬಾಲ್ಯ, ಯೌವನ, ಕೌಮಾರ, ವಾರ್ಧಕ - ಇವುಗಳಲ್ಲಿರುವ 'ನಾನು' ಬೇರೆಬೇರೆಯೇ ಆಗಿರುತ್ತದೆ. ಅದರ ಇಷ್ಟಾನಿಷ್ಟಗಳು ಈ ಒಂದೊಂದು ಅವಸ್ಥೆಗಳಲ್ಲಿಯೂ ಬೇರೆಬೇರೆಯಾಗಿರುತ್ತವೆ.

ಅಲ್ಲವೆ? ಆದರೂ 'ನಾನು ಹುಡುಗನಿದ್ದಾಗ ಹೀಗೆನ್ನುತ್ತಿದ್ದೆ' ಎಂದು ಮುದುಕನು ಹೇಳಿಕೊಳ್ಳುತ್ತಾನೆ; 'ಕನಸಿನಲ್ಲಿ ನನಗೆ ಹೀಗೆ ಹೀಗೆ ತೋರಿತು' ಎಂದು ಎಚ್ಚತ್ತವನು ಹೇಳುತ್ತಾನೆ. ಇಲ್ಲಿ ಒಂದೊಂದವಸ್ಥೆಯಲ್ಲಿರುವ 'ನಾನು' ಎಂಬುದು ಬೇರೆ ಬೇರೆ ಯಾಗಿಯೇ ಇದ್ದರೂ **'ಬಾಲ್ಯಾದಿಷ್ವಪಿ ಜಾಗ್ರದಾದಿಷು ತಥಾ ಸರ್ವಾಸ್ವವಸ್ಥಾಸ್ವಪಿ ವ್ಯಾವರ್ತಾಸ್ವನುವರ್ತಮಾನಮಹಮಿತ್ಯನ್ತಃ ಸ್ಫುರನ್ತಂ ಸದಾ'** ಎಂಬಂತೆ ಈ ಎಲ್ಲಾ ಅವಸ್ಥೆಗಳೂ ಒಂದನ್ನು ಬಿಟ್ಟು ಒಂದು ಬರುತ್ತಿರುವಲ್ಲಿ ಇವುಗಳಲ್ಲೆಲ್ಲ 'ನಾನು' ಎಂಬ ಶಬ್ದಕ್ಕೆ ಲಕ್ಷ್ಯಾರ್ಥವಾಗಿರುವ 'ನಾನು' ಎಂಬ ಆತ್ಮನು ಮತ್ತೊಬ್ಬನು ಇರುತ್ತಾನಲ್ಲವೆ? ಈ ಆತ್ಮನೇ ವೇದಾಂತವು ನಮಗೆ ತಿಳಿಸಿಕೊಡುವ ನಿಜವಾದ ಆತ್ಮನು. ಒಂದು ಜನ್ಮ ದಲ್ಲಿಯೇ ನಮ್ಮಲ್ಲಿ ಒಬ್ಬೊಬ್ಬನಿಗೂ ಹೀಗೆ ಎಷ್ಟೋ 'ನಾನು'ಗಳು ಕಾಣಿಸಿಕೊಳ್ಳುತ್ತಿರುತ್ತವೆ; ಇನ್ನು ಜನ್ಮಾಂತರಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಈವರೆಗೆ ನಮಗೆ ಕಾಣಿಸಿ ಕೊಂಡಿರುವ ನಾನುಗಳೆಂಬ ಆತ್ಮರನ್ನು ಎಷ್ಟೆಂದು ಗಣಿಸುವದು? ಆ ಒಂದೊಂದು ಶರೀರೇಂದ್ರಿಯ ಸಂಘಾತದಲ್ಲಿಯೂ– ಹಂದಿಯ ಜನ್ಮವು ಬಂದ ಇಂದ್ರನು ಹಂದಿಯ ಶರೀರದಲ್ಲಿಯೇ ಅಭಿಮಾನಪಟ್ಟಿದ್ದಂತೆ– ಅಭಿಮಾನವನ್ನು ತೋರಿಸುತ್ತಾ ನಿಜವಾದ ಆತ್ಮನನ್ನು ಮರೆತುಬಿಟ್ಟಿರುವೆವು. ಈ ಆತ್ಮನಿಗೇ **ಪರಮಾತ್ಮನು** ಎಂದು ಹೆಸರು. ಇವನನ್ನೇ ನಾವುಗಳೆಲ್ಲರೂ ತಿಳಿದೋ ತಿಳಿಯದೆಯೋ **'ದೇವರು'** ಎಂದು ಉಪಾಸನೆ ಮಾಡುತ್ತಿರುವದು. ಈತನು **'ಯಾ ಬ್ರಹ್ಮಾದಿಪಿಪೀಲಿ ಕಾನ್ತತನುಷು ಪ್ರೋತಾ ಜಗತ್ಸಾಕ್ಷಿಣೀ'** ಎಂಬಂತೆ ಬ್ರಹ್ಮನಿಂದ ಇರುವೆಯವರೆಗಿನ ಪ್ರಾಣಿಗಳ ಶರೀರ ದೊಳಗೂ ಇದ್ದುಕೊಂಡು ಜಗತ್ತೆಲ್ಲಕ್ಕೂ ಸಾಕ್ಷಿಯಾಗಿ ಬೆಳಗುತ್ತಿರುವದು.

ಈ ಆತ್ಮನನ್ನು ಅರಿತುಕೊಂಡರೆ ನಮ್ಮ ನಿಜವಾದ ಊರಿಗೆ, ನಮ್ಮ ಮನೆಗೆ, ನಮ್ಮಸ್ಥಾನಕ್ಕೆ, ನಾವು ಸೇರಿದಂತೆ ಆಗುವದು. ಇದನ್ನು ತಿಳಿಯದೆ ಇದ್ದರೂ ಈ ಉಪದೇಶವನ್ನು ಲಕ್ಷ್ಯದಲ್ಲಿಟ್ಟುಕೊಂಡು ನಾವು ಮಾಡುವ ಚಿಂತನೆಯು **ಉಪಾಸನೆ** ಯೆನಿಸುವದು. ಈ ಉಪಾಸನೆಯು ಅಜ್ಞರಾದ ಎಲ್ಲರಿಗೂ ಅವಶ್ಯ; ತಿಳಿದವರಿಗೂ ಈ ಆತ್ಮತತ್ತ್ವದ ಅನುಸಂಧಾನವೇ ಆನಂದದಾಯಕ. ವಿಷ್ಣುವಿನ ಅವತಾರವೆಂದು ಪ್ರಸಿದ್ಧ ರಾದ ನರನಾರಾಯಣರು ಕೂಡ ಧ್ಯಾನಮಾಡುತ್ತಿರುವದನ್ನು ಕಂಡು ಅಚ್ಚರಿಯಿಂದ ನಾರದನು ನೀವು ಯಾರನ್ನು ಧ್ಯಾನಮಾಡುತ್ತಿರುವಿರಿ? ಎಂದು ಕೇಳಿದಾಗ ನಮ್ಮ ಮತ್ತು ನಿಮ್ಮೆಲ್ಲರ ಆತ್ಮನಾದ ಆ ಪರಮಾತ್ಮನನ್ನು ಧ್ಯಾನಿಸುತ್ತಿರುವೆವು ಎಂದು

ಉತ್ತರವಿತ್ತರಂತೆ. ಇನ್ನು ಶರೀರೇಂದ್ರಿಯಗಳ ಗುಂಪಿನಲ್ಲಿ ಎಡೆಬಿಡದೆ ಅಭಿಮಾನ ವನ್ನಿಟ್ಟುಕೊಂಡಿರುವ ನಮ್ಮಂಥವರು ಆತನ ಉಪಾಸನೆಯಿಂದಲೇ ಕೃತಕೃತ್ಯರಾಗ ಬೇಕೆಂದು ಹೇಳಿದರೆ ಆಶ್ಚರ್ಯವೇನು? ನಮಗೆ ನಮ್ಮ ನಿಜವಾದ ಆತ್ಮನ ವಿಸ್ಮರಣೆಯಾಗಿಬಿಟ್ಟಿದೆ; ಕನಸಿನಲ್ಲಿರುವವರು ಅಥವಾ ಸನ್ನಿಹಿಡಿದಿರುವವರು ಆ ಕಾಲಕ್ಕೆ ತೋರುವ ಕಾರ್ಯಕರಣಸಂಘಾತದ ಅಭಿಮಾನದ 'ನಾನು' ಎಂಬುದನ್ನೇ ಆತ್ಮನೆಂದು ತಿಳಿದಿರುವಂತೆ ನಾವೂ ಮಿಥ್ಯಾತ್ಮನನ್ನೇ ನಾನು ಎಂದುಕೊಳ್ಳುತ್ತಿದೇವೆ. ಸಂಪೂರ್ಣ ವಾಗಿ ಈ ಆತ್ಮನ ವಿಸ್ಮರಣೆಯಾಗಿ ಪರಮಾತ್ಮನ ಸ್ಮರಣೆಯು ಬರುವವರೆಗೂ ಮಾಡುವ ಪ್ರಯತ್ನ ವಿಶೇಷವೇ **ಉಪಾಸನೆ.**

**'ಉದ್ಧರೇದಾತ್ಮನಾತ್ಮಾನಮ್'** ಎಂದು ಭಗವಂತನು ಅಪ್ಪಣೆಕೊಡಿಸಿರುವಂತೆ ನಾವು ನಾವು ನಮ್ಮನಮ್ಮನ್ನು ಉದ್ಧಾರಮಾಡಿಕೊಳ್ಳಬೇಕಾಗಿರುತ್ತದೆ. ಕಾರ್ಯಕರಣ ಸಂಘಾತವನ್ನು ನಿಯಮದಿಂದ ಸ್ವಾಧೀನಕ್ಕೆ ತಂದುಕೊಳ್ಳಬೇಕು; ಪರಮಾತ್ಮನ ಚಿಂತೆಗೆ ನಮ್ಮ ಮನಸ್ಸನ್ನು ಹತ್ತಿಸಬೇಕು. ನಮಗೆ ಪರಮಾತ್ಮನೇ ಬೇಕೆಂಬ ಹಂಬಲವನ್ನು ತಂದುಕೊಳ್ಳಬೇಕು. ಎಷ್ಟೋ ಜನರಿಗೆ ದೇವರಿದಾನೆ ಎಂಬ ನಂಬಿಕೆಯಿದೆ; ಪರಮೇಶ್ವರನ ಪೂಜಾದಿಗಳಲ್ಲಿ ಅಂಥವರು ನಿರತರಾಗಿಯೇ ಇರುತ್ತಾರೆ. ಇದೂ ಪೂರ್ವಜನ್ಮದ ಪುಣ್ಯದ ಫಲವೇ ಸರಿ. ಆದರೆ ಬಲ್ಲವರಿಂದ ಉಪಾಸನೆಯ ತತ್ತ್ವಗಳನ್ನು ತಿಳಿದು ಕೊಂಡು ಅನುಷ್ಠಾನಕ್ಕೆ ಪ್ರಾರಂಭಿಸಿದರೆ ಅವರಿಗೆ ಶೀಘ್ರವಾಗಿ ಪ್ರಯತ್ನವು ಸಫಲ ವಾಗುವದು. ಸುಮ್ಮನೆ ಉಪಾಸನೆಯ ಮಾತುಗಳನ್ನಾಡುತ್ತಾ ಕುಳಿತರೆ ಪ್ರಯೋಜನ ವಿಲ್ಲ; ಅದಕ್ಕೆ ಕ್ರಮಬದ್ಧವಾದ ಅನುಷ್ಠಾನವು ಅತ್ಯವಶ್ಯವಾಗಿರುತ್ತದೆ. ಉಪಾಸನೆಯ ಫಲವಾಗಲಿ ವೇದಾಂತಜ್ಞಾನವಾಗಲಿ ನಾವು ಸುಮ್ಮನೆ ಶಬ್ದವ್ಯವಹಾರವನ್ನು ಅವಲಂಬಿಸಿದಮಾತ್ರದಿಂದ ಎಂದಿಗೂ ದಕ್ಕಲಾರದು. ಒಬ್ಬ ಹುಡುಗನು ತಮಾಷೆ ಗಾಗಿ 'ನಾನು ಮಠದ ಸ್ವಾಮಿ' ಎಂದು ಹೇಳಿಕೊಂಡನು; ಎಲ್ಲರೂ ಅವನ ಮಾತನ್ನು ಕೇಳಿ ನಕ್ಕರು. ಆದರೆ ಅವನಿಗೆ ಬರುಬರುತ್ತಾ ವೈರಾಗ್ಯವೂ ವಿವೇಕವೂ ಮನಸ್ಸಿನಲ್ಲಿ ಮೂಡಿದವು; ಬಲ್ಲವರಲ್ಲಿ ಹೋಗಿ ವೇದಾಂತವಿಚಾರವನ್ನು ಮಾಡಿದನು, ಅಧ್ಯಾತ್ಮ ಯೋಗದ ರಹಸ್ಯವನ್ನು ಸಂಪಾದಿಸಿಕೊಂಡನು. ಕಾಲಕ್ರಮದಲ್ಲಿ ಅವನೊಬ್ಬ ನಿಜವಾದ ಪರಮಹಂಸಪರಿವ್ರಾಜಕನೇ ಆಗಿಬಿಟ್ಟನು; ಆಗ ಅವನೇನೂ 'ನಾನು ಸ್ವಾಮಿ' ಎಂದು ಕೊಳ್ಳಲಿಲ್ಲ; ಅವನು ನಿಜವಾಗಿಯೂ ಸರ್ವಸ್ವಾಮಿಯಾದ ಪರಮಾತ್ಮನನ್ನೇ ತನ್ನ ಆತ್ಮ ನನ್ನಾಗಿ ಕಂಡುಕೊಂಡುಬಿಟ್ಟಿದ್ದನು!

ಹೀಗೆಯೇ ನಾವು **ಅಹಂ ಬ್ರಹ್ಮಾಸ್ಮಿ, ಜಗನ್ಮಿಥ್ಯಾ**- ಎಂದು ಮುಂತಾಗಿ ಕೂಗಿಕೊಳ್ಳುವದರಲ್ಲಾಗಲಿ ಉಪಾಸನೆಯೆಂದರೆ 'ಹಾಗೆ ಹೀಗೆ' ಎಂದು ವಾದವಿವಾದ ವನ್ನು ಮಾಡುವದರಲ್ಲಾಗಲಿ ಯಾವ ಲಾಭವೂ ಇಲ್ಲ, ನಾವು ವೇದಾಂತಶ್ರವಣಕ್ಕೆ ಮನಸ್ಸು ಮಾಡಬೇಕು. ಅದಕ್ಕೆ ಸಾಧನವಾಗಿ ಪರಮಾತ್ಮನ ಉಪಾಸನೆಗೆ ಮೊದಲು ಮಾಡಬೇಕು. ಗೊಬ್ಬರವನ್ನು ಹಾಕಿ ನೀರೆರೆದ ಮಾವಿನಗಿಡವು ಕಾಲಕ್ರಮದಲ್ಲಿ ಫಲವನ್ನು ಕೊಡುವಂತೆ ಆಗ ನಮ್ಮ ಪ್ರಯತ್ನವು ಸಫಲವಾಗುವದು. ಈಗ ಶರನ್ನವರಾತ್ರಿಯು ಬಂದಿದೆ. ಇದು ಅನುಷ್ಠಾನವನ್ನು ಪ್ರಾರಂಭಿಸುವದಕ್ಕೆ ಒಳ್ಳೆಯ ಪ್ರಶಸ್ತವಾದ ಕಾಲವಾಗಿದೆ. ಹಬ್ಬವೆಂದು ಬರಿಯ ಊಟ ಉಪಚಾರಗಳಲ್ಲಿ ಕಾಲವನ್ನು ವ್ಯರ್ಥಮಾಡಬಾರದು. ನಿಯಮಗಳನ್ನು ಕೈಕೊಳ್ಳಬೇಕು, ಸಾತ್ತ್ವಿಕಾಹಾರವನ್ನು ತೆಗೆದು ಕೊಳ್ಳಬೇಕು; ದೇವರಪೂಜೆಯನ್ನು ಮಾಡಿ ಪ್ರಸಾದವಾಗಿಯೇ ಆಹಾರವನ್ನು ಸ್ವೀಕರಿಸ ಬೇಕು. ಪರಮಾತ್ಮನ ಉಪಾಸನೆಯ ಪ್ರಕಾರಗಳಲ್ಲಿ ನಮಗೆ ಯಾವದು ಸುಲಭವಾಗಿ ಕಾಣುವದೋ ಅದನ್ನು ಕೈಕೊಂಡು ಅನುಷ್ಠಾನ ಮಾಡುವದಕ್ಕೆ ಪ್ರಾರಂಭಿಸಬೇಕು. ಈ ಕಾರಣದಿಂದಲೇ ಈ ನವರಾತ್ರಿಗೆ ಉಪಾಸನೆಯ ವಿಷಯದ ಉಪನ್ಯಾಸಮಾಲಿಕೆ ಯನ್ನು ಏರ್ಪಡಿಸಿದೆ. ತಾವುಗಳೆಲ್ಲ ಇದರ ಲಾಭವನ್ನು ಪಡೆಯುವಂತಾಗಲೆಂದು ಶ್ರೀಮನ್ನಾರಾಯಣನನ್ನು ಪ್ರಾರ್ಥಿಸುತ್ತೇನೆ.

*****

# 58. ಉಪಾಸನಾ ಪ್ರಕಾರಗಳು

ನಾವು ತತ್ತ್ವದೃಷ್ಟಿಯಿಂದ ಪರಮಾತ್ಮಸ್ವರೂಪಕ್ಕಿಂತ ಭಿನ್ನರಲ್ಲವಾದರೂ ಅದನ್ನು ಅರಿತುಕೊಳ್ಳದೆ ಶರೀರೇಂದ್ರಿಯಗಳ ಸಂಘಾತಕ್ಕೆ ಕಟ್ಟುಬಿದ್ದಿರುವವರೆಂದು ಭಾವಿಸಿ ಕೊಂಡಿರುತ್ತೇವೆ. ಈ ತಪ್ಪನ್ನು ಯಾರೋ ಕೆಲವರು ಎಂದೋ ಒಂದು ದಿನ ಮಾಡಿ ಕೊಳ್ಳಲಿಲ್ಲ; ಇದು ಮಾನವರಿಗೆಲ್ಲ ಸ್ವಾಭಾವಿಕವಾಗಿ ಅನಾದಿಕಾಲದಿಂದಲೂ ಇದ್ದು ಕೊಂಡಿದೆ; ಕನ್ನಡಿಯಲ್ಲಿ ನೋಡಿಕೊಳ್ಳುವವನ ಮುಖದಂತೆ ತೋರುವದು ಒಂದು ಬಗೆಯ ತೋರಿಕೆಯೇ ಆದರೂ ಅದು ಹೇಗೆ ಎಲ್ಲರಿಗೂ ತೋರುತ್ತಲೇ ಇರುವದೋ ಹಾಗೆಯೇ ಈ ತಪ್ಪುಕಲ್ಪನೆಯೂ ನಮಗೆಲ್ಲರಿಗೂ ಸ್ವಭಾವದಿಂದ ಇದ್ದುಕೊಂಡಿರುತ್ತದೆ.

ಈ ಸ್ವಾಭಾವಿಕವಾದ ಭಾವನೆಯನ್ನು ಸಂಸ್ಕಾರದಿಂದನೇರ್ಪಡಿಸಿಕೊಳ್ಳಬಹುದು. ಪ್ರತೀತಿಯನ್ನೇನೂ ಮಾರ್ಪಡಿಸಬೇಕಾದದ್ದಿಲ್ಲ, ತಿಳಿವಳಿಕೆಯಿಂದ ವಸ್ತುಸ್ಥಿತಿಯು ಗೊತ್ತಾದರೆ ಆಯಿತು. ಕನ್ನಡಿಯಲ್ಲಿ ಕಾಣುವ ನಮ್ಮ ಮುಖದ ಆಕಾರವು ನಿಜವಾಗಿ ಒಂದು ವಸ್ತುವಿನದೇ ಎಂಬ ಭಾವವು ಶೈಶವದಲ್ಲಿರುತ್ತದೆ; ಆದರೆ ನಮಗೆ ವಯಸ್ಸು ಬಂದಹಾಗೆಲ್ಲ ಅದು ಬರಿಯ ಪ್ರತಿಬಿಂಬವೇ ಎಂಬುದು ಮನಸ್ಸಿನಲ್ಲಿ ಮಿಂಚಿಗಟ್ಟಿಯಾಗುತ್ತದೆ. ಇದರಂತೆ ತತ್ತ್ವವಿಚಾರದಿಂದ ನಮ್ಮ ಸ್ವರೂಪವನ್ನು ತಿಳಿದುಕೊಳ್ಳಬಹುದು; ಹೀಗೆ ತಿಳಿದುಕೊಂಡವರು ಜ್ಞಾನಿಗಳು. ಶಾಸ್ತ್ರೋಪದೇಶಕ್ಕೆ ವಿಚಾರಶೀಲರೇ ಉತ್ತಮಾಧಿಕಾರಿಗಳು. ಅಷ್ಟು ಮೇಲು ಮಟ್ಟಕ್ಕೆ ಏರಲಾರದವರು ಶಾಸ್ತ್ರದಲ್ಲಿ ಹೇಳಿರುವ **ಉಪಾಸನೆಗೆ** ತಕ್ಕವರು.

ಶಾಸ್ತ್ರಸಂಸ್ಕಾರವಿಲ್ಲದೆ ಇರುವವರು ಪ್ರಕೃತಿಪರವಶರಾಗಿರುತ್ತಾರೆ; ಪ್ರಾಕೃತರಿಗೆ ತಿಂದು ಉಂಡು ಉಟ್ಟು ಸಾಯುವದೊಂದೇ ಜೀವನ. ಅವರಿಗೆ ಈಶ್ವರನು ಅನುಗ್ರಹಿಸಿರುವ ಶರೀರೇಂದ್ರಿಯಮನೋಬುದ್ಧಿಗಳ ಸದುಪಯೋಗವನ್ನು ಮಾಡಿಕೊಳ್ಳುವ ಯೋಗವಿರುವದಿಲ್ಲ; ಆದರೆ ಕಾಡಿನಲ್ಲಿ ಗೆಡ್ಡೆಗೆಣಸುಗಳನ್ನು ತಿನ್ನುತ್ತಾ, ಮೃಗಗಳನ್ನು ಬೇಟೆಯಾಡಿ ಅವುಗಳ ಮಾಂಸವನ್ನು ತಿನ್ನುವದು, ಅವುಗಳ ಚರ್ಮವನ್ನು ಹೊದೆದುಕೊಳ್ಳುವದು, ದೇಹಯಾತ್ರೆಯು ಮುಗಿದು ಉಳಿದಕಾಲದಲ್ಲಿ ಒಬ್ಬರೊಡನೊಬ್ಬರು ಬಡಿದಾಡುವದು- ಇಂಥ ಅನಾಗರಿಕರು ಮಾತ್ರವಲ್ಲ, ಊರು ಕೇರಿ ಮನೆ ಮಠಗಳನ್ನು ಮಾಡಿಕೊಂಡು ಜೀವನದ ಮಟ್ಟವನ್ನು ಏರಿಸಿಕೊಂಡಿರುವ ನಾಗರಿಕರೆನಿಸಿಕೊಂಡಿರುವವರಲ್ಲಿಯೂ ಅನೇಕರು- ತತ್ತ್ವಜ್ಞಾನದ ದೃಷ್ಟಿಯಿಂದ- ಅಜ್ಞಾನಿಗಳೇ ಆಗಿರುತ್ತಾರೆ.

ತತ್ತ್ವವಿಚಾರದಿಂದ ಜ್ಞಾನವನ್ನು ಸಂಪಾದಿಸಿಕೊಳ್ಳುವದು ಎಲ್ಲರಿಗೂ ಸಾಧ್ಯವಲ್ಲ. ಜ್ಞಾನಮಾರ್ಗಕ್ಕೆ ಅರ್ಹರಲ್ಲದಿದ್ದರೂ ಉಪಾಸನಾಮಾರ್ಗಕ್ಕೆ ತಕ್ಕವರೆನಿಸಿಕೊಂಡಿರುವವರು ಕೂಡ ಸಂಖ್ಯೆಯಲ್ಲಿ ಹೆಚ್ಚಾಗಿಲ್ಲ. ಉಪಾಸನೆಗೆ ಅಂತರ್ಮುಖಿತ್ವವು ಬೇಕಾಗುತ್ತದೆ. ಶಾಸ್ತ್ರವನ್ನು ಅನುಸರಿಸುವವರಲ್ಲಿಯೂ ಉಪಾಸನೆಯನ್ನು ಮಾಡಲಾರದೆ ಬರಿಯ ಕರ್ಮವನ್ನು ಮಾಡುತ್ತಾ ಇರುವವರು ಬಹುಮಂದಿ; ಅವರಲ್ಲಿ ಎಲ್ಲಿಯೋ ಕೆಲವರು ಮಾತ್ರ ಪರಮೇಶ್ವರನ ಅಸ್ತಿತ್ವಕ್ಕೆ ಬೆಲೆಯನ್ನು ಕೊಟ್ಟಿರುತ್ತಾರೆ. ಆದರೆ ನೂರಕ್ಕೆ

ಎಪ್ಪತ್ತೈದಕ್ಕಿಂತಲೂ ಹೆಚ್ಚಾಗಿ ಶಾಸ್ತ್ರೋಪದೇಶಕ್ಕೆ ಅನಧಿಕಾರಿಗಳೇ ಆಗಿರುತ್ತಾರೆ. ಅವರಿಗೆ ಲೋಕವ್ಯವಹಾರವು ಸಾಗಿದರೆ ಸಾಕಾಗಿರುತ್ತದೆ; ಶರೀರಕ್ಕೆ ಬೇಕಾದ ಲೌಕಿಕ ಭೋಗ ಗಳಿಗಾಗಿ ಹಾತುವರಿಯುತ್ತಿರುವದೇ ಸಾಮಾನ್ಯಜನರ ಸ್ವಭಾವ.

ವೇದದಲ್ಲಿ ಹೇಳಿರುವ ಮುಖ್ಯತತ್ತ್ವವೆಂದರೆ ಪರಮಾತ್ಮನೇ ಮಾನವರೆಲ್ಲರ- ಅಷ್ಟೇಕೆ, ಸಮಸ್ತಪ್ರಾಣಿಗಳ- ಆತ್ಮನೆಂಬ ತಿಳಿವಳಿಕೆ. ಸರ್ವರಿಗೂ ಆತ್ಮನಾದ ಪರಮಾತ್ಮನ ತಾದಾತ್ಮ್ಯವು ಮನದಟ್ಟಾಗುವವರೆಗೂ ದೇಹಾತ್ಮಭಾವದ ನೆನಪು ಹೋಗುವಂತೆ ಪ್ರಯತ್ನಮಾಡುವದು ಅಧಿಕಾರಿಗಳಾದವರ ಮನಸ್ಸಿನ ಕೆಲಸ. ವೇದದಲ್ಲಿ ಅವರವರ ಮಟ್ಟಕ್ಕೆ ತಕ್ಕಂತೆ ಶರೀರ, ಇಂದ್ರಿಯ, ಮನಸ್ಸು-ಇವುಗಳೇ ಪ್ರಧಾನವಾಗಿರುವ ಉಪಾಸನೆಗಳನ್ನು ಹೇಳಿರುತ್ತದೆ.

ಕರ್ಮಾಂಗೋಪಾಸನೆಗಳು ವೇದದಲ್ಲಿ ಹೇಳಿರುವ ಬಾಹ್ಯತಮವಾದ ಸಾಧನ ಗಳು. ವೇದದ ಬ್ರಾಹ್ಮಣಗಳಲ್ಲಿ ದ್ವಿಜರಾದವರು ಮಾಡಬೇಕಾದ ಇಂಥ ಉಪಾಸನೆ ಗಳನ್ನು ಹೇರಳವಾಗಿ ತಿಳಿಸಿದೆ. ಆದರೆ-ಉತ್ತರದ ಕೆಲವು ದೇಶಗಳಲ್ಲಿ ಒಂದಕ್ಷರವೂ ಬಾರದ ಬ್ರಾಹ್ಮಣರು ಪಂಡಿತರೆಂಬ ಹೆಸರಿನಿಂದ ಪ್ರಸಿದ್ಧರಾಗುವಂತೆ- ವೇದವನ್ನು ಕಿವಿ ಯಿಂದಲೂ ಕೇಳದೆ ಇರುವ ವೈದಿಕರು ಈಗ ಹೆಚ್ಚಾಗಿರುತ್ತಾರೆ. ಪೂರ್ವದಲ್ಲಿ ಬ್ರಾಹ್ಮಣರೇ ಮುಖ್ಯವಾಗಿದ್ದರೆಂದೂ ಕರ್ಮದಿಂದ ವರ್ಗವಿಭಾಗಗಳು ಏರ್ಪಟ್ಟವೆಂದೂ ಭಾರತದ ಭೃಗುಭಾರದ್ವಾಜಸಂವಾದದಲ್ಲಿದೆ. ಈಚೆಗೆ ಕಾರಣಾಂತರಗಳಿಂದ ಜಾತ್ಯುಪಜಾತಿಗಳು ಹೆಚ್ಚಾಗಿ ಕೊನೆಗೆ ಜಾತಿವಿಭಾಗದಲ್ಲಿಯೇ ಬೇಸರವಾಗುವ ಕಾಲವು ಬಂತು. ಹೀಗೆ ವೇದೋಕ್ತಕರ್ಮಗಳೇ ಈಗ ಲುಪ್ತಪ್ರಾಯವಾಗಿದೆ. ಆದ್ದರಿಂದ ಈ ಕರ್ಮಾಂಗ ಉಪಾಸನೆಗಳು ನಮಗೆ ಸದ್ಯಕ್ಕೆ ಪ್ರಯೋಜನಕ್ಕೆ ಬಾರದೆ ಇರುತ್ತವೆ.

ಪ್ರತೀಕೋಪಾಸನೆಗಳು, ಎಂದರೆ ಯಾವದಾದರೊಂದು ಹೊರಗಿನ ವಸ್ತುವನ್ನು ಅಥವಾ ಆಧ್ಯಾತ್ಮಿಕವಸ್ತುವನ್ನು ಪರಮಾತ್ಮನೆಂದು ಉಪಾಸನೆಮಾಡುವದು, ಸಾಕಾರ ವಾದ ಪರಮೇಶ್ವರನ ಉಪಾಸನೆಗಳು, ಸಗುಣೋಪಾಸನೆ -ಇವೆಲ್ಲವನ್ನೂ ವೇದದಲ್ಲಿ ಹೇಳಿರುತ್ತದೆ. ಆದರೆ ವೇದಾಧ್ಯಯನವೇ ಇಲ್ಲದ ದ್ವಿಜರಿಗೆ ಈಗ್ಗೆ ಅವುಗಳಿಂದ ಯಾವ ಪ್ರಯೋಜನವೂ ಆಗುವಂತಿಲ್ಲ.

ಶ್ರುತಿಯಲ್ಲಲ್ಲದೆ ಸ್ಮೃತಿಗಳಲ್ಲಿಯೂ ಕೆಲವು ಕರ್ಮಗಳನ್ನು ಹೇಳಿದೆ. ಶ್ರೌತ

ಕರ್ಮಗಳನ್ನು ಮಾಡಲಾರದವರು ಸ್ಮಾರ್ತಕರ್ಮಗಳನ್ನಾದರೂ ನಡೆಯಿಸಿಕೊಂಡು ಬಂದಿದ್ದರೆ ಚೆನ್ನಾಗಿತ್ತು. ಆದರೆ 'ಸ್ಮಾರ್ತರು' ಎಂದು ತಮ್ಮನ್ನುತಾವೇ ಕರೆದುಕೊಳ್ಳುತ್ತಿರುವವರೂ ಬಲುಮಟ್ಟಿಗೆ ಕರ್ಮಗಳನ್ನು ಕೈಬಿಟ್ಟಿರುತ್ತಾರೆ. ಈಗ ಶಾಸ್ತ್ರವನ್ನು ಸ್ಮರಣೆ ಮಾಡುವದೂ ಕಡಿಮೆಯಾಗಿರುವ ಬ್ರಾಹ್ಮಣರು ಏರ್ಪಟ್ಟಿರುತ್ತಾರೆ. ಹೀಗಿರುವಲ್ಲಿ ಕರ್ಮಗಳಾಗಲಿ ಕರ್ಮಾಂಗವಾದ ಉಪಾಸನೆಗಳಾಗಲಿ ಹೇಗೆ ಆಚರಣೆಗೆ ಬಂದಾವು?

**ಪುರಾಣ**ಗಳಲ್ಲಿ ವೇದಾಂತೋಕ್ತವಾದ ತತ್ತ್ವವನ್ನೇ ಕಥೆ ಮುಂತಾದವುಗಳ ಮೂಲಕ ಉಪದೇಶಿಸಿರುತ್ತದೆ. ಅವುಗಳಲ್ಲಿ ರಾಮಕೃಷ್ಣಾದ್ಯವತಾರಗಳನ್ನು ಪರಮಾತ್ಮನೆಂದು ಉಪಾಸನೆಮಾಡಬೇಕೆಂದು ಹೇಳಿರುತ್ತದೆ. ಶ್ರುತಿಸ್ಮೃತಿಗಳಲ್ಲಿರುವ ಉಪಾಸನೆಯ ತತ್ತ್ವವನ್ನು ಅವಲಂಬಿಸಿಯೇ ಇಲ್ಲಿ ಉಪಾಸನೆಯನ್ನು ಹೇಳಿರುವದರಿಂದ ಸಾಮಾನ್ಯರೂ ಉಪಾಸನೆಯ ಫಲವನ್ನು ಪಡೆದುಕೊಳ್ಳುವದಕ್ಕೆ ಅವಕಾಶವಿರುತ್ತದೆ. ಅವತಾರಿಕರ ಗುಣಗಳನ್ನು ಮನಸ್ಸಿನಲ್ಲಿ ನೆನೆಯುತ್ತಿರುವದೂ ಒಂದು ಉಪಾಸನೆಯೇ. ಶ್ರೀರಾಮಾದಿಗಳ ಗುಣಕರ್ಮಲೀಲೆಗಳನ್ನು ವರ್ಣಿಸಿರುವ ಪ್ರಕಾರವನ್ನು ಶ್ರದ್ಧಾಭಕ್ತಿಗಳಿಂದ ಶ್ರವಣ ಮಾಡುವದರಿಂದ ಮನಸ್ಸಿಗೆ ಉತ್ತಮಸಂಸ್ಕಾರವಾಗುವದು. ಶ್ರೀರಾಮಚಂದ್ರನು ರಾಜಕುಮಾರನಾದರೂ ಸತ್ಯಧರ್ಮಗಳಿಗಾಗಿ ರಾಜ್ಯವನ್ನು ತೊರೆದು ನಾರುಡೆಯನ್ನು ಧರಿಸಿ ಕಾಲುನಡಗೆಯಿಂದ ವನಕ್ಕೆ ಬಂದದ್ದನ್ನು ಕಂಡ ಋಷಿಗಳು ಕೂಡ ಆತನ ಸೌಜನ್ಯಕ್ಕೂ ವೈರಾಗ್ಯಕ್ಕೂ ತಲೆದೂಗಿದರು; ವೇದೋಕ್ತವಾದ ಸತ್ಯಧರ್ಮಗಳೇ ಮೂರ್ತಿಮಂತವಾಗಿ ಬಂದವೆಂದು ಅವರೆಲ್ಲರೂ ಆತನನ್ನು ಗೌರವಿಸಿ ಸತ್ಕರಿಸಿದರು. ವಾಲ್ಮೀಕಿಮಹರ್ಷಿಗಳು ಶ್ರೀರಾಮನ ಚರಿತ್ರೆಯನ್ನು ಬರೆದು ಲೋಕಕ್ಕೆಲ್ಲ ಉಪಕಾರವನ್ನು ಮಾಡಿರುತ್ತಾರೆ. ಇಂದಿಗೂ ನಾವು ರಾಮವಿಗ್ರಹಕ್ಕೆ, ಅಥವಾ ಮಾನಸಿಕ ರಾಮಮೂರ್ತಿಗೆ ಷೋಡಶೋಪಚಾರಪೂಜೆಯನ್ನು ಮಾಡುವದು, ರಾಮನ ಸದ್ಗುಣಗಳನ್ನು ನೆನೆಯುವದು, ರಾಮನಾಮವನ್ನು ಸ್ಮರಣೆ ಮಾಡುತ್ತಿರುವದು– ಹೀಗೆ ಉಪಾಸನೆ ಮಾಡಿ ಶರೀರೇಂದ್ರಿಯಮನಸ್ಸುಗಳ ಅಭಿಮಾನವನ್ನು ತೊಲಗಿಸಿಕೊಂಡು ಕೃತಾರ್ಥರಾಗಬಹುದಾಗಿದೆ.

ಇತ್ತೀಚೆಗೆ ಜನರಲ್ಲಿ ಪುರಾಣಶ್ರವಣಕ್ಕೂ ಅಧಿಕಾರವು ಕಡಿಮೆಯಾಗುವ ಕಾಲವು ಬಂದಿತು. ಆ ಸಮಯಕ್ಕೆ ನಮ್ಮೀ ಭರತಖಂಡದಲ್ಲಿ ಅನೇಕರು **ಸಾಧು**

ಸಂತರುಗಳು ಅಲ್ಲಲ್ಲಿ ಅವತರಿಸಿ ಜನರ ಮನಸ್ಸು ಭಗವಂತನ ಕಡೆಗೆ ತಿರುಗುವಂತೆ ಮಾಡಿರುತ್ತಾರೆ. ಅವರು ಉಪದೇಶಗಳು ಗ್ರಂಥಗಳು ಇವುಗಳಿಂದ ಮಾತ್ರವೇ ಅಲ್ಲದೆ, ಭಕ್ತಿಜ್ಞಾನವೈರಾಗ್ಯಾದಿಗಳಿಂದಲೂ ಸದ್ಗುಣಗಳಿಂದಲೂ ಜನರಿಗೆ ಆದರ್ಶ ಜೀವನವನ್ನು ತೋರಿಸಿಕೊಟ್ಟಿರುತ್ತಾರೆ. ಈ ಸಾಧುಸಂತರಿಗೆ ಪಂಥಗಳು ಬೇರೆಬೇರೆಯಾಗಿದ್ದರೂ ಅಂತರ್ಮುಖತೆಯನ್ನೂ ಪರಮಾತ್ಮನ ಉಪಾಸನೆಯನ್ನೂ ಬೋಧಿಸಿರುವದು ಅವರಿಗೆಲ್ಲ ಸಮಾನವಾಗಿರುತ್ತದೆ. ಆ ಮಹಾಪುರುಷರುಗಳು ಉದಯಿಸಿದ ಕಾಲ ದಲ್ಲಿ ಜೀವನವೇನೂ ಅಷ್ಟು ಸುಗಮವಾಗಿತ್ತೆಂದು ಹೇಳುವದಕ್ಕಿಲ್ಲ; ಆದರೆ ಅವರಿಗೆ ಈಶ್ವರನ ಅಸ್ತಿತ್ವದಲ್ಲಿಯೂ ಈಶ್ವರೋಪಾಸನೆಯಿಂದ ಆಗುವ ಸತ್ಫಲದಲ್ಲಿಯೂ ಅತ್ಯಂತ ದೃಢವಿಶ್ವಾಸವಿದ್ದಿತು. ಚೈತನ್ಯರು, ತುಳಸೀದಾಸರು, ಕಬೀರದಾಸರು, ಏಕನಾಥರು, ರಾಮದಾಸರು, ತುಕಾರಾಮರು, ಪುರಂದರದಾಸರು, ಕನಕದಾಸರು– ಇವರೇ ಮುಂತಾದವರ ಹೆಸರುಗಳು ನಮ್ಮ ಅಂತಃಕರಣದಲ್ಲಿ ಇಂದಿಗೂ ಅಮರವಾಗಿ ನೆಲಸಿವೆ; ಅವರ ನಾಮವೂ ಪವಿತ್ರವೆಂದು ನಾವುಗಳು ಭಾವಿಸುತ್ತೇವೆ.

ಈಚೆಗೆ ಕಲಿದೋಷದ ಪ್ರಾಬಲ್ಯದಿಂದ ನಾವು ಹಣ, ಅಧಿಕಾರ, ಕೀರ್ತಿ– ಮುಂತಾದವುಗಳಿಗೆ ಜೋಲುವ ಮನಸ್ಸಿನವರಾಗಿರುತ್ತೇವೆ. ಸರಕಾರದ ಅಧಿಕಾರಿಗಳು, ಸಾಹುಕಾರರು– ಮುಂತಾದವರನ್ನು ಗೌರವಿಸುವಂತೆ ಋಷಿಗಳನ್ನಾಗಲಿ, ಸಾಧುಸಂತ ರನ್ನಾಗಲಿ ನಾವು ಗೌರವಿಸುತ್ತಿಲ್ಲ; ಭೌತಿಕವಿಜ್ಞಾನಿಗಳನ್ನು ದೇವರೆಂದು ಭಾವಿಸಿರು ವಂತೆ ಆತ್ಮಜ್ಞಾನಿಗಳನ್ನು ಭಾವಿಸಿರುವದಿಲ್ಲ. ನೀತಿಧರ್ಮಗಳ ನೆಲಗಟ್ಟಿಲ್ಲದೆ ಶರೀರಾ ತ್ಮಾಭಿಮಾನದಿಂದ ವರ್ತಿಸುವದೇ ಹೆಚ್ಚೆನಿಸುವ ಕಾಲವು ಬಂದಿರುತ್ತದೆ. ಇದರ ದುಷ್ಫಲ ವನ್ನು ನಾವುಗಳು ಆಗಲೆ ಅನುಭವಿಸುತ್ತಿರುತ್ತೇವೆ. ಹೊರಗಿನ ವಿಷಯಗಳು ಶರೀರೇಂದ್ರಿಯಗಳ ಸುಖಕ್ಕೆ, ಶರೀರೇಂದ್ರಿಯಗಳು ಮನಸ್ಸಿನ ಜ್ಞಾನವಿಸ್ತಾರಕ್ಕೆ, ಮನಸ್ಸಿನ ಸಂಸ್ಕಾರವು ಪರಮಾತ್ಮಪ್ರಾಪ್ತಿಗೆ – ಹೀಗೆ ಅಂಗಾಂಗಿಭಾವವಿರಬೇಕೆಂಬುದು ಎಂದಿಗೆ ನಮ್ಮ ಮನಸ್ಸಿನಲ್ಲಿ ಮತ್ತೆ ಮಿಂಚುವದೋ, ಆಗ ನಾವು ಅವಿದ್ಯಾಕ್ಷೇತ್ರವನ್ನು ದಾಟಿ ವಿದ್ಯಾಕ್ಷೇತ್ರಕ್ಕೆ ಕಾಲಿಟ್ಟವರಾಗುವೆವು. ಶ್ರುತಿಸ್ಮೃತಿಪುರಾಣಗಳಲ್ಲಿಯಾಗಲಿ ಸಾಧುಗಳ ಉಪದೇಶದಲ್ಲಿಯಾಗಲಿ ಪರಮೇಶ್ವರನ ಉಪಾಸನೆಯಿಂದಲೇ ಮನುಷ್ಯನ ಉದ್ಧಾರ ವಾಗಬೇಕಾಗಿದೆಯೆಂದೇ ಹೇಳಿರುತ್ತದೆ. ಈ ಉಪದೇಶಕ್ಕೆ ಕಿವಿ ಗೊಡದೆ ಇದ್ದರೆ ನಮ್ಮ ಭಾರತಸಂಸ್ಕೃತಿಯನ್ನೇ ಕಳೆದುಕೊಂಡಂತಾಗುವದು; ನಮ್ಮ ಜೀವನವು ದುಃಖಮಯ

ವಾಗುವದು. ದೊಡ್ಡವರ ಉಪದೇಶವನ್ನು ಲಕ್ಷ್ಯದಲ್ಲಿಟ್ಟು ನಮಗೆ ಸುಕರವಾಗಿರುವ ಯಾವದಾದರೊಂದು ಉಪಾಸನಾಪ್ರಕಾರವನ್ನು ಕೈಕೊಳ್ಳುವ ಬುದ್ಧಿಯನ್ನು ಪರಮೇಶ್ವರನು ನಮಗೆಲ್ಲರಿಗೂ ಅನುಗ್ರಹಿಸಲಿ ಎಂದು ಪ್ರಾರ್ಥಿಸೋಣ.

*****

# 59. ಗ್ರಂಥಗಳ ಪಾರಾಯಣ

ಪಾರಾಯಣವೆಂದರೇನೆಂಬುದು ನಮ್ಮಗಳಿಗೆ ತಿಳಿದೇ ಇದೆ. ಆದರೆ ಪಾರಾಯಣ ಶಬ್ದದ ವ್ಯುತ್ಪತ್ತಿಯನ್ನು ನಿರೂಪಿಸುವದರಿಂದ ಅದರ ಆಧ್ಯಾತ್ಮಿಕ ಮರ್ಮವು ತಿಳಿಯ ಬರುವಂತಿದೆ. 'ಅಯನ' ಎಂದರೆ ಗುರಿ, ಗತಿ; ಪರಮ್ ಅಯನಮ್ ಎಂದರೆ ಕೊನೆಗೆ ಮುಟ್ಟಬೇಕಾದ ಹೆಗ್ಗುರಿ. ಈ ಶಬ್ದಕ್ಕೆ ಧಾರ್ಮಿಕ ಗ್ರಂಥಗಳನ್ನು ಓದುವದು ಎಂಬ ಅರ್ಥವು ಹೇಗೆ ಬಂದಿತೋ ತಿಳಿಯದು. ಅದನ್ನು ಪುರಾತತ್ತ್ವಶೋಧಕರು ಕಂಡುಹಿಡಿಯಬೇಕಾಗಿದೆ. ಅದು ಹೇಗಾದರೂ ಇರಲಿ, ತತ್ಪರಾಯಣರಾಗಿ ಭಗವಂತನೇ ನನಗೆ ಕೊನೆಯ ಗತಿ ಎಂಬ ಭಾವದಿಂದ ಓದುವ ಕ್ರಮವನ್ನೇ ನಾವು ಪಾರಾಯಣ ವೆಂದು ತಿಳಿಯಬೇಕು.

ಈ ದೃಷ್ಟಿಯಿಂದ ನೋಡುವಾಗ ರೈಲಿನಲ್ಲಿ ಅಥವಾ ಬಸ್ಸಿನಲ್ಲಿ ಪ್ರಯಾಣ ಮಾಡುವವರು ಕೊಳ್ಳುವ ವೃತ್ತಪತ್ರಗಳ ಅಥವಾ ಕಥೆಗಳ ಪಠನವು ಪಾರಯಣ ವಾಗಲಾರದೆಂಬುದು ಸ್ಪಷ್ಟವಿದೆ; ಏಕೆಂದರೆ ಅದರಲ್ಲಿರುವ ವಿಷಯವು ನಮಗೆ ಪರಮಪುರುಷಾರ್ಥವನ್ನು ಕೊಟ್ಟೀತೆಂದು ನಮಗೇನೂ ನಂಬಿಕೆಯಿರುವದಿಲ್ಲ. ಕಾಳಿದಾಸಾದಿ ಕವಿಗಳ ಗ್ರಂಥದಲ್ಲಿ ನಮ್ಮ ಹೃದಯಕ್ಕೆ ಮೆಚ್ಚಾದ ಅನೇಕ ಕಲ್ಪನೆ ಗಳಿರುತ್ತವೆ; ಅವುಗಳಿಂದ ಮನಸ್ಸಿಗೆ ಒಂದು ಬಗೆಯ ಹೆಚ್ಚಿನ ಸಂಸ್ಕಾರವೂ ಆಗುವದು ನಿಜ. ಅವುಗಳಲ್ಲಿ ಒಂದು ವೇಳೆ ಆಧ್ಯಾತ್ಮಿಕವಿಚಾರಗಳು ಕಂಡರೂ ಅವನ್ನು ಬದಿಗೊತ್ತಿ ಶಬ್ದಚಿತ್ರ, ಅಲಂಕಾರ- ಮುಂತಾದವುಗಳಿಗೆ ಪ್ರಾಮುಖ್ಯವನ್ನು ಕೊಟ್ಟಿರುತ್ತದೆ. ಆದರೆ ಋಷಿಗಳು ಅನುಗ್ರಹಿಸಿರುವ ಗ್ರಂಥಗಳಲ್ಲಿ ಹೀಗಿಲ್ಲ. ಅವರಿಗೆ ಆಧ್ಯಾತ್ಮಿಕಭಾವಗಳೇ ಮುಖ್ಯ. ಅವರ ಗ್ರಂಥಗಳಿಂದ ನಮ್ಮ ಮೇಲೆ ಉತ್ತಮ ಪರಿಣಾಮವಾಗುವದಕ್ಕೆ ಅವರು ಋಷಿಗಳಾಗಿದ್ದದ್ದೇ ಕಾರಣ. ಋಷಿಗಳು ಎಂದರೆ ಸಮಾಹಿತಚಿತ್ತರಾದಾಗ

ತಮ್ಮ ಪರಿಶುದ್ಧವಾದ ಚಿತ್ತದಲ್ಲಿ ಹೊಳೆದ ಉದಾತ್ತಭಾವಗಳನ್ನು ನೇರಾಗಿ ಕಂಡು ಅನುಭವಿಸಿದವರು. ತರ್ಕಕ್ಕೆ ಅಂಥ ಭಾವಗಳು ಹೊಳೆಯುವದಿಲ್ಲ. ಈ ಅನುಭವವು ತಿರ್ಯಕ್ಪ್ರಾಣಿಗಳಿಗೆ ಇರುವ ನೈಸರ್ಗಿಕವಾದ ಅರಿವಲ್ಲ. ಒಂದೊಂದು ಸಮಯದಲ್ಲಿ ನಮಗೆ ಹೇಗೋ ಥಳಾರನೆ ಹೊಳೆಯುವ ಕೆಲವು ಹೊಸ ಭಾವನೆಗಳಿರುವವಲ್ಲ, ಅವೂ ಅಲ್ಲ. ಸ್ವತಃಸಿದ್ಧವಾಗಿರುವ ಆತ್ಮತತ್ತ್ವವು ಶುದ್ಧಸತ್ತ್ವಪ್ರಧಾನವಾದ ತಪಸ್ವಿಗಳಿಗೆ ಮಾತ್ರ ಪರಮೇಶ್ವರನ ಅನುಗ್ರಹದಿಂದ ಹೊಳೆಯುವ ದರ್ಶನವದು. ಅಂಥವರು ಬರೆದಿರುವ ಧಾರ್ಮಿಕಗ್ರಂಥಗಳೇ ಪಾರಾಯಣಕ್ಕೆ ಯೋಗ್ಯವಾದವುಗಳು. ಆದ್ದರಿಂದಲೇ ಅವುಗಳಲ್ಲಿರುವ ಉಪದೇಶವನ್ನು ಕೆಲವರು ಪ್ರಾಸಾದಿಕವಾಣಿ ಎಂದು ಕರೆಯುತ್ತಾರೆ. ಈ ವಾಣಿಯು ಹಿಂದಿನ ಕೆಲವರಿಗೆ ಮಾತ್ರ ಮೀಸಲಾಗಿತ್ತೆಂದು ಭಾವಿಸಬಾರದು.

ಇದಕ್ಕೊಂದು ದೃಷ್ಟಾಂತವನ್ನು ತೆಗೆದುಕೊಳ್ಳೋಣ. ನಾರದರಿಂದ ಶ್ರೀರಾಮನ ಚರಿತ್ರೆಯನ್ನು ಕೇಳಿ ಸಂತೋಷದಿಂದ ವಾಲ್ಮೀಕಿ ಋಷಿಯು ಅದನ್ನೇ ಮನಸ್ಸಿನಲ್ಲಿ ಚಿಂತಿಸುತ್ತಾ ತಮಸಾನದಿಗೆ ಸ್ನಾನಕ್ಕೆಂದು ಹೋದಾಗ ಅಲ್ಲಿ ಕ್ರೌಂಚಪಕ್ಷಿಗಳ ಮಿಥುನ ದಲ್ಲಿ ಒಂದನ್ನು ಒಬ್ಬ ನಿಷಾದನು ಹೊಡೆಯುತ್ತಿರುವದು ಅವನ ಕಣ್ಣಿಗೆ ಬಿದ್ದಿತು. ಹೆಣ್ಣು ಹಕ್ಕಿಯು ತನ್ನ ಪತಿಯ ಸಾವಿನಿಂದ ದುಃಖಪೂರಿತವಾಗಿ ಶೋಕಸೂಚಕವಾಗಿ ಕೂಗಿಕೊಳ್ಳುತ್ತಿತ್ತು. ಆಗ ಆ ಕರುಣಾಜನಕವಾದ ಶೋಕವನ್ನು ಕಂಡು ಮರುಕದಿಂದ ವ್ಯಥೆಪಟ್ಟ ವಾಲ್ಮೀಕಿಯ ಬಾಯಿಂದ ಈ ಶ್ಲೋಕವು ಹೊರಬಿದ್ದಿತು. "**ಮಾ ನಿಷಾದ ಪ್ರತಿಷ್ಠಾಂ ತ್ವಮಗಮಃ ಶಾಶ್ವತೀಃ ಸಮಾಃ । ಯತ್ಕ್ರೌಂಚಮಿಥುನಾದೇಕಮವಧೀಃ ಕಾಮಮೋಹಿತಮ್ ।**" ಆಗ ಅವನು 'ಎಲೆಲ! ಇದೇನು? ಉತ್ತಮಶ್ಲೋಕನಾದ ಶ್ರೀರಾಮನಚರಿತ್ರೆಯನ್ನು ಚಿಂತಿಸುತ್ತಿರುವ ನನಗೆ ಇಂಥ ಪವಿತ್ರಸಂದರ್ಭದಲ್ಲಿ ಹೀಗೇಕೆ ಶಾಪವಚನವು ಬಾಯಲ್ಲಿ ಬಂದಿತು?' ಎಂದು ಯೋಚಿಸಿಕೊಳ್ಳುತ್ತಾ ಆಶ್ರಮಕ್ಕೆ ತೆರಳು ವಲ್ಲಿ ಅಲ್ಲಿಗೆ ಬ್ರಹ್ಮದೇವರು ಬಂದು "ಎಲೈ ವಾಲ್ಮೀಕಿಯೆ, ಚಿಂತಿಸದಿರು; ನಿನ್ನ ಬಾಯಿಯಲ್ಲಿ ಪಾದಬದ್ಧವಾದ ನಿಯತಾಕ್ಷರಸಂಖ್ಯೆಯ ಈ ಪದ್ಯವು ಬಂದದ್ದು ನನ್ನ ಇಚ್ಛೆಯಿಂದಲೇ ಎಂದು ತಿಳಿ. ಇದರಿಂದ ಶೋಕವು ಶ್ಲೋಕವಾಗುವದು; ನೀನು ಇದೇ ಪದ್ಯದಿಂದಲೇ ರಾಮಾಯಣವನ್ನು ರಚಿಸು; ರಾಮಚರಿತ್ರೆಯು ಲೋಕದಲ್ಲಿರುವವರೆಗೂ ನಿನ್ನ ಕಾವ್ಯವು ಪ್ರಸಿದ್ಧವಾಗಿರುವದು" ಎಂದು ಹೇಳಿ ಅವನಿಗೆ ಶ್ರೀರಾಮನ ಚರಿತ್ರೆಯೆಲ್ಲವೂ ಸಂಪೂರ್ಣವಾಗಿ ಹೊಳೆಯುವಂತೆ ಅನುಗ್ರಹಿಸಿದನೆಂದು ರಾಮಾಯಣದಲ್ಲಿ ಬರೆದಿದೆ.

ರಾಮಾಯಣದಲ್ಲಿ ಬರಿಯ ವಾಲ್ಮೀಕಿಯ ಕಾವ್ಯವಿದೆಯೆಂದಲ್ಲ; ಪರಮೇಶ್ವರನು ರಾಮಾವತಾರದಲ್ಲಿ ತೋರಿದ ಲೀಲೆಗಳೆಲ್ಲವೂ ಸತ್ಯಧರ್ಮಗಳ ಸಾರವೆಲ್ಲವೂ ಅಡಗಿದೆ. ಆದ್ದರಿಂದ ಅದನ್ನು ಪಾರಾಯಣ ಮಾಡಿದರೆ ಪರಮೇಶ್ವರನ ಚಿಂತನೆಯ ಫಲವು ಲಭಿಸುವದು; ನಮ್ಮ ಹೃದಯದಲ್ಲಿ ಸಂತತವಾಗಿ ನಡೆಯುತ್ತಿರುವ ದೈವಾಸುರಯುದ್ಧದಲ್ಲಿ ದೈವಸಂಪತ್ತಿಗೆ ದೊರಕುವ ವಿಜಯದ ಗುರುತು ಅದರಲ್ಲಿ ಸಿಕ್ಕುವದು.

ಶ್ರೀಮದ್ರಾಮಾಯಣ ಪಾರಾಯಣವು ಇಹಪರಸುಖಗಳಿಗೆ ಸಾಧನವೆಂಬ ನಂಬಿಕೆಯು ಈಗಲೂ ಆಸ್ತಿಕರಲ್ಲಿ ಬಲವಾಗಿರುತ್ತದೆ. ರಾಮಾಯಣಶ್ರವಣಪಠನದಿಂದ ಸತ್ಪ್ರಜಾಸಂತತಿಯೂ ಧರ್ಮದಿಂದ ಪಡೆಯಬಹುದಾದ ಐಶ್ವರ್ಯವೂ ಲಭಿಸುವದು – ಎಂದು ರಾಮಾಯಣದಲ್ಲಿರುವ ವಾಕ್ಯವನ್ನು ಭಾವಭಕ್ತಿಯಿಂದ ಪಠಿಸಿ ಆ ಫಲವನ್ನು ನಿರೀಕ್ಷಿಸುವ ಶ್ರದ್ಧಾಳುಗಳು ಎಷ್ಟು ಜನರಿಲ್ಲ! ಇಷ್ಟೇ ಅಲ್ಲ, ಈ ಗ್ರಂಥದ ಪಾರಾಯಣದಿಂದ ನಮ್ಮ ಹೃದಯದಲ್ಲಿ ಎದ್ದುಕೊಳ್ಳುವ ಉತ್ತಮ ಭಾವನೆಗಳು ನಮ್ಮನ್ನು ತತ್ತ್ವಾನುಭವಕ್ಕೂ ಅಣಿಗೊಳಿಸುವವು. ರಾಮಾಯಣವಾಕ್ಯಗಳನ್ನು ಮುಂದಿನ ಫಲವನ್ನು ಸೂಚಿಸುವ ಶಕುನವೆಂದು ಕಾಣುವವರ ಸಂಖ್ಯೆಯೇನೂ ಕಡಿಮೆಯಿಲ್ಲ.

ಇಂಥ ಪ್ರಾಸಾದಿಕಗ್ರಂಥಗಳನ್ನು ಪಾರಾಯಣಮಾಡುತ್ತಿರುವ ಸಾತ್ತ್ವಿಕರಿಗೆ– ಪರಮೇಶ್ವರನು ಋಷಿಗಳೊಡನೆ ಮಾತಾಡುತ್ತಿದ್ದಂತೆ– ತಮಗೆ ಆ ಮಹಾತ್ಮರ ಗ್ರಂಥಗಳ ಮೂಲಕ ಉಪದೇಶಮಾಡುತ್ತಿರುವನೆಂಬ ಭಾವನೆಯುಂಟಾಗುವದು. ಪರಮಾತ್ಮನಲ್ಲಿ ಅನೇಕ ಶಕ್ತಿಗಳಿವೆ ಎಂಬುದು ಒಂದು ಸಲ, ಪರಮಾತ್ಮನು ನಮ್ಮ ಹೃದಯದಲ್ಲಿಯೇ ಇರುತ್ತಾನೆಂಬುದು ಮತ್ತೊಂದು ಸಲ, ಹೀಗೆ ಒಂದೊಂದು ಸಲದ ಪಾರಾಯಣದಿಂದ ಒಂದೊಂದು ಹೊಸ ಭಾವನೆಯು ಹೊಳೆಯುವದು. ವಾಕ್ಯ ವೆಂದರೇನು? ಅದು ಒಳಗಿನ ಆಲೋಚನೆಯ ಹೊರರೂಪವಲ್ಲವೆ? ಆದ್ದರಿಂದ ಪಾರಾಯಣಗ್ರಂಥದಲ್ಲಿರುವ ವಾಕ್ಯವು ಕೇವಲ ಗ್ರಂಥಕರ್ತೃಗಳದಲ್ಲ, ಪರಮೇಶ್ವರನ ಹೃದಯವನ್ನೇ ನಮಗೆ ತಿಳಿಸಿಕೊಡುವದಕ್ಕೆ ಸಾಧನವಾಗಿರುವದು. ಆದರೆ ನಾವು ಲಕ್ಷ್ಯವಿಟ್ಟು ಅದನ್ನು ಓದಬೇಕು. ಸಾವಧಾನವಾದ ಚಿತ್ತದಿಂದ ಅಲ್ಲಿರುವ ಉಪದೇಶಕ್ಕೆ ಕಿವಿಗೊಡಬೇಕು ಅಷ್ಟೆ.

ಇದಕ್ಕೆ ಒಂದು ಉದಾಹರಣೆಯನ್ನು ತೆಗೆದುಕೊಳ್ಳಿ. **'ಮಾಮೇವ ಯೇ ಪ್ರಪದ್ಯನ್ತೇ ಮಾಯಾಮೇತಾಂ ತರನ್ತಿ ತೇ'** ಎಂಬುದೊಂದು ಗೀತಾವಾಕ್ಯ. ಇಲ್ಲಿ 'ನನ್ನನ್ನೇ ಶರಣುಹೊಕ್ಕವರಿಗೆ ಮಾಯೆಯನ್ನು ದಾಟುವ ಶಕ್ತಿ ಬರುವದು' ಎಂದು ಭಗವಂತನು ಅಪ್ಪಣೆಕೊಡಿಸಿರುತ್ತಾನೆ. ಇದು ಭಗವಂತನ ವಾಕ್ಯ. ಆತನ ವಾಗ್ದಾನವು ಎಂದಿಗೂ ಹುಸಿಯಾಗದು-ಎಂಬ ದೃಢವಾದ ವಿಶ್ವಾಸವುಳ್ಳವರಿಗೆ ಈ ಆಲೋಚನೆಯು ಹೊಳೆಯುವದು. 'ಎಲಾ? ನಾವೇನು ಮಾಡುತ್ತಿದೇವೆ? ನಾವು ಆ ಪರಮಾತ್ಮನನ್ನೇ ಶರಣುಹೊಕ್ಕಿಲ್ಲ; ಅನಾತ್ಮಗಳಲ್ಲಿಯೇ ನಮ್ಮ ಮನಸ್ಸು ನೆಟ್ಟಿರುತ್ತದೆ. ಆದರೆ ಭಗವಂತನು ಎಲ್ಲೆಲ್ಲಿಯೂ ಇರುತ್ತಾನೆ;ಮಾಯೆಯು ಎಲ್ಲೆಲ್ಲಿರುವದೋ ಅಲ್ಲೆಲ್ಲ ಅದರ ಹಿಂದೆಯೇ ಅದಕ್ಕೆ ಆಧಾರವಾಗಿ ಆತನು ಇದ್ದುಕೊಂಡಿರುತ್ತಾನೆ. ನಿಜವಾಗಿ ನೋಡಿದರೆ ತ್ರಿಗುಣಾತ್ಮಕ ವಾದ ಮಾಯೆಯು ಸ್ವತಂತ್ರವಾಗಿ ಇಲ್ಲವೇ ಇಲ್ಲ; ಆ ಪರಮಾತ್ಮನ ವಶದಲ್ಲಿರುವದು ಈ ಮಾಯೆ. ಹಗ್ಗವನ್ನಾಶ್ರಯಿಸಿಯೇ ಹುಸಿಹಾವು ತೋರಿಕೊಳ್ಳುತ್ತಿರುವಂತೆ, ಸರ್ವಗತನಾದ ಭಗವಂತನನ್ನು ಆಶ್ರಯಿಸಿಯೇ ಮಾಯೆ ತೋರಿಕೊಳ್ಳುತ್ತಿರುತ್ತದೆ. ಭಗವಂತನು ಉಪದೇಶಿಸಿರುವದೇನು? ಯಾರು ನನ್ನನ್ನೇ ಶರಣು ಹೊಗುತ್ತಾರೋ, ನಾನೇ ಬೇಕೆಂದು ಬಿಡದೆ ಹಂಬಲಿಸುತ್ತಾರೋ ಅವರು ಈ ಮಾಯೆಯನ್ನು ದಾಟುವರು! ಸರಿ, ಇನ್ನುಮೇಲೆ, ಆ ಭಗವಂತನನ್ನೇ ಶರಣು ಹೊಂದೋಣ! ' ಇದೇ ನಿಜವಾದ ಪಾರಾಯಣದ ಫಲ.

ಪಾರಾಯಣಮಾಡಿದ ಗ್ರಂಥದ ಪರಿಮಾಣವು ಅಷ್ಟು ವಿಶೇಷವಲ್ಲ, ಆದರೆ ಓದಿದ ಸ್ವಲ್ಪ ಭಾಗವು ನಮ್ಮ ಹೃದಯದೊಳಕ್ಕೆ ನೇರಾಗಿ ಹೊಗುವಂತೆ ಆಗಬೇಕು. ಒಮ್ಮೆ ನಾನು ಶ್ರೀರಾಮಾನುಜರ ಭಾಷ್ಯವನ್ನು ಓದುತ್ತಿದ್ದಾಗ ಜೀವಣದೀಕ್ಷಿತರೆಂಬ ಮಹಾಶಯರೊಬ್ಬರು ನನ್ನ ಬಳಿಗೆ ಬಂದರು. 'ಏನು ಓದುತ್ತಿದ್ದೀರಿ? ನನಗೆ ಸ್ವಲ್ಪ ಹೇಳಿರಿ!' ಎಂದು ಅವರು ಕೇಳಿಕೊಂಡರು. ನಾನು ಆಗ ಭಾಷ್ಯದಲ್ಲಿ ಕಂಡ ವಿಷ್ಣು ಪುರಾಣದ ಒಂದು ಶ್ಲೋಕವನ್ನು ಓದಿದೆನು. ಅದರ ಅರ್ಥವು ಹೀಗಿತ್ತು: 'ಒಂದು ಮುಹೂರ್ತ, ಅಷ್ಟೇಕೆ? ಒಂದು ಕ್ಷಣವಾದರೂ ವಾಸುದೇವನನ್ನು ಚಿಂತಿಸದಿದ್ದರೆ, ಅದೇ ಮಹಾಛಿದ್ರವು, ಅದೇ ಮಹಾ ಹಾನಿಯು, ಅದೇ ನಮ್ಮ ಮನಸ್ಸಿಗೆ ಒದಗಿದ ವಿಕ್ರಿಯೆಯು.' ಈ ಶ್ಲೋಕವನ್ನು ಕೇಳುತ್ತಲೂ ಆ ದೀಕ್ಷಿತರು 'ಆಹ! ಎಂಥ ಉತ್ತಮ ಉಪದೇಶವಿದು! ನಾವು ಯಾವಾಗಲೂ ಭಗವಚ್ಚಿಂತನೆಯನ್ನು ಬಿಟ್ಟೇಬಿಟ್ಟಿದೇವಲ್ಲ,

ನಮಗೆ ಆಗುವ ಹಾನಿಯು ಇನ್ನೆಷ್ಟಿರಬೇಕು!' ಎಂದು ಆ ಭಾವವನ್ನೇ ತಮ್ಮ ಮನಸ್ಸಿನಲ್ಲಿ ಮೆಲುಕುಹಾಕುತ್ತಾ ಹೊರಗನ್ನೆಲ್ಲ ಮರೆತು ಸುಮ್ಮನೆ ಕುಳಿತುಬಿಟ್ಟರು!

ಸಂಗೀತಗಾರನು 'ಸರಿಗಮ' ಮುಂತಾದ ಸ್ವರಗಳ ನೆಪದಿಂದ ರಾಗದ ಆನಂದವನ್ನು ಹೊಂದುವಂತೆ ಗ್ರಂಥಪಠನದ ನೆಪದಿಂದ ಭಗವತ್ಸಾಂನಿಧ್ಯದ ಆನಂದ ವನ್ನು ಹೊಂದುವದೇ ನಮ್ಮ ಗುರಿಯಾಗಿರಬೇಕು. ಅದೇ ನಿಜವಾದ ಪಾರಾಯಣ. ಅಂಥ ಪಾರಾಯಣಮಾಡುವವರಿಗೆ ಭಗವಂತನು ಎಂದಿಗೂ ದೂರವಿರುವದಿಲ್ಲ, ಅವರು ಅವನ ಸಾಲೋಕ್ಯಸಾಮೀಪ್ಯಗಳನ್ನು ಪಡೆದು ಸಂತತವಾಗಿ ಸುಖಿಸುತ್ತಿರುವರು.

*****

# 60. ಮನೆಯಲ್ಲಿ ದೇವತಾರ್ಚನೆ [1]

ಉಪಾಸನೆಯಲ್ಲಿ ಶರೀರ, ಇಂದ್ರಿಯಗಳು, ಮನಸ್ಸು- ಎಲ್ಲಕ್ಕೂ ಕೆಲಸ ವಿರಬೇಕು; ಇವೆಲ್ಲವೂ ಪರಮೇಶ್ವರನಿಗೆ ಅರ್ಪಿತವಾಗಬೇಕು. ದೇವತಾರ್ಚನೆಯಲ್ಲಿ ಇವು ಮೂರೂ ಇರುತ್ತವೆ.

'ಮನೆಯಲ್ಲಿ ದೇವತಾರ್ಚನೆ'- ಎಂಬಲ್ಲಿ ವಿಶೇಷವಾದ ಫಲವೇನು ? ದೇವಸ್ಥಾನಕ್ಕೆ ಹೋಗಿಬಂದರೆ ಸಾಲದೆ?- ಎಂದು ಯಾರಾದರೂ ಕೇಳಬಹುದು. ಈಗ್ಗೆ ಮನೆಯಲ್ಲಿ ದೇವರಿಗೆ ಸ್ಥಲವು ಸಿಕ್ಕುವದು ಕಷ್ಟವಾಗಿದೆ; ಆದರೆ ಮನೆಯ ದೇವತಾರ್ಚನೆಯ ಆವಶ್ಯಕತೆಯೂ ಈಗಲೇ ಹೆಚ್ಚಿದೆ. ಏಕೆಂದರೆ ದೇವಾಲಯವು ಕೆರೆಕಟ್ಟೆ, ತೋಪು- ಮುಂತಾದವುಗಳಂತೆ ಸರ್ವಜನಸಾಧಾರಣವಾದ ಸ್ಥಲವಿಶೇಷ ವೆಂದೂ ಅದರಲ್ಲಿ ಎಲ್ಲರಿಗೂ ಹಕ್ಕಿದೆಯೆಂದೂ ಸರಕಾರಕ್ಕೂ ಬಹುಜನರಿಗೂ ಅಭಿಪ್ರಾಯವುಂಟಾಗಿರುತ್ತದೆ. ದೇವಾಲಯಗಳಲ್ಲಿ ಹರಿಜನರಿಗೆ ಪ್ರವೇಶವನ್ನು ಕೊಡ ಬೇಕೆಂಬ ಚಳುವಳಿಯು ಹುಟ್ಟಿದ್ದೂ ಆ ವಿಷಯದಲ್ಲಿ ಕಾನೂನು ಏರ್ಪಟ್ಟಿರುವದೂ ನಮಗೆಲ್ಲ ತಿಳಿದಿರುವ ವಿಷಯ.

---

**1.** ಶ್ರೀ ಶ್ರೀಗಳವರು ಕಳೆದ ಶರನ್ನವರಾತ್ರಿಯಲ್ಲಿ 20-10-1955ರಲ್ಲಿ ಅನುಗ್ರಹಿಸಿದ ಉಪದೇಶದ ಸಾರ.

ಆದರೆ ಈ ನವೀನಮತವು ಸರಿಯೆ? ಪ್ರತಿಯೊಂದು ದೇವಸ್ಥಾನವೂ ಸಾರ್ವಜನಿಕವಾದ ಸ್ಥಲವಾಗಿರಬೇಕೆಂಬುದನ್ನು ಒಪ್ಪುವದಕ್ಕಾಗುತ್ತದೆಯೆ? ಇದನ್ನು ನಾವು ವಿಮರ್ಶಿಸಿ ನೋಡಬೇಕು. ದೇವಸ್ಥಾನಗಳು ಹೇಗೆ ಏರ್ಪಟ್ಟವು? - ಎಂಬುದನ್ನು ಇಲ್ಲಿ ಮನದಂದುಕೊಳ್ಳುವದು ಅವಶ್ಯ. ಒಂದೇ ಅಭಿಪ್ರಾಯವುಳ್ಳ ಜನರು ಒಂದು ಕಡೆ ಸೇರಿ ಉಪಾಸನೆಮಾಡುವದಕ್ಕೂ ಪರಸ್ಪರವಾಗಿ ಭಾವನಾವಿನಿಮಯ ವನ್ನು ಉತ್ತೇಜನವಿನಿಮಯವನ್ನು ಹೊಂದುವದಕ್ಕೂ ಗೊತ್ತಾಗಿದ್ದ ಸ್ಥಾನವದು. ಹಿಂದಕ್ಕೆ ಒಂದೇ ತರಹದ ಮನಸ್ಸು, ಆಚಾರ, ವಿಚಾರ -ಇವುಗಳುಳ್ಳವರಿಗೆ ಮನಸ್ಸಿನ ಔನ್ನತ್ಯವನ್ನು ಸಂಪಾದಿಸಿಕೊಳ್ಳುವದಕ್ಕೆ ಅನುಕೂಲ್ಯವನ್ನು ಕಲ್ಪಿಸಿಕೊಳ್ಳಬೇಕೆಂಬ ಸಂಕೇತ ದಿಂದ ಏರ್ಪಟ್ಟ ಸ್ಥಲವದು. ಮಾಂಸಾಹಾರಿಗಳೂ ಶಾಕಾಹಾರಿಗಳೂ ಒಂದೇ ದೇವಾಲಯ ದಲ್ಲಿ ಅರ್ಚನ, ಅಭಿಷೇಕ, ನೈವೇದ್ಯಾದಿಗಳನ್ನು ಮಾಡುವದು ಹೊಂದಲಾರದು; ಬೇರೆಬೇರೆಯ ಆಚಾರದವರು ಎಂದಿಗೂ ಒಂದೇ ದೇವಾಲಯವನ್ನು ತಮ್ಮಿಬ್ಬರಿಗೂ ಸಮಾನವಾದ ಮಂದಿರವನ್ನಾಗಿ ಬಳಸಲಾರರು. ಒಂದೇ ಆಚಾರದವರಾದರೂ ತಮ್ಮ ಉಪಾಸನಾಪ್ರಕಾರಗಳು ಬೇರೆ ಬೇರೆಯಾದರೆ - ಉದಾಹರಣೆಗೆ ಶೈವವೈಷ್ಣವಪೂಜಕ ರಾದರೆ - ಒಂದೇ ದೇವಾಲಯವು ಅವರಿಗೆ ಒಗ್ಗಲಾರದು. ಉಪಾಸ್ಯದೇವತೆಯ ಆಕಾರವು ಒಂದೇ ಆಗಿದ್ದರೂ ಭಜನ, ಧ್ಯಾನ-ಇವುಗಳನ್ನು ಮಾಡುವ ಎರಡು ಗುಂಪಿನವರು ಒಂದೇ ಕಾಲದಲ್ಲಿ ಆ ಅನುಷ್ಠಾನಗಳನ್ನು ಮಾಡುವದು ಇಬ್ಬರಿಗೂ ಹಿತಕರವಾಗಲಾರದು. ಹೀಗೆ ಹಳೆಯ ಸಂಪ್ರದಾಯಗಳನ್ನು ಒಪ್ಪಿದವರಿಗೇ ಒಂದೇ ದೇವಾಲಯವು ಎಲ್ಲರಿಗೂ ಹೊಂದುವಂತಿಲ್ಲವೆನ್ನುವಾಗ ಈಗ್ಗೆ ಎಲ್ಲಾ ಬಗೆಯ ಆಚಾರವಿಚಾರಗಳ ಎಲ್ಲಾ ಬಗೆಯ ಅನುಷ್ಠಾನಗಳನ್ನು ಮಾಡುವ ಇಚ್ಛೆಗಳ ಎಲ್ಲಾ ಜನರಿಗೂ ಒಂದೇ ಸ್ಥಲದಲ್ಲಿ ಸಮಾನವಾದ ಹಕ್ಕಿರಬೇಕು ಎಂದು ವಾದಿಸುವವರಲ್ಲಿ ಎಷ್ಟು ಸುಸಂಬದ್ಧತೆಯಿದೆ ಎಂಬುದನ್ನು ಪುನರ್ವಿಮರ್ಶೆಮಾಡುವದು ಅವಶ್ಯವೆಂದು ಕಾಣುತ್ತದೆ.

ಪರಮಾತ್ಮನನ್ನು ಮತ್ತೊಬ್ಬರ ಸಾಹ್ಯವಿಲ್ಲದೆ ಸ್ವತಂತ್ರವಾಗಿ ಪೂಜಿಸುವೆವೆಂಬ ಮನಸ್ಸುಳ್ಳವರಿಗೆ ಯಾವ ದೇವಾಲಯವೂ ಬೇಕಿರುವದಿಲ್ಲ. **'ಅಗ್ನಿರ್ದೇವೋ ದ್ವಿಜಾತೀನಾಂ ಮುನೀನಾಂ ಹೃದಿ ದೈವತಮ್ । ಪ್ರತಿಮಾಸ್ವಲ್ಪಬುದ್ಧೀನಾಂ ಸರ್ವತ್ರ**

**ಸಮದರ್ಶಿನಾಮ್॥**'' ಎಂಬ ಶ್ಲೋಕವು ಈ ಅಭಿಪ್ರಾಯವನ್ನು ತಿಳಿಸುತ್ತದೆ. ದ್ವಿಜರಿಗೆ ಅಗ್ನಿಯೇ ದೇವರು; ಅಗ್ನಿಯಲ್ಲಿ ದೇವರನ್ನು ಭಾವಿಸಿಕೊಂಡು ಅಲ್ಲಿ ಹೋಮಾದಿಗಳಿಂದ ಅವರು ಅರ್ಚಿಸಬಹುದು. ಮುನಿಗಳಿಗೆ ಹೃದಯದಲ್ಲಿಯೇ ದೇವರಿರುತ್ತಾನೆ; ಅವರು ಆ ಹೃದಯದಲ್ಲಿಯೇ ಭಾವನೆಯಿಂದ ಪರಮೇಶ್ವರನನ್ನು ಆವಾಹನೆಮಾಡಿಕೊಂಡು ಅರ್ಚಿಸಬಹುದು. ಅಲ್ಪಬುದ್ಧಿಯವರಿಗೆ, ಎಂದರೆ ಪರಿಚ್ಛಿನ್ನಬುದ್ಧಿಯ ಜನರಿಗೆ ಪ್ರತಿಮೆಗಳಲ್ಲಿ ದೇವರು ಇರುತ್ತಾನೆ; ಅವರು ಮಾತ್ರವೇ ಅಲ್ಲಿ ಹೂಹಣ್ಣು ಕಾಯಿ ಮುಂತಾದವುಗಳನ್ನು ಅರ್ಪಿಸಿ ಪೂಜಿಸಬೇಕಾಗಿರುವದು. ಸಮದರ್ಶಿಗಳಾದ ಮಹಾತ್ಮರಿಗೆ ಸರ್ವತ್ರವೂ ದೇವರು ಇರುತ್ತಾನೆ; ಅಂಥವರು ಸರ್ವಭೂತಗಳಿಗೂ ಸಂತುಷ್ಟಿಯನ್ನುಂಟು ಮಾಡುವ ಅರ್ಚನೆಯಲ್ಲಿಯೇ ನಿರತರಾಗಿರುತ್ತಾರೆ ಎಂಬುದು ಶ್ಲೋಕದ ಅಭಿಪ್ರಾಯ. ಇದನ್ನು ನೋಡಿದರೆ ಅವರವರ ಚಿತ್ತಭೂಮಿಕೆಗೆ ತಕ್ಕಂತೆ ಅವರವರು ಪರಮೇಶ್ವರನ ಅರ್ಚನೆಯನ್ನು ಮಾಡಬೇಕಾಗಿರುತ್ತದೆ. ಆದ್ದರಿಂದ ದೇವಾಲಯವನ್ನು ಸಾಮಾಜಿಕ ವಿಲಾಸಮಂದಿರ *(Social Club)* ಎಂದು ಭಾವಿಸುವದು ಸರಿಯಾಗಲಾರದು; ಅಂಥ ದೇವಾಲಯದಲ್ಲಿ ದೇವರ ಪ್ರಾಕಟ್ಯವೂ ಇರಲಾರದು. ಏಕೆಂದರೆ ಅರ್ಚಕನ ತಪಸ್ಸಿನ ಬಲದಿಂದ ಆಯಾ ವಿಗ್ರಹದಲ್ಲಿ ಪರಮೇಶ್ವರನ ಸಾಂನಿಧ್ಯವು ಪ್ರಕಟವಾಗಿರಬೇಕಾಗುತ್ತದೆ. ಪೈಪೋಟಿ, ಜಗಳ-ಮುಂತಾದವುಗಳಿರುವಲ್ಲಿ ಈಶ್ವರ ಪ್ರಾಕಟ್ಯವು ಎಲ್ಲಿಂದ ಬರಬೇಕು? ಈಶ್ವರನು ಸರ್ವವ್ಯಾಪಕನಾದರೂ ಸ್ಥಾವರಗಳಲ್ಲಿ ಕಡಿಮೆಯಾಗಿಯೂ ಪ್ರಾಣಿಗಳಲ್ಲಿ ಸ್ವಲ್ಪ ಹೆಚ್ಚಾಗಿಯೂ ಮನುಷ್ಯರಿಂದ ಹಿಡಿದು ದೇವತೆಗಳೇ ಮುಂತಾದ ಸಾತ್ತ್ವಿಕರಲ್ಲಿ ಇನ್ನಷ್ಟು ಹೆಚ್ಚುಹೆಚ್ಚಾಗಿಯೂ ಈಶ್ವರನ ಪ್ರಾಕಟ್ಯವಿರುತ್ತದೆ. ಆದ್ದರಿಂದ ಈಶ್ವರನ ಪ್ರಾಕಟ್ಯವನ್ನು ಕಂಡು ಆರಾಧಿಸುವದೇ ಅರ್ಚನೆಯ ಗುರಿಯಾಗಿರಬೇಕು. ಈ ಎಲ್ಲಾ ಕಾರಣಗಳಿಂದ ಮನಸ್ಸಿಗೆ ಸಮಾಧಾನವೂ ಉಪಾಸನೆಯ ಸ್ವಾತಂತ್ರ್ಯವೂ ಪೂಜಾ ಕಾಲದಲ್ಲಿ ನೆರವಾದವರಲ್ಲಿ ಏಕರೂಪವಾದ ಭಾವನೆಯೂ ದೊರಕುವದಕ್ಕೆ ಸದ್ಯಕ್ಕೆ ಮನೆಯಲ್ಲಿ ದೇವತಾರ್ಚನೆಮಾಡುವದೇ ಉತ್ತಮವೆಂದು ಹೇಳಬೇಕಾಗಿದೆ.

ಮನೆಯಲ್ಲಿಯೂ ಎಲ್ಲಾ ಕಡೆಗಳಲ್ಲಿಯೂ – ಉದಾಹರಣೆಗೆ ಉಗ್ರಾಣ, ಉದ್ಯೋಗದ ಕೋಣೆ, ಅಡಿಗೆಯ ಮನೆ ಇಂಥ ಭಾಗಗಳಲ್ಲಿ– ಈಶ್ವರಭಾವನೆಯು

ಹೊರತೋರಿಕೊಳ್ಳುವದಕ್ಕೆ ಸೌಕರ್ಯವಿರುವದಿಲ್ಲ. ಪರಮೇಶ್ವರನು ಸರ್ವ ವ್ಯಾಪಕನೆಂಬುದು ನಿಜ; ಆದರೂ ಮನಸ್ಸಿಗೆ ಅವನ ನೆನಪನ್ನು ಕೊಡುವ ಸಂನಿವೇಶವು ಅತ್ಯವಶ್ಯ. ಆದ್ದರಿಂದ 'ದೇವರ ಕೋಣೆ'ಯೊಂದು ಬೇರೆಯಾಗಿರಬೇಕಾದದ್ದು ಅವಶ್ಯ. ಅದು ಪವಿತ್ರವಾಗಿರಬೇಕು. ದೇವರ ಚಿತ್ರ, ಪಾರಾಯಣ ಗ್ರಂಥಗಳು, ತನಗೆ ಪೂಜ್ಯರಾದ ಮಹಾತ್ಮರ ಚಿತ್ರಗಳು, ನಂದಾದೀಪ, ಪೂಜೆಗೆ ಬೇಕಾದ ಸಾಮಗ್ರಿಗಳು– ಇವುಗಳಿರುವದು ಅವಶ್ಯವಾಗಿದೆ. ಕುಟುಂಬದವರು ಬಾಹ್ಯಭೋಗಸಾಮಗ್ರಿಗಳನ್ನು ಮಾತ್ರವಲ್ಲದೆ ದೈವಿಕಭಾವನೆಗಳನ್ನೂ ಹಂಚಿಕೊಂಡು ಅನುಭವಿಸಿ ಸಂತೋಷಿಸಬೇಕು. ಮನೆಯ ಯಜಮಾನ, ಹೆಣ್ಣುಮಕ್ಕಳು, ಹುಡುಗರು- ಎಲ್ಲರೂ ತಮ್ಮ ತಮ್ಮ ಯೋಗ್ಯತೆಗೆ ತಕ್ಕಂತೆ ಮಂತ್ರ, ಸ್ತೋತ್ರ, ಹಾಡು–ಮುಂತಾದವುಗಳನ್ನು ಹೇಳಿಕೊಂಡು ಭಗವಂತನನ್ನು ಆರಾಧಿಸಬೇಕು; ಭಗವತ್ಸಾಂನಿಧ್ಯದ ಸುಖವನ್ನು ಅನುಭವಿಸಬೇಕು.

ಈಗಿನ ಹೊಸ ಸಾಮಾಜಿಕ ಪದ್ಧತಿಯಲ್ಲಿ ಒಂದೇ ಮನೆಯವರು ಕೂಡ ಎಲ್ಲರೂ ಒಟ್ಟಿಗೆ ಸೇರುವದಕ್ಕೆ ಅವಕಾಶವು ಕಡಿಮೆಯಾಗಿದೆ; ದೇಹಯಾತ್ರೆಯ ನಿಮಿತ್ತವಾಗಿ ಒಬ್ಬೊಬ್ಬರು ಒಂದೊಂದು ವೇಳೆಯಲ್ಲಿ ಹೊರಗೆ ಹೋಗಿ ದುಡಿಯ ಬೇಕಾಗಿ ಬಂದಿದೆ. ಅಧ್ಯಾತ್ಮದೃಷ್ಟಿಯಿಂದ ಜನರಿಗೆ ಇದರಿಂದ ಬಹು ಹಾನಿಯುಂಟಾಗ ಹತ್ತಿದೆ. ಹೇಗೇ ಆಗಲಿ ಸಾಧ್ಯವಾದಮಟ್ಟಿಗೂ ಕುಟುಂಬದವರೆಲ್ಲರೂ ಒಟ್ಟಿಗೆ ಸೇರಿ ಪೂಜೆ, ಭಜನೆ- ಮುಂತಾದವುಗಳಿಂದ ಆನಂದದಲ್ಲಿ ಪಾಲನ್ನು ತೆಗೆದುಕೊಳ್ಳುವದಕ್ಕೆ ಅವಕಾಶವನ್ನು ಕಲ್ಪಿಸಿಕೊಳ್ಳಬೇಕು. ದೇವರಕೋಣೆಯ ದರ್ಶನವಾದಕೂಡಲೇ ದೇವರ ನೆನಪು ಬರುವಂತೆ ಮಾಡಿಕೊಳ್ಳಬೇಕು.

ಯಾರಿಗೆ ದೇವರಕೋಣೆಯೊಂದನ್ನು ಕಲ್ಪಿಸಿಕೊಳ್ಳುವಷ್ಟು ಸೌಕರ್ಯವಿಲ್ಲವೋ ಅಂಥವರು ಮನೆಯಲ್ಲಿ ಒಂದು ಕಡೆ ದೇವರ ಚಿತ್ರಪಟವನ್ನಿಟ್ಟುಕೊಂಡು ಹೂಗಳು, ಧೂಪದೀಪಾದಿಗಳಿಂದ ಆರಾಧಿಸುವ ಪದ್ಧತಿಯನ್ನು ಇಟ್ಟುಕೊಳ್ಳಬೇಕು. ಕೆಲವರ ಮನೆಗಳಲ್ಲಿ ಅನೇಕ ಚಿತ್ರಗಳು ಇರುತ್ತವೆ; ಆದರೆ ಇವು ಅಲಂಕಾರಕ್ಕೆ ಮಾತ್ರ ಇವೆ; ಅವುಗಳಲ್ಲಿ ದೇವರ ಭಾವನೆಯನ್ನು ತಂದುಕೊಳ್ಳುವ ಏರ್ಪಾಡನ್ನು ಮಾಡಬೇಕಾದರೆ ಇಷ್ಟದೇವತೆಯ ಲೀಲಾದಿಗಳನ್ನು ತಿಳಿಸುವ ಪುರಾಣಶ್ರವಣಾದಿಗಳಿಂದ ಭಾವನೆಯನ್ನು ಉದ್ಬೋಧಗೊಳಿಸಿಕೊಂಡು ಅದಕ್ಕನುವಾದ ಚಿತ್ರವೊಂದನ್ನು ಇಟ್ಟು ಪೂಜಿಸುವ ಪದ್ಧತಿಯನ್ನು ಆಚರಣೆಗೆ ತಂದುಕೊಳ್ಳಬೇಕು. ದಿನದಿನವೂ ಪೂಜೆಮಾಡುವದಕ್ಕೆ ಸರ್ವಥಾ

ಅವಕಾಶವಿಲ್ಲದವರು ಹಬ್ಬಹುಣ್ಣಿಮೆಯಲ್ಲಿಯಾದರೂ ಪೂಜೆಮಾಡಿಸುವ ಪದ್ಧತಿಯನ್ನು ಬಳಕೆಗೆ ತಂದುಕೊಳ್ಳಬೇಕು; ಆದರೆ ಉಪಾಸನೆಯು ಮಾತ್ರ ನಿತ್ಯ ಕ್ರಮದಲ್ಲಿ ಸೇರಲೇ ಬೇಕು. ಅರ್ಚನೆಯು ದಿನದಿನವೂ ಆಗದಿದ್ದರೂ ಭಜನೆಯನ್ನಾದರೂ ಮಾಡಬೇಕು.

ಅರ್ಚನ, ಭಜನೆ- ಇವು ಬೇರೆಬೇರೆಯ ಪ್ರಕಾರದ ಉಪಾಸನೆಗಳು. ಪರಮಾತ್ಮನು ನಮಗೆ ಅನುಗ್ರಹಿಸಿರುವ ವಸ್ತುಗಳನ್ನು ಆತನಿಗೆ ಅರ್ಪಿಸುವದೇ ಆತನ ಆರ್ಚನೆ. ನಮಗೆಲ್ಲ ಸ್ವಾಭಾವಿಕವಾಗಿಯೇ ನಾನು ನನ್ನದು-ಎಂಬ ಭಾವನೆ ಇರುತ್ತದೆ. ಪರಮಾತ್ಮನ ಅರ್ಚನೆಯನ್ನು ಮಾಡಿ ಆತನ ಪ್ರಸಾದವಾಗಿ ಮಾಡಿಕೊಂಡು ಈ ಮಾಯೆಯ ಭಾವನೆಯನ್ನು ಜಯಿಸಬೇಕು. ಅರ್ಚನೆಯು ಶರೀರ ಪ್ರಧಾನ ವಾದದ್ದಾದರೂ ಅದರಲ್ಲಿ ಮನಸ್ಸಿನ ಭಾವವು ಉತ್ತಮತರದ್ದಾಗಿರಬೇಕು. ಅದರಿಂದ ಎಲ್ಲವೂ ನಿಜವಾಗಿ ಪರಮಾತ್ಮನೇ ಆಗಿ ಮಾಯೆಯನ್ನು ಗೆದ್ದಂತೆ ಆಗುವದು. ಯುಕ್ತಿಹೀನವಾದ ಪ್ರಕಾಶವೇ ಮಾಯೆಯು. ಇದು ಬೇಕು, ಇದು ಬೇಡ - ಎಂಬ ಬುದ್ಧಿಯು ಮಾಯೋಪಾಸನೆಯ ಫಲ; ಪರಮೇಶ್ವರನೇ ನನಗೆ ಬೇಕು - ಎಂಬ ಬುದ್ಧಿಯು ವಿಭೂತ್ಯುಪಾಸನೆಯ ಫಲ. ನಮ್ಮದೆಂದು ತೋರುವ ಪದಾರ್ಥ ಗಳೆಲ್ಲವೂ ಪರಮಾತ್ಮನಿಂದ ಬಂದವುಗಳು ಎಂಬ ಭಾವನೆಯು ಬಲಿತು ಕೊಳ್ಳುವದು ಅಗತ್ಯವಾಗಿದೆ. ಇದು ನಮ್ಮ ಮಾವನವರು ಕೊಟ್ಟದ್ದು ಎಂದು ಅಳಿಯನೂ ಇದು ನಮ್ಮ ತವರುಮನೆಯವರು ಕೊಟ್ಟದ್ದು ಎಂದು ಮಗಳೂ ಆಯಾ ವಸ್ತುಗಳನ್ನು ಹೆಚ್ಚು ಪ್ರೀತಿಸುವದು ನಮಗೆಲ್ಲ ತಿಳಿದೇ ಇದೆ. ಇದು ಪಿತ್ರಾರ್ಜಿತ, ಇದು ಸ್ವಯಾರ್ಜಿತ- ಎಂದು ಆಸ್ತಿಗಳಲ್ಲಿ ನಮ್ಮಲ್ಲನೇಕರಿಗೆ ಬುದ್ಧಿಭೇದವಿರುತ್ತದೆ. ಹೀಗೆ ಬುದ್ಧಿಭೇದದಿಂದ ವಸ್ತುಗಳ ಬೆಲೆಯೂ ಭಿನ್ನಭಿನ್ನವಾಗುತ್ತದೆಯಲ್ಲವೆ? ಹೀಗೆಯೇ ಇವೆಲ್ಲವೂ ಪರಮೇಶ್ವರನಿಂದ ಬಂದ ಪ್ರಸಾದವು- ಎಂಬ ಬುದ್ಧಿಯಿಂದ ವಸ್ತುಗಳ ಬೆಲೆಯು ಹೆಚ್ಚುವದು, ಈ ಭಾವನೆಯು ಬೆಳೆಯುವದಕ್ಕೆ ದೇವತಾರ್ಚನೆಯು ಒಂದು ದೊಡ್ಡ ಸಾಧನವಾಗಿರುತ್ತದೆ. ಒಟ್ಟಿನಲ್ಲಿ ಮನೆಯು ನಮ್ಮದೆಂಬ ಭಾವನೆಯು ಹೋಗಿ ಅದು ಈಶ್ವರನಿರುವ ಸ್ಥಲ ಎಂಬ ಭಾವನೆಯು ಬೇರೂರಿಕೊಳ್ಳಬೇಕು. ಕುಟುಂಬದವರೆಲ್ಲರೂ ಇದು ಪರಮೇಶ್ವರನನ್ನು ಆರಾಧನೆ ಮಾಡುವದಕ್ಕೆ ಪರಸ್ಪರ ಸಹಕಾರದಿಂದ ನಾವುಗಳು ಸೇರಿರುವ ಒಂದು ಪವಿತ್ರ ಸ್ಥಾನ ಎಂದು ಭಾವಿಸುವಂತೆ ಬುದ್ಧಿಯನ್ನು ಮಾರ್ಪಡಿಸಿ ಕೊಳ್ಳುವದೇ "ಮನೆಯಲ್ಲಿ ದೇವತಾರ್ಚನೆ" ಎಂಬ ಸಾಧನದ ಗುಟ್ಟು.

ನಮಗೆಲ್ಲರಿಗೂ ಮನೆಯಲ್ಲಿ ದೇವತಾರ್ಚನೆಯನ್ನು ಮಾಡುವದಕ್ಕೆ ತಕ್ಕ ಅನುಕೂಲ್ಯವಿಲ್ಲವಲ್ಲ ! ಎಂದು ಚಿಂತಿಸಕೆಲಸವಿಲ್ಲ, ನಾವು ಮನೆಯಲ್ಲಿ ಮಾಡುವ ವ್ಯವಹಾರಗಳನ್ನೆಲ್ಲ ಪರಮೇಶ್ವರನ ಪೂಜೆಯಾಗಿ ಮಾರ್ಪಡಿಸಿಕೊಳ್ಳುವದಕ್ಕೆ ಬರುತ್ತದೆ. ವೃದ್ಧರಾದ ಮಾತಾಪಿತೃಗಳ ಸೇವೆ, ಅತಿಥಿಗಳ ಸೇವೆ- ಇದೇ ಮುಂತಾದವುಗಳನ್ನೆಲ್ಲ ಪರಮೇಶ್ವರನ ಪೂಜೆ ಎಂಬ ಭಾವನೆಯಿಂದಲೇ ಮಾಡುತ್ತಿದ್ದರೆ ಆ ಮಾತಾಪಿತೃಗಳ ಅಥವಾ ಅತಿಥ್ಯಾದಿಗಳ ಪ್ರಸನ್ನತೆಯಿಂದ ನಮಗೆ ಮನಸ್ಸಿನಲ್ಲಿ ಹೆಚ್ಚಿನ ಉಲ್ಲಾಸ ವುಂಟಾಗುತ್ತದೆ. ಅರ್ಚನೆಯ ಫಲವೇ ಸಿಗುತ್ತದೆ. ಏಕಾಂತವಾಸವು ಸಿಕ್ಕದೆ ಇದ್ದರೆ ಮೈಮೇಲೆ ಒಂದು ಮುಸುಕು ಹಾಕಿಕೊಂಡು ಏಕಾಂತಸ್ಥಲವನ್ನು ಕಲ್ಪಿಸಿಕೊಳ್ಳಬಹುದು. ಹೊರಗಿನ ಪೂಜಾ ಸಾಮಗ್ರಿಗಳು ದೊರೆಯದಿದ್ದರೆ ಮಾನಸಭಾವನೆಯಿಂದಲೇ ಅವುಗಳನ್ನು ಪರಿಪೂರ್ತಿಮಾಡಿಕೊಳ್ಳಬಹುದು. ಇದ್ದಷ್ಟು ಸೌಕರ್ಯಗಳನ್ನು ಉಪಯೋಗಿಸಿ ಕೊಂಡರೆ ಮಿಕ್ಕದ್ದನ್ನು ಪರಮೇಶ್ವರನು ಒದಗಿಸಿಕೊಡುತ್ತಾನೆ. ನೀರಿನ ಮೇಲೆ ಹಾಕಿದ ಒಂದು ತೊಟ್ಟು ಎಣ್ಣೆಯು ಹರಡಿಕೊಳ್ಳುತ್ತಾ ಹೋಗುವಂತೆ ಆತನ ಅನುಗ್ರಹದಿಂದ ಅರ್ಚನೆಯು ಸಾಂಗವಾಗುತ್ತದೆ.

ಮುಖ್ಯವಾಗಿ ಪರಮಾತ್ಮನ ಅರ್ಚನೆಗೆ ನಮಗೆ ಮನಸ್ಸಿಲ್ಲದಿರುವದೊಂದೇ ದೊಡ್ಡ ಕೊರತೆ; ಮತ್ತೆ ಯಾವ ಅಡ್ಡಿಗಳೂ ಇರುವದಿಲ್ಲ, ಪರಮಾತ್ಮನ ಹೊರಗಿನ ಅರ್ಚನೆಯನ್ನು ಮೀರಿ ಮಾನಸಪೂಜೆಯನ್ನು ಕೈಕೊಳ್ಳುವವರಿಗಂತೂ ಯಾವ ಅಡ್ಡಿಯೂ ಎಂದಿಗೂ ಇರುವದೇ ಇಲ್ಲ, ಹೀಗೆ ಬಾಹ್ಯಮಾನಸಪೂಜೆಗಳನ್ನು ಮಾಡುವ ವರಿಗೆ ಕೋಪತಾಪಾದಿಗಳಿಂದ ಬಿಡುಗಡೆಯಾಗುವದು, ಮನಸ್ಸಿಗೆ ಶಾಂತಿಯು ದೊರಕುವದು, ನೆಮ್ಮದಿಯಾಗುವದು. ಪರಮೇಶ್ವರನ ಪೂಜಕರು ಮಾಡುವ ದಾನವು ಅನಂತಪುಣ್ಯಫಲದವಾಗುವದು. ಅಹಮ್(ನಾನು)ಎಂಬುದಕ್ಕಿಂತ ಹೆಚ್ಚಿನ ಪಾಪವಿಲ್ಲ, ನೀನೇ ಎಂದು ಪರಮೇಶ್ವರನನ್ನು ಪೂಜಿಸುವದಕ್ಕಿಂತ ಹೆಚ್ಚಿನ ಪುಣ್ಯವಿಲ್ಲ, ಪರಮಾತ್ಮನ ಪೂಜೆ, ವಂದನೆ, ಕೀರ್ತನ, ಸ್ಮರಣ - ಮುಂತಾದವುಗಳಿಂದ ಮನಸ್ಸಿಗೆ ಪಾವಿತ್ರ್ಯವನ್ನು ಸಂಪಾದಿಸಿಕೊಳ್ಳಬೇಕು. ಈಶ್ವರನು ಎಲ್ಲಾ ಪ್ರಾಣಿಗಳ ಹೃದಯದಲ್ಲಿಯೂ ಇರುತ್ತಾನೆ; ಆತನನ್ನೇ ಶರಣುಹೊಂದಬೇಕು- ಎಂಬ ಗೀತೋಪದೇಶವನ್ನು ಮರೆಯದೆ ನಾವು ಪರಮಾತ್ಮಚಿಂತನೆಗೇ ನಮ್ಮ ಹೃದಯುವನ್ನು ಮೀಸಲಾದ ಸ್ಥಲವಾಗಿ ಮಾಡಿಕೊಳ್ಳಬೇಕು. ಅದನ್ನು ಕಸದ ಕೋಣೆಯಾಗಿ ಮಾಡಿಕೊಳ್ಳಬಾರದು. ಈಗ ಇರುವಂತೆ ಕಾಮ,

ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ- ಮುಂತಾದ ಕಸವು ನಮ್ಮ ಹೃದಯದಲ್ಲಿ ತುಂಬಿಕೊಂಡಿರುತ್ತದೆ. ಅದನ್ನು ತೊಳೆದು ಪರಮೇಶ್ವರನ ಪೂಜೆಗೆ ಅಣಿಯಾಗಬೇಕು.

ಯಾರು ಪರಮೇಶ್ವರನನ್ನು ಹೊರಗೂ ಒಳಗೂ ಪೂಜಿಸಿ ಆತನ ಅನುಜ್ಞೆಯಿಂದ ವ್ಯವಹಾರವನ್ನು ಮಾಡುವರೋ ಅವರ ಜೀವನವೆಲ್ಲ ತೀರ್ಥಯಾತ್ರೆಯಾಗಿ ಮಾರ್ಪಡುವದು. **'ನ ಕ್ರೋಧೋ ನ ಚ ಮಾತ್ಸರ್ಯಂ ನ ಲೋಭೋ ನಾಶುಭಾ ಮತಿಃ । ಭವನ್ತಿ ಕೃತಪುಣ್ಯಾನಾಂ ಭಕ್ತಾನಾಂ ಪುರುಷೋತ್ತಮೇ ।'** ಆ ಪುರುಷೋತ್ತಮನ ಭಕ್ತರಿಗೆ ಕ್ರೋಧಾದಿಗಳು ಎಂದಿಗೂ ಉಂಟಾಗುವದಿಲ್ಲ, **'ಲಾಭಸ್ತೇಷಾಂ ಜಯಸ್ತೇಷಾಂ ಕುತಸ್ತೇಷಾಂ ಪರಾಭವಃ'** ಅವರಿಗೆ ಎಲ್ಲೆಲ್ಲಿಯೂ ಲಾಭವೇ, ಎಲ್ಲೆಲ್ಲಿಯೂ ಜಯವೇ, ಸೋಲೆಂಬುದೇ ಇಲ್ಲ, ಹೀಗೆ ಪೂಜೆಮಾಡಿದವರೇ ದೇವಾಲಯದಲ್ಲಿಯೂ ಸೇರುವ ಪದ್ಧತಿಯಿದ್ದರೆ ಪವಿತ್ರವಾದ ಅನೇಕ ನದೀನದಗಳ ಸಂಗಮವಾಗಿ ಪವಿತ್ರತಮವಾದ ಮಹಾಗಂಗಾಪ್ರವಾಹವು ಕಾಣಿಸಿಕೊಳ್ಳುವದು.

ದೇವಾಲಯಗಳು ನಿಜವಾದ ದೇವಾಲಯಗಳಾಗುವ ಮುಂಚೆ ಮನೆಗಳು ದೇವಾಲಯಗಳಾಗಿ ಪರಿಣಮಿಸಿರಬೇಕು. ಮನೆಗಳು ದೇವಾಲಯಗಳಾಗಬೇಕಾದರೆ ನಮ್ಮ ತನುಮನೋಧನಗಳು ಪರಮೇಶ್ವರನ ಪ್ರಸಾದವೆಂಬ ಭಾವನೆಯು ನಮ್ಮಲ್ಲಿ ಮೂಡಿರಬೇಕು. ಹೆಚ್ಚೇಕೆ, ನಮ್ಮ ಮನಸ್ಸು ಮಾರ್ಪಟ್ಟ ಹೊರತು ನಮಗೆ ದೇವಾಲಯದಲ್ಲಾಗಲಿ ಮನೆಯಲ್ಲಾಗಲಿ ದೇವರಪೂಜೆಯು ಲಭಿಸುವ ಸಂಭವವಿಲ್ಲ, ದೇವಾಲಯಗಳಾಗಲಿ ಮನೆಗಳಾಗಲಿ ದೇವರನ್ನು ನೆನಪಿಗೆ ತರಬೇಕಾದರೆ ನಮ್ಮ ಮನಸ್ಸಿಗೆ ಪಾವಿತ್ರ್ಯ ಅಹಿಂಸೆ, ದಯೆ, ಪ್ರೇಮ, ಸತ್ಯ- ಇವುಗಳ ಪರಿಚಯವಾಗಿರಬೇಕು.

ಈಗ್ಗೆ ನಮಗೆ ದೇವಾಲಯಗಳು ಅಪವಿತ್ರಭಾವನೆಯ, ಜಗಳದ, ದುರ್ವ್ಯವಹಾರದ ಸ್ಥಲವಾಗಿ ಪರಿಣಮಿಸುತ್ತಿವೆ; ಮನೆಗಳು ದಿನದಿನದ ಆಹಾರ ವಸ್ತ್ರಾದಿಗಳ ಚಿಂತೆ, ಒಬ್ಬರಲ್ಲೊಬ್ಬರ ಅಸೂಯಾದಿಗಳನ್ನು ತೋರ್ಪಡಿಸುವ ಸ್ಥಲವಾಗಿ ಪರಿಣಮಿಸುತ್ತಿವೆ, ಇದಕ್ಕೆಲ್ಲ ಮನಃಶುದ್ಧಿಯಿಲ್ಲದಿರುವದೇ ಕಾರಣವಾಗಿದೆ. ಪರಮೇಶ್ವರನ ಪೂಜೆಯಿಂದಲೂ ಚಿಂತನೆಯಿಂದಲೂ ಪವಿತ್ರವಾದ ಅಂತಃಕರಣವುಳ್ಳವರಿಗೆ **'ಯಚ್ಚ ಕಿಂಚಿಜ್ಜಗತ್ಸರ್ವಂ ದೃಶ್ಯತೇ ಶ್ರೂಯತೇಽಪಿ ವಾ । ಅನ್ತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ ।''** ಎಂಬಂತೆ ಕಂಡುಕೇಳುವದೆಲ್ಲವನ್ನೂ ಆ ಭಗವಂತನೇ

ವ್ಯಾಪಿಸಿಕೊಂಡಿದಾನೆಂಬ ದಿವ್ಯಜ್ಞಾನವುಂಟಾಗುವದು. ಈ ಗುರಿಯನ್ನಿಟ್ಟುಕೊಂಡು ನೀವೆಲ್ಲರೂ ಮನೆಯಲ್ಲಿ ದೇವತಾರ್ಚನೆಯನ್ನು ಆರಂಭಿಸುವಂತಾಗಲಿ!

*****

# 61. ಸ್ತೋತ್ರಗಳು[1]

ಪರಮಾತ್ಮನ ಗುಣಕಥನವೇ, ಆತನ ಕಲ್ಯಾಣಗುಣಗಳನ್ನು ಎತ್ತಿತೋರಿಸುವಂತೆ ಹೊಗಳುವ ಬಗೆಯೇ, ಸ್ತೋತ್ರವೆನಿಸುವದು. ಸ್ತೋತ್ರವು ಪದ್ಯರೂಪವಾಗಿರುವದೇ ಹೆಚ್ಚು. ಗದ್ಯರೂಪವಾಗಿಯೂ ಇರಬಹುದು. ಉದಾಹರಣೆಗೆ ಶಿವಕವಚವೇ ಮುಂತಾದ ಸ್ತೋತ್ರಗಳು ಗದ್ಯಮಯವಾಗಿವೆ. ಈ ಸ್ತೋತ್ರಗಳನ್ನು ಉಪಾಸನೆಗೆ ಹೇಗೆ ಉಪಯೋಗಿಸಿಕೊಳ್ಳಬೇಕೆಂಬುದನ್ನು ಈಗ ಸ್ವಲ್ಪ ವಿಮರ್ಶಿಸೋಣ.

ಉಪಾಸನೆಯ ಉದ್ದೇಶವೇನು? ನಾನು ದೇಹಾದಿಪರಿಚ್ಛಿನ್ನನು, ಒಂದಾನೊಂದು ದೇಹೇಂದ್ರಿಯಮನಸ್ಸುಗಳ ಗುಂಪಿಗೆ ಕಟ್ಟುಬಿದ್ದವನು- ಎಂಬ ಬುದ್ಧಿಯು ಮನುಷ್ಯನಿಗೆ ಸ್ವಾಭಾವಿಕವಾಗಿರುತ್ತದೆ. ಪರಿಚ್ಛಿನ್ನಬುದ್ಧಿಯನ್ನು ನಮಗೆ ಯಾರೂ ಕಲಿಸಿಕೊಡಬೇಕಾಗಿಲ್ಲ, ಅದು ನಮಗೆ ತನಗೆ ತಾನೇ ಅಂಟಿಕೊಂಡುಬಿಟ್ಟಿರುತ್ತದೆ. ಉದಾಹರಣೆಗೆ ಕನಸನ್ನು ನೋಡಿರಿ. ಅಲ್ಲಿ ಕಲ್ಪನಾಮಯವಾದ ಒಂದಾನೊಂದು ದೇಹೇಂದ್ರಿಯಮನೋಬುದ್ಧಿಗಳ ಸಂಘಾತವು ನಮಗೆ ಕಟ್ಟುಬಿದ್ದಿರುತ್ತದೆ. ಅದೇ ನಮಗೆ ಸ್ವಭಾವವೆಂದು ಬಗೆದು ನಾವು ಅಲ್ಲಿ ಆ ಸಂಘಾತಕ್ಕೆ ಬೇಕಾದದ್ದನ್ನು ಸಂಪಾದಿಸಿಕೊಳ್ಳುವದಕ್ಕೂ ಬೇಡವಾದದ್ದನ್ನು ತಪ್ಪಿಸಿಕೊಳ್ಳುವದಕ್ಕೂ ಪ್ರಯತ್ನಿಸುತ್ತಿರುತ್ತೇವೆ. ಆದರೂ ಆ ಸಂಘಾತದಿಂದಾಗಿರುವ ಪರಿಚ್ಛೇದವು ನಮಗೆ ಇರುವದೇ ಇಲ್ಲ, ಸುಳ್ಳುಸುಳ್ಳಾಗಿಯೇ ಹಾಗೆ ಕನಸಿನಲ್ಲಿ ತೋರಿತು, ಎಂಬುದು ನಮಗೆ ಎಚ್ಚರವಾದ ಕೂಡಲೆ ತಿಳಿದುಬರುತ್ತದೆ. ಇದರಂತೆ ಎಚ್ಚರದಲ್ಲಿ ನಮಗೆ ಗಂಟುಬಿದ್ದಿರುವ ಪರಿಚ್ಛಿನ್ನಬುದ್ಧಿಯೂ ತಪ್ಪು ತಿಳಿವಳಿಕೆಯ ಫಲವೇ. ಆದರೆ ಅನಾದ್ಯವಿದ್ಯೆಯಿಂದ ನಮಗೆ ಈ ದೇಹೇಂದ್ರಿಯ ಸಂಘಾತದ ಪರಿಚ್ಛೇದವು ಸ್ವಾಭಾವಿಕವೆಂತ ತೋರುತ್ತಿರುತ್ತದೆ. ಪರಮಾತ್ಮನು ಸಚ್ಚಿದಾನಂದಸ್ವರೂಪನು, ನಿತ್ಯಶುದ್ಧಬುದ್ಧಮುಕ್ತಸ್ವಭಾವನು; ಅವನಂತೆ ನಾವೂ

---

1. ಶ್ರೀಶ್ರೀ ಗಳವರು ಕಳೆದ ಶರನ್ನವರಾತ್ರಿಯಲ್ಲಿ ತಾ|| 21-10-1955ರಲ್ಲಿ ಅನುಗ್ರಹಿಸಿದ ಉಪದೇಶದ ಸಾರ.

ಸಚ್ಚಿದಾನಂದಾದಿಸ್ವರೂಪದವರೇ ಎಂದು ಶಾಸ್ತ್ರದಲ್ಲಿ ಹೇಳಿರುತ್ತದೆ. ಆದರೂ ನಾವು ಮಾತ್ರ ಪರಿಚ್ಛಿನ್ನರೆಂಬ ಅವಿದ್ಯಾವೇಶದಿಂದ ನರಳುತ್ತಿರುತ್ತೇವೆ. ಕನಸಿನಿಂದ ಎಚ್ಚತ್ತವನು ಕನಸಿನ ಕಲ್ಪನಾಪರಿಚ್ಛೇದದಿಂದ ಬಿಡುಗಡೆಹೊಂದುವಂತೆಯೇ ಈಗಿನ ನಮ್ಮ ಪರಿಚ್ಛೇದಭಾವನೆಯಿಂದ ನಾವು ಬಿಡುಗಡೆಯನ್ನು ಹೊಂದಬೇಕಾಗಿದೆ. ಈ ಭಾವನೆ ಯನ್ನು ತಪ್ಪಿಸಿಕೊಂಡು ನಾವು ಅಪರಿಚ್ಛಿನ್ನರೂಪರು ಎಂಬ ಭಾವನೆಯನ್ನು ನಾವು ಸಂಪಾದಿಸಿಕೊಳ್ಳಬೇಕಾಗಿದೆ. ಇದಕ್ಕಾಗಿ ಮಾಡುವ ಪ್ರಯತ್ನವಿಶೇಷವೇ ಉಪಾಸನೆ. ಈ ಅಪರಿಚ್ಛಿನ್ನಭಾವನೆಯು ಬರುವದಕ್ಕೆ ಪರಮಾತ್ಮನ ಹೆಚ್ಚುಗಾರಿಕೆಯನ್ನು ಹಾಡಿಹೊಗಳುವ ವಾಕ್ಯಸಮೂಹವಾದ ಸ್ತೋತ್ರಪಾಠವನ್ನು ನಾವು ಉಪಯೋಗಿಸಿಕೊಳ್ಳಬೇಕು.

ಸ್ತೋತ್ರವೆಂದರೆ ಪರಮಾತ್ಮನ ಸ್ವರೂಪವನ್ನು ಬಲ್ಲ ಅನುಭವಿಗಳು ಆನಂದಾ ತಿರೇಕದಿಂದ ಹಾಡಿರುವ ಪರಮಾತ್ಮನ ಗುಣಗಳ ವರ್ಣನೆ. ಸ್ತೋತ್ರಗಳನ್ನು ಕೇಳಿದರೆ, ನಮ್ಮ ಪರಮಾರ್ಥಸ್ವರೂಪವಾಗಿರುವ ಪರಮಾತ್ಮನ ಗುಣಗಳು ನೆನಪಿಗೆ ಬಂದು ನಮಗೆ ಆನಂದವಾಗುವದು. ಇಂಥ ಕಲ್ಯಾಣಗುಣಗಳುಳ್ಳ ಪರಮಾತ್ಮನೊಬ್ಬನು ಇದ್ದರೆ, ಎಂಥ ಸುದೈವದ ವಾರ್ತೆಯಿದು!-ಎನ್ನಿಸುವದು.

ನಾವು ಈ ಸದ್ಗುಣಗಳ ಸ್ವಭಾವವನ್ನು ಅರಿತು ಆನಂದಿಸುವದಕ್ಕೆ ನಮ್ಮ ಈಗಿನ ಸ್ವಭಾವವು ಹೋಗಿ ಉತ್ಕೃಷ್ಟವಾದ ಸ್ವಭಾವವೊಂದು ಏರ್ಪಡಬೇಕಾಗಿರುತ್ತದೆ. ಹಾಲು ಮೊಸರಾಗುವಂತೆ ನಮ್ಮ ಅಂತಃಕರಣವು ಸಂಪೂರ್ಣವಾಗಿ ಪರಿಣಾಮವನ್ನು ಹೊಂದಬೇಕಾಗಿರುತ್ತದೆ. ಈ ಪರಿಣಾಮವು ಪರಿಪೂರ್ಣವಾಗುವದರೊಳಗೆ ನಮ್ಮ ಶರೀರ, ಇಂದ್ರಿಯ, ಮನಸ್ಸು, ಬುದ್ಧಿ- ಇವೆಲ್ಲದರಲ್ಲಿಯೂ ಅತ್ಯಂತವಾಗಿ ಬದಲಾವಣೆ ಯಾಗಬೇಕಾಗಿದೆ. ಮೀನುಹಿಡಿದವರು ಅವನ್ನು ಕಲ್ಲಮೇಲೆ ಉಜ್ಜಿದಾಗ ಅವುಗಳ ಶರೀರದ ಅವಯವಗಳು ಅಲ್ಲಲ್ಲಿ ಉದುರಿರುವದನ್ನು ನೀವು ನೋಡಿರಬಹುದು; ಇದರಂತೆ ನಮ್ಮ ಶರೀರದ ಹೊರಗಿನ ಮತ್ತು ಒಳಗಿನ ಶರೀರದ ಸೂಕ್ಷ್ಮಾಣುಗಳು ಸಂಪೂರ್ಣವಾಗಿ ಉದುರಿಹೋದಂತಾಗಿ ಅವುಗಳ ಸ್ಥಾನದಲ್ಲಿ ಹೊಸ ಸಾತ್ತ್ವಿಕಾಣು ಗಳು ಉಂಟಾಗಬೇಕು. ನಮ್ಮ ಮೆದುಳಿನ ಸೂಕ್ಷ್ಮಾವಯವಗಳೆಲ್ಲವೂ ಪರಮಾತ್ಮಭಾವನೆ ಯಿಂದ ಮಾರ್ಪಡಬೇಕು. ನಮ್ಮ ಶರೀರವು ಜೀವಂತವಾಗಿರುವಾಗ ಅದರ ಅವಯವಗಳಿಗೆಲ್ಲ ಅರಿಯುವ ಶಕ್ತಿಯಿರುತ್ತದೆ; ಮೈಮೇಲೆ ಸಣ್ಣದೊಂದು ಇರುವೆ ಓಡಾಡಿದರೂ ನಮಗೆ ಅದರ ಅರಿವು ಆಗುತ್ತದೆ. ಅಲ್ಲವೆ? ಇದೇಕೆ? ಪರಮಾತ್ಮನು

ಚಿನ್ಮಯನಾಗಿರುತ್ತಾನಷ್ಟೆ? ಆತನ ಚಿತ್ತಿನ ಆಭಾಸವು ಅಂತಃಕರಣ, ಇಂದ್ರಿಯ, ಶರೀರ– ಇವುಗಳಲ್ಲೆಲ್ಲ ಹರಡಿಕೊಂಡಿರುತ್ತದೆ. ಶರೀರೇಂದ್ರಿಯ ಮನಸ್ಸುಗಳು ಅನಂತ ವಾದ ಚಿತ್ಸಾಗರದಲ್ಲಿ ಅದ್ದಿಕೊಂಡಿರುತ್ತವೆ, ಅವುಗಳಲ್ಲೆಲ್ಲ ಚಿತ್ತೇ ಇರುತ್ತದೆ. ಆದರೂ ನಾವು ನಮ್ಮ ಈಗಿನ ಅಂತಃಕರಣಸ್ಥಿತಿಯಲ್ಲಿ ಪರಿಚ್ಛಿನ್ನರೆಂಬ ಮಿಥ್ಯಾಬುದ್ಧಿಗೆ ಒಳಗಾಗಿ ಸಂಕಟಪಡುತ್ತಿರುತ್ತೇವೆ. ಈ ಮಿಥ್ಯಾಬುದ್ಧಿಯ ವಾಸನೆಯು ಹೋಗಿಬಿಡಬೇಕು; ಪರಮಾತ್ಮಭಾವನೆಯು ಬರಬೇಕು. ಉಪಾಸನೆಯಿಂದ ಈ ಈಶ್ವರೀಕರಣವು ಸಾಧ್ಯ ವಾಗುವದು. ಪರಮೇಶ್ವರನ ಗುಣಗಳ ಗಾನದಿಂದ ಈ ಸದ್ಭಾವನೆಯು ಉಪಾಸನೆಗೆ ಹೆಚ್ಚಿನ ಸಹಾಯಯವಾಗುವದು.

ಪರಮೇಶ್ವರನ ಸ್ವಭಾವವನ್ನು ಹೀಗೆಂದು ಶ್ರುತಿಯಲ್ಲಿ ವರ್ಣಿಸಿರುತ್ತದೆ; **"ಅಪಾಣಿಪಾದೋ ಜವನೋ ಗ್ರಹೀತಾ ಪಶ್ಯತ್ಯಚಕ್ಷುಃ ಸ ಶೃಣೋತ್ಯಕರ್ಣಃ । ಸ ವೇತ್ತಿ ವೇದ್ಯಂ ನ ಚ ತಸ್ಯಾಸ್ತಿ ವೇತ್ತಾ ತಮಾಹುರಗ್ರ್ಯಂ ಪುರುಷಂ ಮಹಾನ್ತಮ್॥"** ಆ ಪರಮಾತ್ಮನಿಗೆ ಕೈಯಿಲ್ಲ, ಎಲ್ಲವನ್ನೂ ಹಿಡಿದುಕೊಳ್ಳಬಲ್ಲನು; ಕಾಲುಗಳಿಲ್ಲ, ವೇಗವಾಗಿ ಓಡಬಲ್ಲನು; ಕಣ್ಣುಗಳಿಲ್ಲ – ಎಲ್ಲವನ್ನೂ ಕಾಣುತ್ತಾನೆ; ಕಿವಿಗಳಿಲ್ಲ , ಹಾಗಾದರೂ ಶಬ್ದವನ್ನು ಕೇಳಬಲ್ಲನು; ಅವನು ಯಾವ ಮನಸ್ಸಿಲ್ಲದ ವನಾದರೂ ಎಲ್ಲ ಜ್ಞೇಯವನ್ನೂ ಅರಿತುಕೊಳ್ಳಬಲ್ಲನು, ಅವನನ್ನು ವಿಷಯೀಕರಿಸಿ ಅರಿಯುವವರು ಯಾರೂ ಇಲ್ಲ, ಅವನೇ ಎಲ್ಲಕ್ಕಿಂತಲೂ ಮೊದಲಿರುವ ಮಹಾ ಪುರುಷನೆಂದು ಬಲ್ಲವರು ಹೇಳುತ್ತಾರೆ. **"ನ ತಸ್ಯ ಕಾರ್ಯಂ ಕರಣಂ ಚ ವಿದ್ಯತೇ ನ ತತ್ಸಮಶ್ಚಾಭ್ಯಧಿಕಶ್ಚ ದೃಶ್ಯತೇ । ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ ॥"** ಆತನಿಗೆ ಶರೀರವಿಲ್ಲ, ಇಂದ್ರಿಯಗಳಿಲ್ಲ; ಆತನಿಗೆ ಸಮನಿಲ್ಲ, ಅಧಿಕನೂ ಕಾಣುವದಿಲ್ಲ, ಆತನ ಪರಶಕ್ತಿಯು ವಿವಿಧವಾಗಿದೆಯೆನ್ನುವರು, ಆ ಶಕ್ತಿಯೂ ಜ್ಞಾನಬಲಕ್ರಿಯೆಗಳುಳ್ಳದ್ದು, ಸ್ವಾಭಾವಿಕವಾದದ್ದು. ಇಂಥ ತತ್ತ್ವದಲ್ಲಿಯೇ ಮನಸ್ಸನ್ನು ನಿಶ್ಚಲವಾಗಿ ನಿಲ್ಲಿಸಿಕೊಂಡರೆ ಅದೇ ಸಮಾಧಿಯೆನಿಸುವದು. ಆ ಸಮಾಧಿ ಯನ್ನು ಅನುಭವಿಸಿದವರೇ ಋಷಿಗಳು. ಅವರಿಗೆ ಪರಮಾತ್ಮನ ಶಕ್ತಿ, ಅನುಗ್ರಹ, ದಯೆ– ಮುಂತಾದ ಗುಣಗಳು ಕಣ್ಣಿಗೆ ಕಟ್ಟಿದಂತೆ ಆಗಿರುತ್ತದೆ. ಋಷಿಗಳು ಪರಿಚ್ಛಿನ್ನ ರಲ್ಲವೆ? ಅವರು ಅನಂತವಾದ ಪರಮಾತ್ಮತತ್ತ್ವವನ್ನು ಹೇಗೆ ಕಂಡುಕೊಂಡರು? ಪರಿಚ್ಛೇದಕ್ಕೆ ಕಾರಣವಾದ ಉಪಾಧಿಗಳನ್ನು ಕಳಚಿಕೊಂಡು ತಾವೂ ಅನಂತರಾಗಿಯೂ

ಅನಂತವಾದ ತತ್ತ್ವವನ್ನು ಕಂಡುಕೊಂಡರು. ಆ ಪರಮಾತ್ಮನನ್ನು ಹೀಗೆ ದಿವ್ಯಸಮಾಧಿಯಲ್ಲಿ ಕಂಡವರಿಗೆ ಆತನು ಒಳಗೂ ಹೊರಗೂ ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುವನೆಂಬುದು ಮನದಟ್ಟಾಗುವದು. ಪರಮಾತ್ಮನಲ್ಲಿ ಹಾಗೆ ಸಮಾಹಿತಚಿತ್ತರಾದವರು ಆ ಬ್ರಹ್ಮಾನಂದದಲ್ಲಿ ಮಗ್ನರಾದಾಗ ಅವರಿಗೆ ಪರಮಾತ್ಮನಲ್ಲದೆ ಮತ್ತೆ ಯಾವದನ್ನೂ ಕಾಣುವಂತಿರುವದಿಲ್ಲ, ಆ ಅವಸ್ಥೆಯಲ್ಲಿ ಅವರ ಬಾಯಿಂದ ಲೋಕೋತ್ತರವಾದ ಮಂತ್ರಗಳು ಹೊರಟುಬರುವವು. ಪರಮಾತ್ಮನ ಈ ದಿವ್ಯಮಹಿಮೆಯನ್ನು ಅನುಭವಿಸಿದ ಒಬ್ಬ ಋಷಿಯು ಹೀಗೆಂದಿರುತ್ತಾನೆ : "**ವೇದಾಹಮೇತಂ ಪುರುಷಂ ಮಹಾನ್ತಮ್ । ಆದಿತ್ಯವರ್ಣಂ ತಮಸಃ ಪರಸ್ತಾತ್ । ತಮೇವಂ ವಿದ್ವಾನಮೃತ ಇಹ ಭವತಿ । ನಾನ್ಯಃ ಪನ್ಥಾ ಅಯನಾಯ ವಿದ್ಯತೇ ॥**" ನಾನು ಈ ಮಹಾಪುರುಷನನ್ನು ಅರಿತುಕೊಂಡಿರುವೆನು; ಆತನು ಅಜ್ಞಾನದ ಕಗ್ಗತ್ತಲೆಯ ಆಚೆಯಿರುವನು, ಚಿದಾಕಾಶದಲ್ಲಿ ಬೆಳಗುತ್ತಿರುವ ಆದಿತ್ಯನೇ ಅವನು. ಆತನನ್ನು ಸಾಕ್ಷಾತ್ಕರಿಸಿಕೊಂಡವನು ಇಲ್ಲಿಯೇ ಅಮೃತವಾಗಿಬಿಡುತ್ತಾನೆ. ಆತನನ್ನು ಪಡೆಯುವದಕ್ಕೆ ಮತ್ತೊಂದು ಮಾರ್ಗವಿರುವದಿಲ್ಲ- ಎಂದು ಆತನು ಸಾರಿರುತ್ತಾನೆ.

**ಋಷಿ**ಗಳೆಂದರೆ ನಮ್ಮಂತೆ ಶರೀರಪರಿಚ್ಛಿನ್ನರೆಂದು ಭಾವಿಸಬಾರದು. ಅವರು ಎಲ್ಲಾ ಪರಿಚ್ಛೇದವನ್ನೂ ದಾಟಿ ಪರಮಾತ್ಮನಲ್ಲಿ ಒಂದಾಗಿಬಿಟ್ಟಿರುತ್ತಾರೆ. ಯಾವಾಗಲೂ ಈ ಏಕತ್ವದ ಅನುಸಂಧಾನದಲ್ಲಿಯೇ ಇರುತ್ತಾರೆ, ಅವರು. ಇಂಥವರಿಂದ ಕೆಲವು ವೇದಮಂತ್ರಗಳ ರೂಪವಾದ ಸ್ತೋತ್ರಗಳು ಹೊರಕ್ಕೆ ಬಂದಿರುತ್ತವೆ; ಇತಿಹಾಸ ಪುರಾಣಗಳಲ್ಲಿ ಲೌಕಿಕಶ್ಲೋಕರೂಪವಾದ ಸ್ತೋತ್ರಗಳೂ ಹೊರಕ್ಕೆ ಬಂದಿರುತ್ತವೆ. ಭಾರತದಲ್ಲಿ ಉಪಮನ್ಯುವು ಪರಮೇಶ್ವರನನ್ನು ಕುರಿತು ತಪಸ್ಸು ಮಾಡಿದಾಗ ಆ ಶಿವನು ಇಂದ್ರನ ವೇಷದಿಂದ ಬಂದು ಅವನಿಗೆ ದರ್ಶನ ಕೊಟ್ಟನಂತೆ. ಇಂದ್ರನು ಸ್ವರ್ಗಾದಿಸುಖಗಳನ್ನು ಕೊಡುವದಕ್ಕೆ ಹೋದಾಗ, ಆ ಉಪಮನ್ಯುವೆಂದದ್ದೇನು? "**ಅಪಿ ಕೀಟಃ ಪತಙ್ಗೋ ವಾ ಭವೇಯಂ ಶಙ್ಕರಾಜ್ಞಯಾ**" ಶಂಕರನು ಕ್ರಿಮಿಕೀಟವೋ ಜಿಟ್ಟೆಯಹುಳುವೋ ಆಗೆಂದು ಅಪ್ಪಣೆಮಾಡಿದರೂ ಆಗುವೆನು; ಆದರೆ ಪರಮೇಶ್ವರನ ಸಂಬಂಧವಿಲ್ಲದ ದೇವೇಂದ್ರನ ಸ್ವರ್ಗಸುಖವೂ ನನಗೆ ಬೇಡ! ಯಾವ ಶರೀರವಾದರೇನು? ಪರಮಾತ್ಮನ ಅನುಸಂಧಾನವು ಮುಖ್ಯ. "**ಕಾಶೀಕ್ಷೇತ್ರಂ ಶರೀರಂ ತ್ರಿಭುವನಜನನೀ ವ್ಯಾಪಿನೀ ಜ್ಞಾನಗಙ್ಗಾ । ಭಕ್ತಿಶ್ರದ್ಧಾ ಗಯೇಯಂ**

**ನಿಜಗುರುಚರಣಧ್ಯಾನಯೋಗಃ ಪ್ರಯಾಗಃ । ವಿಶ್ವೇಶೋಽಯಂ ತುರೀಯಃ ಸಕಲಜನಮನಃಸಾಕ್ಷಿಭೂತೋಽನ್ತರಾತ್ಮಾ । ದೇಹೇ ಸರ್ವಂ ಮದೀಯೇ ಯದಿ ವಸತಿ ಪುನಸ್ತೀರ್ಥಮನ್ಯತ್ ಕಿಮಸ್ತಿ।''** ಎಂದಿರುವಂತೆ ಪರಮಾರ್ಥದ ಅನುಸಂಧಾನದಿಂದ ಶರೀರವೇ ಕ್ಷೇತ್ರವೂ ತೀರ್ಥವೂ ಆಗಿರುತ್ತದೆ.

ಪ್ರಹ್ಲಾದ, ಧ್ರುವ, ಮಾರ್ಕಂಡೇಯ- ಮುಂತಾದವರು ಮಾಡಿರುವ ಸ್ತೋತ್ರಗಳು ಪುರಾಣಗಳಲ್ಲಿ ತುಂಬಿತುಳುಕುತ್ತಿರುವವು. ಅವುಗಳನ್ನು ಓದಿದರೆ, ಕೇಳಿದರೆ, ಅಥವಾ ಕಂಠಪಾಠಮಾಡಿಕೊಂಡು ಅರ್ಥಾನುಸಂಧಾನಮಾಡುತ್ತಾ ಹೇಳಿಕೊಂಡರೆ ಎಂಥ ಆನಂದವು ಉಕ್ಕೇರುತ್ತದೆ ! ನಮಗೆ ಪರಮೇಶ್ವರನ ಗುಣಗಳನ್ನು ಮನಸ್ಸಿಗೆ ಹತ್ತಿಸಿಕೊಳ್ಳುವದಕ್ಕಾಗಲಿ ಅವುಗಳ ಹೆಚ್ಚುಗಾರಿಕೆಯನ್ನು ಪರಿಣಾಮಕಾರಿಯಾಗಿ ಶಬ್ದಗಳಿಂದ ಹೊಗಳಿ ಹೇಳುವದಕ್ಕಾಗಲಿ ಯೋಗ್ಯತೆಯಿಲ್ಲ, ಕವಿಗಳು ಪ್ರತಿಭೆಯಿಂದ ಹಾಡಿದ ಸ್ತೋತ್ರಗಳು ಇರಬಹುದು; ಆದರೆ ಅವು ಕಲ್ಪನೆಗಳು ಮಾತ್ರವಾಗಿರುತ್ತವೆ. ಅನುಭವಿಗಳಾದ ಋಷಿಗಳ ಪ್ರಾಸಾದಿಕವಾಣಿಯ ಸ್ತೋತ್ರಗಳಲ್ಲಿ ವೀರ್ಯವಿರುತ್ತದೆ; ಬಾರುಮಾಡಿಟ್ಟಿರುವ ಬಂದೂಕಿನಂತೆ ಅವುಗಳಲ್ಲಿ ಶಕ್ತಿ ವಿಶೇಷವು ಗರ್ಭಿತವಾಗಿರುತ್ತದೆ. **"ಚಂದ್ರಶೇಖರಮಾಶ್ರಯೇ ಮಮ ಕಿಂ ಕರಿಷ್ಯತಿ ವೈ ಯಮಃ।''** ಈ ಶ್ಲೋಕ ಪಾದವನ್ನು ನೋಡಿ; ಚಂದ್ರಶೇಖರನನ್ನು ಆಶ್ರಯಿಸುತ್ತೇನೆ, ನನಗೆ ಯಮನೇನು ಮಾಡಬಲ್ಲನು?- ಎಂಬ ಅರ್ಥವನ್ನು ಮನದಂದರೆ ನಮಗೆ ಎಂಥ ಧೈರ್ಯವು ಬರುತ್ತದೆ! ಪರಮಾತ್ಮನ ಧ್ಯಾನದ ಆನಂದವನ್ನು ಅನುಭವಿಸಿ ಆಡಿದವರ ಅಮೃತವಾಣಿಯನ್ನು ಅಂದುಕೊಂಡು ನಾವು ಉದ್ಧಾರವಾಗಬೇಕು. ಅವುಗಳು ಮಂತ್ರರೂಪವಾಗಿರುತ್ತವೆ. ಮನನ ಮಾಡಿದವರನ್ನು ಕಾಪಾಡುವದೇ ಮಂತ್ರ.

**ಸ್ತೋತ್ರಗಳ** ಅರ್ಥವನ್ನು ಅನುಸಂಧಾನಮಾಡಿದಂತೆಲ್ಲ, ನಾವು ಪರಮಾತ್ಮನಿಗೆ ಹತ್ತಿರವಾಗುವೆವು. ಒಂದೊಂದು ಸ್ತೋತ್ರವಾಕ್ಯದಲ್ಲಿ ಒಂದೊಂದು ಉತ್ಕೃಷ್ಟಭಾವವಿರುತ್ತದೆ, ಅದು ನಮ್ಮ ಅಂತಃಕರಣವನ್ನು ಅವಸಾದ- ಕುಸಿಯುವ ಸ್ವಭಾವದಿಂದ ಬಿಡಿಸಿ ಪರಮಾತ್ಮನ ಔನ್ನತ್ಯಕ್ಕೆ ಏರಿಸುತ್ತದೆ. ಸದ್ಯಕ್ಕೆ ನಮಗೆ ಅಧ್ಯಾತ್ಮಶಕ್ತಿಯಲ್ಲಿ ಆದರ ವಿರುವದಿಲ್ಲ, ಅದರ ಸವಿ ನಮಗೆ ಹತ್ತಿರುವದಿಲ್ಲ, ಆದ್ದರಿಂದ ಅದರ ವಿಷಯಕ್ಕೆ ಅನಾದರವಿರುತ್ತದೆ. ಇದನ್ನು ಬಿಡಿಸುವದಕ್ಕೆ ಮನಸ್ಸನ್ನು ಅಂತರ್ಮುಖವಾಗಿ ಮಾಡಿ

ಕೊಳ್ಳುವದಕ್ಕೆ ಸ್ತೋತ್ರಾರ್ಥದ ಅನುಸಂಧಾನವು ಬಹಳ ಸಹಾಯಕವಾಗುತ್ತದೆ. "**ಅಟ್ಟಹಾಸಭಿನ್ನಪದ್ಮಜಾಣ್ಡಕೋಶಸನ್ತತಿಮ್**" ಪರಮಾತ್ಮನು ನಕ್ಕರೆ ಅಷ್ಟು ಮಾತ್ರದಿಂದ ಬ್ರಹ್ಮಕೋಟಿಗಳು ಒಡೆದುಕೊಳ್ಳುವವು! "**ಆತ್ಮನಾ ವಿನ್ದತೇ ವೀರ್ಯಮ್**" ಆತ್ಮನಿಂದ ವೀರ್ಯವು ಬರುತ್ತದೆ ಎಂಬ ಶ್ರುತಿಯ ವ್ಯಾಖ್ಯಾನವು ಈ ಶ್ಲೋಕವಾಕ್ಯದಲ್ಲಿದೆ. ಸ್ತೋತ್ರಗಳನ್ನು ಸುಮ್ಮನೆ ಅಂದುಕೊಂಡರೆ ಸಾಲದು; ಅರ್ಥಾನುಸಂಧಾನದಿಂದ ಅದನ್ನು ನಮ್ಮ ಅಂತಃಕರಣಕ್ಕೆ ಇಂಜೆಕ್ಷನ್ ಮಾಡಿಕೊಳ್ಳಬೇಕು.

ಸ್ತೋತ್ರಗಳಲ್ಲಿ ಅನೇಕಜಾತಿಗಳಿವೆ. ಗುಣಗಳ ವರ್ಣನೆಯನ್ನು ಹೇಳುವ ಸ್ತೋತ್ರಗಳಲ್ಲಿ ಪರಮಾತ್ಮನ ಗುಣಗಳ ಸ್ವರೂಪ, ಅವುಗಳಿಂದ ತೋರುವ ಆತನ ಮಹಿಮೆ, ಆತನ ದಯೆ, ಕರುಣೆ, ಅನುಗ್ರಹಬುದ್ಧಿ ಪ್ರೇಮವೇ ಮುಂತಾದ ಕಲ್ಯಾಣ ಸ್ವಭಾವಗಳು- ಇವುಗಳು ನೆನಪಿಗೆ ಬಂದು ಭಕ್ತಿಶ್ರದ್ಧೆಗಳು ಬೆಳೆಯುವಂತೆ ಮಾಡಿಕೊಳ್ಳಬೇಕು. ಪರಮಾತ್ಮನು ತಮ್ಮ ಎದುರಿಗೆ ಪ್ರಸನ್ನನಾದಾಗ ಪ್ರಹ್ಲಾದಧ್ರುವಾದಿಗಳು ಮಾಡಿದ ಸ್ತೋತ್ರದ ಅರ್ಥವನ್ನು ಮನಸ್ಸಿಗೆ ತಂದುಕೊಳ್ಳುವಾಗ ಪರಮೇಶ್ವರನು ನಮ್ಮ ಎದುರಿಗೆ ಇದ್ದಂತೆಯೇ ಭಾವಿಸಿಕೊಂಡು ಆತನ ಸ್ವರೂಪದಲ್ಲಿ ನಮ್ಮ ಅಂತಃಕರಣವು ಕರಗಿಹೋಗುವಂತೆ ಮಾಡಿಕೊಳ್ಳಬೇಕು. ಪ್ರಹ್ಲಾದನು ಮಾಡಿದ ಸ್ತೋತ್ರದಲ್ಲಿ "**ಯಾ ಪ್ರೀತಿರವಿವೇಕಾನಾಂ ವಿಷಯೇಷ್ವನಪಾಯಿನೀ । ತ್ವಾಮನು ಸ್ಮರತಃ ಸಾ ಮೇ ಹೃದಯಾನ್ಮಾಪಸರ್ಪತು**" ದೇವನೆ, ಅವಿವೇಕಿಗಳಿಗೆ ಹೇಗೆ ವಿಷಯಗಳಲ್ಲಿ ತಪ್ಪದೆ ಪ್ರೀತಿಯಿರುವದೋ ಆ ಪ್ರೀತಿಯು ನನಗೆ ನಿನ್ನ ಸ್ಮರಣೆಯಲ್ಲಿರುವಂತೆ ಅನುಗ್ರಹಿಸು! -ಎಂದಿರುವದನ್ನು ಮನದಂದುಕೊಂಡರೆ ಪರಮೇಶ್ವರನ ಅನುಗ್ರಹವೇ ಅವಶ್ಯವಾಗಿ ಆಗಿಬಿಡುವದು. ದೊಡ್ಡವರ ಹೆಜ್ಜೆಯನ್ನು ಹಿಡಿದು ಈ ಭಕ್ತಿಮಾರ್ಗದಲ್ಲಿ ನಡೆಯುತ್ತಾ ಸತ್ತ್ವರಜಸ್ತಮೋಗುಣಗಳನ್ನು ಮೀರಿ ಶುದ್ಧಸತ್ತ್ವದಲ್ಲಿ ನಿಲ್ಲುವ ಪರಿಯನ್ನು ಕಲಿತುಕೊಳ್ಳಬೇಕು; ಪರಮಾತ್ಮನಲ್ಲಿ ಬೆರೆಯಬೇಕು.

ಸ್ತೋತ್ರಗಳ ಅಭಿಪ್ರಾಯವು ಕಾಲದೇಶಪರಿಚ್ಛಿನ್ನವಾಗಿರುವದಿಲ್ಲ. ವೇದದಲ್ಲಿರುವ ಸ್ತೋತ್ರವಾದ್ದರಿಂದ ಪರಮಾತ್ಮನ ಸ್ವಭಾವಕ್ಕೆ ಹೆಚ್ಚುಗಾರಿಕೆಯೆಂದೂ ಪುರಾಣವಾದ್ದರಿಂದ ಕಡಿಮೆಯಾದದ್ದೆಂದೂ ತಿಳಿಯಬಾರದು. ಅದರ ಅರ್ಥದ ಅನುಸಂಧಾನವು ಎಷ್ಟೆಷ್ಟು ಹೆಚ್ಚಿದರೆ ಅಷ್ಟಷ್ಟು ಮನಸ್ಸಿಗೆ ಸಂಸ್ಕಾರವಾಗುತ್ತದೆ. "ಜನ್ಮದಿಂದ

ಶೂದ್ರನಾಗಿರುತ್ತಾನೆ. ಕರ್ಮದಿಂದ ದ್ವಿಜನಾಗುತ್ತಾನೆ; ಮಹಾಯಜ್ಞಗಳಿಂದಲೂ ಯಜ್ಞಗಳಿಂದಲೂ ಈ ಶರೀರವು ಬ್ರಾಹ್ಮಣಶರೀರವಾಗುತ್ತದೆ' ಎಂಬ ಸ್ಮೃತಿವಾಕ್ಯವು ಇಲ್ಲಿ ಹೆಚ್ಚು ಸಾರ್ಥಕವಾಗಿರುತ್ತದೆ. ಸ್ತೋತ್ರಗಳನ್ನು ಯಾರುಯಾರು ಮಾಡಿರುತ್ತಾರೋ, ಅವರವರ ಮನಸ್ಸಿನ ಸಂಸ್ಕಾರದ ಅಂತಸ್ತಿಗೆ ಅನುಗುಣವಾಗಿ ಪರಮಾತ್ಮಸ್ವಭಾವವು ಅವರವರ ಸ್ತೋತ್ರದಲ್ಲಿ ಪ್ರಕಟವಾಗಿರುತ್ತದೆ. ನಾವು ಆಯಾ ಭಕ್ತರ ಮನಸ್ಸಿನ ಮಟ್ಟಕ್ಕೆ ಏರುವ ಪ್ರಯತ್ನವನ್ನು ಮಾಡಬೇಕು. ಈ ಪ್ರಯತ್ನವು ಸಾಗುವಂತೆ ಅನುಗ್ರಹಿಸೆಂದು ಪರಮಾತ್ಮನನ್ನು ಪ್ರಾರ್ಥಿಸಬೇಕು. ಇದರಿಂದ ದೊಡ್ಡವರ ಅನುಗ್ರಹವೂ ಪರಮೇಶ್ವರನ ಶಕ್ತಿಪಾತವೂ ಆಗಿ ನಮ್ಮ ಅಂತಃಕರಣವು ಆ ಮೇಲಿನ ಮಟ್ಟಕ್ಕೆ ಏರುವದಕ್ಕೆ ಶಕ್ತವಾಗುತ್ತದೆ. ಸ್ತೋತ್ರಗಳು ಮಾತಿಗೂ ಮನಸ್ಸಿಗೂ ದುಸ್ಸಂಗವನ್ನು ತಪ್ಪಿಸಿ ಪರಮಾತ್ಮ ಭಾವನೆಯ ಸಂಸ್ಕಾರವನ್ನು ಮಾಡಿಕೊಡುತ್ತವೆ.

ಕೆಲವು ಸ್ತೋತ್ರಗಳು ಅಕ್ಷರಶಃ ಸ್ತೋತ್ರರೂಪದಲ್ಲಿರುವದಿಲ್ಲ, ಎಂದರೆ ಪರಮಾತ್ಮನನ್ನೇ ಇಂಥವನು ಅಂಥವನು ಎಂದು ನೇರಾಗಿ ಹೊಗಳುವದಿಲ್ಲ, ಆದರೆ ಅವುಗಳಲ್ಲಿ ಪರಮೇಶ್ವರನ ಸೇವೆಯ ಮಹಿಮೆಯನ್ನು ಕೊಂಡಾಡಿರುತ್ತದೆ. ಉದಾಹರಣೆಗೆ ಪ್ರದೋಷಸ್ತೋತ್ರದ ಈ ಶ್ಲೋಕವನ್ನು ಕೇಳಿ: "**ಸತ್ಯಂ ಬ್ರವೀಮಿ ಪರಲೋಕಹಿತಂ ಬ್ರವೀಮಿ ಸಾರಂ ಬ್ರವೀಮ್ಯುಪನಿಷದ್ಧೃದಯಂ ಬ್ರವೀಮಿ । ಸಂಸಾರಸಾಗರ ಮಸಾರಮವಾಪ್ಯ ಜನ್ತೋಃ ಸಾರೋಽಯಮೀಶ್ವರ ಪದಾಮ್ಬುರುಹಸ್ಯ ಸೇವಾ ॥**" ಇದೇ ಸತ್ಯ, ಇದು ಪರಲೋಕಕ್ಕೆ ಹಿತವಾದ ಸಾಧನ, ಇದೇ ಸರ್ವಸಿದ್ಧಾಂತಸಾರ, ಇದೇ ಉಪನಿಷತ್ತುಗಳ ಹೃದಯ; ಅಸಾರವಾದ ಸಂಸಾರಸಾಗರವನ್ನು ಸೇರಿರುವ ಜೀವನಿಗೆ ಈಶ್ವರನ ಪದಕಮಲಸೇವೆಯೇ ಜೀವನದ ಸಾರವು. "**ಯೇ ನಾರ್ಚಯನ್ತಿ ಗಿರಿಶಂ ಸಮಯೇ ಪ್ರದೋಷೇ ಯೇ ನಾರ್ಚಿತಂ ಶಿವಮಪಿ ಪ್ರಣಮನ್ತಿ ಚಾನ್ಯೇ । ಏತತ್ಕಥಾಂ ಶ್ರುತಿಪುಟೈರ್ನ ಪಿಬನ್ತಿ ಮೂಢಾಸ್ತೇ ಜನ್ಮಜನ್ಮಸು ಭವನ್ತಿ ನರಾ ದರಿದ್ರಾಃ॥**" ಯಾರು ಪರಮೇಶ್ವರನನ್ನು ಪ್ರತಿದಿನವೂ ಪ್ರದೋಷ ಕಾಲಕ್ಕೆ ಅರ್ಚನೆ ಮಾಡುವದಿಲ್ಲವೋ, ಆ ಪರಮಶಿವನ ಕಥಾಮೃತವನ್ನು ಕಿವಿಗಳಿಂದ ಕುಡಿಯುವದೂ ಇಲ್ಲವೋ, ಅವರು ಜನ್ಮಜನ್ಮಗಳಲ್ಲಿಯೂ ದರಿದ್ರರಾಗಿರುವರು. ಇಲ್ಲಿ ದಾರಿದ್ರ್ಯವೆಂದರೆ ಬರಿಯ ಹಣವಿಲ್ಲದಿರುವ ಸ್ಥಿತಿ ಎಂದು ತಿಳಿಯಬಾರದು. ಇಹ ಲೋಕಸುಖಕ್ಕೆ ಬೇಕಾದ ಧನಧಾನ್ಯಸಂಪತ್ತು ವಿದ್ಯಾಬುದ್ಧಿಗಳೂ ಒಂದು ಅವಶ್ಯವಾದ

ಸಂಪತ್ತೇ ಸರಿ; ಆದರೆ ಪರಮೇಶ್ವರನ ವಿಷಯದಲ್ಲಿ ಭಕ್ತಿಜ್ಞಾನಾದಿಗಳಿಲ್ಲದ ಬಡತನ ಕ್ಕಿಂತ ಹೆಚ್ಚಿನ ದಾರಿದ್ರ್ಯವು ಮತ್ತೆ ಯಾವದೂ ಇರುವದೇ ಇಲ್ಲ.

ಕೆಲವು ಸ್ತೋತ್ರಗಳಲ್ಲಿ ''ನಾನು ಪಾಪಿ, ಮೂರ್ಖನು, ನನ್ನನ್ನು ಉದ್ಧರಿಸು!'' ಎಂದು ಹೇಳಿಕೊಳ್ಳುವಂತೆ ವರ್ಣಿಸಿರುತ್ತದೆ. ಅದನ್ನು ಹೇಳುವಾಗ ನಮ್ಮ ದುರ್ಗುಣ ಗಳನ್ನೂ ಸಕಲದೋಷಗಳನ್ನೂ ದೂರವಿರಿಸಬಲ್ಲ ಭಗವಂತನ ಶಕ್ತಿಯನ್ನೂ ಕರುಣೆ ಯನ್ನೂ ನೆನೆದುಕೊಂಡು ಭಗವಂತನಿಗೇ ಶರಣುಹೋಗಬೇಕು. ನಮ್ಮ ದುರಿತವು ದೂರವಾಗಬೇಕು, ನಮಗೆ ಶಮದಮಾದಿಗಳು ಅಳವಡಬೇಕು, ಪ್ರತ್ಯಕ್ತ್ವವಣತೆಯು ಸಿಕ್ಕಬೇಕು; ಇದೆಲ್ಲ ಸ್ತೋತ್ರಗಳಿಂದಾಗಬಹುದಾದ ಪ್ರಯೋಜನವು.

ಕೆಲವು ಸ್ತೋತ್ರಗಳು ಪರಮಾತ್ಮನ ಅದ್ವೈತಸ್ಥಿತಿಯನ್ನು ವರ್ಣಿಸುತ್ತವೆ, ಪರಮಾತ್ಮನೂ ನಾನು ಒಂದೇ ಎಂಬುದನ್ನು ಬೋಧಿಸುತ್ತವೆ; ಅವು ಮಿಕ್ಕ ಎಲ್ಲಾ ಸ್ತೋತ್ರಗಳಿ ಗಿಂತಲೂ ಉತ್ಕೃಷ್ಟವಾದವೇ ಸರಿ. ಆದರೆ ಅವುಗಳ ಅನುಸಂಧಾನವು ಶುದ್ಧ ಸಾತ್ತ್ವಿಕರಿಗೆ ಮಾತ್ರ ಲಾಭದಾಯಕವಾಗಿರುತ್ತವೆ; ಮತ್ತು ಅವುಗಳ ಅರ್ಥಾನು ಸಂಧಾನವು ಅಂಥವರಿಗೆ ಮಾತ್ರ ಸಾಧ್ಯ. ಅದಕ್ಕೆ ಯೋಗ್ಯತೆಯಿಲ್ಲದಿರುವರು. ಪರಮೇಶ್ವರನ ಸಗುಣಸಾಕಾರರೂಪದ ಸ್ತೋತ್ರದಿಂದ ಆತನ ವೈಭವವನ್ನು ಮನದಂದು ಕೊಳ್ಳುವ ಮೂಲಕ, ಈಗಿನ ಕೆಳಮಟ್ಟದಿಂದ ಮೇಲಕ್ಕೆ ಏರಬೇಕು. ಭಕ್ತಿವೈರಾಗ್ಯಗಳು ಬಲಿತು ಕೊಂಡರೆ, ಹಿತಮಿತಮೇಧ್ಯಾಹಾರವನ್ನು ತಿಂದವನಿಗೆ ಹಸಿವೂ ಹೋಗಿ ತುಷ್ಟಿಪುಷ್ಟಿಗಳೂ ದೊರಕುವಂತೆ, ಪರಮಾತ್ಮನ ವಿಭೂತಿಯೂ ಉಪಾಸನೆಯಿಂದಾಗುವ ಆನಂದವೂ ದೊರಕುವವಲ್ಲದೆ ಪರಮಾರ್ಥಸ್ವರೂಪದ ಅನುಸಂಧಾನಕ್ಕೆ ತಕ್ಕ ಸಾಮರ್ಥ್ಯವೂ ಲಭಿಸುವದು. ಇದೇ ಸ್ತೋತ್ರ ಪಠನದಿಂದಾಗ ಬೇಕಾಗಿರುವ ಪರಮಫಲವು.

*****

# 62. ಮಂತ್ರಜಪ [1]

ಉಪಾಸನಾಮಾರ್ಗವೆಂಬುದೊಂದು ಕಲೆ. ಉಪಾಸನೆಯು ಕರ್ಮಜ್ಞಾನಗಳಿಗೆ ನಡುವೆ ಇರುವ ಸಾಧನವಿಶೇಷವು. ಕರ್ಮವು ಶರೀರಪ್ರಧಾನವಾಗಿರುತ್ತದೆ, ಜ್ಞಾನವು ಮನಃಪ್ರಧಾನವಾಗಿರುತ್ತದೆ. ಶರೀರಮನಸ್ಸುಗಳೆರಡನ್ನೂ ಉಪಯೋಗಿಸಿಕೊಂಡು ಉಪಾಸನೆ ಮಾಡಬೇಕಾಗುತ್ತದೆ. ಉಪಾಸನಾವಾಕ್ಯಗಳು ಶಾಸ್ತ್ರದಲ್ಲಿವೆ; ಅವುಗಳನ್ನು ಕೇಳಿಬಿಟ್ಟರಾಯಿತೆಂದು ಭಾವಿಸಬಾರದು. ಉಪಾಸನೆಯು ಕರ್ಮದಂತೆಯೇ ಅನುಷ್ಠಾನದ ವಿಷಯವಾಗಿರುತ್ತದೆ. ಪರಿಚ್ಛಿನ್ನಾತ್ಮಜ್ಞಾನವು ಹೋಗುವವರೆಗೂ ಅಪರಿಚ್ಛಿನ್ನಾತ್ಮಜ್ಞಾನವು ಹುಟ್ಟುವಹಾಗಿಲ್ಲ, ಆ ಜ್ಞಾನಕ್ಕೆ ಅಧಿಕಾರಿಗಳು ಬಹಳ ವಿರಳರಾಗಿರುತ್ತಾರೆ. ಗುಡ್ಡದಮೇಲಕ್ಕೇರಿದವರಿಗೆಲ್ಲ ಚಿಂತಾಮಣಿಯು ಸಿಕ್ಕಲಾರದಷ್ಟೆ? ಉಪಾಸನಾಮಾರ್ಗವು ಸ್ವಲ್ಪ ಸುತ್ತಾದರೂ ಪರಮಾತ್ಮನನ್ನು ಕಾಣುವದಕ್ಕೆ ಅದೇ ರಾಜಮಾರ್ಗವಾಗಿರುತ್ತದೆ.

ಉಪಾಸನಾಮಾರ್ಗದಲ್ಲಿ ಮಂತ್ರಜಪದ ಅನುಷ್ಠಾನವೆಂಬುದೊಂದು ಅಭ್ಯಾಸವಿದೆ. ಮಂತ್ರವೆಂದರೆ ಅಕ್ಷರಗಳ ಗುಂಪೆಂಬುದು ನಮ್ಮಗಳ ತಿಳಿವಳಿಕೆ. ಆದರೆ ಅದು ಮಂತ್ರದ ಹೊರಮೈಮಾತ್ರವಾಗಿರುತ್ತದೆ. ಮನುಷ್ಯನ ಒಳಭಾಗವನ್ನು ಅರಿಯುವದಕ್ಕೆ ಮೈ ಹೇಗೆ ಹೊರಗಿನ ಗುರುತುಮಾತ್ರವಾಗಿರುತ್ತದೆಯೋ ಹಾಗೆಯೇ ಇದು. ಬೇರೆ ಜನರ ಸ್ವರೂಪವನ್ನು ಅವರೊಡನೆ ಸಂಭಾಷಣಾದಿಗಳನ್ನು ಮಾಡಿದರೆ ಆಗುವ ಪ್ರತಿಕ್ರಿಯೆಯಿಂದ ಊಹಿಸಬೇಕಾಗುತ್ತದೆ; ಆದರೆ ತನ್ನ ಸ್ವರೂಪವನ್ನು ತಾನು ಅನುಭವದಿಂದಲೇ ನೇರಾಗಿ ಅರಿತುಕೊಳ್ಳಬಹುದು. ಹೀಗೆಯೇ ಮಂತ್ರವೆಂಬುದು ಮತ್ತೊಬ್ಬರ ಬಾಯಿಂದ ಬಂದಾಗ ಅದರ ಸ್ವರೂಪವು ನಮಗೆ ಅನುಮೇಯವಾಗಿರುತ್ತದೆ; ಆದರೆ ಅಂತರ್ಮುಖಿಗಳಾದವರಿಗೆ ಅವರವರಲ್ಲಿರುವ ಮಂತ್ರವು ಅನುಭವೈಕಗೋಚರವಾಗಿರುತ್ತದೆ.

ಚಿತ್ತದಲ್ಲಿ ಅನೇಕಭಾವನೆಗಳು ಸುಪ್ತವಾಗಿರುತ್ತವೆ. ಅವುಗಳಲ್ಲಿ ಕೆಲವು ಮಾತ್ರ

---

**1.** ಶ್ರೀಶ್ರೀಗಳವರು ಕಳೆದ ಶರನ್ನವರಾತ್ರಿಯಲ್ಲಿ ತಾ|| 22-10- 1955ರಂದು ಅನುಗ್ರಹಿಸಿದ ಉಪದೇಶದ ಸಾರ.

ಮೇಲಕ್ಕೆದ್ದು ಕಾಣಿಸಿಕೊಳ್ಳುತ್ತವೆ. ಸಮುದ್ರದಲ್ಲಿ ಬೇರೆಬೇರೆಯ ಮಟ್ಟಗಳಲ್ಲಿ ಮೀನುಗಳೇ ಮುಂತಾದ ಪ್ರಾಣಿಗಳು ಜೀವಿಸುತ್ತಿರುವಂತೆ ನಮ್ಮ ಚಿತ್ತದಲ್ಲಿಯೂ ಭಾವನೆಗಳು ಕೆಲವು ಸುಪ್ತವಾಗಿರುತ್ತವೆ, ಕೆಲವು ಉದ್ಬುದ್ಧವಾಗಿರುತ್ತವೆ; ಮತ್ತೆ ಕೆಲವು ಅರ್ಧ ಸುಪ್ತವೂ ಉದ್ಬುದ್ಧವೂ ಆಗಿರುತ್ತವೆ. ಅವ್ಯಕ್ತವಾಸನೆಗಳ ರಾಶಿಯು ಸಂಚಿತವೆನಿಸುತ್ತದೆ, ವ್ಯಕ್ತವಾದವು ಪ್ರಾರಬ್ಧಕರ್ಮದ ಫಲವಾದ ಶರೀರದಲ್ಲಿ ವಾಗ್ರೂಪವಾಗಿಯೂ ಪ್ರವೃತ್ತ್ಯಾದಿ ವ್ಯವಹಾರರೂಪವಾಗಿಯೂ ಹೊರತೋರುತ್ತವೆ. ಒಳಗೆ ಚಿತ್ತದಲ್ಲಿ ವೃತ್ತಿಗಳ ರೂಪವಾಗಿರುತ್ತವೆ. ಸಾಮಾನ್ಯವಾಗಿ ವಾಕ್ಕಿಗೂ ಮನಸ್ಸಿಗೂ ನಿಕಟವಾದ ಸಂಬಂಧ ವಿರುತ್ತದೆ. ಮನಸ್ಸಿನಲ್ಲಿರುವ ಕಾಮ, ಕ್ರೋಧ, ಲೋಭ, ಮೋಹ, ಶಾಂತಿ, ವೈರಾಗ್ಯ, ಸಮಾಧಾನ- ಮುಂತಾದವುಗಳು ಹೊರಗೆ ವಾಗ್ರೂಪವಾಗಿ ಕಾಣಿಸಿಕೊಳ್ಳುತ್ತಿರುತ್ತವೆ. ಆದರೆ ಮಕ್ಕಳು, ಅವಿವೇಕಿಗಳು, ಮುದುಕರು, ಹುಚ್ಚರು- ಮೊದಲಾದವರಲ್ಲಿ ಅವರಾಡುವ ಮಾತುಗಳಿಗೂ ಮನಸ್ಸಿನಲ್ಲಾಗುವ ವೃತ್ತಿಗಳಿಗೂ ಸಂಬಂಧವೇ ಇರುವದಿಲ್ಲ. ಮಾತಿಗೂ ಮನಸ್ಸಿಗೂ ಸಂಬಂಧವು ಸರಿಯಾಗಿದ್ದಷ್ಟೂ ಮನುಷ್ಯನು ಹೆಚ್ಚಿನ ಅರ್ಥದಲ್ಲಿ ಮನುಷ್ಯನೆನಿಸಿಕೊಳ್ಳುತ್ತಾನೆ.

ಭಾಷೆಗಳಿಗೆ ಮೂಲವು ಯಾವದು? ಮಾತೃಕಾಮಂತ್ರ. ಇದರಲ್ಲಿರುವ ಅಕಾರಾದಿಹಕಾರಾಂತವಾಗಿರುವವು ಕಲೆಗಳೆನಿಸುವವು. ಮಂತ್ರಶಾಸ್ತ್ರಜ್ಞರು ಹೊರಗೆ ನಾವು ಉಚ್ಚರಿಸುವ ವರ್ಣಗಳಿಗೆಲ್ಲ ಮೂಲವಾಗಿರುವ ಕಲೆಗಳ ವಿವರವನ್ನು ಪರೀಶೀಲಿಸಿ ತಿಳಿಸಿಕೊಟ್ಟಿರುತ್ತಾರೆ. ಪರಮಾತ್ಮನ ಪರಶಕ್ತಿಯ ವಿಕಾಸವೇ ಪ್ರಪಂಚವಾಗಿರುತ್ತದೆ; ಈ ಪ್ರಪಂಚವು ವಿಷಯವಿಷಯಿಭಾವದಿಂದ ವಿಂಗಡವಾಗಿ ನಮಗೆ ಕಾಣಿಸಿಕೊಳ್ಳುತ್ತಿದೆ. ಪರಮಾತ್ಮನು ಪ್ರಪಂಚವನ್ನೆಲ್ಲ ಸೃಷ್ಟಿಸಿ ಅದರೊಳಗೆ ಜೀವನಾಗಿ ಪ್ರವೇಶಿಸಿರುತ್ತಾನೆಂದು ಉಪನಿಷತ್ತುಗಳಲ್ಲಿ ಹೇಳಿದೆಯಷ್ಟೆ. ಸಂಸಾರಸ್ಥಿತಿಯಲ್ಲಿರುವ ಈ ಜೀವನು ಶಬ್ದಸ್ಪರ್ಶಾದಿವಿಷಯಗಳನ್ನು ಅನುಭವಿಸುವ ಪರಿಚ್ಛಿನ್ನವಾದ ಮಾಯಾರೂಪವುಳ್ಳವನಾಗಿರುತ್ತಾನೆ. ಈ ಜೀವನನ್ನು ಶಬ್ದಗಳು ಆಯಾ ಪದಾರ್ಥಗಳ ಸಮೇತವಾಗಿ ಕಟ್ಟಿಹಾಕಿರುತ್ತವೆ. ಇವುಗಳೆಲ್ಲ ಮಾತೃಕೆಯ ಬಗೆಬಗೆಯ ರೂಪಗಳೇ ಆಗಿರುತ್ತವೆ. ಶಬ್ದಶ್ರವಣಮಾತ್ರದಿಂದ ಅಥವಾ ಉಚ್ಚಾರಣಮಾತ್ರದಿಂದ ನಮಗೆ ಕಾಮ, ಕ್ರೋಧ, ಹರ್ಷ, ಉದ್ವೇಗ- ಮುಂತಾದವುಗಳಾಗುವದು ಸುಪ್ರಸಿದ್ಧವಾಗಿರುತ್ತದೆ. ಶಬ್ದದಿಂದಲೇ

ನಮ್ಮ ಅಭಿಪ್ರಾಯವನ್ನು ಮತ್ತೊಬ್ಬರಿಗೆ ನಾವು ತಿಳಿಸುತ್ತೇವೆ; ಮತ್ತೊಬ್ಬರ ಹೃದಯವನ್ನು ಅರಿತುಕೊಳ್ಳುತ್ತೇವೆ. ಶಬ್ದಗಳ ವಾಚ್ಯಾರ್ಥ, ಲಕ್ಷ್ಯಾರ್ಥ - ಇವುಗಳನ್ನು ಗೊತ್ತುಮಾಡುವದೂ ಧ್ವನಿ, ತಾತ್ಪರ್ಯ- ಮುಂತಾದವುಗಳನ್ನು ಗೊತ್ತುಪಡಿಸುವದೂ ಈ ದೃಷ್ಟಿಯಿಂದ ಪ್ರಯೋಜನಕಾರಿಯಾಗಿದೆ.

ಲೌಕಿಕಶಬ್ದಗಳು ಪರಿಚ್ಛಿನ್ನಭಾವನೆಯನ್ನು ಎಬ್ಬಿಸುತ್ತವೆ; ಅವುಗಳನ್ನು ಉಚ್ಚರಿಸುವದು, ಶ್ರವಣಮಾಡುವದು-ಇವುಗಳ ಅಭ್ಯಾಸದಿಂದ ನಾವು ಪರಿಚ್ಛಿನ್ನರು, ಶರೀರಿಗಳು - ಎಂಬ ಭಾವನೆಯು ಬಲಪಡುತ್ತಿರುತ್ತದೆ. ಮಂತ್ರಶಾಸ್ತ್ರಜ್ಞರು ಮಾತೃಕೆಯ ಕಲೆಗಳ ತತ್ತ್ವವನ್ನು ಬಲ್ಲವರು; ಆದ್ದರಿಂದ ಅವರು ನಮಗೆ ಪರಿಚ್ಛಿನ್ನಭಾವನೆಯನ್ನು ತಪ್ಪಿಸುವದಕ್ಕಾಗಿ ಆಯಾ ವರ್ಣಗಳಿಂದ ತಿಳಿಯಬೇಕಾದ ಪರಿಚ್ಛೇದವಿನಾಶಕತತ್ತ್ವವು ನಮ್ಮ ಮನಸ್ಸಿಗೆ ಹಿಡಿಯುವಂತೆ ಮಾಡುತ್ತಾರೆ. ಉದಾಹರಣೆಗೆ 'ಅಕಾರವು ವಿಷ್ಣು ವಾಚಕವು' ಎಂಬ ಭಾವವನ್ನು ದೊಡ್ಡವರು ತಿಳಿಸಿಕೊಟ್ಟಾಗ, ಅವರ್ಣಮಾತ್ರದಿಂದಲೇ ನಮ್ಮ ಅಂತಃಕರಣವು ಒಂದಾನೊಂದು ಔನ್ನತ್ಯವನ್ನು ಪಡೆಯುವದು. ಆಗ ಅಕಾರವು ಮಂತ್ರವಾಯಿತು. ಮಂತ್ರವೆಂದರೆ ನಾವು ಬರೆಯುವ ಲಿಪಿಯ ಅಕ್ಷರವಲ್ಲ; ಕಿವಿಗೆ ಕೇಳಬರುವ ಶಬ್ದಗಳೂ ಅಲ್ಲ, ಶಬ್ದವೂ ಮಂತ್ರಕ್ಕೇ ಸೇರಿದ್ದೇ ಆದರೂ ಮಂತ್ರವು ಮುಖ್ಯವಾಗಿ ಮನಸ್ಸಿಗೇ ಸೇರಿದ್ದಾಗಿರುತ್ತದೆ. ಶಬ್ದದ ಸಂಬಂಧವಿಲ್ಲದ ಪ್ರತ್ಯಯವೇ ಇಲ್ಲವೆಂದು ಭಾಟ್ಟರು ಹೇಳುತ್ತಾರೆ; ಆದ್ದರಿಂದ ಈ ದೃಷ್ಟಿಯಿಂದ ಮನಸ್ಸು-ಶಬ್ದ- ಇವೆರಡೂ ಒಂದರಮೇಲೊಂದು ಪರಿಣಾಮವನ್ನುಂಟುಮಾಡುವದಾಗಿರುತ್ತದೆ. ಶಬ್ದವು ಮನಸ್ಸು ಅಥವಾ ಚಿತ್ತಕ್ಕೂ ಚಿತ್ತವು ಚಿದ್ರೂಪನಾದ ಪರಮಾತ್ಮನಿಗೂ ಮುಟ್ಟು ವಂತೆ ಮಾಡುವದೇ ನಿಜವಾದ ಮಂತ್ರದ ಕೆಲಸವು. ಈ ಕಾರಣದಿಂದ ಚಿತ್ತವೇ ಮಂತ್ರವು ಎಂದು ಆಗಮಶಾಸ್ತ್ರಜ್ಞರು ಹೇಳುತ್ತಾರೆ.

ಸಮುದ್ರದಲ್ಲಿ ಅಲೆಗಳು ಏಳುವಂತೆ ಚಿತ್ತದಲ್ಲಿ ವೃತ್ತಿಗಳು ಏಳುತ್ತಿರುತ್ತವೆ. ಒಂದೊಂದು ವೃತ್ತಿಯೂ ಒಂದೊಂದು ಭಾವವನ್ನು ತಿಳಿಸುವದು. ಅಲೆಗಳೆಲ್ಲವೂ ಕೂಡಿ ಸಮುದ್ರವಾದಂತೆ, ಬಿಡಿಬಿಡಿಯ ಭಾಗಗಳೆಲ್ಲ ಸೇರಿ ಯಂತ್ರವಾದಂತೆ, ಶಬ್ದಗಳು, ಭಾವಗಳು- ಇವೆಲ್ಲ ಕೂಡಿ ಚಿತ್ತರೂಪವಾದ ಮಂತ್ರವಾಗುವದು. ಶಬ್ದ ಶಕ್ತಿ, ಆಲೋಚನಾಶಕ್ತಿ- ಇವುಗಳ ಕೂಡುವಿಕೆಯಿಂದ ಒಂದು ರೂಪು ಮೂಡಿಕೊಳ್ಳುವದು,

ಒಂದು ಬಗೆಯ ಶಕ್ತಿಸಂಯೋಜನೆಯಿದು. ಮಂತ್ರವು ಸ್ವಾಧೀನವಾದವನು ತನ್ನ ಮನಸ್ಸಿನ ಭಾವಗಳನ್ನೂ ಶಬ್ದಗಳನ್ನೂ ಸ್ವಾಧೀನದಲ್ಲಿರಿಸಿಕೊಳ್ಳಬಲ್ಲನು. ಹಠ ಯೋಗಿಗಳು ಸಾಮಾನ್ಯರಿಗೆ ಸ್ವಾಧೀನದಲ್ಲಿಲ್ಲದ ಶರೀರದ ಅವಯವಗಳನ್ನು ಕೆಲವನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿರುವಂತೆಯೇ ಮಂತ್ರಯೋಗಿಯೂ ಮನಸ್ಸಿನ ಭಾವ ಗಳನ್ನು ಸ್ವಾಧೀನದಲ್ಲಿಟ್ಟುಕೊಳ್ಳಬಲ್ಲವನಾಗಿರುತ್ತಾನೆ.

ನಮ್ಮ ಭಾವನೆಗಳು ನಮ್ಮ ಅಳವಿನಲ್ಲಿರುವದಕ್ಕೆ ಮೊದಲು ಚಿತ್ತದಲ್ಲಿ ಮಂತ್ರ ಗಳು ಏರ್ಪಡಬೇಕು. ನಮ್ಮ ನಾಲಗೆಯಲ್ಲಿ ಬಾಹ್ಯವಿಷಯದ ಶಬ್ದಗಳು ಬರಬಾರದು. ಆಧ್ಯಾತ್ಮಿಕಭಾವನೆಗಳನ್ನೆಬ್ಬಿಸುವ ವಾಗ್ವಿಶೇಷಗಳು ಆಡಬೇಕು; ಇವೇ ಮಂತ್ರಗಳು. ನಮ್ಮಲ್ಲಿ ಒಬ್ಬೊಬ್ಬನೂ ಒಂದೊಂದು ಪರಿಚ್ಛಿನ್ನಪ್ರಪಂಚದಲ್ಲಿರುತ್ತೇವೆ. ಇಂಥಿಂಥ ಮಾತುಗಳು, ಇಂಥಿಂಥ ಆಲೋಚನೆಗಳು–ಎಂದು ಪರಿಮಿತಿಯ ಶಬ್ದಗಳ ಮತ್ತು ಭಾವನೆಗಳ ಪ್ರಪಂಚದಲ್ಲಿ ನಾವು ಒಬ್ಬೊಬ್ಬರೂ ಇದ್ದು ಬಿಟ್ಟಿರುತ್ತೇವೆ. ಚಿತ್ತದ ಈ ಸ್ವಭಾವವನ್ನರಿತು ಅದರಲ್ಲಿ ಆತ್ಮಸ್ವರೂಪದ ಭಾವನೆಗಳನ್ನು ಎಬ್ಬಿಸುವ ಪ್ರಯತ್ನವನ್ನು ಮಾಡಬೇಕು. ಆಗ ಚಿತ್ತವು ಮಂತ್ರಮಯವಾಗುವದು, ಕ್ರಮವಾಗಿ ಆತ್ಮನನ್ನು ಹಿಡಿಯುವದು, ಆತ್ಮನನ್ನು ಮುಟ್ಟುವದು– ಇದೇ ಮಂತ್ರವನ್ನುಪಯೋಗಿಸುವದರ ರಹಸ್ಯ.

ವ್ಯವಹಾರದಲ್ಲಿ ಹೇಗೆ ಗೊತ್ತಿರುವ ಶಬ್ದಗಳನ್ನೂ ಭಾವನೆಗಳನ್ನೂ ಮತ್ತೆ ಮತ್ತೆ ಅಭ್ಯಾಸಮಾಡುತ್ತಿರುವೆವೋ ಅದರಿಂದ ನಾವು ಹೇಗೆ ಆಯಾ ವ್ಯವಹಾರಮಯ ರಾಗಿಬಿಡುವೆವೋ ಹಾಗೆಯೇ ಮಂತ್ರಗಳ ಅಭ್ಯಾಸದ ಉಪಯೋಗದಿಂದ ನಾವು ಮಂತ್ರಮಯರಾಗಬೇಕು. ಮಂತ್ರವನ್ನು ಪ್ರಯೋಗಿಸುವ ಮುಂಚೆ ನ್ಯಾಸವನ್ನು ಮಾಡುವ ಪದ್ಧತಿಯು ನಮ್ಮಲ್ಲಿ ಕೆಲವರಿಗಾದರೂ ತಿಳಿದಿದೆಯಷ್ಟೆ. ಇಲ್ಲಿ ಶರೀರವನ್ನೆಲ್ಲ ಮಂತ್ರಮಯವಾದಂತೆ ಮಾಡಿಕೊಳ್ಳುವದೇ ಉದ್ದೇಶವು. ಮಂತ್ರಜಪದ ಉದ್ದೇಶವು ಮನಸ್ಸನ್ನು ಮಂತ್ರಮಯವಾಗಿ ಮಾಡುವದೇ ಆಗಿರುತ್ತದೆ. ಜಪವೆಂದರೆ ಒಂದಾ ನೊಂದು ಶಬ್ದವನ್ನು ಮತ್ತೆಮತ್ತೆ ಉಚ್ಚರಿಸುವದು ಮಾತ್ರವಲ್ಲ; ವ್ಯವಹಾರದ ಶಬ್ದಗಳನ್ನೂ ಭಾವನೆಗಳನ್ನೂ ಕಳಚಿಹಾಕಿ ಪರಮಾತ್ಮಭಾವನಾಮಯವಾಗಿ ಮಾಡಿ ಕೊಳ್ಳುವ ಪ್ರಯತ್ನವೇ ಜಪವು. ಮಂತ್ರದ ಶಬ್ದರೂಪವನ್ನು ಜಪಿಸುವದು ಶ್ರೇಷ್ಠವೇ

ಸರಿ; ಆದರೆ ಅದಕ್ಕೆ ತಕ್ಕಂತೆ ಭಾವನೆ, ಆಯಾ ಮಂತ್ರದೇವತೆಯ ರೂಪಧ್ಯಾನ-ಇವೆಲ್ಲ ಸೇರಿದರೇ ಪೂರ್ಣಜಪವಾಗುತ್ತದೆ. ಇದರಿಂದ ಯಾವ ದೇವತೆಯ ಮಂತ್ರವನ್ನು ಜಪಿಸುತ್ತಿರುವನೋ ಅದರಲ್ಲಿಯೇ ತನ್ಮಯನಾಗಿಬಿಡುವನು.

ಮಂತ್ರಗಳಲ್ಲಿ ಉಪದಿಷ್ಟವಾಗುವ ರಾಮ, ಶಿವ, ಕೃಷ್ಣ- ಮುಂತಾದ ಶಬ್ದಗಳ ಅರ್ಥವನ್ನು ಅನುಭವಿಗಳಿಂದ ತಿಳಿದುಕೊಂಡು ಆಯಾ ಭಾವನೆಯನ್ನು ಬೆಳೆಯಿಸಿ ಕೊಳ್ಳಬೇಕು. ಮಂತ್ರವು ಅದರ ಲಕ್ಷ್ಯವಾದ ತತ್ತ್ವವು ಅಮೃತವಾಗಿ ಆನಂದಮಯ ವಾಗಿ ಅಪರಿಚ್ಛಿನ್ನವಾಗಿದೆ ಎಂಬ ರೂಪವನ್ನು ತಿಳಿಸಿಕೊಡಬೇಕು. ಪರಮೇಶ್ವರನ ಪರಾ ಶಕ್ತಿಯು ಸರ್ವವ್ಯಾಪಕವಾಗಿರುತ್ತದೆ; ಅದರ ವಿಸ್ತಾರವೇ ಭಾವನೆಗಳು, ಶಬ್ದಗಳು, ಹೊರಗಿನ ಪದಾರ್ಥಗಳು, ಆಧಿದೈವಿಕತತ್ತ್ವಗಳು - ಎಲ್ಲವೂ ಎಂಬ ಮಹಾ ಭಾವನೆಯು ಎದ್ದರೆ ಹಿಮದ ಬೊಂಬೆಯು ಕರಗಿ ಸಮುದ್ರದಲ್ಲಿ ಮುಳುಗಿ ಒಂದಾದಂತೆ ಸಾಧಕನು ಆ ಪರಮಾತ್ಮನಲ್ಲಿ ಒಂದಾಗಿಬಿಡುವನು. ಮಂತ್ರಮಯ ರಾಗಿರುವ ಮಹನೀಯರಿಂದಲೇ ಲೋಕಕ್ಕೆ ಕಲ್ಯಾಣವಾಗುವದು. ಅವರ ಉಪದೇಶ ದಿಂದ ಅವರ ಸಂನಿಧಿಯಲ್ಲಿ ಮಂತ್ರಗಳನ್ನು ಜಪಿಸಿ ಪರಮಾತ್ಮಭಾವನೆಯನ್ನು ತಂದುಕೊಂಡು ಪರಮಾತ್ಮನಲ್ಲಿ ಮುಳುಗಿಹೋಗಬೇಕು. ಮಂತ್ರವೆಂಬುದು ನಮ್ಮಲ್ಲಿಯೇ ಇರುವದಾದರೂ ಸುಪ್ತವಾಗಿರುವ ಭಾವನಾಚಕ್ರಕ್ಕೆ ಕೀಲುಕೊಟ್ಟು ಎಬ್ಬಿಸುವ ಸಾಧನವು. ಅದರಿಂದ ಜೀರಿಗೆ ಮುಂತಾದವುಗಳಿಗೆ ನಿಂಬೆರಸವೇ ಮುಂತಾದವುಗಳಿಂದ ಭಾವನೆ ಮಾಡುವಂತೆ ಚಿತ್ತವನ್ನು ಭಾವನೆ ಮಾಡಿಕೊಂಡು ಪರಮಾತ್ಮನಲ್ಲಿ ಸಮಾಧಿಯನ್ನು ಪಡೆಯಬೇಕು. ಇದೇ ಮಂತ್ರಜಪದ ಹೆಗ್ಗುರಿ.

*****

# 63. ನಾಮಕೀರ್ತನ [1]

ಈ ದಿನದ ವಿಷಯವು ನಾಮಕೀರ್ತನ. ಈ ವ್ಯಾಖ್ಯಾನಮಾಲೆಯಲ್ಲಿ ಇದನ್ನು ಎಲ್ಲಿ ಇಡಬೇಕು ಎಂಬ ಯೋಚನೆಯೊಂದು ನನಗೆ ಹತ್ತಿಕೊಂಡಿತ್ತು. ಸರಿಯಾಗಿ ನೋಡಿದರೆ ಕೀರ್ತನೆಯನ್ನು ಉಪಾಸನೆಯ ವಿಷಯದಲ್ಲಿ ಮಾತನಾಡುವಾಗ ತೀರ ಕೊನೆಗೆ ಇಡುವದು ಒಳಿತೆಂದು ತೋರಿತು; ಸಾಧಕರದೃಷ್ಟಿಯಿಂದ ನೋಡಿದರೆ ಇದನ್ನು ಎಲ್ಲಿಟ್ಟರೂ ಒಳ್ಳೆಯದೇ ಆಗುತ್ತದೆ; ಇದಕ್ಕೆ ಕಾರಣವು ಇಷ್ಟರಲ್ಲಿಯೇ ತಮಗೆ ಗೊತ್ತಾಗುವದು. ಈಗ ಇಷ್ಟನ್ನು ಮೊದಲು ಹೇಳಿರುವೆನು. ಪರಮಾತ್ಮತತ್ತ್ವವನ್ನು ಅರಿತವನು ಆನಂದದಿಂದ ಹಾಡುವ ಕೀರ್ತನೆಯು, ಕೆರೆಯು ತುಂಬಿದಾಗ ಹರಿಯುವ ಕೋಡಿಯಂತೆ ಇರುತ್ತದೆ. ಅದು ಫಲರೂಪವಾಗಿರುವದರಿಂದ ಅದನ್ನು ಉಪಾಸನೆಯ ಫಲವನ್ನು ತಿಳಿಸುವದಕ್ಕಾಗಿ ಕೊನೆಯಲ್ಲಿ ಹೇಳುವದೇ ಯುಕ್ತ. ಆದರೆ ಸಾಧಕರಿಗೆ ನಾಮಕೀರ್ತನೆಯೇ ಇಹಲೋಕದ ಭೋಗಗಳ ಆಸಕ್ತಿಯನ್ನು ತಪ್ಪಿಸಿ, ಪರಮಾತ್ಮನಕಡೆಗೆ ತಿರುಗಿಸುವ ಸಾಧನವಾಗಿರುತ್ತದೆ. ಅದು ಹೃದಯಪರಿಶುದ್ಧಿಯನ್ನೂ ಚಿತ್ತೈಕಾಗ್ರತೆಯನ್ನೂ ಉಂಟುಮಾಡಿ ಮೆಲ್ಲಮೆಲ್ಲನೆ ಅಧ್ಯಾತ್ಮಚಿಂತನೆಯ ಸವಿಯನ್ನು ಹೆಚ್ಚಿಸಿ ತೋರಿಸುವದು. ಆದ್ದರಿಂದ ಸಾಧಕರು ಕೀರ್ತನೆಯಿಂದಲೇ ಆರಂಭಿಸುವದೇ ಒಳ್ಳೆಯದೆಂದು ಹೇಳಬೇಕು.

ಒಂದು ಉದಾಹರಣೆಯಿಂದ ಇದನ್ನು ಸ್ಪಷ್ಟಗೊಳಿಸಬಹುದು. ತೈತ್ತಿರೀಯೋಪನಿಷತ್ತಿನಲ್ಲಿ ಬ್ರಹ್ಮಜ್ಞಾನದಿಂದ ಪರಮಪುರುಷಾರ್ಥವಾಗುವದು ಎಂದು ಸೂತ್ರರೂಪವಾಗಿ ಹೇಳಿದ ವಾಕ್ಯವನ್ನು ವಿವರಿಸುವ ಸಲುವಾಗಿ ಆತ್ಮನಿಂದ ಆಕಾಶಾದಿಭೂತಗಳೂ ಭೌತಿಕವಸ್ತುಗಳೂ ಉಂಟಾಗಿ ಕಾರ್ಯಕರಣಸಂಘಾತರೂಪವಾಗಿರುವ ಪುರುಷಶಬ್ದವಾಚ್ಯವಾಗಿರುವ ಶರೀರವು ಉತ್ಪನ್ನವಾಗಿದೆ ಎಂದು ಹೇಳಿರುತ್ತದೆ. ಆಮೇಲೆ ಈ ಸಂಘಾತಕ್ಕಿಂತ ತೀರವಿಲಕ್ಷಣನಾಗಿ ಇದೆಲ್ಲವನ್ನೂ ಸಾಕ್ಷಿರೂಪದಿಂದ ಬೆಳಗುತ್ತಿರುವ ಆತ್ಮನೇ ಬ್ರಹ್ಮವು ಎಂಬುದನ್ನು ತಿಳಿಸುವದಕ್ಕಾಗಿ ಅನ್ನಮಯ, ಪ್ರಾಣಮಯ,

---

**1.** ಶ್ರೀಶ್ರೀಗಳವರು ಕಳೆದ ಶರನ್ನವರಾತ್ರಿಯಲ್ಲಿ ತಾ||23-10-1955ರಲ್ಲಿ ಅನುಗ್ರಹಿಸಿದ ಉಪದೇಶ.

ಮನೋಮಯ, ವಿಜ್ಞಾನಮಯ, ಆನಂದಮಯ- ಎಂಬ ಒಂದನ್ನೊಂದು ವ್ಯಾಪಿಸಿಕೊಂಡು ಒಂದಕ್ಕಿಂತ ಒಂದು ಹೆಚ್ಚು ಹೆಚ್ಚು ಸೂಕ್ಷ್ಮವಾಗಿರುವ ಐದುಕೋಶಗಳನ್ನು ಕ್ರಮಕ್ರಮವಾಗಿ ಆತ್ಮನೆಂದು ಅಧ್ಯಾರೋಪದೃಷ್ಟಿಯಿಂದ ತಿಳಿಸಿದ ಬಳಿಕ ಕೊನೆಗೆ ಅವಿದ್ಯಾಕೃತವಾದ ಆಕಾಶಾದಿ ಭೂತಕಾರ್ಯಗಳಾದ ಈ ಐದು ಕೋಶಗಳನ್ನೂ ಮೀರಿರುವ ನಿತ್ಯನೂ ಅವಿಕಾರಿಯೂ ಆಗಿರುವ ಸರ್ವಾತ್ಮನನ್ನೇ ನಿಜವಾದ ಆನಂದ ರೂಪನಾದ ಆತ್ಮನೆಂದು ತಿಳಿಸಿ ಕೊಟ್ಟಿರುತ್ತದೆ. ಈ ಸರ್ವಾತ್ಮಜ್ಞಾನವನ್ನು ಸಂಪಾದಿಸಿ ಕೊಂಡಿರುವ ಜ್ಞಾನಿಯು ತನಗೆ ಇಚ್ಛೆ ಬಂದಂತೆ ಆಹಾರವನ್ನು ಭುಂಜಿಸುತ್ತಲೂ ತನಗೆ ಇಚ್ಛೆಬಂದ ರೂಪವನ್ನು ಧರಿಸಿಕೊಳ್ಳುತ್ತಲೂ ಲೀಲೆಯಿಂದ ಗಾನಮಾಡುತ್ತಿರುವನು ಎಂದು ಜ್ಞಾನಿಯ ನಿತ್ಯಾದ್ವಿತೀಯಾನಂದಸ್ವರೂಪವನ್ನು ಹೊಗಳುವ ಒಂದು ಸಾಮಗಾನ ವನ್ನು ಉದಾಹರಿಸಿರುತ್ತದೆ. **'ಹಾ3ವು ಹಾ3ವು ಹಾ3ವು........ಸುವರ್ಣಜ್ಯೋತೀಃ'** ಎಂಬ ಆಗಾನವನ್ನು ಮಂತ್ರಪುಷ್ಪಕಾಲದಲ್ಲಿ ಬ್ರಾಹ್ಮಣರು ಹಾಡುವದನ್ನು ಬಹು ಜನರು ಕೇಳಿರಬಹುದು. ಆ ಗಾನದ ಅಭಿಪ್ರಾಯವೇನೆಂದರೆ : ಜ್ಞಾನಿಯಾದವನು ಪರಮೇಶ್ವರನಲ್ಲಿ ಒಂದಾಗಿ ಬಿಟ್ಟಿರುವದರಿಂದ ತಾನೇ ಅನ್ನವು, ತಾನೇ ಅನ್ನಾದನು; ಅವನೇ ವಿಷಯವೂ ವಿಷಯಿಯೂ ಆಗಿ ತೋರುತ್ತಿರುತ್ತಾನೆ. ವಿಷಯಿವಿಷಯಗಳ ಸಂಘಾತರೂಪವಾಗಿರುವ ಬಗೆಬಗೆಯ ಶರೀರಗಳಿಗೆ ಕಾರಣನೂ ಅವನೇ; ಈ ಮೂರ್ತಾಮೂರ್ತರೂಪವಾಗಿರುವ ಜಗತ್ತಿಗಿಂತ ಮೊದಲು ಇದ್ದುಕೊಂಡಿರುವ ಹಿರಣ್ಯಗರ್ಭನೂ ಅವನೇ; ಅನ್ನದಾತೃಗಳಿಗೆ ಫಲವನ್ನು ಕೊಡುವವನೂ ಅವನೇ, ಅದಾತೃಗಳಿಗೆ ಅನರ್ಥಕ್ಕೆ ಕಾರಣನಾಗಿರುವವನೂ ಅವನೇ, ನಿತ್ಯಪ್ರಕಾಶಸ್ವರೂಪನವನು, ಇಲ್ಲಿ ಬ್ರಹ್ಮಜ್ಞಾನವನ್ನು ಹೊಗಳಿರುತ್ತದೆ. ಶರೀರೇಂದ್ರಿಯಪರಿಚ್ಛಿನ್ನರಾದವರು ದುಃಖ ದಿಂದ ನರಳುತ್ತಿರುವದಕ್ಕೂ ಪರಮಾತ್ಮಜ್ಞಾನವನ್ನು ಸಂಪಾದಿಸಿ ಅನಂತವಾದ ಪರಭಕ್ತಿ ನಿಷ್ಠರಾಗಿ ಆತ್ಮಸ್ವರೂಪದಲ್ಲಿ ಒಂದಾದವರು ಆನಂದದಿಂದ ವಿಹರಿಸುತ್ತಿರುವದಕ್ಕೂ ಜ್ಞಾನಾಜ್ಞಾನಗಳೇ ಕಾರಣವೆಂಬುದನ್ನು ಈ ಸಾಮವು ತಿಳಿಸಿಕೊಡುತ್ತದೆ. ಜ್ಞಾನದ ಫಲವು ಎಂದೆಂದಿಗೂ ಆನಂದದಿಂದ ವಿಹರಿಸುತ್ತಿರುವದೇ; ಇದೇ ಪರಭಕ್ತರ ಕೀರ್ತನದ ಅಭಿಪ್ರಾಯವು. ನಾರದರು ಪರಮಾತ್ಮನ ನಾಮ ಸಂಕೀರ್ತನವನ್ನು ಮಾಡುತ್ತಾ ಮೂರು ಲೋಕಗಳಲ್ಲಿಯೂ ಸಂಚರಿಸುತ್ತಿರುವರೆಂದು ಪುರಾಣಗಳಲ್ಲಿ ವರ್ಣಿಸಿರುವ ದರ ತತ್ತ್ವವು ಇದೇ ಆಗಿರುತ್ತದೆ.

ಯಾರು ನಾರದರಂತೆ ಈ ಆನಂದವನ್ನು ಪಡೆದುಕೊಂಡಿರುವರೋ ಅವರೆಲ್ಲ ತಮ್ಮ ಕೀರ್ತನೆಯಿಂದ ಎಲ್ಲರಿಗೂ ಆನಂದವನ್ನು ಬೀರುತ್ತಿರುವರು. ಅವರ ಕೀರ್ತನೆಯು ಎಲ್ಲರ ಮೇಲೂ ತನ್ನ ಪ್ರಭಾವವನ್ನು ಬೀರುವದು. ನಮ್ಮ ದೇಶದಲ್ಲಿ ಪುರಂದರ ದಾಸರು ಹಾಡಿರುವ **'ಆಡಿಸಿದಳ್ಯಶೋದ ಜಗದೋದ್ಧಾರನ'** ಎಂಬ ಪದವು ಒಂದಾನೊಂದು ಕಾಲಕ್ಕೆ ಪ್ರಭಾವಶಾಲಿಯಾಗಿ ಹಾಡಿದ ಸಂಗೀತಗಾರರ ಮಧುರ ಶೈಲಿಯಿಂದ ಕಳೆಗಟ್ಟಿಕೊಂಡು ಎಲ್ಲೆಲ್ಲಿಯೂ ಹರಡಿಕೊಂಡಿದ್ದನ್ನು ನಿಮ್ಮಲ್ಲನೇಕರು ನೆನಪಿನಲ್ಲಿಟ್ಟುಕೊಂಡಿರಬಹುದು. ಈಚೆಗೆ ಗದುಗಿನ ಭಾರತದಲ್ಲಿ ನಾರಣಪ್ಪನು ಶ್ರೀಕೃಷ್ಣನ ಮಹಿಮೆಯನ್ನು ಕೊಂಡಾಡಿರುವ ಪದ್ಯಗಳೂ ಹಾಗೆಯೇ ಗಮಕಿಗಳ ಹಾಡುಗಾರಿಕೆಯಿಂದ ಜನರ ಮನಸ್ಸನ್ನು ಸೆಳೆಯುತ್ತಿದೆ. ಇಲ್ಲಿ ಹಾಡುಗಾರಿಕೆಯ ಕಣಿಕಕ್ಕೆ ಎಷ್ಟು ಬೆಲೆಯಿದೆಯೋ ಅದಕ್ಕಿಂತಲೂ ಪರಮಾತ್ಮನ ಸ್ಮರಣೆಯ ಹೂರಣಕ್ಕೆ ಹೆಚ್ಚಿನ ಬೆಲೆಯಿದೆ ಎಂದು ನನಗನಿಸುತ್ತಿದೆ. ನಮ್ಮ ದೇಶದಲ್ಲಿ ಹಿಂದಿಭಾಷೆಯು ಬಹುಜನರಿಗೆ ಪರಿಚಯವು ಆಗುವದಕ್ಕೆ ಮುಂಚೆಯೇ ಕಬೀರದಾಸರ ಪದಗಳು ಜನ ಸಾಮಾನ್ಯದಲ್ಲಿ ಪ್ರಚಾರವಾಗಿದ್ದದ್ದನ್ನು ಮನದಂದುಕೊಂಡವರಿಗೆ ಈ ಅಭಿಪ್ರಾಯದ ನಿಜವು ಸ್ಫುಟವಾಗುತ್ತದೆ. ಮಹಾತ್ಮರಾದ ಭಗವದ್ಭಕ್ತರು ಯಾವ ಭಾಷೆಯಲ್ಲಿ ಕೀರ್ತನ ಮಾಡಿರಲಿ, ಅವರು ಜಾತಿಕುಲಮತಗಳಲ್ಲಿ ಯಾವ ಬಗೆಗೆ ಸೇರಿದವರಾಗಿರಲಿ, ಅವರ ಹಾಡುಗಳು ಎಲ್ಲೆಲ್ಲಿಯೂ ಹೀಗೆ ಹರಡಿ ಜನಪ್ರಿಯವಾಗುವದಕ್ಕೆ ಅವು ಭಗವದ್ವಿಷಯಕವಾಗಿರುವದೂ ಭಗವಂತನು ಸರ್ವರ ಹೃದಯದಲ್ಲಿಯೂ ಇರುವ ಆತ್ಮನೇ ಆಗಿರುವದೂ ಅಲ್ಲದೆ ಮತ್ತೆ ಯಾವ ಕಾರಣವಿದ್ದೀತು? ಭಗವದ್ಭಕ್ತರ ಕೀರ್ತನೆಗಳಲ್ಲಿ ವ್ಯಾಕರಣ, ಛಂದಸ್ಸು- ಮುಂತಾದವುಗಳ ದೃಷ್ಟಿಯಿಂದ ಹಲವು ದೋಷಗಳು ಕಾಣಬರಬಹುದು; ಆದರೆ ಅವುಗಳಲ್ಲಿರುವ ವಿಷಯವು ಸರ್ವರ ಪ್ರೇಮಕ್ಕೂ ಆಸ್ಪದನಾಗಿರುವ ಪರಮಾತ್ಮನೇ ಆಗಿರುವದರಿಂದ ಅದೆಲ್ಲವನ್ನೂ ಮರೆಯಿಸಿ ಶ್ರೋತೃಗಳೆಲ್ಲರನ್ನೂ ಆನಂದದಲ್ಲಿ ಅದ್ದುವದು. ಭಕ್ತಿರಸದಲ್ಲಿ ಆಸಕ್ತಿ ಯುಳ್ಳವರನ್ನು ಹೇಗೋ ವಶಮಾಡಿಕೊಂಡು ಆ ಕೀರ್ತನೆಗಳನ್ನು ಹಾಡಿ ನಲಿಯುವ ಹುಚ್ಚನ್ನು ಅವರಿಗೂ ಹಿಡಿಸಿಬಿಡುವದು. ಇತ್ತೀಚೆಗೆ ಪ್ರೊಫೆಸರ್ ರ‍್ಯಾನಡೆಯವರ ಮೂಲಕವಾಗಿ ಹೊರಕ್ಕೆ ಬಂದಿರುವ ಮಹಾರಾಷ್ಟ್ರ ಹಿಂದಿ ಮತ್ತು ಕನ್ನಡನಾಡಿನ ಅನುಭವಿಗಳಾದ ಭಕ್ತರ ಹಾಡುಗಳನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು.

ಅವರು ಮೂಲತಃ ತತ್ತ್ವವಿಚಾರಕ್ಕೆ ಪ್ರಾರಂಭಿಸಿ ಉಪನಿಷತ್ತುಗಳಲ್ಲಡಗಿರುವ ದರ್ಶನವನ್ನು ಕುರಿತು ಗ್ರಂಥಗಳನ್ನು ಬರೆದರು; ಅವು ಈಚೆಗೆ ಕನ್ನಡಕ್ಕೆ ಅನುವಾದವಾಗಿರುತ್ತವೆ. ಆ ಸಂದರ್ಭದಲ್ಲಿ ಉಪನಿಷತ್ತುಗಳಲ್ಲಿರುವ ಉಪಾಸನೆಯ ವಿಚಾರದ ಕಡೆಗೆ ಅವರ ದೃಷ್ಟಿಯು ಹೊರಳಿತು. ಆಮೇಲೆ ಮಹಾರಾಷ್ಟ್ರದ ಸಾಧುಗಳ ಅಭಂಗಾದಿಗಳನ್ನೂ ಅವರ ಅನುಭವದ ಆಳವನ್ನೂ ಇಂಗ್ಲಿಷುಬಲ್ಲ ವಾಚಕರಿಗೆ ತಿಳಿಸಿಕೊಡುವ ಪ್ರಯತ್ನವನ್ನು ಮಾಡಿದರು. ಅದೂ ಆದಮೇಲೆ ಹಿಂದಿಭಾಷೆಯಲ್ಲಿ ಸಾಧುಗಳ ಕೀರ್ತನಗಳ ಮರ್ಮವನ್ನು ಪರಿಶೋಧಿಸುವ ಅವಕಾಶವು ಅವರಿಗೆ ದೊರೆಯಿತು. ಈ ಸಂದರ್ಭಗಳಲ್ಲಿ ಅವರು ವಿಶೇಷವಾಗಿ ಭಾರತವರ್ಷದ ಭಗವದ್ಭಕ್ತರ ಮತ್ತು ಧ್ಯಾನಯೋಗಿಗಳ ಚಿತ್ತವಿಕಾಸಕ್ರಮವು ಹೇಗೆ ಸಾಗಿರುವ ದೆಂಬುದರ ವಿಶ್ಲೇಷಣವನ್ನು ಮಾಡುವದರಲ್ಲಿ ತೊಡಗಿದ್ದರಾದರೂ ಅವರ ಹೃದಯ ದಲ್ಲಿ ನೈಸರ್ಗಿಕವಾಗಿ ಸುಪ್ತವಾಗಿದ್ದ ಭಕ್ತಿರಸದ ಬುಗ್ಗೆಯು ಮೇಲಕ್ಕೆ ಚಿಮ್ಮುವದಕ್ಕೆ ಮೊದಲಾಯಿತು. ಅವರಿಗೆ ಭಕ್ತಿಪ್ರಪಂಚದಲ್ಲಿ ಹೆಚ್ಚಿನ ಸಂಚಾರವಾಯಿತು. ಇತ್ತೀಚೆಗೆ ಅವರಿಗೆ ಕನ್ನಡನಾಡಿನ ಸಾಧುಗಳೊಬ್ಬರ ಸಂಗದಿಂದ ಅವರ ಹೃದಯದ ತಂಬೂರಿ ಯಲ್ಲಿ ಭಗವಚ್ಚಿಂತನೆಯ ಧ್ವನಿಯು ಮಿಡಿಯಲಾರಂಭಿಸಿತು. ಈಗ ಅವರು ಭಕ್ತಿವಾಙ್ಮಯದ ಇತಿಹಾಸಕರೂ ತತ್ತ್ವಶೋಧಕರೂ ಮಾತ್ರವಲ್ಲದೆ, ತಾವೂ ಅನುಭವಿ ಗಳಾದ ಸಾಧುಗಳ ರಾಷ್ಟ್ರದಲ್ಲಿ ನಾಗರಿಕರಾಗಿರುತ್ತಾರೆ. ಅವರನ್ನು ಪೂಜ್ಯವಾದ ಗುರುಸ್ಥಾನದಲ್ಲಿ ಆವಾಹನೆ ಮಾಡಿರುವ ಶಿಷ್ಯವೃಂದವೂ ಬೆಳೆಯುತ್ತಿದೆ. ಹೀಗಿರುತ್ತದೆ, ಅನುಭವಿಗಳಾದ ಭಕ್ತರ ಕೀರ್ತನೆಯ ಮಹಿಮೆ!

ಸಂಕೀರ್ತನದ ಪ್ರಭಾವವನ್ನು ಮನಗಾಣಿಸುವ ಉತ್ತಮ ನಿದರ್ಶನವೊಂದನ್ನು ಬಂಗಾಲದ ಶ್ರೀಕೃಷ್ಣಚೈತನ್ಯರ ಜೀವನಚರಿತ್ರೆಯಲ್ಲಿ ಕಾಣಬಹುದು. ಮೊದಮೊದಲು ಚೈತನ್ಯರೂ ಅವರ ಅನುಯಾಯಿಗಳೂ ಒಂದು ಮನೆಯನ್ನು ಗೊತ್ತು ಮಾಡಿಕೊಂಡು ಕೀರ್ತನೆಮಾಡುತ್ತಿದ್ದರಂತೆ. ಅಲ್ಲಿ ನಡೆಯುತ್ತಿದ್ದ ಕೀರ್ತನೆಯು ರಾತ್ರೆ ಬಹಳ ಹೊತ್ತು ಒಂದೊಂದು ವೇಳೆ ಬೆಳಗಾಗುವವರೆಗೂ ನಡೆಯುತ್ತಿದ್ದದ್ದರಿಂದ ನೆರೆಮನೆಯವರಿಗೆ ನಿದ್ರಾಭಂಗವಾಗುವದೆಂದು ಜನರು ಗೊಣಗುಟ್ಟುತ್ತಿದ್ದರು. ಇವರ ಗದ್ದಲವು ಹೆಚ್ಚಿದಂತೆ ನವಾಬನವರೆಗೂ ಅವರ ದೂರು ಹೋಯಿತು. ಇಂತಿಷ್ಟು ಹೊತ್ತಿನಮೇಲೆ ಭಜನೆ ಮಾಡಬಾರದೆಂದು ಆತನ ಅಪ್ಪಣೆಯಾಯಿತು. ಆದರೆ ಭಕ್ತಿಪರವಶರಾಗಿದ್ದ ಇವರಿಗೆ

ಯಾರ ಅಂಜಿಕೆಯೂ ಹತ್ತಲಿಲ್ಲ. ಬರುಬರುತ್ತಾ ಭಜನೆಗೆ ಸೇರುವವರ ಸಂಖ್ಯೆಯೂ ಹೆಚ್ಚುತ್ತಾ ಬಂದಿತು. ಕೊನೆಗೆ ಅವರು ದೊಡ್ಡದೊಂದು ನಗರಸಂಕೀರ್ತನೆಯನ್ನೇ ಆರಂಭಿಸಿಬಿಟ್ಟರು. ಕೀರ್ತನೆಯ ಪರಿಣಾಮವು ಕೇಳಿದವರಮೇಲೆಲ್ಲ ಆಗುತ್ತಾ ಬಂದಿತು; ಹೊಸಹೊಸದಾಗಿ ಜನರು ಭಜನೆಯ ಗುಂಪಿನಲ್ಲಿ ಸೇರಿಕೊಂಡರು. ರಾತ್ರೆಯಲ್ಲಿ ನಗರರಕ್ಷಕರು ಈ ಗುಂಪನ್ನು ಚದುರಿಸಲು ಶಕ್ತರಾಗಲಿಲ್ಲ, ಅವರಲ್ಲಿಯೂ ಕೆಲವರಿಗೆ ಕೀರ್ತನೆಯ ಅಮಲು ತಲೆಗೇರಿತು. ಕೀರ್ತನೆಯ ಉತ್ಸವವು ಹಬ್ಬುತ್ತಾ ಮುಂದೆ ನವಾಬನ ಮನೆಯ ಮುಂದೆಯೇ ಬಂದುನಿಂತಿತು. ನವಾಬನು ಸಿಟ್ಟಿನಿಂದಲೂ ಕುತೂಹಲದಿಂದಲೂ ಮಹಡಿಯ ಕಿಟಕಿಯಿಂದ ನೋಡುತ್ತಿರುವಲ್ಲಿ ಏನು ಹೇಳುವದು! ಅವನಿಗೆ ಮೈಮೇಲಿನ ಭಾನವೇ ತಪ್ಪಿಹೋಯಿತು. ಅವನು ಕೆಳಕ್ಕೆ ಇಳಿದು ಈ ಗುಂಪಿನಲ್ಲಿ ಸೇರಿಕೊಂಡು ಕೀರ್ತನೆಯಲ್ಲಿ ಭಾಗವನ್ನು ವಹಿಸಿಬಿಟ್ಟನಂತೆ! ವೀರ ಮುಸಲ್ಮಾನನೊಬ್ಬನನ್ನು ವೈಷ್ಣವನನ್ನಾಗಿ ತಿರುಗಿಸಿದ ಕೀರ್ತನೆಯ ಮಹಿಮೆಯನ್ನು ಶ್ರೀಕೃಷ್ಣಚೈತನ್ಯಲೀಲಾಮೃತದಲ್ಲಿ ಬಹುಸುಂದರವಾಗಿ ವರ್ಣಿಸಿರುತ್ತದೆ ಎಂದು ಹೇಳುತ್ತಾರೆ.

ಈವರೆಗೆ ನಾನು ವಿವರಿಸಿರುವದರ ತತ್ತ್ವವೇನು? ಇದನ್ನು ಶ್ರೀರಮಣ ಮಹರ್ಷಿಗಳಿಗೂ ಒಬ್ಬ ಸಂನ್ಯಾಸಿಗಳಿಗೂ ಆದ ಸಂಭಾಷಣೆಯಿಂದ ಅರಿಯಬಹುದು. ಆ ಸಂನ್ಯಾಸಿಗಳನ್ನು ನಾನು ಮೊನ್ನೆ ಮೊನ್ನೆ ಕಂಡೆ. 'ಮಹಾತ್ಮರ ದರ್ಶನ ಮಾತ್ರದಿಂದಲೂ ಪರಿಣಾಮವಾಗಬಹುದೆ?' ಎಂಬ ಅವರ ಪ್ರಶ್ನೆಗೆ ಮಹರ್ಷಿಗಳು ಹೀಗೆಂದರಂತೆ: ಅಳುವವರನ್ನು ಕಂಡರೆ ನಮಗೂ ಅಳುವಂತೆ ಆಗುತ್ತದೆ, ನಗುವವರನ್ನು ಕಂಡರೆ ನಮಗೂ ನಗುವಂತೆ ಆಗುತ್ತದೆ. ಇದರಂತೆ ಶಾಂತರಾದವರನ್ನು ಕಂಡರೆ ನಮ್ಮ ಮನಸ್ಸಿನಲ್ಲಿಯೂ ಶಾಂತಿಯಾಗಬೇಕಲ್ಲವೆ? ಈ ತತ್ತ್ವವನ್ನು ನಾವು ಕೀರ್ತನೆಗೂ ಅನ್ವಯಿಸಿಕೊಳ್ಳಬಹುದು. ಹೃದಯದಲ್ಲಿ ಭಗವಂತನನ್ನೇ ಅನುಸಂಧಾನ ಮಾಡುತ್ತಾ ಹಾಡುವ ಮಹಾತ್ಮರ ನಾಯಕತ್ವದಲ್ಲಿ ಸಂಕೀರ್ತನೆಯು ನಡೆದರೆ, ಅಜ್ಜಂದಿರಿಂದ ಬಾಯಿಪಾಠವನ್ನು ಹೇಳಿಸಿಕೊಳ್ಳುವ ಮೊಮ್ಮಕ್ಕಳಂತೆ ಅವರ ಹೃದಯದ ಸ್ವಭಾವವನ್ನೇ ನಾವು ಅನುಕರಿಸಿದರೆ ಆ ಕೀರ್ತನೆಯ ಪ್ರವಾಹವು ನಮ್ಮಲ್ಲಿ ನಿರುಪಮಾನವಾದ ಆನಂದವನ್ನುಂಟುಮಾಡಿ, ಅನಾತ್ಮಚಿಂತೆಯನ್ನೆಲ್ಲ ಕೊಚ್ಚಿಕೊಂಡು ಹೋಗುವದು.

ದೊಡ್ಡವರು ಹಾಡಿರುವ ಪದಗಳನ್ನು ಹೃದಯಪ್ರಧಾನವಾಗಿ ನೋಡಿ ವಿಮರ್ಶಿಸಬೇಕು. ನಾನು ಒಮ್ಮೆ ಉತ್ತರಕರ್ಣಾಟಕಕ್ಕೆ ಹೋಗಿದ್ದಾಗ ಅಲ್ಲಿ ಭಜನೆಯ ಸಂಘದವರು 'ಗಂಟಲು ಒಣಗಿತು ಒದರಿ ಒದರಿ, ಬೇಗ ತೋರಿಸು ನಿನ್ನ ಮೋರಿ' ಎಂದು ಹಾಡುತ್ತಿದ್ದರು. ಆ ದೇಶದ ಪದ್ಧತಿಯಂತೆ 'ಒದರಿ', 'ಮೋರಿ' ಎಂಬ ಶಬ್ದಗಳನ್ನು ಹಾಡಿನಲ್ಲಿ ಪ್ರಯೋಗಿಸಲಾಗಿತ್ತು; ನಾನು ಆ ಶಬ್ದಗಳನ್ನು ಹಾಡಿನಲ್ಲಿ ಕೇಳಿದ್ದು ಅದೇ ಮೊದಲಾದ್ದರಿಂದ ಅದು ಸ್ವಲ್ಪ ತಮಾಷೆಯಾಗಿ ಕಾಣುತ್ತಿತ್ತು. ಆದರೆ ಹೃದಯದ ಭಾಷೆಯಾಗಿ ಅದನ್ನು ಪರಿಶೀಲಿಸಿದರೆ ಅದರಲ್ಲಿ ಎಷ್ಟು ರುಚಿಯಿದೆ! ಭಕ್ತಿಯ ತತ್ತ್ವಶಾಸ್ತ್ರವೇ ಬೇರೆ. ಅದು ಹೃದಯಕ್ಕೆ ಸಂಬಂಧಿಸಿದ್ದೇ ಹೊರತು ಬುದ್ಧಿಗೆ ಸಂಬಂಧಪಟ್ಟದ್ದಲ್ಲ. ಜನರು ಅಳುವಾಗ ವ್ಯಾಕರಣದ ನಿಯಮದಂತೆ ಅಳುವರೇನು? ಇಲ್ಲ. ಇದರಂತೆ ಭಕ್ತಿಯಿಂದ ಹಾಡುವಾಗ ವ್ಯಾಕರಣದ ಲೆಕ್ಕವಿಲ್ಲ. ಮಕ್ಕಳು ತಂದೆತಾಯಿಗಳ ಹತ್ತಿರ ಮಾತನಾಡುವಂತೆ ದೇವರ ಹತ್ತಿರ ಆಡುವ ಭಾಷೆ ಅದು. ಅದಕ್ಕೆ ಭಗವಂತನು ಒಲಿಯುವಂತೆ ಯಾವ ಬುದ್ಧಿಪ್ರಧಾನವಾದ ಕವಿತೆಗೂ ಒಲಿಯಲಾರನು.

ಈ ದಿನ ನಾನು ಹೇಳಿದ್ದರ ಸಾರವಿಷ್ಟು: ಕೀರ್ತನೆಯು ಎರಡು ಪ್ರಕಾರ ವಾಗಿರುತ್ತದೆ. ಭಗವಂತನನ್ನು ತಮ್ಮ ಹೃದಯದಲ್ಲಿ ಕಂಡುಕೊಂಡು ಎಲ್ಲೆಲ್ಲಿಯೂ ಆತನನ್ನೇ ಕಾಣುತ್ತಾ ಹಾಡುವದೊಂದು: ಸಾಧಕರಾದವರು ಅಂಥವರ ಮೇಲು ಪಙ್ಕ್ತಿಯನ್ನು ಅನುಕರಿಸಿ ಪರಮಾತ್ಮನ ಭಕ್ತಿಯನ್ನು ಕ್ರಮಕ್ರಮವಾಗಿ ಸಂಪಾದಿಸಿ ಕೊಳ್ಳುವದಕ್ಕೆ ಸಾಧನವಾಗಿ ಮಾಡಿಕೊಳ್ಳುವ ಕೀರ್ತನೆಯು ಇನ್ನೊಂದು. ಕೀರ್ತನೆಯು ನಿಜವಾಗಿ ಕೀರ್ತನೆಯಾಗಬೇಕಾದರೆ ಪರಿಶುದ್ಧವಾದ ಹೃದಯವು ಬೇಕು; ಬರಿಯ ಸಂಗೀತವಾಗಲಿ ಛಂದೋವ್ಯಾಕರಣಬದ್ಧವಾದ ಭಾಷೆಯಾಗಲಿ ಇದ್ದ ಮಾತ್ರದಿಂದ ಅದು ಕೀರ್ತನೆಯೆನಿಸಲಾರದು. ಇಂಥ ನಾಮಕೀರ್ತನೆಯು ನಮಗೂ ದೊರೆಯಲಿ ಎಂದು ಹಾರೈಸೋಣ.

*****

# 64. ಗುರುಭಕ್ತಿ

ವ್ಯಾಸಾಯ ವಿಷ್ಣುರೂಪಾಯ ವ್ಯಾಸರೂಪಾಯ ವಿಷ್ಣವೇ ।
ನಮೋ ವೈ ಬ್ರಹ್ಮನಿಧಯೇ ವಾಸಿಷ್ಠಾಯ ನಮೋ ನಮಃ ॥

ಅಧ್ಯಾತ್ಮವಿದ್ಯಾಪ್ರೇಮಿಗಳಿರಾ, ವರ್ಷಕ್ಕೊಮ್ಮೆ ಗುರುಪೂರ್ಣಿಮೆಯು ಬರುತ್ತಲೇ ಇರುತ್ತದೆ. ಈ ವರ್ಷ ಮತ್ತೆ ಆ ಪವಿತ್ರ ದಿನವು ಹತ್ತಿರವಾಗುತ್ತಿದೆ. ಅಂದು ನೀವು ಏನು ಮಾಡಬೇಕೆನ್ನುವಿರಿ? ಅಧ್ಯಾತ್ಮವಿದ್ಯೆಯಲ್ಲಿ ನಿಮ್ಮ ಮನಸ್ಸು ಸ್ಥಿರವಾಗಿ ನಿಲ್ಲುವಂತೆಯೂ ಅಧ್ಯಾತ್ಮಸಾಧನಮಾರ್ಗದಲ್ಲಿ ಮುಂದುವರಿಯುವಂತೆಯೂ ಆ ದಿನ ಯಾವ ಸಂಕಲ್ಪವನ್ನು ಮಾಡಿಕೊಳ್ಳುವಿರಿ?

**'ಆಚಾರ್ಯವಾನ್ ಪುರುಷೋ ವೇದ'** ಅಧ್ಯಾತ್ಮತತ್ತ್ವವನ್ನು ಸತ್ಸಂಪ್ರದಾಯಕ್ಕನುಗುಣವಾಗಿ ಬೋಧಿಸಬಲ್ಲ ಗುರುವಿನ ಉಪದೇಶವುಳ್ಳ ಪುಣ್ಯಾತ್ಮನು ಮಾತ್ರವೇ ತತ್ತ್ವವನ್ನು ಅರಿತುಕೊಳ್ಳಬಲ್ಲನು ಎಂದು ಶ್ರುತಿಯು ಸಾರುತ್ತಿದೆ. ಅಧ್ಯಾತ್ಮತತ್ತ್ವವನ್ನು ಅರಿತುಕೊಂಡಮಾತ್ರದಿಂದ ಪರಮಪುರುಷಾರ್ಥವು ದೊರೆಯುತ್ತದೆ. ಆದರೆ ಆ ತತ್ತ್ವವನ್ನು ಪ್ರತ್ಯಕ್ಷ, ಅನುಮಾನ- ಮುಂತಾದ ಯಾವ ಪ್ರಮಾಣದಿಂದಲೂ ಅರಿತುಕೊಳ್ಳುವದು ಆಗುವಂತಿಲ್ಲ. ಇಂದ್ರಿಯಗಳೂ ಇಂದ್ರಿಯಗಳನ್ನವಲಂಬಿಸಿದ ತರ್ಕವೂ ನಮ್ಮ ಹೊರಗಿನ ವಸ್ತುಗಳನ್ನು ಮಾತ್ರ ತಿಳಿಸಬಲ್ಲವು. ಆದರೆ ಪರಮಾತ್ಮತತ್ತ್ವವು ಹೊರಗಿನ ವಸ್ತುಗಳಂತೆ ಪ್ರಮೇಯವಲ್ಲ, ಯಾವ ಪ್ರಮಾಣದಿಂದಲೂ ಅರಿಯುವದಕ್ಕೆ ಆಗುವಂಥ ಸ್ವರೂಪದ್ದಲ್ಲ. ಅಧ್ಯಾತ್ಮಗ್ರಂಥಗಳನ್ನು ಓದುವದರಿಂದ ಸ್ವಲ್ಪಮಟ್ಟಿಗೆ ಸಹಾಯವಾದೀತು; ಆದರೆ ಆ ಗ್ರಂಥಗಳ ಅಭಿಪ್ರಾಯವನ್ನು ಹೇಗೆ ಅಳವಡಿಸಿಕೊಳ್ಳಬೇಕೆಂಬುದನ್ನು ನಾವು ನಾವೇ ತರ್ಕಿಸಿ ನಿಶ್ಚಯಿಸುವದಕ್ಕೆ ಆಗುವದಿಲ್ಲ. ಅಧ್ಯಾತ್ಮವಿಚಾರಕ್ಕೆ ನಮ್ಮ ಅಂತಃಕರಣದಲ್ಲಿ ಒಂದು ಸಂಸ್ಕಾರವುಂಟಾಗಿರಬೇಕು; ಅದಕ್ಕೆ ಒಂದು ದೃಷ್ಟಿ ವಿಶೇಷವು ದೊರಕಬೇಕು. ಆ ಸಂಸ್ಕಾರವನ್ನಾಗಲಿ ದೃಷ್ಟಿಯನ್ನಾಗಲಿ ಹೊರಗಿನ ಯಾವ ಸಾಧನವೂ ನಮಗೆ ದೊರಕಿಸಿಕೊಡಲಾರದು.

ಭಗವಂತನ ಅನುಗ್ರಹವಿಲ್ಲದೆ ಯಾರೊಬ್ಬರಿಗೂ ಅಧ್ಯಾತ್ಮಜ್ಞಾನವಾಗಲಾರದು. ಜಗತ್ತನ್ನು ಸೃಷ್ಟಿಸುವ ಬ್ರಹ್ಮನಿಗೆ ಕೂಡ ಆ ಭಗವಂತನ ಅನುಗ್ರಹದಿಂದಲೇ

ವೇದಾರ್ಥಗಳು ಹೊಳೆಯುತ್ತವೆಯೆಂದು ಶಾಸ್ತ್ರಗಳಲ್ಲಿ ಹೇಳಿದೆ. ಬ್ರಹ್ಮನಿಗೆ ಮಿಗಿಲಿಲ್ಲದ ಧರ್ಮ, ಜ್ಞಾನಶಕ್ತಿ, ವೈರಾಗ್ಯ, ಸಾಮರ್ಥ್ಯ- ಇವುಗಳು ಹಿಂದಿನ ಕಲ್ಪದ ಸಂಸ್ಕಾರದಿಂದ ಉಂಟಾಗಿರುವವೆಂದು ಸ್ಮೃತಿಗಳಲ್ಲಿ ಹೇಳಿದೆ. ಅಂಥವನಿಗೆ ಕೂಡ ತತ್ತ್ವಜ್ಞಾನಕ್ಕೆ ಭಗವಂತನ ಆಂತರಿಕವಾದ ಉಪದೇಶವು ಬೇಕಾಗುತ್ತದೆ; ಮಿಕ್ಕವರ ಪಾಡೇನು? ವೇದ ಪರಿಚಯವಾಗಲಿ ವೇದಾರ್ಥದ ತಿಳಿವಳಿಕೆಯಾಗಲಿ ಇಲ್ಲದೆ, ಕರ್ಮಾನುಷ್ಠಾನದಿಂದ ಚಿತ್ತಶುದ್ಧಿಯನ್ನು ಪಡೆದುಕೊಳ್ಳದೆ ಇರುವವರಾಗಿ ಇಂದ್ರಿಯಾರ್ಥಗಳ ಕಾಮದಿಂದ ಸಂಕಟಪಡುತ್ತಿರುವ ಅಲ್ಪವೀರ್ಯರಾದ ಜನರಿಗೆ ಪರಮಾರ್ಥದ ಅರಿವು ಹೇಗೆತಾನೆ ಲಭಿಸಬೇಕು?

ಕ್ರತುಯುಗದಿಂದ ಕಲಿಯುಗದವರೆಗೆ ಜನರಲ್ಲಿ ಧರ್ಮಸಂಸ್ಕಾರವು ಕಡಿಮೆಯಾಗುತ್ತಲೇ ಬಂದಿರುತ್ತವೆ. ಕಲಿದ್ವಾಪರಸಂಧಿಕಾಲಕ್ಕೆ ಜನರಿಗೆ ಅನುಗ್ರಹವನ್ನು ಮಾಡುವದಕ್ಕೆಂದೇ ವಿಷ್ಣ್ವಂಶದಿಂದ ಅವತರಿಸಿದ ಶ್ರೀವೇದವ್ಯಾಸರು ವೇದವು ಕಿವಿಗೆ ಬೀಳದಿರುವ ಜನರಿಗೂ ಉಪಕಾರವಾಗಲೆಂದು ಕರುಣೆಯಿಂದ ಮಹಾಭಾರತವನ್ನು ನಿರ್ಮಿಸಿದರು. ಮಹಾಭಾರತದಲ್ಲಿ ನಾಲ್ಕು ಬಗೆಯ ಪುರುಷಾರ್ಥಗಳಿಗೂ ಸಾಧನವನ್ನು ವಿವರಿಸಿರುತ್ತದೆ. ಪ್ರತಿವರ್ಷವೂ ಬರುವ **ಗುರುಪೂರ್ಣಿಮೆಯ** ದಿನ ಆ ಮಹಾಮಹಿಮರನ್ನು ಆರಾಧನೆಮಾಡಿ ಅವರ ಅನುಗ್ರಹವನ್ನು ಪ್ರಾರ್ಥಿಸುವದು ಶ್ರೀಮನ್ನಾರಾಯಣನ ಅನುಗ್ರಹಕ್ಕೇ ಕಾರಣವಾಗಿರುತ್ತದೆ. ವ್ಯಾಸರು ಬ್ರಹ್ಮನಿಧಿಗಳು; ವೇದದ ಮತ್ತು ವೇದಾರ್ಥನಿಧಿಯೇ ಅವರ ಪ್ರಸನ್ನತೆಯಿಂದ ನಮಗೆ ದೊರಕೀತು.

ಕಲಿಯುಗದಲ್ಲಿ ದಕ್ಷಿಣಭಾರತದಲ್ಲಿ ದೇಹಧಾರಣೆ ಮಾಡಿ ಅತ್ಯಂತ ಚಿಕ್ಕ ವಯಸ್ಸಿನಲ್ಲಿಯೇ ಪರಮಹಂಸಪಾರಿವ್ರಾಜ್ಯವನ್ನು ಸ್ವೀಕರಿಸಿ ಕಾಲುನಡಗೆಯಿಂದ ಭರತಖಂಡವನ್ನೆಲ್ಲ ಸುತ್ತಿ ವೇದಾಂತದ ತಿರುಳಾಗಿರುವ ಜ್ಞಾನವೈರಾಗ್ಯರೂಪವಾದ ನಿವೃತ್ತಿಧರ್ಮವನ್ನು ಪ್ರಚಾರಮಾಡಿ ನಾಲ್ಕು ದಿಕ್ಕುಗಳಲ್ಲಿಯೂ ತಮ್ಮ ಯಶಃಪತಾಕೆಯನ್ನು ಹಾರಿಸಿದ ಶ್ರೀಮಚ್ಛಂಕರಭಗವತ್ಪಾದರವರ ಚರಣಾರವಿಂದಗಳನ್ನು ಸ್ಮರಿಸಿ, ಶ್ರೀಬಾದರಾಯಣವ್ಯಾಸರ ವೇದಾಂತಸೂತ್ರಗಳನ್ನೂ ಅವಕ್ಕೆ ಆ ಆಚಾರ್ಯರು ಬರೆದಿಟ್ಟಿರುವ ಭಾಷ್ಯವನ್ನೂ ಪೂಜಿಸುವದು ಒಂದು ಹೆಚ್ಚಿನ ಪುಣ್ಯವು. ಆ ದಿನ ಭಗವಂತರಾದ ಶಂಕರಬಾದರಾಯಣರಿಗೆ ಮಾಡಿದ ನಮಸ್ಕಾರವು ಅನಂತಪುಣ್ಯದ

ಫಲವನ್ನು ಕೊಡುವದು; ಮುಮುಕ್ಷುಗಳಿಗೆ ಹೆಚ್ಚಿನ ಚಿತ್ತಶುದ್ಧಿಯನ್ನುಂಟು ಮಾಡುವದು. ಆ ಇಬ್ಬರು ವೇದಾಂತಾಚಾರ್ಯರ ಅನುಗ್ರಹವು ನಮಗೆ ಆಗಲಿ! - ಎಂದು ವಿಶೇಷಭಕ್ತಿಯಿಂದ ಪ್ರಾರ್ಥಿಸಬೇಕು. ಹೀಗೆಯೇ ಬೇರೆಬೇರೆಯ ಸಿದ್ಧಾಂತ ಗಳಲ್ಲಿ ಪ್ರತಿಪಾದಿತವಾಗಿರುವ ಕರ್ಮಭಕ್ತಿಯೋಗಗಳ ರಹಸ್ಯವನ್ನು ಮನಗಾಣ ಬೇಕೆನ್ನುವವರು ತಮ್ಮ ತಮ್ಮ ಮತಪ್ರವರ್ತಕರನ್ನು ಶ್ರದ್ಧಾಭಕ್ತಿಪೂರ್ವಕವಾಗಿ ಪೂಜಿಸುವದಕ್ಕೆ, **ಗುರುಪೂರ್ಣಿಮೆಯು ಒಂದು ಪವಿತ್ರದಿನವಾಗಿರುತ್ತದೆ.**

ಇದೆಲ್ಲಕ್ಕಿಂತಲೂ ಮುಖ್ಯವಾಗಿ ಈ ಹುಣ್ಣಿಮೆಯ ದಿನ ಪರಮೇಶ್ವರನ ಮತ್ತು ಪೂರ್ವಾಚಾರ್ಯರುಗಳೆಲ್ಲರ ಪ್ರತೀಕವಾಗಿರುವ ಸದ್ಗುರುವಿನ ಅನುಗ್ರಹವನ್ನು ಕೋರಿ ಆತನ ಚರಣಾರಾಧನೆಯನ್ನು ಮಾಡಬೇಕು. ಯಾವ ಮಹಾತ್ಮನು ತನ್ನ ನಿತ್ಯ ಜೀವನ ವನ್ನು ಜ್ಞಾನಭಕ್ತಿವೈರಾಗ್ಯಗಳ ಭಾಂಡಾಗಾರವಾಗಿ ಮಾಡಿಕೊಂಡಿರುವನೋ, ಯಾವ ಮಹಾತ್ಮನನ್ನು ಕಂಡರೆ ಸಂಸಾರದ ಕೋಟಲೆಗಳೆಲ್ಲವೂ ತಮಗೆ ತಾವೇ ಮರೆ ಯಾಗುವವೋ, ಯಾವ ಮಹಾತ್ಮನ ದರ್ಶನ ಸ್ಪರ್ಶನಸಂಭಾಷಣೆಗಳಿಂದ ನಮ್ಮ ಅಂತಃಕರಣವು ಸಂಪೂರ್ಣವಾಗಿ ಮಾರ್ಪಟ್ಟು ಪರಮೇಶ್ವರನ ಸೇವೆಗೇ ಜೀವನವನ್ನು ಅಣಿಮಾಡುವದೋ ಅಂಥವನೇ ಸದ್ಗುರುವು. ಪೂರ್ವ ಪುಣ್ಯವಿಶೇಷದಿಂದ ಇಂಥ ಮಹಾಮಹಿಮನೋರ್ವನು ನಿಮ್ಮ ಕಣ್ಣಿಗೆ ಬಿದ್ದಿದ್ದರೆ ಅವನ ದರ್ಶನದ ಸದುಪ ಯೋಗವನ್ನು ತಪ್ಪದೆ ಮಾಡಿಕೊಳ್ಳಿರಿ. **ಆತನೇ ಬ್ರಹ್ಮವಿಷ್ಣುಮಹೇಶ್ವರರ ವಿಭೂತಿ ವಿಶೇಷವೆಂದು ನಂಬಿರಿ. ಆತನು ಎಲ್ಲಿದ್ದರೂ ಅಲ್ಲಿಗೆ ಎಷ್ಟು ಕಷ್ಟವಾದರೂ ಲೆಕ್ಕಿಸದೆ ಹೋಗಿ ಮಹಾಕಾಶೀಯಾತ್ರೆಯ** ಫಲವನ್ನು ಪಡೆದುಕೊಳ್ಳಿರಿ; ಆತನ ಚರಣಕ್ಕೆ ಪ್ರಣಾಮವನ್ನು ಮಾಡಿ ಗಂಗಾದಿಸಕಲ ತೀರ್ಥಸ್ನಾನಗಳ ಫಲವನ್ನು ಪಡೆದುಕೊಳ್ಳಿರಿ; ಆತನ ಸದುಪದೇಶವನ್ನು ಶ್ರವಣಮಾಡಿ ಶ್ರುತಿಸ್ಮೃತಿಪುರಾಣಗಳ ಸಾರವಾದ ಅಧ್ಯಾತ್ಮ ವಿದ್ಯೆಯ ಬೀಜವನ್ನು ಹೃದಯದಲ್ಲಿ ಬಿತ್ತಿಕೊಳ್ಳಿರಿ !

ಯಾರಿಗೆ ಭಗವನ್ಮಯವಾದ ಸದ್ಗುರುವಿನ ಸಂನಿಧಿಯ ವಾಸನೆ ದೊರಕಿರುವದೋ ಅವರ ಪುಣ್ಯವನ್ನು ಅಳೆಯುವದಾಗಲಿ ತೂಗುವದಾಗಲಿ ಸಾಮಾನ್ಯರಿಂದ ಆಗಲಾರದು. ಸದ್ಗುರುವಿನ ಸೇವೆಯ ರೂಪವಾದ ಕರ್ಮ ಯೋಗವೂ ಆತನ ಉಪದೇಶವನ್ನು ಏಕಾಗ್ರತೆಯಿಂದ ಚಿಂತಿಸುವ ಧ್ಯಾನಯೋಗವೂ

ಆತನು ತಮ್ಮ ಆತ್ಮನೇ ಎಂದು ಬಗೆದು ನಿತ್ಯಪ್ರೇಮದಿಂದ ನಡೆಯುವ ಭಕ್ತಿ ಯೋಗವೂ ಯಾವ ಸಾಧಕರಿಗೆ ದೊರೆತಿರುವದೋ ಅವರಿಗೆ ಅಧ್ಯಾತ್ಮಸಾಧನ ಮಾರ್ಗದಲ್ಲಿ ಯಾವ ಕಷ್ಟವೂ ಇರುವದಿಲ್ಲ. ಆ ಸದ್ಗುರುವಿನ ಅನುಗ್ರಹದ ಪ್ರವಾಹವು ಅವರಿಗೆ ಅವಶ್ಯವಾಗಿ ಭಗವಂತನ ದಯಾಸಾಗರದ ಪ್ರಾಪ್ತಿಯನ್ನು ದೊರಕಿಸುವದು. ಸದ್ಗುರುವಿನಲ್ಲಿ ಈಶ್ವರಭಾವನೆಯನ್ನು ಮಾಡುವದನ್ನು ಅಳವಡಿಸಿಕೊಂಡ ಸಾಧಕರು ಧನ್ಯರು.

*****

# 65. ಮುಪ್ಪು ತಪ್ಪದು

ಮಾನವ, ಈ ಶರೀರವು ಕ್ಷಣಕ್ಷಣಕ್ಕೂ ಮುದಿಯಾಗುತ್ತಿರುವದು, ಇದನ್ನು ಮರೆಯದಿರು. ನನಗೆ, ನಿನಗೆ, ಎಲ್ಲರಿಗೂ ಮುಪ್ಪು ತಪ್ಪದೆ ಬರುತ್ತಲೇ ಇರುವದು. ಮುಪ್ಪು ಎಂದೋ ಒಂದು ದಿನ ಬರುವದಿಲ್ಲ; ಈಗಲೇ ಬರುತ್ತಿದೆ.

ಶರೀರವು ಬೆಳೆಯುತ್ತಿರುವಾಗಲೂ ಅದರ ಕೆಲವು ಅವಯವಗಳು ಸವೆಯುತ್ತಿರುವವು. ಆದರೆ ಹೊಸದಾಗಿ ಕೆಲವು ಅವಯವಗಳು ಹುಟ್ಟಿ ಶರೀರಕ್ಕೆ ಸೇರಿಕೊಳ್ಳುತ್ತಿರುವದರಿಂದ ಆ ಸವೆದ ಅವಯವಗಳ ಮುಪ್ಪು ಸಾವಿನ ಅರಿವು ನಮಗೆ ಆಗುವದಿಲ್ಲ.

ಕೆಲವು ಕಾಲದ ಮೇಲೆ ಮೈ ಬೆಳೆಯುವದು ನಿಂತುಹೋಗುವದು, ಆದರೆ ಅದು ಮುದಿಯಾಗುವದು ಮುನ್ನಡೆಯುತ್ತಲೇ ಇರುವದು. ಬರುಬರುತ್ತಾ ಕೈಕಾಲುಗಳು ಸೋಲುವವು, ಮಾಂಸಖಂಡಗಳು ಒತ್ತುವವು, ಚರ್ಮವು ಸುಕ್ಕುವದು, ತಲೆ ಗೂದಲು ನರೆಯುವದು, ಕಣ್ಣು ಮಂಜಾಗುವದು, ಕಿವಿಕೇಳುವದು ಕಡಿಮೆ ಯಾಗುವದು, ಹಲ್ಲುಗಳು ಸಡಿಲುವವು, ನಾಲಗೆಗೆ ಸವಿ ಚೆನ್ನಾಗಿ ತೋರದೆ ಹೋಗುವದು, ಮೂಗಿಗೆ ವಾಸನೆ ಸರಿಯಾಗಿ ತಿಳಿಯದಾಗುವದು, ಕಳ್ಳಹಸಿವು ತೋರುವದು, ಉಂಡ ಅನ್ನವು ಅರಗದೆ ಹೋಗುವದು, ಕೈಯಲ್ಲಿ ಕೆಲಸವು ಸಾಗದೆ ಹೋಗುವದು, ಬುದ್ಧಿಮಂಕಾಗುವದಕ್ಕೆ ಮೊದಲಾಗುವದು, ಜನರು ನಿನ್ನನ್ನು ಅಸಡ್ಡೆ ಮಾಡುವರು.

ಇದೆಲ್ಲ ಏತರ ಗುರುತುಗಳು? ಈಗ ಹೊರಗಿನ ಪ್ರಪಂಚದಲ್ಲಿ ಆಸಕ್ತಿ ಕಡಿಮೆಯಾಗುವದು. ಆದರೆ ಒಳಗಿನ ಪ್ರಪಂಚವನ್ನು ಕಾರುಗತ್ತಲೆ ಕವಿದು ಕೊಂಡಿರುವದು. "**ನಿನ್ನೊಳಗೆ ನೋಡು । ಬಹಿರ್ಮುಖವು ಸಾಕು।**" ಎಂದು ಇಡಿಯ ಭೂಮಂಡಲವೇ ಡಂಗುರವನ್ನು ಹಾಕುವಂತೆ ಕಾಣುತ್ತಿರುವದು.

ಈ ಮುಪ್ಪು ಬರುವದರೊಳಗೆ ಎಚ್ಚರಿಕೆ ತೆಗೆದುಕೊ. ಹೊರಗಿನ ನೋಟಗಳನ್ನಾಗಲಿ, ಜನರನ್ನಾಗಲಿ, ನೆಚ್ಚದಿರು. ಕೊನೆಗೆ ನಿನ್ನ ಶರೀರೇಂದ್ರಿಯಗಳನ್ನು ಕೂಡ ನಂಬಬೇಡ. ಇವೆಲ್ಲ ನಿನ್ನನ್ನು ನಡುನೀರಿನಲ್ಲಿ ಕೈಬಿಟ್ಟು ಅತ್ತ ಸರಿಯುವವು. ನಿನ್ನೊಡನೆ ಯಾವಾಗಲೂ ಇದ್ದುಕೊಂಡಿರುವ ಶಾಶ್ವತ ತತ್ತ್ವವೊಂದು ಇದ್ದುಕೊಂಡಿದೆ. ಅದು ಜನ್ಮಜನ್ಮಾಂತರದಲ್ಲಿಯೂ ನಿನ್ನೊಡನೆ ಇರುವದು. ನಿನ್ನೊಡನೆ ಇರುವದೆಂದೇಕೆ ಹೇಳಲಿ? ನಿನ್ನ ಪರಮ ಸ್ವರೂಪವೇ ಅದು. ಅದನ್ನು ಬಲ್ಲವರು 'ಸಚ್ಚಿದಾನಂದ ಪರಮಾತ್ಮ' ಎಂದು ಕರೆಯುವರು. ಇನ್ನೂ ಕಣ್ಣು ಕೈಕಾಲು ಕಿವಿಗಳು ಗಟ್ಟಿಯಾಗಿರುವಾಗಲೇ, ಬುದ್ಧಿಯು ಸ್ಥಿರವಾಗಿರುವಾಗಲೇ ನಿನ್ನೊಳಗಿರುವ, ನಿನ್ನದೇ ಆದ, ಆ ಪರಮಾತ್ಮ ತತ್ತ್ವವನ್ನು ಒಳಹೊಕ್ಕು ಅರಿತುಕೊ, ಶಾಸ್ತ್ರವನ್ನೂ ಗುರುಗಳನ್ನೂ ಶರಣು ಹೊಕ್ಕು ಅದರ ತಿಳಿವಳಿಕೆಯನ್ನು ಸಂಪಾದಿಸಿಕೊ. ಹಾಗಾದರೆ ನಿನಗೆ ಎಂದಿಗೂ ಭಯವಿರುವದಿಲ್ಲ, ಏಕೆಂದರೆ ಆ ನಿನ್ನ ಪರಮಾರ್ಥಸ್ವರೂಪಕ್ಕೆ ಮುಪ್ಪು ಸಾವುಗಳು ಎಂದಿಗೂ ಇರುವದಿಲ್ಲ.

*****

# 66. ದ್ವೇಷ ಬುದ್ಧಿ

ಮಾನವ, ಈ ಶರೀರ, ಇಂದ್ರಿಯಗಳು, ಮನಸ್ಸು, ಬುದ್ಧಿ, ಅಹಂಕಾರ – ಇವುಗಳ ಗುಂಪನ್ನೇ ನೀನೆಂದುಕೊಂಡಿರುವೆಯಲ್ಲವೆ? ಇವುಗಳ ಯೋಗಕ್ಷೇಮಕ್ಕಾಗಿ ನೀನು ಎಷ್ಟು ಬವಣೆಪಡುತ್ತಿರುವೆ! ಎಷ್ಟು ಮಾಡಬಾರದ ಕೆಲಸಗಳನ್ನು ಮಾಡುತ್ತಿರುವೆ! ಎಷ್ಟು ಮಾಡಬೇಕಾದ ಕೆಲಸಗಳನ್ನು ಬಿಡುತ್ತಿರುವೆ!

ಈ ಶರೀರಾದಿಗಳ ಗುಂಪನ್ನು ನಾನು ಎಂದುಕೊಂಡಿದ್ದರಿಂದಲೇ ನೀನು ಇದಕ್ಕೆ ಅನುಕೂಲವಾಗಿರುವವರನ್ನು ನನ್ನವರು ಎನ್ನುತ್ತಿರುವೆ! ಇದಕ್ಕೆ ಪ್ರತಿಕೂಲ

ವಾಗಿರುವವರಲ್ಲಿ ದ್ವೇಷವನ್ನು ಮಾಡುತ್ತಿರುವೆ. ಅಲ್ಲವೆ? ಆದರೆ ವಿಚಾರಮಾಡಿ ನೋಡು. ಈ ಶರೀರಾದಿಗಳಲ್ಲಿ ಯಾವದೊಂದಾದರೂ ಇದ್ದಂತೆ ಇರುವದೆ? ಇದಕ್ಕೆ ಅನುಕೂಲ ವಾದದ್ದು ಯಾವದಿದ್ದೀತು! ಪ್ರತಿಕೂಲವಾದದ್ದು ಯಾವದಿದ್ದೀತು?

ಈ ಶರೀರಾದಿಗಳ ನಿಮಿತ್ತದಿಂದ ನಮಗೆ ಕೇಡುಮಾಡಿದವರೆಂದು ಕೆಲವರನ್ನು ಎಣಿಸಿ ಅವರನ್ನು ಹಗೆಮಾಡುತ್ತಿರುವೆಯಲ್ಲ! ಅವರು ನಿಜವಾಗಿಯೂ ನಿನಗೆ ಒಳ್ಳೆಯದನ್ನು ಮಾಡಿದ್ದಾರೆಯೋ ಇಲ್ಲವೊ-ಎಂಬುದನ್ನಾದರೂ ಯೋಚಿಸಬೇಡವೆ?

ದ್ವೇಷಬುದ್ಧಿಯು ಎಂಬುದು ಹುಲ್ಲುಮನೆಗೆ ಅಥವಾ ಹುಲ್ಲುಬಣವೆಗೆ ಸಿಡಿದುಬಿದ್ದ ಬೆಂಕಿಯ ಕಡ್ಡಿಯಂತೆ ಇರುತ್ತದೆ. ಅದು ಸ್ವಲ್ಪ ಸ್ವಲ್ಪವಾಗಿ ಹುಲ್ಲನ್ನು ಸುಡುತ್ತಾ ಹೋಗುತ್ತಿರುತ್ತದೆ. ಆ ಮನೆಯ ಮಾಳಿಗೆಯಲ್ಲಿ ಅಥವಾ ಆ ಬಣವೆಯಲ್ಲಿ ಹೊಗೆಯನ್ನು ಹೆಚ್ಚಿಸುತ್ತಾ ಹೋಗುತ್ತಿರುತ್ತದೆ. ಅದರಂತೆ ದ್ವೇಷಬುದ್ಧಿಗೆ ಅವಕಾಶವನ್ನು ಕೊಟ್ಟಮೇಲೆ ಅದು ನಿನ್ನನ್ನೇ ಸುಡುತ್ತಿರುತ್ತದೆ; ನಿನ್ನ ಬುದ್ಧಿಗೆ ಮಂಕಿನ ಹೊಗೆಯನ್ನು ಮುಚ್ಚಿ, ಮಾಡಬಹುದಾದದ್ದು, ಮಾಡಬಾರದ್ದು; ನಿಜವಾದದ್ದು ಸುಳ್ಳಾದದ್ದು-ಇವುಗಳ ತತ್ತ್ವವನ್ನು ಅರಿಯದಂತೆ ಅಡ್ಡಿಯನ್ನು ಮಾಡಿಬಿಡುತ್ತದೆ. ಇದನ್ನು ಮರೆಯದಿರು !

ಒಬ್ಬನನ್ನು ಒಳಗೆ ದ್ವೇಷಬುದ್ಧಿಯಿಂದ ಕಾಣುತ್ತಾ 'ನಿನ್ನನ್ನು ಕ್ಷಮಿಸಿಬಿಟ್ಟಿದ್ದೇನೆ' ಎಂದು ಹೊರಗೆ ಆಡುವ ಬೂಟಾಟಿಕೆಯ ಮಾತನ್ನು ಬಿಡು. ನಿನ್ನ ಅಂತರಂಗದಿಂದ ದ್ವೇಷದ ಲೇಶವೂ ಇಲ್ಲದಂತೆ ಹೊರಗೆ ಹಾಕಿಬಿಡು.

ಪರಮೇಶ್ವರನನ್ನು "ದೇವ, ಇಂಥವನೊಬ್ಬನು ನನಗೆ ಕೆಟ್ಟದ್ದನ್ನು ಮಾಡಿರುತ್ತಾನೆ; ಅವನಿಗೆ ಒಳ್ಳೆಯ ಬುದ್ಧಿಯನ್ನು ಕೊಡು!" ಎಂದು ಪ್ರಾರ್ಥನೆ ಮಾಡಿದ ಮಾತ್ರದಿಂದ ನೀನು ಸಾತ್ತ್ವಿಕನಾದೆ ಎಂದು ತಿಳಿಯದಿರು. 'ದೇವ, ನಾನು ತಪ್ಪು ಮಾಡಿದ್ದು ಇವನನ್ನು ಹಗೆಮಾಡುತ್ತಿರುವೆನೋ ಏನೋ, ತಿಳಿಯದು, ನನ್ನ ತಪ್ಪನ್ನು ನನಗೆ ತಿಳಿಸಿ ಕಾಪಾಡು!' ಎಂದು ಹೃದಯಪೂರ್ವಕವಾಗಿ ಬೇಡಿಕೊ. ನಿನ್ನ ಅಂತರಂಗವು ಶುದ್ಧವಾದರೆ ನಿನಗೆ ಹಗೆಗಳು ಇರುವ ಸಂಭವವೇ ಇಲ್ಲ ಎಂಬುದನ್ನು ಮರೆಯದಿರು!

*****

# 67. ಸರಳ ಜೀವನ

ಮಾನವ, ಹೆಚ್ಚಿನ ದುಂದುಗಾರಿಕೆಯ, ಆಡಂಬರದ, ತೋರುಗಾಣಿಕೆಯ ಜೀವನವನ್ನು ಬಿಟ್ಟುಬಿಡು. ಅದಕ್ಕೆ ಹೆಚ್ಚಿನ ಹಣವು ಬೇಕಾಗುವದು, ಆ ಹಣದ ಸಂಪಾದನೆಗಾಗಿ ಅನವಶ್ಯವಾಗಿ ಹೆಚ್ಚು ಶ್ರಮಿಸಬೇಕಾಗುವದು; ಜೀವನವು ಕೃತಕ ವಾಗುವದು, ನಿಷ್ಪ್ರಯೋಜನವಾಗುವದು, ಅನರ್ಥಕಾರಿಯೂ ಆಗಬಹುದು.

ನಿನ್ನ ಉಡುಪಿಗೆ ಅವಶ್ಯವಾದಷ್ಟೇ ಬಟ್ಟೆಗಳನ್ನು ಧರಿಸಬೇಕು. ಉಪಯೋಗಕ್ಕೆ ಬರುವ, ಆದಷ್ಟು ಕಡಿಮೆಯ ಬೆಲೆಯ, ಚೊಕ್ಕಟವಾಗಿಟ್ಟುಕೊಳ್ಳುವದಕ್ಕೆ ಸುಲಭ ವಾಗಿರುವ ಅಂದವಾದ ಬಟ್ಟೆಗಳನ್ನುಪಯೋಗಿಸು. ಇದು ನೋಡುವವರಿಗೂ ಹರ್ಷ ವನ್ನುಂಟುಮಾಡುವದು; ನಿನ್ನ ವ್ಯವಹಾರದಲ್ಲಿ ಯಾವ ಕಿರಿಕಿರಿಯೂ ಇಲ್ಲದೆ, ಮನಸ್ಸಿಗೆ ನೆಮ್ಮದಿಯೂ ದೊರಕುವದು.

ನಿನ್ನ ಆಹಾರವು ಸಾತ್ತ್ವಿಕವಾಗಿರಲಿ. ಆರೋಗ್ಯ, ಬಲ –ಇವುಗಳಿಗೆ ಬೇಕಾದ ಆಹಾರವನ್ನು ಹಿತಮಿತವಾಗಿರುವಂತೆ ಸೇವಿಸು. ಇದರಿಂದ ಇಂದ್ರಿಯಗಳೂ ಮನಸ್ಸೂ ಶುದ್ಧವಾಗುವವು.

ನಿನ್ನ ನುಡಿಯು ಸತ್ಯವಾಗಿ ಜನಪ್ರಿಯವಾಗಿರಲಿ, ಇಹಲೋಕದ ಮತ್ತು ಪರಲೋಕದ ಸುಖಕ್ಕೆ ಅನುಕೂಲವಾಗಿಲ್ಲದ ವ್ಯರ್ಥಾಲಾಪಗಳನ್ನು ಬಿಟ್ಟುಬಿಡು. ನಿನ್ನ ಸುತ್ತುವಳೆಯದವರಿಗೂ ಇದರಿಂದ ಲಾಭವಾಗುವದು, ನಿನ್ನ ಮನಸ್ಸಿನ ಆಲೋಚನೆ ಗಳೂ ಇದಕ್ಕೆ ಅನುಗುಣವಾಗುವವು.

ನಿನ್ನ ಬಗೆಯಲ್ಲಿ ಸದ್ಭಾವನೆಗಳೇ ಇರಲಿ; ಸದ್ವಿಚಾರಗಳೇ ತುಂಬಿರಲಿ. ಮೊಟ್ಟಮೊದಲು ಸರ್ವಾತ್ಮನಾದ ಪರಮೇಶ್ವರನಲ್ಲಿ ಶ್ರದ್ಧಾಭಕ್ತಿಗಳನ್ನು ಸಂಪಾದಿಸಿಕೊ. ನಿನ್ನ ಸಂಗಡಿಗರು ಇಂಥ ವಿಚಾರದವರೇ ಆಗಿರುವಂತೆ ನೋಡಿಕೊ. ಇದರಿಂದ ಮನಸ್ಸು ನಿರ್ಮಲವಾಗುವದು, ಪರಮೇಶ್ವರನು ನಿನ್ನಲ್ಲಿ ಪ್ರಸನ್ನನಾಗುವನು. ಎಲ್ಲರಲ್ಲಿಯೂ ನಿನಗೆ ಮೈತ್ರಿಯೂ ಕರುಣೆಯೂ ಉಪಕಾರಬುದ್ಧಿಯೂ ಉಂಟಾಗುವದು.

ಮನಸ್ಸು, ವಾಕ್ಕು- ಈ ಎರಡೂ ಒಂದಕ್ಕೊಂದು ಹೊಂದಿಕೆಯಾಗಿದ್ದರೆ ನಿನ್ನ ನಡೆಯೂ ಇವಕ್ಕೆ ಅನುಗುಣವಾಗಿಯೇ ಮಾರ್ಪಡುವದು. ನಿನ್ನ ಶರೀರ ಪೋಷಣೆಗೂ ಕುಟುಂಬಪೋಷಣೆಗೂ ಬೇಕಾದ ಸಾಮಗ್ರಿಗಳನ್ನು ಧರ್ಮದಿಂದಲೇ ಸಂಪಾದಿಸುವೆನೆಂದು ಸಂಕಲ್ಪಿಸಿಕೊ. ಜನರು ನಿನ್ನನ್ನು ಮೋಸಪಡಿಸುವರೆಂದು ಅಂಜದಿರು. ನಿನ್ನ ಸಾತ್ತ್ವಿಕತನವೇ ನಿನ್ನ ಸುತ್ತಲಿನ ಜನರ ನಡೆಯನ್ನು ಸುಧಾರಿಸುವದು. ಇಹಪರ ಸುಖಗಳು ನಿನಗೆ ಕಟ್ಟಿಟ್ಟಬುತ್ತಿಯಾಗುವದು. ನಡೆನುಡಿಬಗೆಗಳು ಒಂದಾಗಿರುವ ಸರಳಜೀವನದವರಿಗೇ ಪರಮಪುರುಷಾರ್ಥವು ಮೀಸಲಾಗಿರುವದು.

*****

## 68. ಸ್ಥಿರತೆ

ಮಾನವ, ನಿನ್ನ ತ್ರಿಕರಣವನ್ನು ಹರಿದಾಡಗೊಡದೆ ನಿಲ್ಲಿಸಿಕೊಳ್ಳುವ ಸ್ಥೈರ್ಯವನ್ನು ಅಭ್ಯಾಸಮಾಡಿಕೊ. ಯಾರ ಜೀವನವು ಚಾಂಚಲ್ಯಮಯವಾಗಿರುವದೋ ಅವರು ಮಾಡುವ ಶ್ರಮಕ್ಕೆ ಶ್ರಮವೇ ಫಲವಾಗುವದು. ವರ್ಷವೆಲ್ಲ ವ್ಯಾಪಾರವನ್ನು ಮಾಡಿದ ಮೇಲೆ ಲಾಭನಷ್ಟಗಳನ್ನು ಲೆಕ್ಕಮಾಡಿ ಶಿಲ್ಕು ಹಣ ಏನೂ ಉಳಿದಿಲ್ಲ ಎಂದು ಕಂಡುಕೊಳ್ಳುವ ಮೂರ್ಖವರ್ತಕನಂತೆ ನಿನ್ನ ಜೀವನವೆಂಬ ವಾಣಿಜ್ಯದಲ್ಲಿ ಪಾಪ ಪುಣ್ಯಗಳ ಲೆಕ್ಕವನ್ನು ನೋಡಿಕೊಳ್ಳುವದಕ್ಕೆ ವಿರಾಮವೇ ಇಲ್ಲದಂತೆ ವ್ಯರ್ಥವಾಗಿ ಹರಿದಾಡಿ ಕೊನೆಗೆ ನಿರಾಶನಾಗದಿರು. ಶರೀರ, ಇಂದ್ರಿಯಗಳು, ಮನಸ್ಸು- ಇವುಗಳನ್ನು ಇಹಪರಗಳೆರಡಕ್ಕೂ ಲಾಭದಾಯಕವಾದ ಉದ್ಯೋಗದಲ್ಲಿ ನಿಲ್ಲುವಂತೆ ಮಾಡಿಕೊ. ಜೀವನವನ್ನು ಸಾರ್ಥಕಗೊಳಿಸಿಕೊ.

ದೇಶವಿದೇಶಗಳನ್ನು ನೋಡುವೆನು, ಕಣ್ಣಿಗೆ ಹಬ್ಬವನ್ನು ಮಾಡಿಕೊಳ್ಳುವೆನು; ಸಿನೆಮ, ನಾಟಕ ಮುಂತಾದ ವಿನೋದಗಳಿಂದ ಮನಸ್ಸನ್ನು ತಣಿಸುವೆನು ಎಂದು ಕೊಂಡು ಊರೂರಿಗೂ, ಕೇರಿಕೇರಿಗೂ ಅಲೆಯದಿರು. ಅದರಿಂದ ದೇಹಕ್ಕೆ ಆಯಾಸವೇ ಆಗುವದು, ಕೈಯಲ್ಲಿದ್ದ ಹಣವೂ ವ್ಯರ್ಥವಾಗುವದು. ನಾಲಗೆಗೆ ಸವಿಸವಿಯಾದ ಊಟವನ್ನು ತಿನ್ನಿಸಿ ಮೆರೆಯುವೆನೆಂದು ಹಿಗ್ಗಬೇಡ; ಹೋಟಲುಗಳಿಗೂ ಮಿಠಾಯಿ

ಅಂಗಡಿಗಳಿಗೂ ನಿತ್ಯಾತಿಥಿಯಾಗಬೇಡ. ಬೇಗನೆ ಅನಾರೋಗ್ಯವು ನಿನ್ನನ್ನು ಹಿಂಬಾಲಿಸುವದು. ಶರೀರೇಂದ್ರಿಯಗಳನ್ನು ಸಾರ್ಥಕವಾಗುವಂಥ ಪುಣ್ಯ ಕೆಲಸಗಳಲ್ಲಿ ತೊಡಗಿಸಿಕೊ. ಅದರಿಂದ ಬಲವೂ ಚಟುವಟಿಕೆಯೂ ಉಂಟಾಗುವವು.

ವಿಚಾರವಿಲ್ಲದೆ ಕಂಡಕಂಡ ವೃತ್ತಪತ್ರಿಕೆಗಳನ್ನೂ ಕಥೆಯ ಪುಸ್ತಕಗಳನ್ನೂ ಓದುವದು, ವ್ಯರ್ಥವಾದ ಹರಟೆಯಲ್ಲಿ ಕಾಲವನ್ನು ಕಳೆಯುವದು- ಇವನ್ನು ಬಿಟ್ಟು ಬಿಡು. ಧರ್ಮಾರ್ಥಕಾಮಗಳ ಹೊಂದಿಕೆಯಾಗುವ ಮಾತುಗಳನ್ನೇ ಕೇಳು, ಅಂಥ ಮಾತುಗಳನ್ನೇ ಆಡು. ಕ್ರಮಕ್ರಮವಾಗಿ ಅಧ್ಯಾತ್ಮವಿಚಾರಕ್ಕೆ ಮನಸ್ಸು ಒಲಿಯುವಂಥ ತತ್ತ್ವವಿಚಾರದ ಗ್ರಂಥಗಳನ್ನು ಓದುತ್ತಿರು; ಸತ್ಕಥಾಲಾಪವನ್ನು ಮಾಡುವ ಸಾಧುಜನರ ಹಿತೋಕ್ತಿಗಳನ್ನೇ ಕೇಳುತ್ತಿರು; ನಿನ್ನ ವಾಕ್ಕೂ ಇಂದ್ರಿಯಗಳೂ ಶುದ್ಧವಾದರೆ ಮನಸ್ಸು ತನಗೆತಾನೇ ಶುದ್ಧವಾಗುವದು.

ದುಷ್ಟವಿಚಾರಗಳನ್ನು ಹರಡುವವರ ಸಂಗವನ್ನು ತ್ಯಜಿಸಿಬಿಡು. ಏಕಾಂತದಲ್ಲಿ ಕುಳಿತು ಪರಮೇಶ್ವರಧ್ಯಾನವನ್ನು ಮಾಡುವ ಅಭ್ಯಾಸವನ್ನು ಇಟ್ಟುಕೊ. ವ್ಯರ್ಥಾಲಾಪದಿಂದ ವಾಕ್ಕು ಅಶುದ್ಧವಾಗುವಂತೆಯೇ ದುಷ್ಟವಿಚಾರಗಳಿಂದ ಮನಸ್ಸೂ ಅಶುದ್ಧವಾಗುತ್ತದೆ. ಭಗವಂತನ ಚಿಂತನೆಯನ್ನು ಹತ್ತಿಸಿಕೊಂಡಂತೆ ಮನಸ್ಸು ಚಾಂಚಲ್ಯವನ್ನು ಬಿಟ್ಟು ಏಕಾಗ್ರತೆಯನ್ನು ಹೊಂದುವದು, ಆಗ ನಿಜವಾದ ಶಾಂತಿ ಎಂದರೇನೆಂಬುದು ತಿಳಿಯುವದು.

*****

# 69. ಅಧ್ಯಾತ್ಮ ಜ್ಞಾನನಿತ್ಯತ್ವ

ಮಾನವ, ಮೇಲುಗಡೆಯೇ ನೋಡುತ್ತಾ ಮುಗ್ಗರಿಸುವ ಮೂರ್ಖತನವನ್ನು ಬಿಡು. ಖಗೋಳದ ನಕ್ಷತ್ರಗಳನ್ನೇ ನಿರೀಕ್ಷಿಸುತ್ತಾ ಭೂಗೋಳವನ್ನು ಮರೆತು **ಗುಂಡಿಗೆ ಬಿದ್ದ ಜೋಯಿಸನನ್ನು ಅನುಕರಿಸಬೇಡ!** ನಿನ್ನ ಸುತ್ತಲೂ ಇರುವವರ ನೆರೆಯವರ ಗುಣದೋಷಗಳ ವಾರ್ತೆಯನ್ನು ಆಡುತ್ತಾ ನಿನ್ನ ವಿಚಾರವನ್ನೇ ಮರೆತುಬಿಡಬೇಡ.

ನಿನ್ನೊಳಗೆ, ತೀರಒಳಗೆ, ಒಂದುತತ್ತ್ವವಿದೆ. ಅದನ್ನು **ಆತ್ಮ** ಎನ್ನುವರು. ನೀನು ನಡೆಯುವದು, ಕೆಲಸಮಾಡುವದು, ಹೋಗುವದು, ಬರುವದು, ಕುಳ್ಳಿರುವದು,

ಮನನಮಾಡುವದು, ಸುಖದುಃಖಗಳನ್ನು ಅನುಭವಿಸುವದು– ಈ ಎಲ್ಲಾ ವ್ಯವಹಾರಕ್ಕೂ ಈ ಆತ್ಮತತ್ತ್ವವೇ ಬೆಳಕುತೋರಿಸುತ್ತಿರುವದು. ಆ ಪರಂಜ್ಯೋತಿಯನ್ನು ಅಸಡ್ಡೆಮಾಡದಿರು; ಅದನ್ನು ಲಕ್ಷಿಸದೆ ಇದ್ದರೆ ನಿನ್ನ ಬಾಳೆಲ್ಲ ಕಗ್ಗತ್ತಲೆಯಲ್ಲಿ ತಟ್ಟಾಡುವವರ ನಡೆಯನ್ನು ಹೋಲುವದು.

ಈ ಜೀವನದಲ್ಲಿ ನಿನಗೆ ಯಾವಯಾವ ವಸ್ತುಗಳು, ಯಾವಯಾವಮರ ಗಿಡಬಳ್ಳಿಗಳು, ಯಾವಯಾವ ಪ್ರಾಣಿಗಳು, ಯಾವಯಾವ ಮನುಷ್ಯರು, ಯಾವ ಯಾವ ಆಶಾಪ್ರತೀಕ್ಷೆಗಳು ಚಿತ್ತಾಕರ್ಷಕವಾಗಿ, ಮನಮೋಹಕವಾಗಿ, ಅತ್ಯಮೂಲ್ಯವಾಗಿ ಕಾಣಿಸುತ್ತಿರುವವೋ ಅವೆಲ್ಲ ಆ ಆತ್ಮಜ್ಯೋತಿಯ ಬೆಳಕಿನಲ್ಲಿಯೇ ಕಾಣಿಸುತ್ತಿವೆಯೆಂಬು ದನ್ನು ಮರೆಯಬೇಡ. **ನಿನ್ನ ಶರೀರ, ಇಂದ್ರಿಯ, ಮನಸ್ಸು, ಬುದ್ಧಿ, ಕೊನೆಗೆ ನೀನು** – ಎಲ್ಲವೂ ಆ ಹೆಬ್ಬೆಳಕಿನಿಂದಲೇ ಬೆಳಗುತ್ತಾ ನಿಮ್ಮ ನಿಮ್ಮ ವ್ಯವಹಾರವನ್ನು ಮಾಡುತ್ತಿರುವಿರಿ. ಆ ನಂದಾದೀವಿಗೆಯನ್ನು ಕಡೆಗಣಿಸುವ ಜಾಣಹುಚ್ಚನಾಗಬೇಡ.

'ನಾನು ಆ ಸ್ವಯಂಜ್ಯೋತಿಯಾದ ಆತ್ಮನಲ್ಲಿ ಒಂದಾಗಿರುವೆನು, ಇದನ್ನು ಕಂಡುಕೊಳ್ಳುವದೇ ನನ್ನ ಜೀವನದ ಹೆಗ್ಗುರಿ' ಎಂದು ಆಗಾಗ್ಗೆ ಮನಸ್ಸಿನಲ್ಲಿ ಜಪಮಾಡುತ್ತಿರು. ಶರೀರದ ಆರೋಗ್ಯ, ಬಲ, ಅದಕ್ಕೆ ಬೇಕಾದ ಸಾಮಗ್ರಿಗಳು, ನೆಂಟರು, ಇಷ್ಟರು, ವಿದ್ಯೆ, ಕೀರ್ತಿ, ವಿಷಯಭೋಗ, ಅಧಿಕಾರ, ಸಂಪತ್ತು– ಇವೆಲ್ಲವೂ ಆ ಆತ್ಮನೆಂಬ ಅಮೃತದ ನದಿಯ ದಂಡೆಯಲ್ಲಿ ಬಿದ್ದಿರುವ ಹೊಳೆಯುವ ಕಲ್ಲುಗಳು ಮಾತ್ರ. ಹತ್ತಿರವೇ ಅಮೃತದ ಹೊಳೆಯಿರುವಾಗ ಅದನ್ನು ಮನಸಾರೆ ಈಂಟಿ ಬಾಯಾರಿಕೆಯನ್ನು ಎಂದೆಂದಿಗೂ ಇಂಗಿಸಿಕೊಳ್ಳುವದನ್ನು ಬಿಟ್ಟು ಬಿಸಲಿನಲ್ಲಿ ದಡದ ಮೇಲೆ ಹೊಳೆಯುತ್ತಿರುವ ಬೆಣಚುಕಲ್ಲುಗಳನ್ನು ಆರಿಸಿ ರಾಸಿಹಾಕುತ್ತಾ ಬಳಲಿ ಬೆಂಡಾಗುವ ಮಕ್ಕಳಾಟಿಕೆಯ ಕೆಲಸಕ್ಕೆ ಕೈಹಾಕದಿರು. ನಾನು, ನೀನು, ಎಲ್ಲರೂ, ಎಲ್ಲವೂ ಆ ಪರಮಾತ್ಮತತ್ತ್ವದಲ್ಲಿ ಒಂದಾಗಿರುವೆವು ಎಂಬ **ಆನಂದದ ಅರಿವನ್ನು ಬಿಡದೆ ಮನದಲ್ಲಿ ಹೊರಳಾಡಿಸುತ್ತಿರು.**

*****

# 70. ವಿಭೂತ್ಯುಪಾಸನೆ

ಮಾನವ, ಈ ಜಗತ್ತೆಲ್ಲವೂ ಆನಂದಮಯವಾಗಿದೆ; ಎಲ್ಲಿ ನೋಡಿದರೂ ಸುಂದರವಾದ ದೃಶ್ಯಗಳಿವೆ. ಹೀಗಿರುವಲ್ಲಿ ಏತಕ್ಕೆ ಇಲ್ಲದ ದುಃಖಗಳನ್ನು ಕಲ್ಪಿಸಿಕೊಂಡು ಮನಸ್ಸನ್ನು ವ್ಯಥೆಗೆ ಈಡುಮಾಡಿಕೊಳ್ಳುತ್ತಿರುವೆ? ಸರಿಯಾಗಿ ಕಣ್ತೆರೆದು ನೋಡು! ಈ ಜಗತ್ತಿನಲ್ಲಿ ದುಃಖಪಡುವದಕ್ಕೆ ಏನು ಕಾರಣವಿದೆ?

ಪೃಥ್ವಿ, ಅಪ್ಪು, ತೇಜಸ್ಸು, ವಾಯು, ಆಕಾಶ- ಎಂಬ ಮಹಾಭೂತಗಳು ಅವುಗಳಿಂದಾಗಿ ತೋರುತ್ತಿರುವ ಭೂಮಿ, ವನಪ್ರದೇಶಗಳು, ಪರ್ವತಗಳು, ನದಿಗಳು, ಸಮುದ್ರ, ದೇಶಗಳು, ಪಟ್ಟಣಗಳು, ವಾಯುಮಂಡಲ, ಆಕಾಶ, ಸೂರ್ಯಚಂದ್ರ ನಕ್ಷತ್ರಗಳು- ಎಲ್ಲಿ ನೋಡಿದರೂ ಭಗವಂತನ ದಿವ್ಯ ಮಹಿಮೆಯೇ ಕಾಣುತ್ತಿರುವದಿಲ್ಲವೆ? ಅವುಗಳ ವೈಶಾಲ್ಯ, ವೈಭವ, ಸೌಂದರ್ಯ, ಕಾಂತಿ - ಇವುಗಳು ನಿನ್ನ ಹೃದಯಕ್ಕೇಕೆ ಆಹ್ಲಾದವನ್ನು ಕೊಡುತ್ತಿಲ್ಲ?

ಭೂಮಿಯಲ್ಲಿ ಬೆಳೆಯುತ್ತಿರುವ ಗಿಡಮರಬಳ್ಳಿಗಳು, ಇಲ್ಲಿ ಹರಿದಾಡುತ್ತಿರುವ ಕ್ರಿಮಿಕೀಟಾದಿಗಳು, ನಡೆಯುತ್ತಿರುವ ಮೃಗಗಳು, ಹಾರಾಡುತ್ತಿರುವ ಪಕ್ಷಿಗಳು, ಮಾತನಾಡುತ್ತಿರುವ ನರನಾರಿಯರು- ಈ ದೃಶ್ಯಗಳನ್ನು ನೋಡಿದರೆ ನಿನಗೆ ಈ ವಿಚಿತ್ರ ಸೃಷ್ಟಿಯನ್ನು ಮಾಡಿರುವ ಭಗವಂತನ ಮಹಿಮೆಯು ಮನಸ್ಸಿಗೆ ಬರುತ್ತಿಲ್ಲವೆ? ಹೀಗಿದ್ದರೂ ಏತಕ್ಕೆ ದುಃಖದಿಂದ ಕೊರಗುತ್ತಿರುವೆ?

ಕಷ್ಟಪಟ್ಟು ದುಡಿಯುವವರಿಗೆ ಬೇಕಾದ ಆಹಾರವನ್ನು ಕೊಡುವ ಭೂಮಿಯಿದೆ, ಮೈಗೆ ಬೇಕಾದ ಸುಂದರವಾದ ಉಡುಪುಗಳನ್ನು ಮಾಡಿಕೊಳ್ಳುವದಕ್ಕೆ ಬೇಕಾದ ಸಾಮಗ್ರಿಯಿದೆ, ಮನಸ್ಸಿಗೆ ಉಲ್ಲಾಸವನ್ನು ಕೊಡುವ ದೃಶ್ಯಗಳಿವೆ, ಬುದ್ಧಿಯ ವಿಕಾಸವನ್ನುಂಟುಮಾಡುವ ವಿದ್ಯೆಗಳನ್ನು ತಿಳಿಸಬಲ್ಲ ವಿಜ್ಞರಿದ್ದಾರೆ, ಶಾಂತಿಸುಖಗಳನ್ನು ನೀಡಬಲ್ಲ ಮಹಾತ್ಮರಿದ್ದಾರೆ. ಇದೆಲ್ಲ ಆ ದಯಾಘನನ ವರಪ್ರಸಾದವೆಂಬ ಭಾವವು ನಿನ್ನಲ್ಲೇಕೆ ಮೂಡುವದಿಲ್ಲ? ನಿನ್ನ ಕಣ್ಮನಗಳೇಕೆ ಕುರುಡಾಗಿವೆ?

ನಿಜವಾಗಿ ನೆನೆದು ನೋಡು, ನಿನ್ನ ಆತ್ಮನಾಗಿರುವ ಆ ಭಗವಂತನು ಪರಮಾನಂದಾಮೃತದ ಸಾಗರವಾಗಿರುತ್ತಾನೆ. ಇಲ್ಲಿ ಕಾಣುವ ದೃಶ್ಯಗಳೆಲ್ಲ ಆ ಸಾಗರಕ್ಕೆ

ಹೋಗಿ ಅವನಲ್ಲಿ ಒಂದಾಗುವ ಅಮೃತದ ಹೊನಲುಗಳಾಗಿರುತ್ತವೆ. ನೀನು, ನಾನು, ಎಲ್ಲರೂ, ಇದೆಲ್ಲವೂ ಎಂಥ ಆನಂದದ ವ್ಯಾಪಕಾಕಾಶವಿದು! ಇದರಿಂದಲೇ ನಿನ್ನ ಜೀವನವು ಸಾಗಿರುವದೆಂಬುದನ್ನು ಮರೆಯದಿರು! ತಲ್ಲಣಿಸಬೇಡ, ಕುಗ್ಗಬೇಡ, ಕೊರಗಬೇಡ, ಆನಂದದಲ್ಲಿ ಮುಳುಮುಳುಗಿ ಏಳುವದನ್ನು ಕಲಿತುಕೊ!

*****

## 71. ತೀರ್ಥಗಳಿಂದ ಲಾಭವನ್ನು ಪಡೆಯುವ ಬಗೆ

ತೀರ್ಥಗಳೂ ಕ್ಷೇತ್ರಗಳೂ ಏರ್ಪಟ್ಟ ಬಗೆ ಹೇಗೆ? ಪುರಾತನಕಾಲದಲ್ಲಿ ಋಷಿಗಳೂ ಸಾಧುಗಳೂ ಮಹಾತ್ಮರೂ ಏಕಾಂತವಾಸವನ್ನು ಮಾಡಿ ತಮ್ಮ ತಪಸ್ಸಿನ ಪ್ರಭಾವದಿಂದ ಈಶ್ವರನನ್ನು ಒಲಿಸಿಕೊಂಡರು. ಅವರು ತಪಸ್ಸುಮಾಡಿದ ಸ್ಥಲ, ಸ್ನಾನ ಮಾಡಿದ ಜಲಾಶಯ, ಒಲಿಸಿಕೊಂಡ ಪರಮೇಶ್ವರನ ಆಕಾರಾದಿಗಳು-ಇವುಗಳನ್ನು ಕಾಲಾನುಕಾಲಕ್ಕೆ ಆಸ್ತಿಕರು ವರ್ಣಿಸಿದರು. ಒಬ್ಬರಿಂದೊಬ್ಬರಿಗೆ ಅವುಗಳ ಮಾಹಾತ್ಮ್ಯವು ತಿಳಿಯಬಂತು. ಅವುಗಳನ್ನು ದರ್ಶನಮಾಡುವದು, ಅಲ್ಲಿ ಸ್ನಾನತರ್ಪಣಾದಿಗಳನ್ನು ಮಾಡುವದು, ಪರಮೇಶ್ವರನ ಮೂರ್ತಿಯ ದರ್ಶನವನ್ನು ಮಾಡಿಕೊಳ್ಳುವದು, ಕೆಲವು ಕಾಲ ಅಲ್ಲಿ ನಿಯಮದಿಂದ ಇದ್ದುಕೊಂಡು ಜಪ, ಪಾರಾಯಣ, ಧ್ಯಾನವೇ ಮುಂತಾದವುಗಳನ್ನು ಅನುಷ್ಠಾನಮಾಡುವದು- ಹೀಗೆ ಮಾಡುವದರಿಂದ ಹಿಂದಿನ ಪಾಪಗಳು ಹೋಗುವವು, ಪುಣ್ಯವು ಲಭಿಸುವದು, ಅಂತಃಕರಣವು ಶುದ್ಧಿಯಾಗುವದು- ಎಂಬ ನಂಬಿಕೆಯು ಜನರಲ್ಲಿ ಉಂಟಾಯಿತು. ಬಹಳ ಶ್ರಮಪಟ್ಟಾದರೂ ಅತ್ಯಂತ ದೂರಪ್ರದೇಶದಲ್ಲಿ, ಅತ್ಯಂತ ಅಗಮ್ಯಪ್ರದೇಶಗಳಲ್ಲಿ ಮತ್ತು ಅತ್ಯಪಾಯಕರವಾದ ಸನ್ನಿವೇಶಗಳಲ್ಲಿ ಕೂಡ ಇರುವ ಇಂಥ ಸ್ಥಲಗಳನ್ನು ಕಾಣುವದಕ್ಕೆಂದು ಜನರು ಗುಂಪಾಗಿ ಅಥವಾ ಒಬ್ಬೊಬ್ಬರೇ ಪಾದಚಾರಿಗಳಾಗಿ ನಡೆಯುವದಕ್ಕೆ ಪ್ರಾರಂಭಿಸಿದರು. ಇದೇ ತೀರ್ಥಯಾತ್ರೆಯ ಮೂಲ.

ಮಹಾತ್ಮರುಗಳ ದರ್ಶನವೇ ಪವಿತ್ರವಾದದ್ದು; ಅವರೊಡನೆ ಸಂಭಾಷಣೆಮಾಡಿ ಉಪದೇಶವನ್ನು ಪಡೆದು ಅದರಂತೆ ನಡೆಯುವದು ಇನ್ನೂ ಪವಿತ್ರತರವಾದದ್ದು. ಈ

ನಂಬಿಕೆಯು ಮಿಕ್ಕ ದೇಶಗಳಿಗಿಂತಲೂ ನಮ್ಮ ದೇಶದಲ್ಲಿ ಅನಾದಿಕಾಲದಿಂದ ಬೆಳೆದು ಕೊಂಡುಬಂದಿರುತ್ತದೆ. ಯಾರಿಗೆ ಈ ಸಂಸಾರವು ಜನ್ಮಮೃತ್ಯುಜರಾರೋಗಮಯ ವಾಗಿರುವದೆಂದೂ ಅನಿತ್ಯವೆಂದೂ ಇದನ್ನು ದಾಟಿರುವ ಪರಮಾರ್ಥತತ್ತ್ವವೊಂದು ನಿಜವಾಗಿ ಇದ್ದುಕೊಂಡಿರುವದೆಂದೂ ಅದನ್ನು ದೊರಕಿಸಿಕೊಳ್ಳಬೇಕೆಂದೂ, ವೈರಾಗ್ಯವೂ ವಿವೇಕವೂ ಮುಮುಕ್ಷುತ್ವವೂ ಉಂಟಾಗುವವೋ ಅವರು ಅವಶ್ಯವಾಗಿ ತತ್ತ್ವಜ್ಞಾನದ ಲಾಭಕ್ಕಾಗಿ ಕಾಮಕ್ರೋಧಾದಿ ವರ್ಜಿತವಾಗಿರುವ ಬ್ರಹ್ಮನಿಷ್ಠರಾದ ಸಾಧುಗಳ ಸಂಗ ವನ್ನು ಹುಡುಕುವರು. ಸಾಧುಗಳು ಏಕಾಂತವಾಸದಲ್ಲಿ ತೀರ್ಥಕ್ಷೇತ್ರಾದಿಗಳಲ್ಲಿ ವಾಸ ಮಾಡಿಕೊಂಡಿರುತ್ತಾರೆ. ಆದ್ದರಿಂದ ವಿರಕ್ತರಾದ ಆಸ್ತಿಕರು ಜ್ಞಾನಕ್ಕೆಂದು ತೀರ್ಥಕ್ಷೇತ್ರ ಗಳಿಗೆ ಹೋಗುವದು ಮುಖ್ಯವಾದ ತೀರ್ಥಯಾತ್ರೆಯು. **"ಹರೇ ಕೃಷ್ಣ ಹರೇ ಕೃಷ್ಣ ಭಕ್ತವತ್ಸಲ ಗೋಪತೇ । ಶರಣ್ಯ ಭಗವನ್ ವಿಷ್ಣೋ ಮಾಂಪಾಹಿ ಬಹುಸಂಸೃತೇಃ । ಇತಿ ಬ್ರುವನ್ ರಸನಯಾ ಮನಸಾ ಚ ಹರಿಂ ಸ್ಮರನ್ । ಪಾದಚಾರೀ ಗತಿಂ ಕುರ್ಯಾತ್ ತೀರ್ಥಂ ಪ್ರತಿ ಮಹೋದಯಃ"** "ಭಗವಂತನೆ, ನಿನಗೆ ಶರಣು ಬಂದಿರುತ್ತೇನೆ; ನನ್ನನ್ನು ಈ ಅಗಾಧವಾದ ಸಂಸಾರದಿಂದ ಪಾರುಮಾಡಬೇಕು" ಎಂದು ಬೇಡಿಕೊಳ್ಳುತ್ತಾ, ಮನಸ್ಸಿನಿಂದಲೂ ಹರಿಯನ್ನೇ ಸ್ಮರಿಸುತ್ತಾ ಪಾದಚಾರಿಯಾಗಿ ತೀರ್ಥಕ್ಕೆ ಹೋಗಬೇಕು- ಎಂದು ಪುರಾಣವಚನವಿದೆ.

ಯಾರು ಇಂದ್ರಿಯಗಳನ್ನು ಸ್ವಾಧೀನದಲ್ಲಿಟ್ಟುಕೊಂಡಿರುವರೋ ವಿದ್ಯಾತಪಸ್ಸು ಗಳಲ್ಲಿ ನಿರತರಾಗಿರುವರೋ, ಯಾರು ಯಾವ ವಸ್ತುವನ್ನೂ ಮತ್ತೊಬ್ಬರಿಂದ ಪ್ರತಿಗ್ರಹಣ ಮಾಡದೆ ಅಲ್ಪಸಂತುಷ್ಟಿಯುಳ್ಳವರಾಗಿರುವರೋ, ದಂಭ, ಅಹಂಕಾರ- ಮುಂತಾದ ದೋಷಗಳಿಲ್ಲದೆ ಸರ್ವಸಂಗವಿಮುಕ್ತರಾಗಿರುವರೋ, ಕಾಮಕ್ರೋಧಾದಿ ಗಳ ಕೋಟಲೆಯಿಂದ ಬಿಡುಗಡೆಯನ್ನು ಹೊಂದಿರುವರೋ, ಸರ್ವಭೂತಗಳಲ್ಲಿಯೂ ತಮ್ಮಂತೆ ಪ್ರೇಮವನ್ನು ಮಾಡುವವರಾಗಿರುವರೋ ಅಂಥವರಿಗೆ ತೀರ್ಥಯಾತ್ರೆಗಳ ಪೂರ್ಣ ಫಲವು ಬರುತ್ತದೆ. ಭಾವಭಕ್ತಿಯಿಂದ ಕೂಡಿದ ಪಾಪಿಗಳೂ ತೀರ್ಥಗಳಲ್ಲಿ ಪರಿಶುದ್ಧರಾಗುವರು; ಇನ್ನು ಸತ್ಯ, ದಾನ, ದಮ-ಮುಂತಾದವುಗಳಿಂದ ಕೂಡಿದವರು ಅಲ್ಲಿ ಮಹಾಫಲವನ್ನು ಪಡೆಯುವರೆಂಬುದಕ್ಕೆ ಸಂಶಯವೇನು? ತೀರ್ಥಯಾತ್ರೆಗೆ ಭಾವವು ಬಹಳ ಮುಖ್ಯ. **"ಗಂಗಾದಿತೀರ್ಥೇಷು ವಸನ್ತಿ ಮತ್ಸ್ಯಾಃ ।**

**ದೇವಾಲಯೇ ಪಕ್ಷಿಗಣಾಶ್ಚ ಸನ್ತಿ । ಭಾವೋಜ್ಝಿತಾಸ್ತೇ ನ ಫಲಂ ಲಭನ್ತೇ । ತೀರ್ಥಾಚ್ಚ ದೇವಾಯತನಾಚ್ಚ ಮುಖ್ಯಾತ್ । ಭಾವಂ ತತೋ ಹೃತ್ಕಮಲೇ ನಿಧಾಯ । ತೀರ್ಥಾನಿ ಸೇವೇತ ಸಮಾಹಿತಾತ್ಮಾ ॥''** 'ತೀರ್ಥಗಳಲ್ಲಿ ಮೀನುಗಳು ಯಾವಾಗಲೂ ಇರುತ್ತವೆ, ದೇವಾಲಯಗಳಲ್ಲಿ ಪಕ್ಷಿಗಳೂ ವಾಸಿಸುತ್ತವೆ; ಆದರೆ ಅವಕ್ಕೆ ತೀರ್ಥದೇವಾಲಯವಾಸದ ಫಲವು ಬಂದೀತೇನು? ಆದ್ದರಿಂದ ಹೃತ್ಕಮಲದಲ್ಲಿ **ಭಾವವನ್ನು ಬೆಳೆಯಿಸಿಕೊಂಡು ಸಮಾಧಾನಚಿತ್ತನಾಗಿ ತೀರ್ಥಗಳನ್ನು ಸೇವಿಸಬೇಕು'** ಎಂದು ನಾರದ ಪುರಾಣದಲ್ಲಿ ಹೇಳಿದೆ.

ಆದರೆ ಇಂದು ತೀರ್ಥಕ್ಷೇತ್ರಗಳ ಸ್ಥಿತಿಯೂ ಅಲ್ಲಿಗೆ ಹೋಗುವವರ ಮನಸ್ಥಿತಿಯೂ ಹೇಗಿರುತ್ತದೆ? ಎಲ್ಲಿಯೋ ಇರುವ ಕೆಲವು ಪ್ರತಿಷೇಧಗಳನ್ನು ಬಿಟ್ಟರೆ, ಈಗ ಬಹುಮಟ್ಟಿಗೆ ಕ್ಷೇತ್ರಗಳೆಂದರೆ ಕೆಲವು ಗುಡಿಗೋಪುರಗಳಿಂದ ಕೂಡಿರುವ ಜನನಿಬಿಡವಾದ ಸ್ಥಳಗಳು. ಆ ಕ್ಷೇತ್ರಗಳಲ್ಲಿ ದೇವತಾದರ್ಶನಕ್ಕೂ ಪೂಜಾಭಿಷೇಕಾದಿ ಗಳಿಗೂ ಯಾತ್ರಿಕರಿಗೆ ಸಹಾಯಮಾಡುತ್ತೇವೆಂದು ಹೇಳಿಕೊಳ್ಳುವ ಕೆಲವರು ಮಾರ್ಗ ದರ್ಶಿಗಳಿರುತ್ತಾರೆ. ಎಷ್ಟೋ ಕಡೆಗಳಲ್ಲಿ ಯಾತ್ರಿಕರಿಗೆ ಇಳಿದುಕೊಳ್ಳುವ ಧರ್ಮಶಾಲೆ ಗಳು, ಸತ್ರಗಳು, ಅಥವಾ ಛತ್ರಗಳು- ಎಂಬಿವು ನಾನಾ ಜಾತಿಯ ಶೌಚಾಚಾರರಹಿತ ವಾದ ಜನರ ಗುಂಪಿನಿಂದ ಕೂಡಿರುವ ಕೊಳಕು ಪ್ರದೇಶಗಳಾಗಿರುತ್ತವೆ. ಈ ಮಾರ್ಗದರ್ಶಿಗಳು ಆ ಸತ್ರಗಳಿಗೆ ದಿನವೊಂದಕ್ಕೆ ಇಂತಿಷ್ಟೆಂದು ಹೆಚ್ಚಿನ ಬಾಡಿಗೆಯನ್ನು ತೋರಿಸಿ ಇಳಿದುಕೊಳ್ಳುವ ಸ್ಥಳಗಳ ಕಶ್ಮಲದಿಂದ ಮಾನಸಕಲ್ಮಷಕ್ಕೂ ಅವಕಾಶವನ್ನು ಕಲ್ಪಿಸುತ್ತಾರೆ.

ಯಾತ್ರೆಗಳಿಗೆ ಹೋಗುವ ಈಗಿನ ಪ್ರಯಾಣಿಕರ ಮನೋಭಾವವೂ ಮಾರ್ಪಟ್ಟಿರುತ್ತದೆ. ಅವರಿಗೆ ವೈರಾಗ್ಯ, ಸತ್ಸಂಗಾಭಿಲಾಷೆ, ಕ್ಷೇತ್ರತೀರ್ಥಗಳ ಮಾಹಾತ್ಮ್ಯದ ಅರಿವು, ಅನುಷ್ಠಾನದ ಕುತೂಹಲ- ಇವುಗಳು ಬರುಬರುತ್ತಾ ಕುಗ್ಗುತ್ತಿರುವವು. ಸಿನೆಮಾ ಮುಂತಾದ ದೃಶ್ಯಗಳನ್ನು ನೋಡಿ ತೃಪ್ತರಾಗುವ ಹಾಗೆಯೇ ತೀರ್ಥಯಾತ್ರೆ ಎಂಬ ವಿನೋದಕಾಲಕ್ಷೇಪದಿಂದಲೂ ತೃಪ್ತರಾಗಬೇಕೆಂಬ ಲಾಲಸೆಯ ಜನರೇ ಹೆಚ್ಚುತ್ತಿರುವರು. ಅವರಿಗೆ ಪ್ರೋತ್ಸಾಹಕವಾಗಿ ರೈಲಿನವರು ಟೂರ್ ಟಿಕೆಟ್‌ಗಳೆಂಬ ಕೆಲವು ನಿಯತ ಸಂಚಾರಕ್ರಮದ ನಿಬಂಧನೆಯ ಟಿಕೆಟುಗಳನ್ನು ಏರ್ಪಡಿಸಿರುತ್ತಾರೆ;

ಈಗ ದೇಶದಲ್ಲಿ ಎಲ್ಲೆಲ್ಲಿಯೂ ಬಸ್ಸುಗಳು ಓಡಾಡುತ್ತಿರುತ್ತವೆ. ಆದ್ದರಿಂದ ಯಾರು ಬೇಕಾದರೂ ಈ ಯಾತ್ರೆಗಳನ್ನು ತಮಗೆ ಸೂಕ್ತಕಂಡಂತೆ ಭರ್‍ರನೆ ಮಾಡಿಕೊಂಡು ಬಂದು ಬಿಡಬಹುದಾಗಿದೆ. ಶ್ರದ್ಧಾಭಕ್ತಿಗಳಿಂದ ಮಾಡಿದ ಪಾದಸಂಚಾರದ ಯಾತ್ರೆಗಳು ಹರ್ಷಪ್ರದವಾಗುವವು; ದೇಶದ ವಿಜ್ಞಾನವನ್ನು ಹೆಚ್ಚಿಸುವವು, ಭರತಖಂಡದ ಸಂಸ್ಕೃತಿಯ ಏಕಮುಖತ್ವವನ್ನು ತೋರಿಸಿಕೊಡುವವು. ಅವು ಕಷ್ಟಸಹಿಷ್ಣುತೆಯನ್ನೂ ಪರದೇಶಗಳಲ್ಲಿ ಸಾತ್ವಿಕರ ಸಂದರ್ಶನಗಳನ್ನೂ ತಂದುಕೊಡುತ್ತಿದ್ದವಷ್ಟೆ? ಅದಕ್ಕೆ ಪ್ರತಿಯಾಗಿ ಈ ಯಾತ್ರೆಗಳು ಶರೀರದ ಮತ್ತು ಮನಸ್ಸಿನ ಯಾತನೆಯನ್ನೂ ತಂದು ಕೊಡುತ್ತವೆ ಎನ್ನಬೇಕಾಗಿದೆ. ವಿವಿಧೋದ್ದೇಶಗಳಿಂದ ಪ್ರಯಾಣಮಾಡುವ ವಿವಿಧ ಮತಾಚಾರಗಳ ಜನರ ಕೂಟದಿಂದಲೂ ವೇಗದಿಂದ ಸಂಚರಿಸುವ ಯಾನಗಳ ಘರ್ಷಣೆಯಿಂದಲೂ ಸಾಮಾನುಗಳನ್ನು ಸಾಗಿಸುವದಕ್ಕೆಂದು ಲಗ್ಗೇಜುಚಾರ್ಜು, ಕೂಲಿ, ಆಯಾ ಕಾಲಕ್ಕೇ ಕೊಳ್ಳಬೇಕಾಗುವ ಆಹಾರಸಾಮಗ್ರಿಗಳ ದುಬಾರಿಯ ವೆಚ್ಚ- ಮುಂತಾದವುಗಳಿಗೆ ಆಗುವ ಧನವ್ಯಯದಿಂದಲೂ ಮನಸ್ಸಿನಲ್ಲಿ ಅನಿರೀಕ್ಷಿತವಾದ ಅನಿಷ್ಟಪರಿಣಾಮಗಳು ಆಗುವವು. ಯಾತ್ರಿಕರಿಗೆ ಆಚಾರವಿಚಾರಗಳನ್ನು ಹಿಡಿತದಲ್ಲಿಟ್ಟು ಕೊಳ್ಳುವದು ಬಲು ಕಷ್ಟಸಾಧ್ಯವಾಗುವದು.

ಇವುಗಳ ಜೊತೆಗೆ ಹೋದ ಕಡೆಗಳಲ್ಲಿ ದೇವಾಲಯಗಳಿಗೆ ಬರುವ ಜನ ಸಂದಣಿ, ದೇವತಾದರ್ಶನಕ್ಕೆ ಜನರ ನೂಕುನುಗ್ಗಲಿನಿಂದ ಆಗುವ ಆಯಾಸ, ವ್ಯರ್ಥ ಕಾಲಕ್ಷೇಪ, ಮಂಗಳಾರತಿ ಪೂಜಾಭಿಷೇಕಗಳು ಮುಂತಾದವುಗಳನ್ನು ಮಾಡಿಸುವದಕ್ಕೆ ಆಗುವ ಅಡಚಣೆಗಳು, ಅರ್ಚಕರೇ ಮುಂತಾದವರು ಮಾಡುವ ಮೋಸದ ಸುಲಿಗೆ- ಇವುಗಳಿಂದ ಮನಸ್ಸಿಗೆ ಬಹಳ ಕಿರಿಕಿರಿಯಾಗುವದು. ಉಳಿದ ಖರ್ಚುಗಳನ್ನೂ ಈ ಅಸಹ್ಯಸಂನಿವೇಶವನ್ನೂ ಮನದಂದುಕೊಂಡು, ದೇವರಿಗೆಂದು ನಾವು ಸಲ್ಲಿಸಬೇಕಾದ ಸೇವೆಯ ವಿಷಯದಲ್ಲಿ ಬಹಳ ಜಿಪುಣತನದ ಬುದ್ಧಿಯು ಉಂಟಾಗುತ್ತದೆ.

ಈ ಎಲ್ಲಾ ಕಾರಣಗಳಿಂದ ಸದ್ಯದ ಕಾಲಕ್ಕೆ ಅನೇಕ ಕ್ಷೇತ್ರಗಳು ಕ್ಷೇತ್ರಗಳಲ್ಲದೆ ಹೋಗಿರುತ್ತವೆ; ತೀರ್ಥಗಳು ತೀರ್ಥಗಳಲ್ಲದೆ ಹೋಗಿಬಿಟ್ಟಿರುತ್ತವೆ. ಈ ಪರಿಸ್ಥಿತಿಯಲ್ಲಿ ಆಸ್ತಿಕರು ಏನು ಮಾಡಬೇಕು? ದೇವಾಲಯಗಳ ವ್ಯವಸ್ಥಾಪಕರು ಏನು ಮಾಡಬೇಕು? ತೀರ್ಥಕ್ಷೇತ್ರಗಳಲ್ಲಿರುವ ಆಸ್ತಿಕಜನರೂ ಲೋಕೋಪಕಾರಬುದ್ಧಿಯುಳ್ಳ ವಿದ್ವಾಂಸರೂ

ಉದಾರಾಶಯರೂ ಏನು ಮಾಡಬೇಕು?-ಎಂಬುದನ್ನು ಆಲೋಚಿಸುವದು ಅತ್ಯವಶ್ಯವಾಗಿರುತ್ತದೆ. ಈ ವಿಷಯಕ್ಕೆ ನನ್ನ ಮನಸ್ಸಿನಲ್ಲಿ ಹೊಳೆದಿರುವ ಕೆಲವು ವಿಚಾರಗಳನ್ನು ಇಲ್ಲಿ ವಾಚಕರ ಮುಂದೆ ಇಡುವೆನು. ಅವುಗಳಲ್ಲಿರುವ ಗುಣವನ್ನು ಮಾತ್ರ ವಿವೇಕಿಗಳಾದವರು ಸ್ವೀಕರಿಸಬೇಕೆಂದು ಕೋರುತ್ತೇನೆ.

(1) ಮೊಟ್ಟಮೊದಲನೆಯದಾಗಿ ಶೌಚಾಚಾರಗಳ ಮತ್ತು ಕರ್ಮಾನುಷ್ಠಾನಗಳ ಬೆಲೆಯನ್ನು ಅರಿತ ಬ್ರಾಹ್ಮಣರೇ ಮುಂತಾದವರು ಸದ್ಯಕ್ಕೆ ಈ ತೀರ್ಥಯಾತ್ರೆಯನ್ನು ಮಿಕ್ಕವರಿಗೆ ಬಿಟ್ಟುಕೊಟ್ಟು ತಾವು ತಾವು ಇರುವ ಕಡೆಯಲ್ಲಿಯೇ ನಿತ್ಯಾಹ್ನಿಕ, ಶಾಸ್ತ್ರಶ್ರವಣ, ದಾನಧರ್ಮಗಳು, ದೇವತಾರ್ಚನ- ಮುಂತಾದವುಗಳನ್ನು ಮಾಡಬೇಕು. ನದೀತೀರಗಳಲ್ಲಿಯೂ ಸಣ್ಣ ಸಣ್ಣ ಕ್ಷೇತ್ರಗಳಲ್ಲಿಯೂ ಇರುವ ಆಸ್ತಿಕರು, ಸ್ವತಂತ್ರವಾದ - ಎಂದರೆ ಹರಿಜನರ ಪ್ರವೇಶ, ದೇವಾಲಯಗಳನ್ನು ಲೌಕಿಕ ವಿಚಾರಗಳಿಗೆ ಅಥವಾ ರಾಜಕಾರಣಕ್ಕೆ ಉಪಯೋಗಿಸುವದು, ಸಮಾಜಸುಧಾರಣೆ ಮುಂತಾದವುಗಳ ಉಪಟಳವಿಲ್ಲದ- ದೇವಸ್ಥಾನಗಳನ್ನು ಏರ್ಪಡಿಸಿಕೊಂಡು ಅಲ್ಲಿ ಪೂಜಾರಿಗಳನ್ನು ಉಪಯೋಗಿಸದೆ ತಾವೇ ನಿರಂತರವಾಗಿ ಪೂಜೆ, ಅಭಿಷೇಕ, ಅರ್ಚನೆ, ಭಜನೆ, ಪಾರಾಯಣ- ಮುಂತಾದ ರೂಪದ ತಪಸ್ಸಿನಿಂದ ಅವನ್ನು ಪವಿತ್ರಸ್ಥಾನಗಳಾಗಿ ಮಾರ್ಪಡಿಸಬೇಕು. ಈಗ ತೀರ್ಥಯಾತ್ರೆಯ ಹೆಸರಿನಲ್ಲಿ ಪೋಲಾಗುತ್ತಿರುವ ಹಣದ ಅರ್ಧದಷ್ಟನ್ನು ಪ್ರತಿಯೊಬ್ಬನೂ ಈ ಕಾರ್ಯಕ್ಕಾಗಿ ಮೀಸಲಾಗಿಟ್ಟರೆ- ಈ ದೇವಾಲಯಗಳು ನಿಜವಾಗಿಯೂ ದೇವನ ಆಲಯಗಳಾಗುವವು. ಇಂಥ ಅರ್ಚನಸ್ಥಾನಗಳು ಹೆಚ್ಚಿದಷ್ಟೂ ಮಹಾಜನಕ್ಕೆ ಕಲ್ಯಾಣವಾಗುವದು; ನಿಃಸ್ಪೃಹರಾದ ಆಸ್ತಿಕರು ಮಾಡುವ ಈ ತಪಸ್ಸಿನಿಂದ ಆ ದೇವಾಲಯಗಳಿರುವ ಸ್ಥಾನಗಳು ನಿಜವಾದ ತೀರ್ಥಗಳೂ ಕ್ಷೇತ್ರಗಳೂ ಆಗುವವು. ಅನುಷ್ಠಾತೃಗಳ ತಪೋಬಲದಿಂದಲೇ ದೇವಾಲಯ, ನದಿ, ಶಾಸ್ತ್ರ ಶ್ರವಣ- ಮುಂತಾದವು ವೀರ್ಯವಂತವಾಗುತ್ತವೆ ಎಂದು ಶಾಸ್ತ್ರವಿರುವದರಿಂದ ಈ ಮಾರ್ಗದಿಂದ ನಿಜವಾದ ತೀರ್ಥಗಳು ಎದ್ದುಕೊಳ್ಳುವವು, ತೀರ್ಥಗಳೆಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಈಗಿನ ಅಶುಚ್ಯಾಚಾರದ ಸ್ಥಲಗಳಲ್ಲಿ ಜನರ ನೂಕು ನುಗ್ಗಲೂ ಕಡಿಮೆಯಾಗುವದು.

(2) ಎರಡನೆಯದಾಗಿ ಕೆಲವು ಜನ ಆಸ್ತಿಕರುಗಳಾದವರು ವಿರಕ್ತರಾಗಿದ್ದರೆ ಸುಪ್ರಸಿದ್ಧವಾದ ಸಣ್ಣ ಸಣ್ಣ ತೀರ್ಥಕ್ಷೇತ್ರಗಳಿಗೆ ಹೋಗಿ ಮತ್ತೊಬ್ಬರ ಹಂಗಿಲ್ಲದೆ ಅಲ್ಲಿ ಜಪತಪಾದ್ಯನುಷ್ಠಾನವನ್ನು ತಾವು ಮಾಡಿ ಮಿಕ್ಕವರು ಮಾಡುವಂತೆ ಪ್ರೋತ್ಸಾಹಿಸ ಬೇಕು. ಯಾವ ಜನರಿಂದಲೂ ಯಾವ ದಾನಾದಿಗಳನ್ನೂ ಬಯಸದೆ ಸ್ಥಲಮಾಹಾತ್ಮ್ಯ, ಸತ್ಕರ್ಮಾನುಷ್ಠಾನದಿಂದಾಗುವ ಮಹಾಫಲ, ಭಗವದ್ಭಕ್ತಿಯ ಮಹಿಮೆ– ಮುಂತಾದವು ಗಳನ್ನು ಆಡಂಬರವಿಲ್ಲದೆ ಜನರಿಗೆ ತಿಳಿಯಹೇಳುವ ಕೆಲಸಕ್ಕೆ ಸೊಂಟಕಟ್ಟಿ ನಿಲ್ಲಬೇಕು. ಇಂಥ ತಿಳಿವಳಿಕೆಯಾಗಲಿ ಹೆಚ್ಚಿನ ಆಧ್ಯಾತ್ಮಿಕಶಕ್ತಿಯಾಗಲಿ ಇಲ್ಲದ ಉದಾರಾಶಯರಾದ ಧನವಂತರು ಇಂಥವರಿಗೆ ಇರುವದಕ್ಕೆ ಸ್ಥಲ, ಸಾತ್ತ್ವಿಕರಾಗಿರುವ ಯಾತ್ರಿಕರಿಗೆ ಸೌಕರ್ಯ – ಮುಂತಾದವುಗಳನ್ನು ಕಲ್ಪಿಸುವದಕ್ಕೇ ತಮ್ಮ ಧನದ ಒಂದು ಭಾಗವನ್ನು ಮುಡುಪಾಗಿಡಬೇಕು. ಅದರಿಂದ ಭಗವತ್ಪ್ರೀತಿಯೂ ಆಗುವದು, ಕ್ಷೇತ್ರಗಳ ವೀರ್ಯವೂ ಹೆಚ್ಚುವದು.

(3) ಮೂರನೆಯದಾಗಿ ಸರಕಾರದವರು ಈಗ ದೇವಾಲಯಗಳ, ತೀರ್ಥ ಕ್ಷೇತ್ರಗಳ ಉತ್ಪತ್ತಿಯನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಿರುವ ಕಡೆಗಳಲ್ಲಿ ಬರುವ ಯಾತ್ರಾರ್ಥಿಗಳಿಗೆ ಕಲ್ಪಿಸಿಕೊಡಬೇಕಾದ ಸೌಕರ್ಯಗಳು, ಜನರು ಕ್ಷೇತ್ರಗಳಲ್ಲಿ ನಡೆದುಕೊಳ್ಳಬೇಕಾದ ತಿಳಿವಳಿಕೆ– ಮುಂತಾದವುಗಳನ್ನು ಒದಗಿಸುವಂತೆ ಪ್ರಜೆಗಳು ಪ್ರಾರ್ಥಿಸಬೇಕು. ದೇವಸ್ಥಾನಗಳಲ್ಲಿ ಮೂಲೋದ್ದೇಶಕ್ಕೆ ಭಂಗವನ್ನು ತರುವ ಯಾವ ಆಚಾರವನ್ನೂ ಇಟ್ಟುಕೊಳ್ಳದಂತೆ ಅಧಿಕಾರಿಗಳು ನಿಗನೋಡಿಕೊಳ್ಳಬೇಕೆಂದು ಒತ್ತಾಯ ಪಡಿಸಬೇಕು. ಆಯಾ ಕ್ಷೇತ್ರತೀರ್ಥಗಳ ಪರಮೋದ್ದೇಶವು ನೆರವೇರುವದಕ್ಕೆ ಬೇಕಾದ ಉಪಾಯಗಳನ್ನು ಕೈಕೊಂಡು ಅದರ ಖರ್ಚುಕಳೆದ ಹಣವನ್ನೇ ವಿದ್ಯಾಭ್ಯಾಸವೇ ಮುಂತಾದ ಬೇರೆಯ ದಿಕ್ಕಿನಲ್ಲಿ ವಿನಿಯೋಗಿಸಬೇಕು– ಎಂಬುದನ್ನು ಅಧಿಕಾರಿಗಳ ಗಮನಕ್ಕೆ ತರಬೇಕು.

ಹೀಗಾದರೆ ತೀರ್ಥಯಾತ್ರೆಗಳ ಪರಮಲಾಭವು ಆಸ್ತಿಕರಿಗೆ ದೊರೆಯುವದು, ಅಲ್ಲಿ ಈಗಿರುವ ಕಲಿಪ್ರಾಬಲ್ಯವು ಕುಗ್ಗುವದು, ತೀರ್ಥಕ್ಷೇತ್ರಗಳಿಗೆ ಪ್ರಸಿದ್ಧವಾಗಿರುವ ಭಾರತಭೂಮಿಯ ವೈಭವವು ಮತ್ತೆ ಮೆರೆಯುವುದಕ್ಕೆ ನೆರವಾದ ಪುಣ್ಯವು ಎಲ್ಲರಿಗೂ ಲಭಿಸುವದು.

# 72. ಪರಮಾತ್ಮನ ವಿಭೂತಿ

ಮಾನವ, ಹಗಲು ಸೂರ್ಯನ ಬೆಳಕು ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುವಂತೆಯೂ ರಾತ್ರೆ ಶುಕ್ಲ ಪಕ್ಷದಲ್ಲಿ ಎಲ್ಲೆಲ್ಲಿಯೂ ಚಂದ್ರನ ಬೆಳದಿಂಗಳು ವ್ಯಾಪಿಸಿಕೊಂಡಿರುವಂತೆಯೂ ಇಡಿಯ ಬ್ರಹ್ಮಾಂಡವನ್ನೆಲ್ಲ ಭಗವಂತನ ಪ್ರಕಾಶವೇ ವ್ಯಾಪಿಸಿಕೊಂಡಿರುವದೆಂದು ಶಾಸ್ತ್ರಗಳು ಹೇಳುತ್ತಿವೆ, ದೊಡ್ಡವರೂ ಉಪದೇಶಿಸುತ್ತಿರುತ್ತಾರೆ; ಇದನ್ನು ದೃಢವಾಗಿ ನಂಬು, ಆ ಭಾವನೆಯಿಂದ ನಿನಗೆ ಸರ್ವದಿಕ್ಕುಗಳೂ ಸುಖಮಯವಾಗುವವು.

ಅಪ್ಪ 'ನನಗೇಕೆ ಈ ಪ್ರಪಂಚವು ದುಃಖಮಯವಾಗಿ ಕಾಣುತ್ತಿದೆ?' ಎಂದು ಆಗಾಗ್ಗೆ ಚಿಂತಿಸುತ್ತಿರುವೆಯಲ್ಲವೆ? ಅದಕ್ಕೆ ನಿನ್ನ ಮನಸ್ಸೇ ಕಾರಣವೆಂದು ತಿಳಿ. ನಿನ್ನ ಮನಸ್ಸಿನಲ್ಲಿ ಈ ಪ್ರಪಂಚವು ಹೀಗಿರಬೇಕಾಗಿತ್ತು ಇವರು ಹೀಗೆ ನಡೆದುಕೊಳ್ಳಬೇಕಾಗಿತ್ತು. ಇವರು ನನ್ನನ್ನು ಹೀಗೆ ಕಾಣಬೇಕಾಗಿತ್ತು.... ಎಂದು ಮುಂತಾಗಿ ಸ್ವಾರ್ಥದ ವಿಚಾರಗಳು ಆಗಾಗ್ಗೆ ಎದ್ದುಕೊಳ್ಳುತ್ತಿರುವವು. ಆ ಕಲ್ಮಷದ ವಿಚಾರವೇ ನಿನಗೆ ಹೊರಗೆ ದುಃಖಪ್ರದವಾದ ದೃಶ್ಯವಾಗಿ ಕಾಣುತ್ತಿರುವದೆಂದು ತಿಳಿ.

ಹುಚ್ಚ, 'ಈ ಪ್ರಪಂಚವು ದುಃಖಮಯವಾಗಿದೆ, ಇಲ್ಲಿದ್ದು ಏನು ಪ್ರಯೋಜನ? ನಾನು ಈ ದುಃಖದಿಂದ ಪಾರಾಗುವದಕ್ಕೆ ಈ ಶರೀರವನ್ನೇ ಬಿಟ್ಟುಬಿಡುವೆನು!' ಎಂದು ಚಿಂತಿಸಿಕೊಳ್ಳಬೇಡ. ನೀನು ಈ ಪ್ರಪಂಚವನ್ನು ಬಿಟ್ಟು ಮತ್ತೆ ಎಲ್ಲಿಗೆ ಹೋಗುವೆ? ಈ ಶರೀರವನ್ನು ಬಿಟ್ಟರೆ ಮತ್ತೊಂದು ಶರೀರವನ್ನು ತೆಗೆದುಕೊಳ್ಳುವೆ. ಮತ್ತೆ ಅಲ್ಲಿಯೂ ನಿನಗೆ ನಿನ್ನ ಮನಸ್ಸಿನ ಕಲ್ಮಷದಿಂದ ದುಃಖವೇ ಕಾಣಿಸುವದು. ಆದ್ದರಿಂದ ನಿನ್ನ ದುಷ್ಟವಾದ ಆ ಭಾವನೆಗಳನ್ನೇ ಬಿಟ್ಟು ಬಿಡು. 'ಈ ಪ್ರಪಂಚದಲ್ಲಿ ಕಾಣಿಸುವದೆಲ್ಲವೂ ಆ ಭಗವಂತನ ವಿಭೂತಿಯು. ಆದ್ದರಿಂದ ಇಲ್ಲಿ ದುಃಖಪ್ರದವಾದದ್ದು ಯಾವದೂ ಇಲ್ಲ' ಎಂದು ಮತ್ತೆಮತ್ತೆ ನಿನ್ನ ಮನಸ್ಸಿಗೆ ಬುದ್ಧಿಯನ್ನು ಹೇಳಿಕೊ.

ಎಲಾ ಅವಿವೇಕಿಯೆ, ಕಣ್ಣುಬಿಟ್ಟು ನೋಡು! ಮನಮುಟ್ಟಿ ಯೋಚಿಸು! ಯಾವಯಾವದು ಸುಂದರವಾಗಿರುವದೋ, ಯಾವಯಾವದು ಅಮೃತವಾಗಿರುವದೋ, ಯಾವಯಾವದು ವೀರ್ಯವಂತವಾಗಿರುವದೋ ಉತ್ಸಾಹಯುಕ್ತವಾಗಿರು

ವದೋ, ಯಾವಯಾವದು ಇಂದ್ರಿಯಗಳಿಗೂ ಮನಸ್ಸಿಗೂ ಮೆಚ್ಚಾಗಿ ತೋರುವದೋ, ಆನಂದಜನಕವಾದ ಅದೆಲ್ಲವೂ ಆ ಭಗವಂತನ ವಿಭೂತಿಯೇ ಎಂಬುದನ್ನು ಮೊದಲು ಭಾವಿಸಿಕೊ. ಆಮೇಲೆ ಇಡಿಯ ಜಗತ್ತೇ ಆ ಭಗವಂತನ ವಿಭೂತಿ ಎಂಬ ಭಾವನೆಯು ಅಳವಡುವದು. ಎಲ್ಲಕ್ಕೂ ಮೊದಲು ನಿನ್ನ ಮನಸ್ಸನ್ನು ಸರಿಪಡಿಸಿಕೊ. ಅದರಲ್ಲಿ ಭಗವಂತನ ಭಾವನೆಯನ್ನು ಮೂಡಿಸಿಕೊ! ಆಮೇಲೆ ನಿನಗೆ ಎಲ್ಲಿಯೂ ದುಃಖವು ಕಾಣುವದಿಲ್ಲ. ಮನಸ್ಸಿನಲ್ಲಿ ಆನಂದದ ಮೂಲವಾದ ಪರಮಾತ್ಮನನ್ನು ಇಟ್ಟುಕೊ. ಎಲ್ಲೆಲ್ಲಿಯೂ ಆನಂದವೇ ಕಾಣಿಸುವದು.

*****

## 73. ಮುಪ್ಪು ಬರುವದರೊಳಗೆ ಮಾಡಿಕೊಳ್ಳಬೇಕಾದದ್ದು

ಅಣ್ಣಗಳಿರ, ಶರೀರವು ನೀವಲ್ಲ; ಅದು ನಿಮಗೆ ಇರುವ ಒಂದು ಸಾಧನ, ಅಷ್ಟೆ. ಇದನ್ನು ಮರೆಯಬೇಡಿ. ಶರೀರಕ್ಕೆ ಬಾಲ್ಯ, ಯೌವನ, ಕೌಮಾರ - ಇವುಗಳು ಬಂದಂತೆಯೇ ಮುಪ್ಪಿನ ಅವಸ್ಥೆಯೂ ಬಂದೇತೀರುವದು. ಇದನ್ನು ಮರೆಯ ಬೇಡಿರಿ. ಮುಪ್ಪು ಬಂದಮೇಲೆ ಒಂದಾನೊಂದು ದಿನ ಈ ಶರೀರವನ್ನು ಅತ್ತೊಗೆದು ನೀವು ಮುಂದಕ್ಕೆ ಪ್ರಯಾಣಮಾಡಲೇಬೇಕು. ಇದನ್ನು ಮರೆಯಬೇಡಿರಿ.

ಮುಪ್ಪು ಬರುವದರೊಳಗೇ ನೀವು ಮಾಡಿಕೊಳ್ಳಬೇಕಾದ ಸಾಧನಗಳನ್ನು ಮಾಡಿಕೊಳ್ಳಿರಿ. 'ನನಗೆ ಮುಪ್ಪು ಬರುವದಿಲ್ಲ'- ಎಂಬ ಹುಚ್ಚು ಕಲ್ಪನೆಯನ್ನು ಮಾಡಿಕೊಳ್ಳಬೇಡಿರಿ. ಅದು ಬಂದಾಗ ಮಾಡಿಕೊಳ್ಳೋಣ ಎಂಬ ಕಲ್ಪನೆಯಂತೂ ಎಂದಿಗೂ ಸಲ್ಲದು. ಅದು ಬಂದಮೇಲೆ ನಿಮ್ಮ ಅವಯವಗಳು ಯಾವವೂ ನಿಮ್ಮ ಹತೋಟಿ ಯಲ್ಲಿರುವದಿಲ್ಲ, ನಿಮ್ಮ ಆರೋಗ್ಯವು ತಪ್ಪಿಹೋಗುವದು, ಮನಸ್ಸಿನ ಶಕ್ತಿಯೂ ಕುಗ್ಗಿಹೋಗುವದು. **ಆಮೇಲೆ ನೀವು ಏನನ್ನು ತಾನೆಮಾಡಿ ಕೊಳ್ಳಲಾಪಿರಿ?**

ನಿಮ್ಮಲ್ಲಿ ಯಾರಿಗೆ ಮುಪ್ಪು ಬಂದೇಬಿಟ್ಟಿದೆಯೋ, ಅಥವಾ 'ಇನ್ನೇನು, ಬರುತ್ತಿದೇನೆ' ಎಂದು ಎಚ್ಚರಿಕೆ ಕೊಡುತ್ತಿರುವದೋ, ಅಂಥವರು ಈಗಲೂ ಮೊದಲಿನಂತೆ ವಿಷಯಗಳ ಭೋಗಕ್ಕೇ ಮನಸ್ಸನ್ನು ಜೋಲುಬಿಡುತ್ತಾ ಕೂತುಕೊಳ್ಳುವದು ಎಂಥ ಹುಚ್ಚುತನವು! 'ಮನೆಯ ಹೊರಗಡೆಗೆ ಬೆಂಕಿ ಬಿದ್ದಿದ್ದರೆ ಇನ್ನೂ ಒಳಕ್ಕೇ ಬಂದಿಲ್ಲವಲ್ಲ!' ಎಂದು ಸುಮ್ಮನೆ ಕೂರಬಹುದೆ?

'ಹೆಂಡತಿಗೆ, ಮಕ್ಕಳಿಗೆ, ಅಥವಾ ಆಶ್ರಿತರಿಗೆ ಏನಾದರೂ ಜೀವನೋಪಾಯ ವನ್ನು ಕಲ್ಪಿಸಿಕೊಟ್ಟು ಆಮೇಲೆ ವಿಶ್ರಾಂತಿ ತೆಗೆದುಕೊಳ್ಳುವೆನು' ಎಂಬ ಮಂಕುಬುದ್ಧಿಗೆ ಅವಕಾಶವನ್ನು ಕೊಡಬೇಡಿರಿ. ನಿಮ್ಮವರಿಗೆ ಜೀವನೋಪಾಯವು ಅವಶ್ಯವಾಗಿರಬಹುದು; ಆದರೆ ನಿಮ್ಮ ಜೀವನಕ್ಕೇ ಸಂಚಕಾರವು ಬಂದಿದೆಯಲ್ಲ! ಅದಕ್ಕೇನುಮಾಡ ಬೇಕೆಂದಿರುವಿರಿ? ನಿಮ್ಮವರಿಗೆ ತಾವಿರುವ ದೇಶದ ಪರಿಚಯವಿದೆ, ನೀವಿಲ್ಲದಿದ್ದರೂ ಕೆಲವು ನೆಂಟರಿಷ್ಟರೂ ಪರಿಚಯಸ್ಥರೂ ಅವರಿಗೆ ಸ್ವಲ್ಪಮಟ್ಟಿಗಾದರೂ ನೆರವಾಗಬಹು ದೆಂಬ ಆಶೆಯಿದೆ. ಆದರೆ ನೀವು ಈ ಮುಪ್ಪು ಬಲವಾದ ಮೇಲೆ ಶರೀರವನ್ನು ಬಿಟ್ಟು ಮುಂದಕ್ಕೆ ಎಲ್ಲಿಗೆ ಹೋಗುವಿರೆಂಬುದನ್ನು ನಿಶ್ಚಯಿಸಿ ಕೊಂಡಿರುವಿರೇನು? ಅಲ್ಲಿ ಭಗವಂತನೊಬ್ಬನಲ್ಲದೆ, ಮತ್ತೆ ಯಾರೊಬ್ಬರ ಪರಿಚಯವೂ ನಿಮಗೆ ಯಾವ ಸಹಾಯವೂ ಆಗುವದಿಲ್ಲವೆಂಬುದು ನಿಮಗೆ ತಿಳಿದಿಲ್ಲವೇನು? ಅಯ್ಯೋ, ಮಂಕು ಗಳಿರ ! ಇನ್ನಾದರೂ ತಡಮಾಡದೆ **ಆ ಭಗವಂತನನ್ನು ಸ್ಮರಿಸಿಕೊಳ್ಳಿರಿ. ಮನಸ್ಸಿಗೆ ಒಂದಿಷ್ಟಾದರೂ ಶಾಂತಿಯು ಬರುವಂತೆ ಮಾಡಿಕೊಳ್ಳಿರಿ !**

*****

## 74. ನಿತ್ಯಚಿಂತನ

ವಾಚಕಮಹಾಶಯ, ಪ್ರತಿದಿನವೂ ಮನನ ಮಾಡುವದಕ್ಕೆ ಯಾವದಾದ ರೊಂದು ಒಳ್ಳೆಯ ವಿಷಯವನ್ನು ಇಟ್ಟುಕೊಳ್ಳುವದು ಬಹಳ ಒಳ್ಳೆಯದು. ಆ ಚಿಂತನೆಯು ಹೃದಯದೊಳಕ್ಕೆ ಇಳಿದುಕೊಂಡು ನಿಮ್ಮ ನಾಡಿಗಳಲ್ಲೆಲ್ಲ ಹರಿದಾಡುವಂತೆ ಮಾಡಿ ಕೊಳ್ಳುತ್ತಾ ಬನ್ನಿರಿ. ಅದರ ಪರಿಣಾಮವು ಏನಾಗುವದೆಂಬುದನ್ನು ಲಕ್ಷಿಸಿ ನೋಡಿರಿ !

ಮೀನುಗಳು ಯಾವಾಗಲೂ ನೀರಿನಲ್ಲಿಯೇ ಇರುವಂತೆ ನಾವು ಯಾವಾಗಲೂ ಸಚ್ಚಿದಾನಂದರೂಪನಾದ ಪರಮಾತ್ಮನಲ್ಲಿಯೇ ಇರುತ್ತಿದೇವೆ. ಮೀನುಗಳು ಹುಟ್ಟುವದು ನೀರಿನಲ್ಲಿ, ಓಡಾಡುವದು ನೀರಿನಲ್ಲಿ; ಅವುಗಳ ನಿತ್ಯಜೀವನವೂ ಆಹಾರ ವಿಹಾರ ಗಳೂ ನೀರಿನಲ್ಲಿಯೇ, ನೀರನ್ನು ಬಿಟ್ಟರೆ ಅವು ಕೆಟ್ಟವು. ಇದರಂತೆ ಹೊರಗೆ ನೋಡುವದಕ್ಕೆ ನಮ್ಮಲ್ಲಿ ಎಷ್ಟು ಬೇರೆಬೇರೆಯ ಆಕಾರ, ಭಾಷೆ, ವೇಷ, ಆಹಾರ, ಉದ್ಯೋಗ, ಆಶಾಪ್ರತೀಕ್ಷೆಗಳು, ಅಭಿಪ್ರಾಯಭೇದಗಳು, ಆಚಾರಭೇದಗಳು, ರಾಷ್ಟ್ರ

ತಂತ್ರಭೇದ- ಇವುಗಳು ಕಂಡುಬಂದರೂ ನಾವೆಲ್ಲರೂ ಆ ಪರಮಾತ್ಮನೆಂಬ ಸಚ್ಚಿದಾನಂದಸಾಗರದಲ್ಲಿ ಈಜಾಡುತ್ತಿರುವ ಮೀನುಗಳು. ಆತನೇ ನಮಗೆ ದೇಹ, ಕರಣ, ಆಹಾರ, ಬಲ, ಬುದ್ಧಿ- ಎಲ್ಲಕ್ಕೂ ಮೂಲವು. ಆತನನ್ನು ಬಿಟ್ಟು ನಾವು ಎಂದಿಗೂ ಹೊರಕ್ಕೆ ಹೋಗುವಹಾಗಿಲ್ಲ- ಎಂಬುದನ್ನು ಪ್ರತಿದಿನವೂ ಬೆಳಗ್ಗೆ ಎದ್ದಾಗ, ರಾತ್ರೆ ಮಲಗಿದಾಗ ಬಿಡದೆ ನೆನಪಿಗೆ ತಂದುಕೊಳ್ಳಿರಿ.

ಮಲಗಿ ಗಾಢನಿದ್ರೆಮಾಡುವಾಗ, ಕನಸುಕಾಣುವಾಗ, ಎಚ್ಚತ್ತು ಬೇರೆ ಬೇರೆಯ ಉದ್ಯೋಗದಲ್ಲಿ ತೊಡಗುವಾಗ ಆ ಅಪಾರ ಸಚ್ಚಿದಾನಂದಸಾಗರದಲ್ಲಿಯೇ ನಾವೆಲ್ಲರೂ ಇರುತ್ತಿರುವೆವು. ನಮ್ಮ ಉಸಿರು ಆತನು, ನಮ್ಮ ತಿರುಳು ಆತನು- ಎಂದು ನೆನಪಿಗೆ ತಂದುಕೊಳ್ಳುತ್ತಿರಿ. ನಮ್ಮ ಬಂಧುಗಳು, ಗೆಳೆಯರು, ಉದಾಸೀನರು, ಮಧ್ಯಸ್ಥರು, ಅತ್ಯಂತಪ್ರಿಯರು- ಎಲ್ಲರೂ ಆ ಸಚ್ಚಿದಾನಂದ ಸಾಗರದಲ್ಲಿಯೇ ಆಡಿಕೊಂಡಿರುವ ಪ್ರಾಣಿಗಳು; ಆದ್ದರಿಂದ ನಮ್ಮಲ್ಲಿ ತಾತ್ತ್ವಿಕವಾಗಿ ಯಾವ ಭೇದವೂ ಇಲ್ಲ ಎಂದು ಚಿಂತಿಸಿಕೊಳ್ಳಿರಿ.

*****

## 75. ಅಧ್ಯಾತ್ಮ ವಿದ್ಯಾರ್ಥಿಗಳಿಗೆ ಸೂಚನೆಗಳು

**1. ದೇಹವೆಂಬುದು** ದೇವಾಧಿದೇವನಾದ ಭಗವಂತನಿರುವ ಆಲಯ, ಇದನ್ನು ಎಲ್ಲಾ ಬಗೆಯಿಂದಲೂ ಪರಿಶುದ್ಧವಾಗಿಟ್ಟುಕೊಳ್ಳಬೇಕು. ಇದನ್ನು ಅನಾಚಾರ ದುರಾಚಾರಗಳಿಂದ ಅಪವಿತ್ರಗೊಳಿಸಬಾರದು; ಅನಾರ್ಯರ ಅನುಕರಣೆಯಿಂದ ಇದನ್ನು ಸಿಂಗರಿಸಿಕೊಂಡು ಸೊಗಸುಗಾರಿಕೆಯ ಜೀವನವೇ ಪರಮ ಪುರುಷಾರ್ಥ ವೆಂಬ ದುರ್ಭಾವನೆಯನ್ನು ತಂದುಕೊಳ್ಳಬಾರದು. ದೇಹವೆಂದರೆ ಭೋಗಾಶ್ರಯ ಮಾತ್ರವೆಂಬ ಕುಕಲ್ಪನೆಯಿಂದ ದೂರರಾಗಬೇಕು. ನಮಗೆ ಕರ್ಮಾನುಸಾರವಾಗಿ ಬಂದಿರುವ ದೇಹದಲ್ಲಿರುವ ಕುಂದುಕೊರತೆಗಳನ್ನು ಸರಿಪಡಿಸಿಕೊಂಡು ಸಾಧ್ಯವಾದ ಮಟ್ಟಿಗೂ ಆರೋಗ್ಯ, ಬಲ, ಕಾರ್ಯದಕ್ಷತೆ- ಇವುಗಳಿಂದೊಡಗೂಡಿದ ದೀರ್ಘಾ ಯುಸ್ಸುಳ್ಳದ್ದಾಗುವದಕ್ಕೆ ತಕ್ಕ ಉಪಕರಣವಾಗುವಂತೆ ಅದನ್ನು ಸಜ್ಜುಗೊಳಿಸಿಕೊಳ್ಳಬೇಕು.

**2. ಇಂದ್ರಿಯಗಳು** ನಮ್ಮನ್ನು ಪ್ರಕೃತಿಮಾತೆಗೆ ಸಂಬಂಧಿಸುವ ದ್ವಾರ

ಗಳಾಗಿರುತ್ತವೆ. ಹೊರಗಿನ ವಸ್ತುಗಳೂ ಪ್ರಾಣಿಗಳೂ ಜನರೂ ನಮ್ಮ ಉಪಯೋಗಕ್ಕಾಗಿ ಸೃಷ್ಟಿಯಾಗಿರುವರೆಂಬ ದುರ್ಭಾವನೆಗೆ ಅವು ಅವಕಾಶವನ್ನು ಕೊಡದಿರಲಿ; ಹೊರಗಿನ ಪ್ರಪಂಚದ ದರ್ಶನದಿಂದ ನಮಗೆ ದುರಾಶೆಗಳೂ ದುರ್ವೇದನೆಗಳೂ ದುಃಸಂಕಲ್ಪ ಗಳೂ ದುಷ್ಪ್ರವೃತ್ತಿಗಳೂ ಉಂಟಾಗದಿರಲಿ. ಪ್ರಪಂಚವೆಲ್ಲವೂ ಭಗವಂತನ ವಿಭೂತಿ ಯೆಂಬ ಸುಂದರ ಭಾವನೆಯು ಬೆಳೆದುಕೊಳ್ಳುವದಕ್ಕೆ ತಕ್ಕಂತೆ ನಮ್ಮ ಜ್ಞಾನೇಂದ್ರಿಯ ಗಳನ್ನೂ ಕರ್ಮೇಂದ್ರಿಯಗಳನ್ನೂ ಉಪಯೋಗಿಸೋಣ. ನಮ್ಮ ನಮ್ಮ ಕರ್ಮದಿಂದ ವಿಶ್ವರೂಪ ನಾದ ಭಗವಂತನ ಅರ್ಚನೆಯನ್ನು ಮಾಡೋಣ.

**3. ಮನೋಬುದ್ಧಿಗಳು** ಲೌಕಿಕವಿಚಾರಗಳನ್ನು ಅಳೆದು ಒಳಕ್ಕೆ ಸುರಿದು ಕೊಳ್ಳುವ ಬಳ್ಳಗಳಾಗದಿರಲಿ. ತಿಳಿವಳಿಕೆಯಿಂದ ಸಂಸ್ಕಾರವನ್ನುಂಟುಮಾಡಿಕೊಂಡು ನಮ್ಮೊಳಗೆ ನಾವೇ ನೋಡಿ ಅಲ್ಲಿ ನಮ್ಮ ನಿಜವಾದ ಆತ್ಮಸ್ವರೂಪವನ್ನು ಕಂಡುಕೊಳ್ಳು ವದಕ್ಕೆ ತಕ್ಕ ಸಾಧನಗಳಾಗುವಂತೆ ಅವಕ್ಕೆ ಭಗವದ್ಭಕ್ತರಲ್ಲಿ ಪೂಜ್ಯಭಾವ, ಭಗವಂತನ ನಾಮಸ್ಮರಣೆ, ಭಗವಂತನ ಗುಣಕರ್ಮಲೀಲೆಗಳ ಪರಿಭಾವನೆ, ಭಗವಂತನ ಧ್ಯಾನ- ಮುಂತಾದವು ಅಳವಡುವ ಉಪಾಯವನ್ನು ಹುಡುಕುತ್ತಿರೋಣ. ನಮ್ಮೊಳಗೆ ಇರುವ ಆತ್ಮನೇ ಎಲ್ಲಾ ಮನುಷ್ಯರಲ್ಲಿಯೂ ಎಲ್ಲಾ ಪ್ರಾಣಿಗಳಲ್ಲಿಯೂ ಇರುವನೆಂಬ ಸದ್ಭಾವನೆಯು ಅವುಗಳಲ್ಲಿ ಮೂಡಿಕೊಳ್ಳಲಿ. ಬೇರೆಬೇರೆಯ ಜಾತಿ, ಕುಲ, ವರ್ಣ, ಲಿಂಗ, ಮತ, ಜನಾಂಗ- ಮುಂತಾದ ಉಪಾಧಿಗಳು ಯಾವವೂ ಅಡ್ಡಿಯಾಗದೆ 'ಜಗತ್ತೆಲ್ಲವೂ ಆ ಪರಮಾತ್ಮನ ಮೂರ್ತಿಯೇ, ಎಲ್ಲವೂ ಅವನಿಂದ ಹುಟ್ಟಿ ಅವನಲ್ಲಿಯೇ ಇದ್ದುಕೊಂಡು, ಕೊನೆಗೆ ಅವನಲ್ಲಿಯೇ ಸೇರಲಿರುವದು' ಎಂಬ ಸದ್ಭಾವನೆಯು ಸಂತತವಾಗಿ ನಮ್ಮ ಅಂತರಂಗದಲ್ಲಿ ಹರಿಯುತ್ತಿರಲಿ.

**4. 'ನಾನು'** ಎಂಬ ನಮ್ಮ ಅಲ್ಪಾತ್ಮವು ನಮ್ಮ ಅಭಿವೃದ್ಧಿಗೆ ತಡೆಯಾಗದಿರಲಿ. ದೇಶಕಾಲವಸ್ತು ಪರಿಚ್ಛೇದವಿಲ್ಲದ ಪರತತ್ತ್ವವೆಂಬ ಸಚ್ಚಿದಾನಂದಸಾಗರದ ಅಲೆಗಳು ನಾವು; ನಾವು ಆ ಸಾಗರಕ್ಕಿಂತ ಬೇರೆಯಾಗಿ ಹಿಂದೆಯೂ ಇರಲಿಲ್ಲ, ಈಗಲೂ ಇಲ್ಲ, ಮುಂದೆಯೂ ಇರುವದಿಲ್ಲ- ಎಂಬ ಉತ್ತಮಭಾವಸಮಾಧಿಯನ್ನು ಅನುಗ್ರಹಿಸೆಂದು ಕರುಣಾನಿಧಿಯಾದ ಭಗವಂತನನ್ನು ನಿತ್ಯವೂ ಪ್ರಾರ್ಥಿಸೋಣ.

*****